ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಜೆಟ್ ಅಧಿವೇಶನದ ನಡುವೆ ಬುಧವಾರ ವಿಧಾನಸೌಧದ ಪೂರ್ವದ್ವಾರದ ಭವ್ಯ ಮೆಟ್ಟಿಲುಗಳ ಮೇಲೆ 16ನೇ ವಿಧಾನಸಭಾ ಸದಸ್ಯರೊಂದಿಗೆ ಗ್ರೂಪ್ ಫೋಟೋ ತೆಗೆಸಿಕೊಳ್ಳಲಾಯಿತು. ಈ ವೇಳೆ ಸ್ಪೀಕರ್ ಯು.ಟಿ. ಖಾದರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಸಂಪುಟ ಸದಸ್ಯರು, ನೂರಕ್ಕೂ ಹೆಚ್ಚು ಶಾಸಕರು ಭಾಗವಹಿಸಿದ್ದರು.

ರಾಜ್ಯದ್ದು ತುಂಬಿದ ಬಜೆಟ್ ಕೇಂದ್ರದ್ದು ಖಾಲಿ ಚೊಂಬು ▸▸5

ಯುಗಾದಿಗೂ ಮಾಂಸ ತಿನ್ನುವೆ: ಸಿದ್ದರಾಮಯ್ಯ ▸▸8

ಸೊಂಪಾದ ಪುಟಗಳು

ಭಾರತದ ಚರಿತ್ರೆಯ ಮಹಾ ತಿರುವಿನ ತಾಣದಲ್ಲಿ ನಿಂತಾಗ..!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ನಮ್ಮ ವಿರುದ್ಧ ನಾವೇ ಸಾರಿದ ಯುದ್ಧ!
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಆರೋಗ್ಯಕರವಾದ ಸಂಭಾಷಣೆಯಲ್ಲಿ ಕೆಲವು ಅಹಿತಕರ ಸನ್ನಿವೇಶಗಳು ಎದುರಾಗಬಹುದು. ಅಂಥವುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಪ್ರತಿ ಸಂದರ್ಭದಲ್ಲೂ ಅಹಿತಕರ ಘಟನೆ ಬರುತ್ತವೆ. ಅವನ್ನೆಲ್ಲ ಸಹಿಸಿಕೊಂಡೇ ಮುನ್ನಡೆಯಬೇಕು.

ವಕ್ರತುಂಡೋಕ್ತಿ

ನಿಮ್ಮ ಫೋನ್ ಕೈತಪ್ಪಿ ಬಿದ್ದಾಗ, ಫೋನು ಒಡೆಯುವುದಕ್ಕಿಂತ ಮೊದಲು ಒಡೆಯುವುದು ಹೃದಯ.

ಅಂಕೋಲ: ಕಾಂಗ್ರೆಸ್ ಮುಖಂಡನ ಮೇಲೆ ಹಲ್ಲೆ, ಕೊಲೆಗೆ ಯತ್ನ

ಕಾರವಾರ: ಮಾಜಿ ಕೆಪಿಸಿಸಿ ಕಾರ್ಯದರ್ಶಿ ಹಾಗೂ ಕಾಂಗ್ರೆಸ್ ಮುಖಂಡ ಗೋಪಾಲ ಕೃಷ್ಣ ನಾಯ್ಕ ಅವರ ಮೇಲೆ ಕಿಡಿಗೇಡಿಗಳು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ.

ಅಂಕೋಲದ ಕೇಣಿ ಬಳಿ ಈ ದಾಳಿ ನಡೆದಿದೆ. ಅಂಕೋಲದ ಕೇಣಿ ಬಳಿ ಕಾರಿನಲ್ಲಿ ತೆರಳುತಿದ್ದಾಗ ಗೋವಾ ನೋಂದಣಿಯ ಕಾರಿನಲ್ಲಿ ಬಂದು ಅಡ್ಡಗಟ್ಟಿದ ಕಿಡಿಗೇಡಿಗಳು ರಾಡ್‌ನಿಂದ ಹೊಡೆದು ಚಾಕು ಇರಿದಿದ್ದಾರೆ. ಅವರ ತಲೆಗೆ, ಕುತ್ತಿಗೆಗೆ ಪೆಟ್ಟಾಗಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ.

30 ಬಾಲಕಿಯರ ಮೇಲೆ ದೌರ್ಜನ್ಯ: ಬಿಜೆಪಿ ನಾಯಕನ ಪುತ್ರ ಅರೆಸ್ಟ್

ಪಣಜಿ: 25 ರಿಂದ 30 ಅಪ್ರಾಪ್ತ ಬಾಲಕಿಯರಿಗೆ ಲೈಂಗಿಕ ದೌರ್ಜನ್ಯ ನೀಡಿದ ಆರೋಪಕ್ಕೆ ಸಂಬಂಧಿಸಿ ದಕ್ಷಿಣ ಗೋವಾ ಪೊಲೀಸರು ಬಿಜೆಪಿ ನಾಯಕನ ಪುತ್ರನನ್ನು ಬಂಧಿಸಿದ್ದಾರೆ. ಮಡೆಗಲ್-ಕಾಕೋರಾದ ನಿವಾಸಿ ಮತ್ತು ಕರ್ಚೋರೆಮ್ ಪುರಸಭೆಯ ಬಿಜೆಪಿ ಕೌನ್ಸಿಲರ್ ಪುತ್ರ ಸೋಹಮ್ ನಾಯಕ್ ಬಂಧಿತ ಆರೋಪಿಯಾಗಿದ್ದು, ಪೋಕ್ಸೋ ಕೇಸ್ ದಾಖಲಾಗಿದೆ. ಈ ಸಂಬಂಧ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಆರೋಪಿಯನ್ನು ಬಂಧಿಸಲಾಗಿದೆ. ಕಳೆದ 3 ವರ್ಷಗಳಿಂದ ಆರೋಪಿ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ.

ಫನ್‌ತರಂಗ

- ರಘುಪತಿ ಶೃಂಗೇರಿ -

ವಿಧಾನಸೌಧಕ್ಕೆ 84 ಲಕ್ಷದ ಹೊಸ ಬಾಗಿಲು ಅಳವಡಿಕೆ

ಸುದ್ದಿ

ವಿಧಾನಸೌಧದಲ್ಲಿ ಪ್ರವೇಶ ದ್ವಾರದ ವಾಸ್ತು ಬದಲಾಯ್ತು...ಇನ್ನಾದ್ರೂ ನನ್ನ ಮಂತ್ರಿಸ್ಥಾನದ ವಾಸ್ತು ಬದ್ಲಾಗುತ್ತಾ ಗುರೂಜಿ...?

ಅಮೆರಿಕ ಯುದ್ಧ ವಿರಾಮ ಪ್ರಸ್ತಾಪಕ್ಕೆ ಟೆಹರಾನ್ ಲೇವಡಿ

ದಾಳಿ ನಿಲ್ಲದು: ಇರಾನ್ ಕುಗ್ಗದ ಯುದ್ಧೋನ್ಮಾದ

ಟೆಹರಾನ್: ಸಂಘರ್ಷ ಅಂತ್ಯಕ್ಕಾಗಿ ಇರಾನ್ ಜೊತೆಗೆ ಮಾತುಕತೆ ಸಾಗುತ್ತಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ಬೆನ್ನಲ್ಲೇ ತಮ್ಮ ಮೇಲೆ ದಾಳಿ ಮಾಡಿದ ಕ್ರಮಕ್ಕೆ ಇಸ್ರೇಲ್ ಮತ್ತು ಅಮೆರಿಕ ವಿಷಾದಿಸುವವರೆಗೆ ಪ್ರತೀಕಾರದ ಕ್ರಮಗಳು ಮುಂದುವರಿಯಲಿವೆ ಎಂದು ಇರಾನ್ ಪ್ರತಿಜ್ಞೆ ಮಾಡಿದೆ.

ಯುದ್ಧವನ್ನು ಅಂತ್ಯಗೊಳಿಸಲು ಅಮೆರಿಕವು ಇರಾನ್‌ಗೆ 15 ಅಂಶಗಳ ಯುದ್ಧ ವಿರಾಮ ಮತ್ತು ಶಾಂತಿ ಯೋಜನೆಯನ್ನು ಕಳುಹಿಸಿದೆ ಎಂಬ ವರದಿಗಳನ್ನು ತಳ್ಳಿ ಹಾಕಿರುವ ಇರಾನ್, 'ಸೋಲನ್ನು ಒಪ್ಪಂದವೆಂದು ತೋರಿಸದಿರಿ' ಎಂದು ಅಮೆರಿಕ ಮತ್ತು ಇಸ್ರೇಲನ್ನು ಅಣಕಿಸಿದೆ.

ಚೀನಾ ಸಚಿವ ವಾಂಗ್ ಯಿ ಜೊತೆಗೆ ಸಂಭಾಷಣೆ ನಡೆಸಿದ ಸಂದರ್ಭದಲ್ಲಿ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಶಾಂತಿ ಮಾತುಕತೆ ಪ್ರಸ್ತಾಪವನ್ನು ತಿರಸ್ಕರಿಸಿದ್ದಾರೆ. ಈ ಪ್ರದೇಶದಲ್ಲಿ ಉಂಟಾಗಿರುವ ಅಸ್ಥಿರತೆಗೆ ಪ್ರಮುಖ ಕಾರಣ ಟೆಲ್ ಅವಿವ್ ಮತ್ತು ವಾಷಿಂಗ್ಟನ್. ಇರಾನ್ ನಾಗರಿಕರು ಮತ್ತು ಅಲ್ಲಿನ ಸೇನಾ ನೆಲೆಗಳ ಮೇಲೆ ಅವರು ದಾಳಿ ನಡೆಸಿರುವುದೇ ಇಷ್ಟಕ್ಕೆಲ್ಲ ಕಾರಣ. ನಮ್ಮ ಎಲ್ಲಾ ಉದ್ದೇಶಗಳನ್ನು ಸಾಧಿಸುವವರೆಗೆ ಮತ್ತು ಈ ಹಿಂಸಾತ್ಮಕ ಆಕ್ರಮಣಕ್ಕೆ ಶತ್ರುಗಳು ವಿಷಾದಿಸುವವರೆಗೆ ಇರಾನ್ ತನ್ನ ರಾಷ್ಟ್ರೀಯ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸುತ್ತದೆ ಎಂದು ಅರಘ್ಚಿ ಘೋಷಿಸಿದ್ದಾರೆ. → 4

ಪಾಕ್‌ಗೆ ಮುಖಭಂಗ

ಅಮೆರಿಕ ಮತ್ತು ಇರಾನ್ ನಡುವೆ ಸಂಧಾನಕಾರನ ಪಾತ್ರ ವಹಿಸಲು ಮುಂದಾಗಿದ್ದ ಪಾಕಿಸ್ತಾನಕ್ಕೆ ಮುಖಭಂಗವಾಗಿದೆ. ಹೊರ್ಮುಜ್ ಜಲಸಂಧಿಯ ಮೂಲಕ ಪಾಕಿಸ್ತಾನದ ಹಡಗು ಸಾಗಣೆಗೆ ಇರಾನ್ ಅನುಮತಿ ನಿರಾಕರಿಸಿದೆ. ಈ ನಡುವೆ ಕಚ್ಚಾ ತೈಲ ಹೊತ್ತ ಭಾರತದ ಇನ್ನೆರಡು ಸರಕು ಹಡಗುಗಳು ಹೊರ್ಮುಜ್ ಜಲಸಂಧಿ ದಾಟಿದ್ದು ಭಾರತದತ್ತ ಪಯಣ ಬೆಳೆಸಿದೆ. ಈ ಬೆಳವಣಿಗೆ ನಡುವೆಯೇ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಭಾರತ ವಿಶ್ವಾಸಾರ್ಹ ಪಾತ್ರ ವಹಿಸಬೇಕೆಂದು ಇರಾನ್ ರಾಯಭಾರಿ ಮೊಹಮ್ಮದ್ ಫತಾಲಿ ಹೇಳಿದ್ದಾರೆ.

ಸೋಲೊಪ್ಪಿಕೊಳ್ಳಿ: ಇರಾನ್

ಇರಾನ್ ಜೊತೆಗೆ ಶಾಂತಿ ಮಾತುಕತೆಗಳು ನಡೆಯುತ್ತಿವೆ ಎಂಬ ಟ್ರಂಪ್ ಹೇಳಿಕೆ ನೀಡುತ್ತಿದ್ದರೆ, ಅಮೆರಿಕ ತನ್ನೊಂದಿಗೆ ತಾನೇ ಮಾತುಕತೆ ನಡೆಸುತ್ತಿದೆ ಎಂದು ಇರಾನ್ ವ್ಯಂಗ್ಯವಾಡಿದೆ. ನಾವು ಆರಂಭದಿಂದಲೇ ಸ್ಪಷ್ಟವಾಗಿ ಹೇಳಿದ್ದೇವೆ. ನಿಮ್ಮೊಂದಿಗೆ ನಾವು ಎಂದಿಗೂ ಒಪ್ಪಂದಕ್ಕೆ ಬರಲ್ಲ. ಈಗಲೂ ಇಲ್ಲ, ಮುಂದೆಯೂ ಇಲ್ಲ. ಜಾಗತಿಕ ಮಹಾಶಕ್ತಿ ಎಂದು ಹೇಳಿಕೊಳ್ಳುವ ದೇಶಕ್ಕೆ ಈ ಸಂಕಷ್ಟದಿಂದ ಹೊರಬರಲು ಸಾಧ್ಯವಾಗದಿದ್ದರೆ, ಅದನ್ನು ಒಪ್ಪಿಕೊಳ್ಳಬೇಕು ಎಂದು ಇರಾನ್ ಸೇನೆ ಹೇಳಿದೆ.

ಯುದ್ಧ ನಿಲ್ಲಿಸಲು ಇರಾನ್ ಐದು ಷರತ್ತು

ಟೆಹರಾನ್: ಯುದ್ಧವನ್ನು ಕೊನೆಗೊಳಿಸುವುದನ್ನು ಪರಿಗಣಿಸಲು ಇರಾನ್ ಐದು ಷರತ್ತುಗಳನ್ನು ಹಾಕಿದೆ. ಅಮೆರಿಕ ಮತ್ತು ಇಸ್ರೇಲ್‌ನ ಆಕ್ರಮಣ ಮತ್ತು ಹತ್ಯೆಗಳಿಗೆ ಸಂಪೂರ್ಣ ಅಂತ್ಯ, ಇರಾನ್ ವಿರುದ್ಧ ಭವಿಷ್ಯದಲ್ಲಿ ಯಾವುದೇ ಮಿಲಿಟರಿ ಕ್ರಮವನ್ನು ತಡೆಗಟ್ಟಲು ಸುರಕ್ಷತಾ ಕ್ರಮಗಳನ್ನು ಜಾರಿಗೆ ತರುವುದು, ಯುದ್ಧದಿಂದ ಉಂಟಾದ ನಷ್ಟಗಳು ಮತ್ತು ಹಾನಿಗಳಿಗೆ ಸ್ಪಷ್ಟ ಮತ್ತು ಖಾತರಿಯ ಪರಿಹಾರ ಮತ್ತು ಎಲ್ಲಾ ರೀತಿಯಲ್ಲಿ ಮತ್ತು ಮಧ್ಯಪ್ರಾಚ್ಯದಲ್ಲಿ ಸಕ್ರಿಯವಾಗಿರುವ ಪ್ರತಿಯೊಂದು ಪ್ರತಿರೋಧ ಗುಂಪಿನೊಂದಿಗೆ ಯುದ್ಧವನ್ನು ಕೊನೆಗೊಳಿಸಬೇಕೆಂಬ ಷರತ್ತನ್ನು ಇರಾನ್ ಮುಂದಿಟ್ಟಿದೆ.

ಆರ್ಥಿಕ ಸ್ಥಿತಿ ಸುಭದ್ರ

ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಸಿಎಂ

ನಮ್ಮದು ತುಂಬಿರುವ ಬಜೆಟ್; ಕೇಂದ್ರದ್ದು ಖಾಲಿ ಚೊಂಬು

ವಿಧಾನಸಭೆ: ರಾಜ್ಯ ಸರಕಾರದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆ ಎನ್ನುವ ಭರವಸೆಯ ಮಾತುಗಳ ಜತೆಗೆ ಕೇಂದ್ರ ಸರಕಾರದಿಂದ ಅನುದಾನ ವಿಷಯದಲ್ಲಾಗುತ್ತಿರುವ ಅನ್ಯಾಯಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರು ಮತ್ತೊಮ್ಮೆ ಗುಡುಗಿದ್ದಾರೆ.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಸುಮಾರು ಆರು ತಾಸು ಸುದೀರ್ಘ ಉತ್ತರ ನೀಡಿದ ಸಿದ್ದರಾಮಯ್ಯ ಅವರು, ತಮ್ಮ ಸರಕಾರ ಮಾಡಿರುವ ಸಾಧನೆ, ಸಾಲದ ವಿಷಯದಲ್ಲಿ ಈಗಲೂ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡಿರುವ ಬಗೆ, ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಆರ್ಥಿಕ ಪರಿಸ್ಥಿತಿ, ಅಭಿವೃದ್ಧಿಗೆ ಅನುದಾನ ಸೇರಿದಂತೆ ವಿವಿಧ ವಿಷಯಗಳನ್ನು ಸುವಿಸ್ತಾರವಾಗಿ ಮಾತನಾಡಿದರು. ಸಿಎಂ ಸಿದ್ದರಾಮಯ್ಯ ಅವರು ತಾವು ಮಂಡಿಸಿರುವ 17ನೇ ಬಜೆಟ್ ಅನ್ನು ಸಮರ್ಥಿಸಿಕೊಂಡು ಬಜೆಟ್‌ಗೆ ಅನುಮೋದನೆ ನೀಡುವಂತೆ ಮನವಿ ಮಾಡಿದರು. ಆದರೆ ಮುಖ್ಯಮಂತ್ರಿಗಳ ಉತ್ತರದಲ್ಲಿ 'ಹುರುಳಿಲ್ಲ' ಎಂದು ಟೀಕಿಸಿ ಬಿಜೆಪಿ-ಜೆಡಿಎಸ್ ಶಾಸಕರು ಸಭಾತ್ಯಾಗ ಮಾಡಿದರು. ಇದರ ನಡುವೆಯೇ ಬಜೆಟ್‌ಗೆ ಅನುಮೋದನೆ ಪಡೆಯಲಾಯಿತು.

ಇದಕ್ಕೂ ಮೊದಲು ಮಾತನಾಡಿದ ಸಿದ್ದರಾಮಯ್ಯ ಅವರು, ರಾಜ್ಯದ ಆರ್ಥಿಕ ಪರಿಸ್ಥಿತಿ ಸುಸ್ಥಿತಿಯಲ್ಲಿದೆ. ಆದರೆ ಆದಾಯ ಮಿಗತೆ ಬಜೆಟ್ ಮಂಡನೆ ಸಾಧ್ಯವಾಗಿಲ್ಲ ಎಂದು ಒಪ್ಪಿಕೊಂಡರು. 2023ರಲ್ಲಿ 2ನೇ ಅವಧಿಗೆ ಮುಖ್ಯಮಂತ್ರಿಯಾದ ಬಳಿಕ ಈವರೆಗೂ ನಾಲ್ಕು ಬಜೆಟ್‌ಗಳನ್ನು ಮಂಡಿಸಿದ್ದೇನೆ. ಆದರೆ ಎಲ್ಲವೂ ಕೂಡ ವಿತ್ತೀಯ ಕೊರತೆಯಲ್ಲೇ ಇವೆ. ಹೆಚ್ಚುವರಿ ಆದಾಯದ ಅಂದರೆ ಸರ್‌ಪ್ಲಸ್ ಬಜೆಟ್ ಮಂಡಿಸಲು ಸಾಧ್ಯವಾಗಿಲ್ಲ. ಆರ್ಥಿಕ ಶಿಸ್ತನ್ನು ಮೂರು ಅಂಶಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ವಿತ್ತೀಯ ಕೊರತೆ ಶೇಕಡ ಮೂರರ ಮಿತಿಯ ಒಳಗೆ ಇರಬೇಕು. 2ನೆಯದಾಗಿ ಸಾಲದ ಮೊತ್ತ ಒಟ್ಟು ಜಿಎಸ್‌ಡಿಪಿಯ ಶೇ.25ರ ಮಿತಿಯೊಳಗಿರಬೇಕು. ಈ ಮಿತಿಯಲ್ಲಿ ನಮ್ಮ ಸಾಲವಿದೆ ಎಂದು ಸಮರ್ಥಿಸಿಕೊಂಡರು. → 4

ಮ್ಯಾರಥಾನ್ ಬ್ಯಾಟಿಂಗ್

- ಬೆ.11ರಿಂದ ಸಂಜೆಯವರೆಗೆ ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಸಿದ್ದರಾಮಯ್ಯ
- ಬಜೆಟ್ ಅಂಕಿ-ಅಂಶಗಳೊಂದಿಗೆ ರಾಜಕೀಯ, ಸೈದ್ಧಾಂತಿಕ ಸೇರಿ ನಾನಾ ಅಂಶಗಳ ಬಗ್ಗೆ ಪ್ರಸ್ತಾಪ
- ಚರ್ಚೆಯ ವೇಳೆ ಸಿಎಂ ಶಾಲು, ಇಸ್ಪೀಟ್ ಆಟ, ರಾಹುಕಾಲ ಸೇರಿದಂತೆ ವಿಷಯಗಳ ಸ್ವಾರಸ್ಯಕರ ಚರ್ಚೆ
- ಮುಖ್ಯಮಂತ್ರಿಯಾಗಲು 224 ಶಾಸಕರಿಗೂ ಯೋಗ್ಯತೆಯಿದೆ; ಅವಕಾಶ ಸಿಗಬೇಕಷ್ಟೆ ಎಂದ ಸಿಎಂ

ಬಿಜೆಪಿ ಟಿಕಲ್ ಡೌನ್ ಎಕಾನಮಿನಲ್ಲಿ ನಂಬಿಕೆಯಿರಿಸಿದೆ, ನಮ್ಮದು ಯೂನಿವರ್ಸಲ್ ಬೇಸಿಕ್ ಇನ್‌ಕಮ್ ಹಾಗೂ ಬೇಡಿಕೆಯ ಆರ್ಥಿಕ ತತ್ವ ಆಧರಿಸಿದೆ. ಬುದ್ಧನ ಕರುಣೆ, ಅಂಬೇಡ್ಕರ್ ಸಾಮಾಜಿಕ ನ್ಯಾಯವನ್ನು ನಮ್ಮ ಬಜೆಟ್ ಆಧರಿಸಿದೆ. ಯಾವುದೇ ರಾಜ್ಯ, ದೇಶವಾಗಲಿ ಸಾಲ ಮಾಡದಿರಲು ಸಾಧ್ಯವಿಲ್ಲ, ಸಮಾಜ ಕಲ್ಯಾಣ ಹಾಗೂ ಅಭಿವೃದ್ಧಿಗಾಗಿ ಸಾಲ ಮಾಡಬೇಕು
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಹೈಕಮಾಂಡ್ ಹೇಳೋತನಕ ನಾನೇ ಸಿಎಂ

ಸಿದ್ದರಾಮಯ್ಯ ಅವರ ಉತ್ತರದ ವೇಳೆ ಪ್ರತಿಪಕ್ಷ ನಾಯಕ ಅಶೋಕ್ ಅವರು, ಸಭಾಧ್ಯಕ್ಷರು ಗ್ರೂಪ್ ಫೋಟೋ ತೆಗೆಸಿದ್ದು ಏಕೆ ಎಂದು ಕಿಚಾಯಿಸಿ, ಅಧ್ಯಕ್ಷರು ಯಾವಾಗ ಹೋಗುತ್ತಾರೊ ಹೇಳಿ ಎಂದು ಪ್ರಶ್ನಿಸಿದರು. ಇದಕ್ಕೆ ಸಿದ್ದರಾಮಯ್ಯ ಅವರು ಪ್ರತಿಕ್ರಿಯಿಸಿ, ಹೈಕಮಾಂಡ್ ತೀರ್ಮಾನ ಮಾಡುವವರೆಗೂ ಅವರು ಇರುತ್ತಾರೆ. 2028ರ ಚುನಾವಣೆಯಲ್ಲೂ ಗೆಲ್ಲುತ್ತಾರೆ. ಸಿಎಂ ಆಗುವ ಕನಸು ಎಲ್ಲರಿಗೂ ಇರುತ್ತದೆ. ಉಪನಾಯಕ ಅರವಿಂದ್ ಬೆಲ್ಲದ್, ಅಶೋಕ ಮುಖ್ಯಮಂತ್ರಿಯಾದರೆ ಖುಷಿ ಪಡುವೆಯಾ, ವಿಜಯೇಂದ್ರ ಅವರೂ ಕಾಯುತ್ತಿದ್ದಾರೆ ಎಂದು ಛೇಡಿಸಿದರು. ನಿಮ್ಮ ಪಕ್ಷದ ಬಗ್ಗೆ ಹೇಳಿ ಎಂದು ಸುನೀಲ್ ಕುಮಾರ್ ಕಾಲೆಳೆದಾಗ, ರಾಜ್ಯದ ಎಲ್ಲಾ 224 ಮಂದಿ ಶಾಸಕರು ಮುಖ್ಯಮಂತ್ರಿಯಾಗಲು ಅರ್ಹರಿದ್ದಾರೆ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೆಸರು ಹೇಳದೆಯೇ ನಯವಾಗಿ ಜಾರಿಕೊಂಡರು.

24 ಅಕ್ಬರ್ ರಸ್ತೆಯಲ್ಲಿರುವ ಕಚೇರಿ ಖಾಲಿ ಮಾಡಲು ಸೂಚನೆ

ಮಾ.28ರೊಳಗೆ ಕಚೇರಿ ತೆರವು ಮಾಡಿ: ಕಾಂಗ್ರೆಸ್‌ಗೆ ನೋಟಿಸ್

ದೆಹಲಿ: ರಾಷ್ಟ್ರ ರಾಜಧಾನಿಯ ಅಕ್ಬರ್ ರಸ್ತೆ ಹಾಗೂ ರೈಸೀನಾ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯನ್ನು ಖಾಲಿ ಮಾಡುವಂತೆ ಕೇಂದ್ರ ಸರಕಾರ ನೋಟಿಸ್ ನೀಡಿದೆ. ಮೂಲಗಳ ಪ್ರಕಾರ, ಆಸ್ತಿ ನಿರ್ವಹಣಾ ವಿಭಾಗ ಕಾಂಗ್ರೆಸ್ ಪಕ್ಷಕ್ಕೆ ನೋಟಿಸ್ ಜಾರಿ ಮಾಡಿದ್ದು, ಮಾ.28ರೊಳಗೆ 24 ಅಕ್ಬರ್ ರಸ್ತೆಯಲ್ಲಿರುವ ತಮ್ಮ ಕಚೇರಿಯನ್ನು ಖಾಲಿ ಮಾಡುವಂತೆ ತಿಳಿಸಿದೆ.

ಅಕ್ಬರ್ ರಸ್ತೆಯಲ್ಲಿರುವ ಈ ಕಟ್ಟಡವು ಸುಮಾರು ಐದು ದಶಕಗಳ ಕಾಲ ಕಾಂಗ್ರೆಸ್ ಪಕ್ಷದ ಪ್ರಧಾನ ಕಚೇರಿಯಾಗಿತ್ತು. ಕಳೆದ ವರ್ಷ ಜ.15ರಂದು ಈ ಪ್ರಧಾನ ಕಚೇರಿಯನ್ನು 9 ಕೋಟ್ಲಾ ರಸ್ತೆಯಲ್ಲಿರುವ ಇಂದಿರಾ ಭವನಕ್ಕೆ ಸ್ಥಳಾಂತರಿಸಲಾಗಿತ್ತು. ಆದರೆ ಅಕ್ಬರ್ ರಸ್ತೆಯ ಆವರಣವನ್ನು ಪಕ್ಷ ಇನ್ನೂ ತೆರವುಗೊಳಿಸಿಲ್ಲ, ಜೊತೆಗೆ ಪಕ್ಷದ ಚಟುವಟಿಕೆಗಳು ಕೂಡ ಇಲ್ಲಿ ನಡೆಯುತ್ತಿವೆ.

2015ರಲ್ಲಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಕಾಂಗ್ರೆಸ್ ಪಕ್ಷಕ್ಕೆ ನೀಡಲಾಗಿದ್ದ ನಾಲ್ಕು ಬಂಗಲೆಗಳ ಹಂಚಿಕೆಯನ್ನು ರದ್ದುಗೊಳಿಸಿತ್ತು. ಅದರಲ್ಲಿ 24 ಅಕ್ಬರ್ ರಸ್ತೆಯೂ ಒಂದು. ಇದರ ಜೊತೆಗೆ ರೈಸಿನಾ ರಸ್ತೆಯ 5ರಲ್ಲಿರುವ ಯುವ ಕಾಂಗ್ರೆಸ್ ಕಚೇರಿಯನ್ನೂ ತೆರವುಗೊಳಿಸಲು ನೋಟಿಸ್ ನೀಡಲಾಗಿದೆ. ನೋಟಿಸ್ ಬೆನ್ನಲ್ಲೇ ಕಾಂಗ್ರೆಸ್ ಕೋರ್ಟ್ ಮೆಟ್ಟಿಲೇರಲು ಚಿಂತನೆ ನಡೆಸಿದ್ದು, ಇಲ್ಲದಿದ್ದಲ್ಲಿ ಸರಕಾರದಿಂದ ಹೆಚ್ಚುವರಿ ಸಮಯವನ್ನು ಕೋರಲು ಚಿಂತನೆ ನಡೆಸಿದೆ ಎನ್ನಲಾಗಿದೆ.

ಶ್ರೀ ಶ್ರೀ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಬೆಂಗಳೂರು ದಕ್ಷಿಣ ತಾಲೂಕಿನ ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದಲ್ಲಿ ಸರಕಾರಿ ಜಮೀನು ಒತ್ತುವರಿ ಮಾಡಿದ ಆರೋಪದ ಸಂಬಂಧ ಆರ್ಟ್ ಆಫ್ ಲಿವಿಂಗ್‌ನ ಶ್ರೀಶ್ರೀ ರವಿಶಂಕರ್ ಗುರೂಜಿ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್ (ಬಿಎಂಟಿಎಫ್) ದಾಖಲಿಸಿರುವ ಎಫ್‌ಐಆರ್ ಪ್ರಶ್ನಿಸಿ ರವಿಶಂಕರ್ ಗುರೂಜಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ವಿಸ್ತೃತ ಆದೇಶ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಬಾಗಲಕೋಟೆ, ದಾವಣಗೆರೆ ಉಪ ಸಮರ ಕಣ: ಕೈ ಶಾಸಕರಿಗೆ ಚುನಾವಣೆ ಜವಾಬ್ದಾರಿ ಹಂಚಿಕೆ

ನಾಮಪತ್ರ ವಾಪಸ್‌ಗೆ ಇಂದು ಕಡೇ ದಿನ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ಉಪಚುನಾವಣೆಗೆ ನಾಮಪತ್ರ ಹಿಂತೆಗೆಯಲು ಮಾರ್ಚ್ 26 ಕೊನೆಯ ದಿನವಾಗಿದ್ದು, ಸಂಜೆಯೊಳಗೆ ಕಣ ಚಿತ್ರಣ ಸ್ಪಷ್ಟವಾಗಲಿದೆ. ದಾವಣಗೆರೆಯಲ್ಲಿ ಮುಸ್ಲಿಂ ನಾಯಕ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದರಿಂದ ಕಾಂಗ್ರೆಸ್‌ಗೆ ಆತಂಕವಿದ್ದು, ಅಭ್ಯರ್ಥಿ ಸಾದಿಕ್ ಖಾಲಿದ್ ಮನವೊಲಿಸುವ ಪ್ರಯತ್ನ ಮುಂದುವರಿದಿದೆ.

ಈ ನಡುವೆ ಎರಡು ಕ್ಷೇತ್ರಗಳ ಉಪಚುನಾವಣೆಯನ್ನು ಯಾವುದೇ ಕಾರಣಕ್ಕೂ ಲಘುವಾಗಿ ತೆಗೆದುಕೊಳ್ಳಬೇಡಿ ಎಂದು ಶಾಸಕರಿಗೆ ಹೈಕಮಾಂಡ್ ಸಂದೇಶ ರವಾನಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಬುಧವಾರ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ, ಶಾಸಕರಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಕಾಂಗ್ರೆಸ್‌ನ 135 ಶಾಸಕರು, 37 ವಿಧಾನಪರಿಷತ್ ಸದಸ್ಯರು ಸೇರಿದಂತೆ 30 ಸಚಿವರುಗಳಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಯಾವ ಕ್ಷೇತ್ರದಲ್ಲಿ ಯಾವ ಶಾಸಕರು, ಸಚಿವರು ಕಾರ್ಯನಿರ್ವಹಿಸಬೇಕು? ಎಷ್ಟು ದಿನ ಪ್ರಚಾರದಲ್ಲಿ ಭಾಗವಹಿಸಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಲಾಗಿದೆ.

ದಾವಣಗೆರೆ ದಕ್ಷಿಣ ಮುಸ್ಲಿಂ ಶಾಸಕರು, ಸಚಿವರು ಈ ಕ್ಷೇತ್ರದಲ್ಲಿ ಹೆಚ್ಚು ಕಾರ್ಯನಿರ್ವಹಿಸಬೇಕು. ಪಕ್ಷದೊಳಗಿನ ಸಣ್ಣ-ಪುಟ್ಟ ಗೊಂದಲವನ್ನು ಬದಿಗಿಟ್ಟು ತಂಡವಾಗಿ ಈ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಬೇಕು. ಎರಡೂ ಕ್ಷೇತ್ರದಲ್ಲಿ ಬ್ಲಾಕ್ ಮಟ್ಟದಲ್ಲಿಯೂ ಶಾಸಕರು, ಸಚಿವರು ತೆರಳಿ ಪ್ರಚಾರ ನಡೆಸಬೇಕು ಎನ್ನುವ ಸೂಚನೆ ನೀಡಲಾಗಿದೆ ಎಂದು ತಿಳಿದುಬಂದಿದೆ.

ಕಾಂಗ್ರೆಸ್ ನಾಯಕಿ ಸೋನಿಯಾ ಆಸ್ಪತ್ರೆಗೆ

ದೆಹಲಿ: ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಮಂಗಳವಾರ ದೆಹಲಿಯ ಸರ್ ಗಂಗಾರಾಮ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪ್ರಸ್ತುತ ವೈದ್ಯರ ತಂಡವೊಂದು ಅವರ ಆರೋಗ್ಯದ ಮೇಲೆ ನಿಗಾ ಇಟ್ಟಿದ್ದು, ಅಗತ್ಯ ತಪಾಸಣೆಗಳನ್ನು ನಡೆಸಲಾಗುತ್ತಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಚಿಕಿತ್ಸೆಗೆ ಅವರು ಸ್ಪಂದಿಸುತ್ತಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ವರದಿಯಾಗಿದೆ. ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ತಮ್ಮ ನಿಗದಿತ ಕೇರಳ ಭೇಟಿಯನ್ನು ರದ್ದುಪಡಿಸಿದರು. ಶ್ವಾಸಕೋಶದ ಸೋಂಕು ಅಥವಾ ಉಸಿರಾಟದ ಸಮಸ್ಯೆಗೆ ಸಂಬಂಧಿಸಿದಂತೆ ವಾಡಿಕೆಯ ವೈದ್ಯಕೀಯ ತಪಾಸಣೆಗಾಗಿ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಸೋನಿಯಾ ಗಾಂಧಿ ಅವರ ಆರೋಗ್ಯ ಸ್ಥಿರವಾಗಿದ್ದು, ಆತಂಕ ಪಡುವ ಅಗತ್ಯವಿಲ್ಲ ಎಂದು ಕಾಂಗ್ರೆಸ್ ಪಕ್ಷ ಮಾಹಿತಿ ನೀಡಿದೆ.

ಸರ್ವ ಪಕ್ಷ ಸಭೆಯಲ್ಲಿ ವಿದೇಶಾಂಗ ಸಚಿವರ ಲೇವಡಿ, ಪ್ರತಿಪಕ್ಷ ನಾಯಕರಿಗೆ ವಿವರಣೆ

ಪಾಕ್‌ನಂತೆ ಭಾರತ ದಲ್ಲಾಳಿ ದೇಶವಲ್ಲ

ದೆಹಲಿ: ಮಧ್ಯಏಷ್ಯಾದ ಯುದ್ಧದಲ್ಲಿ ಮಧ್ಯಸ್ಥಿಕೆ ವಹಿಸುವ ಪಾಕಿಸ್ತಾನದ ಪ್ರಯತ್ನವನ್ನು ಭಾರತ ಲೇವಡಿ ಮಾಡಿದೆ. ಜಾಗತಿಕ ರಾಜತಾಂತ್ರಿಕತೆಯಲ್ಲಿ ಪ್ರಮುಖ ಪಾತ್ರವನ್ನು ಬಯಸುತ್ತಿರುವ ಪಾಕಿಸ್ತಾನದ ವಿರುದ್ಧ ಕಠಿಣ ಪದ ಬಳಸಿ ವಾಗ್ದಾಳಿ ನಡೆಸಿದೆ.

ದೆಹಲಿಯಲ್ಲಿ ಬುಧವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಮಾತನಾಡಿದ ವಿದೇಶಾಂಗ ಸಚಿವ ಎಸ್ ಜೈಶಂಕರ್, ಪಾಕಿಸ್ತಾನವನ್ನು ಬ್ರೋಕರ್ ರಾಷ್ಟ್ರ ಎಂದು ಲೇವಡಿ ಮಾಡಿದರು. ಭಾರತ ಪಾಕಿಸ್ತಾನದಂತೆ ಮಧ್ಯವರ್ತಿ ರಾಷ್ಟ್ರವಾಗಿ ಕಾರ್ಯನಿರ್ವಹಿಸುವುದಿಲ್ಲ ಎಂದು ಸಚಿವರು ಹೇಳಿರುವುದಾಗಿ ಸಭೆಯಲ್ಲಿದ್ದ ಸದಸ್ಯರೊಬ್ಬರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಗೈರುಹಾಜರಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ಸಭೆ ನಡೆಯಿತು. ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಎಸ್ ಜೈಶಂಕರ್ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸರಕಾರವನ್ನು ಪ್ರತಿನಿಧಿಸಿದ್ದರು. ಆರೋಗ್ಯ ಸಚಿವ ಜೆ ಪಿ ನಡ್ಡಾ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಕೂಡ ಸಭೆಯಲ್ಲಿ ಹಾಜರಿದ್ದರು.

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಸಭೆಯಲ್ಲಿ ಪ್ರಸ್ತುತ ಪರಿಸ್ಥಿತಿಯ ವಿವರ ನೀಡಿದರು. ಯುದ್ಧವು ಎಷ್ಟು ಕಾಲ ಮುಂದುವರಿಯುತ್ತದೆ ಎಂದು ಕೇಂದ್ರಕ್ಕೆ ತಿಳಿದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಎಲ್‌ಪಿಜಿಯ ದೇಶೀಯ ಉತ್ಪಾದನೆಯು ಈಗ ಶೇ. 28ರಿಂದ 60ಕ್ಕೆ ಏರಿದೆ ಎಂದು ಸರಕಾರ ಇದೇ ವೇಳೆ ಮಾಹಿತಿ ನೀಡಿದೆ. ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಇನ್ನೂ ಐದು ತೈಲ ಟ್ಯಾಂಕರ್‌ಗಳು ಬರುವ ಸಾಧ್ಯತೆಯಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಸರ್ವ ಪಕ್ಷ ಸಭೆಯಲ್ಲಿ ಇಂಧನ ಭದ್ರತೆ, ದೇಶವಾಸಿಗಳ ರಕ್ಷಣೆ ಸೇರಿದಂತೆ ಸರಕಾರ ಕೈಗೊಂಡಿರುವ ಕ್ರಮಗಳನ್ನು ಪ್ರತಿಪಕ್ಷ ಸದಸ್ಯರಿಗೆ ವಿವರಿಸಲಾಯಿತು. ಸರಕಾರದ ಪ್ರಯತ್ನಗಳಿಂದ ಪ್ರತಿಪಕ್ಷಗಳು ತೃಪ್ತವಾಗಿವೆ. ಅವರು ನಮ್ಮ ಬೆಂಬಲಕ್ಕೆ ನಿಂತಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಭಾರತವು ಯುದ್ಧ ಶೀಘ್ರದಲ್ಲೇ ಕೊನೆಗೊಳ್ಳುವುದನ್ನು ಬಯಸುತ್ತದೆ ಎಂದು ಪ್ರಧಾನಿ ಮೋದಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ತಿಳಿಸಿದ್ದಾರೆ ಎಂದು ಸಭೆಗೆ ವಿವರಿಸಲಾಯಿತು.

ಪ್ರಧಾನಿ ಗೈರು: ಪ್ರತಿಪಕ್ಷ ಆಕ್ಷೇಪ

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕುರಿತು ಸರ್ವಪಕ್ಷ ಸಭೆ ಕರೆಯುವ ಕೇಂದ್ರದ ನಿರ್ಧಾರದ ಬಗ್ಗೆ ಲೋಕಸಭೆಯಲ್ಲಿ ಬುಧವಾರ ತೀವ್ರ ವಾಗ್ವಾದ ನಡೆಯಿತು. ಇದು ವಿಳಂಬಿತ ಕ್ರಮ ಎಂದ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಸರಕಾರದ ವಿದೇಶಾಂಗ ನೀತಿಯನ್ನು ಖಂಡಿಸಿದವು. ಪ್ರಧಾನಿ ನರೇಂದ್ರ ಮೋದಿ ನಿರ್ಣಾಯಕ ಸಭೆಯಲ್ಲಿ ಭಾಗವಹಿಸದಿರುವುದನ್ನು ಪ್ರತಿಪಕ್ಷ ನಾಯಕರು ಪ್ರಶ್ನಿಸಿದರು. ಪ್ರತಿಪಕ್ಷಗಳು ಸೂಕ್ಷ್ಮ ವಿಷಯವನ್ನು ರಾಜಕೀಯಗೊಳಿಸುತ್ತಿದೆ ಎಂದು ಆಡಳಿತ ಪಕ್ಷದ ಸದಸ್ಯರು ತಿರುಗೇಟು ನೀಡಿದರು.

PRE ORDER

ಬದುಕುಳಿದವರು ಕಂಡಂತೆ
ಪರಿಷ್ಕೃತ ಆವೃತ್ತಿ

QR CODE ಸ್ಕ್ಯಾನ್ ಮಾಡಿ, ಫೋನ್ ಪೇ / ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್ ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ನಂಬರ್‌ಗೆ ಕಳುಹಿಸಿ. ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.
63623 93966

44.65 ಕಿ.ಮೀ ಉದ್ದದ ನಮ್ಮ ಮೆಟ್ರೋ 3ನೇ ಹಂತದ ಯೋಜನೆಗೆ ಜಪಾನ್‌ನಿಂದ ಸಾಲ

3ನೇ ಹಂತಕ್ಕೆ ಜೈಕಾದಿಂದ 6,775 ಕೋಟಿ ಸಾಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋ ಯೋಜನೆ ಹಂತ 3ಕ್ಕಾಗಿ ಜಪಾನ್ ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆಯು ಕೇಂದ್ರ ಸರಕಾರದೊಂದಿಗೆ 6100 ಕೋಟಿ ರು.ಗಳ ಅಧಿಕೃತ ಅಭಿವೃದ್ಧಿ ಸಹಾಯ ಸಾಲದ ಒಪ್ಪಂದಕ್ಕೆ ಸಹಿ ಹಾಕಿದೆ.

ಜೈಕಾದ ಮಾಹಿತಿ ಪ್ರಕಾರ, ಮೆಟ್ರೋ ಹಂತ 3(ಎ) 31 ಎತ್ತರದ ನಿಲ್ದಾಣಗಳೊಂದಿಗೆ ಸುಮಾರು 44.65 ಕಿ.ಮೀ ಮಾರ್ಗ ನಿರ್ಮಾಣವನ್ನು ಒಳಗೊಂಡಿದ್ದು, ಈ ಕಾರಿಡಾರ್ ಹೊರ ವರ್ತುಲ ರಸ್ತೆಯ ವಿಸ್ತಾರ(ಕಾರಿಡಾರ್ 3-1) ಮತ್ತು ಪಶ್ಚಿಮ ಗ್ರೋತ್ ಕಾರಿಡಾರ್ (ಕಾರಿಡಾರ್ 3-2)ನ್ನು ಒಳಗೊಂಡಿದೆ. ಪೂರ್ಣಗೊಂಡ ನಂತರ, ಹೊಸ ಮಾರ್ಗ ವಿಮಾನ ನಿಲ್ದಾಣ ಮಾರ್ಗ ಮತ್ತು ಮಾರ್ಗ 6 ರೊಂದಿಗೆ ಸಂಯೋಜನೆಗೊಳ್ಳುತ್ತದೆ. ಇದು ನಗರದ ಸುತ್ತಲೂ ವೃತ್ತಾಕಾರದ ಜಾಲವನ್ನು ರೂಪಿಸುತ್ತದೆ ಮತ್ತು ವಿಮಾನ ನಿಲ್ದಾಣ ಸಂಪರ್ಕವನ್ನು ಗಮನಾರ್ಹವಾಗಿ ಸುಧಾರಿಸುತ್ತದೆ. ಈ ಸಾಲವು 10 ವರ್ಷಗಳ ಗ್ರೇಸ್ ಅವಧಿಯನ್ನು ಒಳಗೊಂಡಂತೆ 30 ವರ್ಷಗಳ ಮರುಪಾವತಿ ಅವಧಿಯನ್ನು ಹೊಂದಿರುತ್ತದೆ. ಈ ಯೋಜನೆಯು ಜನವರಿ 2032 ರೊಳಗೆ ಪೂರ್ಣಗೊಳ್ಳುವ ಗುರಿಯನ್ನು ಹೊಂದಿದೆ.



ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-3ಕ್ಕೆ ಸಂಬಂಧಿಸಿದ ಸಾಲದ ಒಪ್ಪಂದಕ್ಕೆ ಜಪಾನ್ ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆ ಪರವಾಗಿ, ಭಾರತದ ಜೈಕಾ ಕಚೇರಿಯ ಮುಖ್ಯ ಪ್ರತಿನಿಧಿ ಟಿಕೆಯುಚಿ ತಕುರು ಮತ್ತು ಭಾರತ ಸರಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ ಅಲೋಕ್ ತಿವಾರಿ 2026 ಮಾರ್ಚ್ 24 ರಂದು ನವದೆಹಲಿಯಲ್ಲಿ ಸಹಿ ಹಾಕಿದ್ದು, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಜೆ. ರವಿಶಂಕರ್ ಹಾಗೂ ನಿರ್ದೇಶಕರು (ಹಣಕಾಸು) ಎಸ್. ಶಿವಮಾಥನ್ ಒಪ್ಪಂದಕ್ಕೆ ಸಾಕ್ಷಿಯಾದರು.

ಎರಡು ಹಂತಗಳಲ್ಲಿ ಹಣ ನೀಡಲಿರುವ ಜೈಕಾ

ಒಟ್ಟು 15,611 ಕೋಟಿ ರು. ಅಂದಾಜು ವೆಚ್ಚದ ಈ ಯೋಜನೆಗೆ 2024ರಲ್ಲಿ ಕೇಂದ್ರ ಸರಕಾರವು ಅನುಮೋದನೆ ನೀಡಿದ್ದು, ಅದಾಗಿ ವರ್ಷಗಳ ಬಳಿಕ ಯೋಜನೆ ಆರಂಭಿಸಲು ಮುಂದಾಗಿರುವ ಬಿಎಂಆರ್‌ಸಿಎಲ್‌ಗೆ ಜೈಕಾ ಸಂಸ್ಥೆ ಎರಡು ಹಂತಗಳಲ್ಲಿ ಸಾಲ ನೀಡಲಿದೆ. ಮೊದಲ ಹಂತದಲ್ಲಿ 6,775 ಕೋಟಿ ರುಪಾಯಿ ಪೈಕಿ 6,100 ಕೋಟಿ ರುಪಾಯಿ (102,480 ಮಿಲಿಯನ್ ಯೆನ್) ಒದಗಿಸಲಿದೆ. ಎರಡನೇ ಹಂತದಲ್ಲಿ ಉಳಿದ ಮೊತ್ತವನ್ನು ನೀಡಲಿದೆ ಎಂದು ಮೆಟ್ರೋ ಅಧಿಕಾರಿಗಳು ತಿಳಿಸಿದ್ದಾರೆ. ಈ ಒಪ್ಪಂದದೊಂದಿಗೆ ಬಹುನಿರೀಕ್ಷಿತ ಹಂತ-3 ಯೋಜನೆಗೆ ಅಗತ್ಯವಾದ ಆರ್ಥಿಕ ನೆರವು ದೊರೆತಿದೆ. ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-3 ಒಟ್ಟು 44.65 ಕಿಮೀ ಉದ್ದವಿದೆ. ಇದರಲ್ಲಿ ಜೆಪಿ ನಗರ 4ನೇ ಹಂತದಿಂದ ಕೆಂಪಾಪುರವರೆಗೆ (ಹೊರ ವರ್ತುಲ ರಸ್ತೆ ಪಶ್ಚಿಮ ಭಾಗದ ಮೂಲಕ) 32.15 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಹಾಗೂ ಹೊಸಹಳ್ಳಿ ಕ್ರಾಸ್‌ನಿಂದ ಕಡಬಗೆರೆವರೆಗೆ (ಮಾಗಡಿ ರಸ್ತೆಯ ಮೂಲಕ) 12.5 ಕಿ.ಮೀ ಉದ್ದದ ಕಾರಿಡಾರ್ ಇವೆ. ಜಪಾನಿನ ಜೈಕಾ ಸಂಸ್ಥೆಯು 5 ಸಿವಿಲ್ ಪ್ಯಾಕೇಜುಗಳು, ಪರ್ಮನೆಂಟ್ ವೇ, ರೋಲಿಂಗ್ ಸ್ಟಾಕ್, ಸಿಗ್ನಲಿಂಗ್ ಮತ್ತು ಟೆಲಿಕಮ್ಯುನಿಕೇಷನ್, ಆಟೋಮ್ಯಾಟಿಕ್ ಫೇರ್ ಕಲೆಕ್ಷನ್, ಟ್ರ್ಯಾಕ್ಷನ್ ಹಾಗೂ ಸಲಹಾ ಸೇವೆಗಳಿಗೆ ಹಣಕಾಸು ನೆರವು ನೀಡುತ್ತಿದೆ. ಈ ಸಾಲದ ಅವಧಿ 30 ವರ್ಷಗಳಾಗಿದ್ದು, ಹಂತ ಹಂತವಾಗಿ ಮೆಟ್ರೋ ತೀರಿಸಲಿದೆ ಎಂದು ತಿಳಿಸಿದೆ.

51 ಆಸ್ತಿಗಳ ವಶಕ್ಕೆ ಪ್ರಕ್ರಿಯೆ ಆರಂಭ

ಬೆಂಗಳೂರು: ಉತ್ತರ ನಗರ ಪಾಲಿಕೆಯ ವಲಯ-1 ಮತ್ತು ವಲಯ-2ರ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸದ 51 ಆಸ್ತಿಗಳಿಂದ ಕಂದಾಯ ಬಾಕಿ 1,37,14,934 ರು. ಇರುವುದರಿಂದ, ಕೊನೆಯ ಹಂತದ ಪ್ರಕ್ರಿಯೆಯಾಗಿ ಸದರಿ ಆಸ್ತಿಗಳನ್ನು ನಗರ ಪಾಲಿಕೆಯ ವಶಕ್ಕೆ ಸ್ವಾಧೀನಪಡಿಸಿಕೊಕೊ ಳ್ಳಲಾಗು ವುದು ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್‌ತಿಳಿಸಿದರು. ಜಿಬಿಎ ಕಾಯಿದೆ-2025 ಅನ್ವಯ, ಆಸ್ತಿ ತೆರಿಗೆ ಪಾವತಿಸದ ಪ್ರಕರಣಗಳಲ್ಲಿ, ಆಸ್ತಿ ತೆರಿಗೆ ವಸೂಲಾತಿ ಮತ್ತು ನಿರ್ವಹಣೆ ನಿಯಮಗಳು-2024ರ ಅನ್ವಯ ಕ್ರಮ ಕೈಗೊಳ್ಳಲಾಗುತ್ತದೆ. ಈ ನಿಯಮ ಗಳಂತೆ, ಸುಸ್ತಿದಾರರಿಗೆ ಕಾರಣ ಕೇಳುವ ನೋಟಿಸ್ ಹಾಗೂ ಬೇಡಿಕೆ ಪತ್ರಗಳನ್ನು ಜಾರಿಗೊಳಿ ಸಲಾಗಿದ್ದು, ಸುಸ್ತಿದಾರರ ವಿವರಗಳನ್ನು ಪಾಲಿಕೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸ ಲಾಗಿದೆ. ಜತೆಗೆ ಮೊಬೈಲ್ ಸಂದೇಶಗಳ ಮೂಲಕ ಹಾಗೂ ಸ್ವತ್ತಿನ ಸ್ಥಳದಲ್ಲಿಯೇ ಪ್ರಕಟಣೆ ಅಂಟಿಸುವ ಮೂಲಕ ಹಲವು ಬಾರಿ ತಿಳಿಸಲಾಗಿದೆ. ಈಗಾಗಲೇ ಫೆ.27, ಮಾ.6 ಮತ್ತು 13 ರಂದು ಹರಾಜು ಪ್ರಕ್ರಿಯೆ ನಡೆಸಲಾಗಿದ್ದು, ಕೊನೆಯ ಪ್ರಕ್ರಿಯೆಯಾಗಿ 51 ಆಸ್ತಿಗಳನ್ನು ಪಾಲಿಕೆಯ ವಶಕ್ಕೆ ಪಡೆಯಲಾಗುವುದು ಎಂದು ಹೇಳಿದ್ದಾರೆ.

ಜೆಪಿ ನಗರ 4ನೇ ಹಂತದಿಂದ ಮೈಸೂರು ರಸ್ತೆಗೆ ಪ್ರಸ್ತಾವಿತ ಮೆಟ್ರೋ ರೈಲು

ಮೆಟ್ರೋಗೆ ಮರ ಕಡಿಯಲು ಹೈ ಅನುಮತಿಗೆ ಅರ್ಜಿ

ಬೆಂಗಳೂರು: ಜೆಪಿನಗರ 4ನೇ ಹಂತದಿಂದ ಮೈಸೂರು ರಸ್ತೆಯವರೆಗಿನ ಪ್ರಸ್ತಾವಿತ ಮೆಟ್ರೋ ರೈಲು ಮಾರ್ಗಕ್ಕಾಗಿ ಮರಗಳನ್ನು ಕಡಿಯಲು ಅನುಮತಿ ಕೋರಿ ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್) ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದೆ.

ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ಹಾಗೂ ಪರಿಸರವಾದಿ ದತ್ತಾತ್ರೇಯ ದೇವರು ಎಂಬವರು 2018ರಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಬಿಎಂಆರ್‌ಸಿಎಲ್ ಈ ಮಧ್ಯಂತರ ಅರ್ಜಿ ಸಲ್ಲಿಸಿ, ಅನುಮತಿ ಕೋರಿದೆ.

ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಬು ಭಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರ ವಿಭಾಗೀಯ ಪೀಠ, ಅರ್ಜಿಗೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಿರುವ ಆದೇಶಗಳ ಅನುಷ್ಠಾನ ಕುರಿತಂತೆ ವರದಿ ಸಲ್ಲಿಸಬೇಕು. ಅಲ್ಲದೆ, ಮರಗಳನ್ನು ಕಡಿಯುವುದಕ್ಕೆ ಸಂಬಂಧಿಸಿದಂತೆ ಅರ್ಜಿದಾರರೊಂದಿಗೆ ಸಮಾಲೋಚನೆ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿ, ವಿಚಾರಣೆಯನ್ನು ಏಪ್ರಿಲ್ 10ಕ್ಕೆ ನಿಗದಿಪಡಿಸಿದೆ. ವಿಚಾರಣೆ ವೇಳೆ, ಬಿಎಂಆರ್‌ಸಿಎಲ್ ಪರ ವಕೀಲರು, ಜೆಪಿನಗರ 4ನೇ ಹಂತದಿಂದ ಮೈಸೂರು ರಸ್ತೆಯವರೆಗೆ ಹೊಸ ಮೆಟ್ರೋ ಮಾರ್ಗಕ್ಕೆ ಸಂಬಂಧಿಸಿದಂತೆ ಮರಗಳನ್ನು ಕಡಿತಗೊಳಿಸಲು ಟ್ರೀ ಎಕ್ಸ್‌ಪರ್ಟ್ ಸಮಿತಿ ವರದಿ ನೀಡಿದೆ. ಮರ ಕಡಿತ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸುವ ನೋಟಿಸ್ ನೀಡಲಾಗಿದೆ. ಒಟ್ಟು 2,184 ಮರಗಳಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆ ಆಗದಂತೆ ಕೆಲವು ಮರಗಳನ್ನು ಕಡಿತಗೊಳಿಸುವುದು ಎಂದು ಪೀಠಕ್ಕೆ ವಿವರಿಸಿದರು.

ಏನಿದು ಪ್ರಕರಣ?

ಮೆಟ್ರೋ ರೈಲು ಯೋಜನೆಗಾಗಿ ಕಡಿಯುವ ಮರಗಳನ್ನು ಕಡಿತಗೊಳಿಸಲು ಅನುಮತಿ ನೀಡಿದರೆ, ಪ್ರತಿಯೊಂದು ಮರ ಕಡಿತಗೊಂಡ ಸ್ಥಳದಲ್ಲೇ ಹೊಸ ಮರವನ್ನು ನೆಡುವುದು ಕಡ್ಡಾಯವಾಗಬೇಕು ಎಂದು ಕರ್ನಾಟಕ ಮರಗಳ ಸಂರಕ್ಷಣಾ ಕಾಯಿದೆ 1976ರ ಸೆಕ್ಷನ್ 5(5) ಅನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಎಂದು ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಅಲ್ಲದೆ, ಕನಿಷ್ಠ 50 ಮರಗಳನ್ನು ಕಡಿತಗೊಳಿಸಬೇಕಾದಲ್ಲಿ ಮಾತ್ರ ಸಾರ್ವಜನಿಕ ನೋಟಿಸ್ ಪ್ರಕಟಿಸಬೇಕು ಎಂಬ ಕಾಯಿದೆಯ ತಿದ್ದುಪಡಿ ಸೆಕ್ಷನ್ 8(3)(6) ಅನ್ನು ಅಸಾಂವಿಧಾನಿಕ ಎಂದು ಘೋಷಣೆ ಮಾಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಶುಕ್ರವಾರ ಮಾಂಸ ಮಾರಾಟ, ಕಸಾಯಿಖಾನೆ ಬಂದ್

ಬೆಂಗಳೂರು: ಶ್ರೀರಾಮನವಮಿಯ ಅಂಗವಾಗಿ ಜಿಬಿಎಯು ಶುಕ್ರವಾರ ನಗರಾದ್ಯಂತ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿದ್ದು, ಎಲ್ಲಾ ಕಸಾಯಿ ಖಾನೆಗಳನ್ನು ಆ ದಿನ ಮುಚ್ಚುವಂತೆ ಆದೇಶ ಹೊರಡಿಸಿದೆ. ಮಾಂಸ ಮಾರಾಟ ಮಾಡುವ ಅಂಗಡಿಗಳು, ಔಟ್‌ಲೆಟ್‌ಗಳಲ್ಲಿ ಯಾವುದೇ ರೀತಿಯ ಮಾಂಸ ಮಾರಾಟಕ್ಕೆ ಅವಕಾಶವಿರುವುದಿಲ್ಲ. ನಗರ ವ್ಯಾಪ್ತಿಯಲ್ಲಿ ಎಲ್ಲ ವ್ಯಾಪಾರಿಗಳು ಮತ್ತು ಸಾರ್ವಜನಿಕರು ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕಾಗಿದೆ ಎಂದು ಪ್ರಾಧಿಕಾರದ ಪಶುಸಂಗೋಪನಾ ಇಲಾಖೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

ವಾಟ್ಸಾಪ್‌ನಲ್ಲಿ ಬಂದಿದ್ದ ಅಶ್ಲೀಲ ಸಂದೇಶ ರವಾನಿಸಿದ್ದ ಆರೋಪ

ರೌಡಿ 'ಬೇಬಿ'ಗೆ 'ಪಾಪು' ಲೈಂಗಿಕ ಕಿರುಕುಳ

ಬೆಂಗಳೂರು: ಕೋಣನಕುಂಟೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಪಾಪಣ್ಣ ವಿರುದ್ಧ ಲೈಂಗಿಕ ಕಿರುಕುಳದ ಗಂಭೀರ ಆರೋಪ ಕೇಳಿಬಂದಿದೆ. ಈ ಸಂಬಂಧ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ದೂರು ಸಲ್ಲಿಸಿರುವ ಸಂತ್ರಸ್ತೆ, ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಸಂತ್ರಸ್ತೆಯು ರೌಡಿಶೀಟರ್ ಆಗಿದ್ದು, ಆಕೆಗೆ ಫೋನ್ ಕರೆ ಮಾಡಿದ್ದ ಇನ್‌ಸ್ಪೆಕ್ಟರ್ ಬೇಬಿ, ಚಿನ್ನ, ಮುದ್ದು, ಬಂಗಾರಿ. ನನ್ನನ್ನು ಪಾಪು ಎಂದು ಕರೀಬೇಕು ನೀನು ಎಂದೆಲ್ಲ ಸಂಬೋಧಿಸಿದ್ದಲ್ಲದೆ ಅಶ್ಲೀಲ ಸಂದೇಶಗಳನ್ನೂ ಕಳುಹಿಸಿದ್ದ ಎಂಬ ಆರೋಪ ಮಾಡಲಾಗಿದೆ. ಅಲ್ಲದೆ, ನಂತರ ಕೊಲೆ ಬೆದರಿಕೆಯನ್ನೂ ಹಾಕಿದ್ದ ಎಂದು ಸಂತ್ರಸ್ತೆ ದೂರಿದ್ದಾರೆ. ದೂರುದಾರೆಯ ಪ್ರಕಾರ, ಇನ್‌ಸ್ಪೆಕ್ಟರ್ ಪಾಪಣ್ಣ ಕಚೇರಿಯ ಹಾಗೂ ವೈಯಕ್ತಿಕ ಮೊಬೈಲ್ ಸಂಖ್ಯೆಯಿಂದ ಹಲವು ಬಾರಿ ಕರೆ ಮಾಡಿ ಕಿರುಕುಳ ನೀಡಿದ್ದಾರೆ. ಅಲ್ಲದೆ, ಅಸಭ್ಯವಾಗಿ ಮಾತನಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆರೋಪಿಯು ವಾಟ್ಸಾಪ್ ಮೂಲಕ ಕಳುಹಿಸಿದ್ದ ಅಶ್ಲೀಲ ಸಂದೇಶಗಳು ಹಾಗೂ ಸಂಭಾಷಣೆಗಳ ಸ್ಕ್ರೀನ್‌ಶಾಟ್‌ಗಳನ್ನು ಕೂಡ ಪೊಲೀಸ್ ಆಯುಕ್ತರಿಗೆ ಆ ಸಂತ್ರಸ್ತೆ ಸಲ್ಲಿಸಿದ್ದಾರೆ. ಜತೆಗೆ, ಇನ್‌ಸ್ಪೆಕ್ಟರ್ ಮತ್ತು ದೂರುದಾರೆ ನಡುವೆ ನಡೆದಿದ್ದೆಂದು ಹೇಳಲಾಗುತ್ತಿರುವ ಆಡಿಯೋ ದಾಖಲೆಗಳನ್ನೂ ಕಮಿಷನರ್ ಕಚೇರಿಗೆ ನೀಡಿದ್ದಾರೆ.

ಕೊಲೆ ಬೆದರಿಕೆ ಆರೋಪ

ಈ ಪ್ರಕರಣ ಬಹಿರಂಗಪಡಿಸಿದರೆ ದೂರುದಾರೆಯನ್ನೂ ಅವರ ಮಕ್ಕಳನ್ನೂ ಸುಪಾರಿ ಕೊಟ್ಟು ಕೊಲೆ ಮಾಡಿಸುವುದಾಗಿ ಇನ್‌ಸ್ಪೆಕ್ಟರ್ ಪಾಪಣ್ಣ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ. ಹಲವಾರು ಬಾರಿ ಕರೆ ಮಾಡಿ ಮನೆಗೆ ಬರುವುದಾಗಿ ಹೇಳಿ ಕಿರುಕುಳ ನೀಡಿರುವುದಾಗಿ ದೂರಿನಲ್ಲಿ ವಿವರಿಸಲಾಗಿದೆ. ಎಲೆಕ್ಟ್ರಾನಿಕ್ ಸಾಕ್ಷ್ಯಾಧಾರಗಳೊಂದಿಗೆ ಸಲ್ಲಿಸಿರುವ ಈ ದೂರಿನ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ಆರಂಭಿಸುವ ಸಾಧ್ಯತೆ ಇದೆ. ಆರೋಪಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ದೂರುದಾರೆ ಮನವಿ ಮಾಡಿದ್ದಾರೆ.

ಮಹಿಳೆ ಸಾವು: ಆಟೋ ಚಾಲಕನ ಬಂಧನ

ಬೆಂಗಳೂರು: ಆಟೋ ರಿಕ್ಷಾ ಡಿಕ್ಕಿಯಾಗಿ ಗಾಯಗೊಂಡ ಮಹಿಳೆ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ ಬಳಿಕ ಹೆದರಿ ಆಕೆಯ ಮೃತದೇಹವನ್ನು ಕಸದ ರಾಶಿಯಲ್ಲಿ ಎಸೆದು ಪರಾರಿಯಾಗಿದ್ದ ಆಟೋ ಚಾಲಕನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.ಕೆಂಪಮ್ಮ (50) ಎಂಬಾಕೆಯ ಸಾವಿಗೆ ಕಾರಣವಾಗಿದ್ದಲ್ಲದೇ, ಅಮಾನವೀಯವಾಗಿ ನಡೆದುಕೊಂಡಿದ್ದ ಆಟೋ ಚಾಲಕ ಬಸವೇಗೌಡ ಎಂಬಾತನನ್ನು ಬಂಧಿಸಲಾಗಿದೆ. ಕೆಂಗೇರಿ ಉಪನಗರದ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ರಸ್ತೆ ದಾಟುವಾಗ ಅಪಘಾತ ನಡೆದಿತ್ತು. ಮಂಡ್ಯ ಮೂಲದ ಕೆಂಪಮ್ಮ ತಮ್ಮ ಕುಟುಂಬದ ಜತೆ ಕೆಂಗೇರಿ ಉಪನಗರದ ವಿನಾಯಕ ಲೇಔಟ್‌ನಲ್ಲಿ ವಾಸವಿದ್ದರು. ಭಾನುವಾರ ರಾತ್ರಿ ಕೆಲಸ ಮುಗಿಸಿ ಮನೆಗೆ ಮರಳಲು ರಸ್ತೆ ದಾಟುತ್ತಿದ್ದಾಗ ಅವರಿಗೆ ಆಟೋ ಡಿಕ್ಕಿಯಾಗಿತ್ತು. ಕೂಡಲೇ ಆರೋಪಿ ತನ್ನ ಆಟೋದಲ್ಲೇ ಗಾಯಾಳುವನ್ನು ಆಸ್ಪತ್ರೆಗೆ ಕರೆದೊಯ್ದಿದ್ದ. ಆದರೆ, ಮಾರ್ಗಮಧ್ಯದಲ್ಲಿ ಕೆಂಪಮ್ಮ ಮೃತಪಟ್ಟಿದ್ದರು. ಇದರಿಂದ ಭಯಗೊಂಡಿದ್ದ ಆರೋಪಿ ರಸ್ತೆ ಬದಿಯ ಕಸದ ರಾಶಿಗೆ ಮೃತದೇಹವನ್ನು ಎಸೆದು ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮರುದಿನ ಕಸದ ರಾಶಿಯಲ್ಲಿ ಮೃತದೇಹ ಕಂಡ ಸ್ಥಳೀಯರು ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಆರಂಭದಲ್ಲಿ ಮಹಿಳೆ ಹತ್ಯೆಯಾಗಿದೆ ಎಂಬ ಶಂಕೆ ವ್ಯಕ್ತವಾಗಿತ್ತು. ಆದರೆ, ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಸಾವಿನ ರಹಸ್ಯ ಬಯಲಾಗಿದೆ. ಇದು ಕೊಲೆಯಲ್ಲ, ಅಪಘಾತ ಎಂಬುದನ್ನು ಖಚಿತಪಡಿಸಿಕೊಂಡ ಪೊಲೀಸರು ಆರೋಪಿ ಚಾಲಕನನ್ನು ಪತ್ತೆಹಚ್ಚಿ ಬಂಧಿಸಿರುವುದಾಗಿ ತಿಳಿಸಿದ್ದಾರೆ.

ಉದ್ಯೋಗದ ಆಮಿಷ: ಬಂಧಿತರ ಸಂಖ್ಯೆ 6ಕ್ಕೇರಿಕೆ

ಬೆಂಗಳೂರು: ನ್ಯಾಯಾಲಯದಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ನೂರಾರು ಜನರಿಂದ ಕೋಟ್ಯಂತರ ರು. ಹಣ ಪಡೆದು ವಂಚಿಸಿದ್ದ ಪ್ರಕರಣದಲ್ಲಿ ಇನ್ನೂ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಜಿ.ಎಸ್ ವೆಂಕಟರೆಡ್ಡಿ, ತಿಪ್ಪೆಸ್ವಾಮಿ, ಸಿದ್ದಲಿಂಗಯ್ಯ ಹಾಗೂ ವಿಜಯಾ ಸಿದ್ದಲಿಂಗಯ್ಯ ಹಿರೇಮಠ ಬಂಧಿತರು. ಇದರೊಂದಿಗೆ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ. ಇದಕ್ಕೂ ಮುನ್ನ ನ್ಯಾಯಾಲಯಗಳಲ್ಲಿ ಡಿ-ಗ್ರೂಪ್ ಹುದ್ದೆ ಕೊಡಿಸುತ್ತೇವೆ ಎಂದು ನಂಬಿಸಿ ನಿರುದ್ಯೋಗಿಗಳು, ಉದ್ಯೋಗಾಸಕ್ತರಿಗೆ ವಂಚಿಸುತ್ತಿದ್ದ ಜೈಸನ್ ಡಿಸೋಜಾ ಮತ್ತು ಲವೀನಾ ಎಂಬ ದಂಪತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ಹಣ ಸಂಗ್ರಹಿಸಲು ಮತ್ತು ಉದ್ಯೋಗಾಸಕ್ತರನ್ನು ಹುಡುಕಲು ಏಜೆಂಟ್‌ಗಳನ್ನು ನೇಮಿಸಿಕೊಂಡಿದ್ದ ಆರೋಪಿಗಳು, ಅವರು ನೀಡುವ ಮಾಹಿತಿ ಪಡೆದು ನಿರುದ್ಯೋಗಿಗಳು, ಖಾಸಗಿ ಕಂಪನಿಗಳಲ್ಲಿ ಕಡಿಮೆ ಸಂಬಳಕ್ಕೆ ಕೆಲಸ ಮಾಡುವವರನ್ನು ಗುರಿಯಾಗಿಸಿಕೊಳ್ಳುತ್ತಿದ್ದರು. ಕೆಲಸದ ಆಮಿಷವೊಡ್ಡಿ ಒಬ್ಬೊಬ್ಬರಿಂದ 10 ಲಕ್ಷದಿಂದ 25 ಲಕ್ಷ ರು. ವರೆಗೆ ಹಣ ವಸೂಲಿ ಮಾಡುತ್ತಿದ್ದರು. ವಂಚಿಸಿದ ಹಣದಲ್ಲಿ ಏಜೆಂಟ್‌ಗಳಿಗೆ ಕಮಿಷನ್ ನೀಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.ಖಾಸಗಿ ಹೋಟೆಲ್‌ಗಳಲ್ಲಿ ದಾಖಲೆ ಪರಿಶೀಲನೆಯ ನಾಟಕವಾಡಿ, ನಕಲಿ ಆಫರ್ ಲೆಟರ್‌ಗಳನ್ನು ತೋರಿಸಿ ನಂಬಿಸುತ್ತಿದ್ದರು. ಹಣ ನೀಡಿದವರು ಕೆಲಸದ ಬಗ್ಗೆ ವಿಚಾರಿಸಿದಾಗ ನಾಳೆ, ನಾಡಿದ್ದು ಎಂದು ಕಥೆ ಹೇಳುತ್ತಾ ಕಾಲಹರಣ ಮಾಡುತ್ತಿದ್ದರು. ಕೊನೆಗೆ ಸಂತ್ರಸ್ತರ ಫೋನ್ ಕರೆಗಳನ್ನು ಸ್ವೀಕರಿಸದೆ ತಪ್ಪಿಸಿಕೊಳ್ಳುತ್ತಿದ್ದರು. ಆರೋಪಿಗಳ ವಿರುದ್ಧ ಬಸವೇಶ್ವರ ನಗರ ಸೇರಿದಂತೆ ಕೆಲವೆಡೆ ಪ್ರಕರಣಗಳು ದಾಖಲಾಗಿದ್ದವು. ಬಂಧಿತರಿಂದ ಒಟ್ಟು 38 ಲಕ್ಷ ರು. ಹಣ ವಶಕ್ಕೆ ಪಡೆಯಲಾಗಿದೆ. ವಂಚಿಸಿದ ಹಣದಲ್ಲಿ ಕೆಲವೆಡೆ ಜಮೀನು, ಸೈಟ್ ಖರೀದಿಸಿರುವುದು ಪತ್ತೆಯಾಗಿದ್ದು, ಅದನ್ನು ಜಪ್ತಿ ಮಾಡಲು ನ್ಯಾಯಾಲಯದ ಅನುಮತಿ ಕೇಳಲಾಗುವುದು ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಬ್ಯಾಂಕ್ — ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ಕರ್ನಾಟಕ ಬ್ಯಾಂಕ್ ಲಿಮಿಟೆಡ್
ತಿಪಟೂರು ಮುಖ್ಯ ಶಾಖೆ,
ಅಲ್ಲಮ್ಮಾಜಿ ಕಾಂಪ್ಲೆಕ್ಸ್, ಬಿ.ಹೆಚ್. ರೋಡ್,
ತಿಪಟೂರು, ತುಮಕೂರು-572201
ಮೊಬೈಲ್ : 9449595742
ಇ-ಮೇಲ್: tiptur@ktkbank.com
ವೆಬ್‌ಸೈಟ್: www.karnatakabank.com
CIN: L85110KA1924PLC001128

ಲಾಕರ್ ಓಪನ್ ನೋಟೀಸ್

ಕ್ರ ಸಂ	ಲಾಕರ್ ಹೊಂದಿರುವವರ & ಜಂಟಿ ಹೋಲ್ಡರ್ ಹೆಸರು ಮತ್ತು ವಿಳಾಸ	ಬಾಕಿ ಉಳಿದಿರುವ ಲಾಕರ್ ಬಾಡಿಗೆ	ಲಾಕರ್ ನಂ.	ಅವಧಿಗೆ ಬಾಕಿ ಇರುವ ಬಾಡಿಗೆ	ಮಿತಿ	ಲಾಕರ್ ಡ್ರಿಲ್ ತೆರೆಯುವ ದಿನಾಂಕ
1	ಪ್ರೀತಿ ಎ ಎಸ್ ಕೋಂ. ಯತೀಶ್ ಕುಮಾರ್ ಬೀರಸಂದ್ರ, ಕಿಬ್ಬನಹಳ್ಳಿ, ತಿಪಟೂರು, ತುಮಕೂರು-572201	ರೂ.16,350/-	912-51	01-04-2014 ರಿಂದ 31-03-2025	01.04.2014	02.04.2026

"ಮೇಲೆ ತಿಳಿಸಿದ ಲಾಕರ್ ಹೊಂದಿರುವವರು **ಕರ್ನಾಟಕ ಬ್ಯಾಂಕ್, ತಿಪಟೂರು ಶಾಖೆ, ತುಮಕೂರು**ಗಳಲ್ಲಿ ಲಾಕರ್ ಅನ್ನು ನಿರ್ವಹಿಸುತ್ತಿದ್ದಾರೆ. ನಾವು ಮೇಲಿನ ಕೋಷ್ಟಕದ ಕಾಲಂ 5 ರಲ್ಲಿ ನಮೂದಿಸಿದ ದಿನಾಂಕಗಳಂದು ಮಿತಿಮೀರಿದ ಲಾಕರ್ ಬಾಡಿಗೆ ಪಾವತಿಗೆ ಸಂಬಂಧಿಸಿದಂತೆ ವಿವಿಧ ಸಂವಹನಗಳನ್ನು ಕಳುಹಿಸಿದ್ದೇವೆ. ಆದಾಗ್ಯೂ ವಿವಿಧ ಜ್ಞಾಪನೆಗಳ ಹೊರತಾಗಿಯೂ ಪಾವತಿಸಲಾಗಿಲ್ಲ. ಆದ್ದರಿಂದ ಈ ಅಧಿಸೂಚನೆಯನ್ನು ಪ್ರಕಟಿಸಿದ 07 ದಿನಗಳ ಒಳಗಾಗಿ ಮೇಲಿನ ಕೋಷ್ಟಕದ ಕಾಲಂ ಸಂಖ್ಯೆ 3 ರಲ್ಲಿ ನಮೂದಿಸಿದ ಅವಧಿ ಮೀರಿದ ಬಾಡಿಗೆಯನ್ನು ಠೇವಣಿ ಮಾಡಲು ಮೇಲೆ ಮತ್ತೊಮ್ಮೆ ಸಲಹೆ ನೀಡಲಾಗುತ್ತದೆ. ಪಾವತಿ, ಈ ಪ್ರಕಟಣೆ/ನೋಟೀಸ್‌ನ ದಿನಾಂಕದಿಂದ 07 ದಿನಗಳ ನಂತರ ಅವರ (ಲಾಕರ್-ಹೋಲ್ಡರ್‌ಗಳು) ವೆಚ್ಚ, ವೆಚ್ಚಗಳು ಮತ್ತು ಶುಲ್ಕಗಳು ಸಂಪೂರ್ಣವಾಗಿ ಅವರ ಅಪಾಯ ಮತ್ತು ಜವಾಬ್ದಾರಿಯಲ್ಲಿ ಬ್ಯಾಂಕ್ ಲಾಕರ್ ಅನ್ನು ತೆರೆಯುತ್ತದೆ".

ಸ್ಥಳ : ತಿಪಟೂರು
ದಿನಾಂಕ: 25.03.2026
ಸಹಿ/- ಶಾಖಾ ವ್ಯವಸ್ಥಾಪಕರು
ಕರ್ನಾಟಕ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 17.04.2026 (ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 77,15,269.20 (ರೂಪಾಯಿ ಎಪ್ಪತ್ತೇಳು ಲಕ್ಷದ ಹದಿನೈದು ಸಾವಿರದ ಎರಡುನೂರ ಅರವತ್ತೊಂಭತ್ತು ಮತ್ತು ಇಪ್ಪತ್ತು ಪೈಸೆ ಮಾತ್ರ) ಜೊತೆಗೆ ದಿನಾಂಕ: 09.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ:(1) **ಶ್ರೀ. ಎನ್. ಆರ್. ಪ್ರಭಾಕರ್** ಬಿನ್ ರಂಗಸ್ವಾಮಿ ಎನ್ ಬಿ, ನಂ.4, ಆಂಜನೇಯ ದೇವಸ್ಥಾನ ರಸ್ತೆ, ವಡೇರಮಂಚನಹಳ್ಳಿ, ಕಲ್ಲು ಬಾಳು ಪೋಸ್ಟ್, ಆನೇಕಲ್, ಬೆಂಗಳೂರು-562106 **ಮತ್ತೊಂದು ವಿಳಾಸ : ಶ್ರೀ ಎನ್. ಆರ್. ಪ್ರಭಾಕರ್** ಬಿನ್ ರಂಗಸ್ವಾಮಿ ಎನ್ ಬಿ, ನಂ.00, ನಾಲ್ಕುದ್ರೆ, ಚನ್ನಗಿರಿ, ದಾವಣಗೆರೆ, ಕರ್ನಾಟಕ 577544, (2) **ಶ್ರೀಮತಿ.ಆಶಾ** ಕೋಂ ಎನ್.ಆರ್ ಪ್ರಭಾಕರ್, ನಂ.4, ಆಂಜನೇಯ ದೇವಸ್ಥಾನ ರಸ್ತೆ, ವಡೇರಮಂಚನಹಳ್ಳಿ, ಕಲ್ಲು ಬಾಳು ಪೋಸ್ಟ್, ಆನೇಕಲ್, ಬೆಂಗಳೂರು-562106 **ಮತ್ತೊಂದು ವಿಳಾಸ : ಶ್ರೀಮತಿ ಆಶಾ** ಕೋಂ ಎನ್.ಆರ್ ಪ್ರಭಾಕರ್, ನಂ.00, ನಾಲ್ಕುದ್ರೆ, ಚನ್ನಗಿರಿ, ದಾವಣಗೆರೆ, ಕರ್ನಾಟಕ-577544. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 16.04.2026 ರ ಸಂಜೆ 6.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಲಾಟ್ ನಂ	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	**ಷೆಡ್ಯೂಲ್ 'ಎ' ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ಪೂರ್ವ ಭಾಗದ ನಿವೇಶನ ನಂ. 1, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಯಲೇನಹಳ್ಳಿ ಗ್ರಾಮದ ಭೂಮಿಯ ಸರ್ವೆ ನಂ. 16/2 ರಲ್ಲಿ ರೂಪುಗೊಂಡಿದ್ದು, (ಬೆಂಗಳೂರು ಜಿಲ್ಲೆ ಆರ್ಡರ್ ನಂ. B Dis ALN.SR (S) 145/1999-2000 ರ ಪ್ರಕಾರ ಆಸ್ತಿಯನ್ನು ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ಪರಿವರ್ತಿಸಲಾಗಿದೆ) ಆಸ್ತಿಯು ಪ್ರಸ್ತುತ ಬೆಂಗಳೂರು ಯಲೇನಹಳ್ಳಿ, ಬೇಗೂರು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ವಾರ್ಡ್ ನಂ. 192, ಮತ್ತು ಬಿಬಿಎಂಪಿ ಖಾತಾ ನಂ. 2259/226/1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : ಉತ್ತರದ ಕಡೆ 75 ಅಡಿ, ದಕ್ಷಿಣದ ಕಡೆ 55 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : ಪೂರ್ವದ ಕಡೆ 116 ಅಡಿ, ಪಶ್ಚಿಮದ ಕಡೆ 146 ಅಡಿ, ಒಟ್ಟು ವಿಸ್ತೀರ್ಣ 8515 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಖಾಸಗಿ ಆಸ್ತಿ, ಪಶ್ಚಿಮಕ್ಕೆ : ಪಶ್ಚಿಮ ಭಾಗದ ನಿವೇಶನ ನಂ.1, ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ : ರಸ್ತೆ. ಷೆಡ್ಯೂಲ್ 'ಬಿ' ಆಸ್ತಿ : ಷೆಡ್ಯೂಲ್ 'ಎ' ಆಸ್ತಿಯಲ್ಲಿ ವಿವರಿಸಿರುವಂತೆ 310 ಚದರ ಅಡಿ ಅವಿಭಾಜಿತ ಭಾಗ ಹಕ್ಕು ಶೀರ್ಷಿಕೆ ಹಿತಾಸಕ್ತಿ, ಮಾಲೀಕತ್ವವನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ. **ಷೆಡ್ಯೂಲ್ 'ಸಿ' ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ನಂ. 101, ನೆಲಮಹಡಿಯನ್ನೊಳಗೊಂಡಂತೆ "ಕ್ರಾಂತಿ ಎನ್‌ಕ್ಲೇವ್" ಎಂದು ಕರೆಯಲ್ಪಡುವ ವಾಸಯೋಗ್ಯ ಕಾಂಪ್ಲೆಕ್ಸ್‌ನ ಸೂಪರ್ ಬಿಲ್ಟ್ ಅಪ್ ಪ್ರದೇಶ 1450 ಚದರ ಅಡಿ ಪ್ರದೇಶವು 2 ಬೆಡ್ ರೂಂಗಳು, ಒಂದು ಹಾಲ್, ಒಂದು ಅಡುಗೆಮನೆ, ಮೂರು ಬಾಲ್ಕನಿಗಳು, ಎರಡು ಬಾತ್‌ರೂಂಗಳನ್ನೊಳಗೊಂಡಿದ್ದು, ಜೊತೆಗೆ 290 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ, ಹಿತಾಸಕ್ತಿ, ಮಾಲೀಕತ್ವವನ್ನು ಹೊಂದಿದ್ದು, ಮತ್ತು ಷೆಡ್ಯೂಲ್ ಆಸ್ತಿಯಲ್ಲಿ ವಿವರಿಸಿರುವಂತೆ ಭೂಮಿಯಲ್ಲಿ ಸಹ-ಮಾಲೀಕತ್ವದ ಹಕ್ಕುಗಳು ಮತ್ತು ಹಾದಿಗಳು, ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳಲ್ಲಿ ಅನುಪಾತದ ಪಾಲನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ.	ರೂ. 49.11	ರೂ. 4.92	ರೂ. 1.00	30.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-। ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 080-25310066, 7022044933 ಮತ್ತು 9039609346)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 25.03.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಒರ್ಕ್ಲಾ ಇಂಡಿಯಾ ಲಿಮಿಟೆಡ್

(ಮೊದಲು ಇದರ ಹೆಸರು ಇತ್ತು "ಒರ್ಕ್ಲಾ ಇಂಡಿಯಾ ಪ್ರೈವೇಟ್ ಲಿಮಿಟೆಡ್")
ನೋಂದಾಯಿತ ಕಚೇರಿ: ನಂ.1, 2ನೇ ಮತ್ತು 3ನೇ ಮಹಡಿ, 100 ಅಡಿ ಇನ್ನರ್ ರಿಂಗ್ ರಸ್ತೆ, ಈಜಿಪುರ, ಅಶ್ವಿನಿ ಲೇಔಟ್, ವಿವೇಕ್ ನಗರ, ಬೆಂಗಳೂರು-560047, ಕರ್ನಾಟಕ, ಭಾರತ
ದೂರವಾಣಿ: +91 80 4081 2100; **CIN:** L15136KA1996PLC021007
ಇಮೇಲ್ ಐಡಿ: company.secretary@orklaindia.com **ವೆಬ್‌ಸೈಟ್:** www.orklaindia.com

ಪೋಸ್ಟಲ್ ಬ್ಯಾಲಟ್ ಸೂಚನೆ

ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ದ ಸೆಕ್ಷನ್ 108 ಮತ್ತು ಸೆಕ್ಷನ್ 110 ರ ನಿಬಂಧನೆಗಳು ಮತ್ತು ಇತರ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದರೆ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 22 ಮತ್ತು 20 ರೊಂದಿಗೆ ಓದಲಾಗುತ್ತದೆ, ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ("ನಿಯಮಗಳು"), ಏಪ್ರಿಲ್ 8, 2020, ಏಪ್ರಿಲ್ 13, 2020 ರ ದಿನಾಂಕದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020, ಏಪ್ರಿಲ್ 17/2020, ಇತರ ಸಂಬಂಧಿತ ಸುತ್ತೋಲೆಗಳೊಂದಿಗೆ ಓದಲಾಗುತ್ತದೆ, ಇತ್ತೀಚಿನದು ಸೆಪ್ಟೆಂಬರ್ 22, 2025 ರಂದು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ 03/2025, ("ಎಂಸಿಎ ಸುತ್ತೋಲೆಗಳು"), ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡಗಳು ಮತ್ತು ಯಾವುದೇ ಇತರ ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳು (ಯಾವುದೇ ಶಾಸನಬದ್ಧ ಮಾರ್ಪಾಡುಗಳು) ಅಥವಾ ಅವುಗಳ ಮರು-ಜಾರಿಗೊಳಿಸುವಿಕೆಗಳು ಸೇರಿದಂತೆ, ಸದ್ಯಕ್ಕೆ ಜಾರಿಯಲ್ಲಿರುವ) **ಒರ್ಕ್ಲಾ ಇಂಡಿಯಾ ಲಿಮಿಟೆಡ್** ಸದಸ್ಯರ ಅನುಮೋದನೆಯನ್ನು ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ. **("ಕಂಪನಿ")** ಯನ್ನು ದೂರಸ್ಥ ಇ-ಮತದಾನ ("ಇ-ಮತದಾನ") ಪ್ರಕ್ರಿಯೆಯ ಮೂಲಕ ಈ ಕೆಳಗಿನ ವಿಶೇಷ ವ್ಯವಹಾರಕ್ಕಾಗಿ ಹುಡುಕಲಾಗುತ್ತದೆ:

ಐಟಂ ಸಂಖ್ಯೆ.	ನಿರ್ಣಯದ ವಿವರಣೆ	ರೆಸಲ್ಯೂಶನ್ ಪ್ರಕಾರ
1.	ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕೇತರ ನಿರ್ದೇಶಕರಾದ ಶ್ರೀ ಅಟ್ಲೆ ವಿದಾರ್ ನಗೆಲ್ ಜೋಹಾನ್ಸೆನ್ (DIN: 01361367) ಅವರಿಗೆ ಪಾವತಿಸಬೇಕಾದ ಸಂಭಾವನೆಗೆ ಅನುಮೋದನೆ.	ಸಾಮಾನ್ಯ ರೆಸಲ್ಯೂಷನ್

ಎಂಸಿಎ ಸುತ್ತೋಲೆಗಳ ಪ್ರಕಾರ, ಇತರ ವಿಷಯಗಳ ಜೊತೆಗೆ, ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆ ಮತ್ತು ವಿಧಾನವನ್ನು ವಿವರಿಸುವ ಈ ಅಂಚೆ ಮತಪತ್ರ ಸೂಚನೆಯನ್ನು ("ಸೂಚನೆ") **ಮಾರ್ಚ್ 25, 2026** ರಂದು ಬುಧವಾರ ಎಲೆಕ್ಟ್ರಾನಿಕ್ ರೂಪದಲ್ಲಿ ಕಳುಹಿಸಲಾಗಿದೆ, **ಮಾರ್ಚ್ 20, 2026** ರಂದು ಶುಕ್ರವಾರ ಠೇವಣಿದಾರರಿಂದ ಸ್ವೀಕರಿಸಿದ ಸದಸ್ಯರ ನೋಂದಣಿ ಮತ್ತು ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸಲಾದ ಸದಸ್ಯರಿಗೆ **("ಕಟ್-ಆಫ್ ದಿನಾಂಕ")**, ಮತ್ತು ಅವರ ಇಮೇಲ್ ವಿಳಾಸವನ್ನು ಕಂಪನಿ/ಠೇವಣಿದಾರಿಯಲ್ಲಿ ನೋಂದಾಯಿಸಲಾಗಿದೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಗಳು ಈ ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು. ಎಂಸಿಎ ಸುತ್ತೋಲೆಗಳು ಒದಗಿಸಿದ ವಿನಾಯಿತಿಗಳಿಗೆ ಅನುಗುಣವಾಗಿ, ಅಂಚೆ ಮತಪತ್ರ ಸೂಚನೆಯ ಹಾರ್ಡ್ ಪ್ರತಿಗಳು, ಅಂಚೆ ಮತಪತ್ರ ನಮೂನೆಗಳು ಮತ್ತು ಪೂರ್ವ-ಪಾವತಿಸಿದ ವ್ಯವಹಾರ ಲಕೋಟೆಗಳನ್ನು ಈ ಅಂಚೆ ಮತಪತ್ರಕ್ಕಾಗಿ ಸದಸ್ಯರಿಗೆ ಕಳುಹಿಸಲಾಗುವುದಿಲ್ಲ. ಸದಸ್ಯರು ರಿಮೋಟ್ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ತಮ್ಮ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಬೇಕು. ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ-ವೋಟಿಂಗ್ ಸೌಲಭ್ಯಗಳನ್ನು ಒದಗಿಸಲು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ("ಎನ್‌ಎಸ್‌ಡಿಎಲ್") ನ ಸೇವೆಗಳನ್ನು ತೊಡಗಿಸಿಕೊಂಡಿದೆ. ಇ-ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಗಳಲ್ಲಿ ಲಭ್ಯವಿರುತ್ತದೆ:

ಇ-ಮತದಾನ ಅವಧಿಯ ಪ್ರಾರಂಭದ ದಿನ, ದಿನಾಂಕ ಮತ್ತು ಸಮಯ	ಗುರುವಾರ, ಮಾರ್ಚ್ 26, 2026 ಬೆಳಿಗ್ಗೆ 9.00 ರಿಂದ (IST)
ಇ-ಮತದಾನ ಅವಧಿ ಮುಕ್ತಾಯದ ದಿನ, ದಿನಾಂಕ ಮತ್ತು ಸಮಯ	ಶುಕ್ರವಾರ, ಏಪ್ರಿಲ್ 24, 2026 ಸಂಜೆ 5.00 ಗಂಟೆಗೆ (IST)
ಕಟ್-ಆಫ್ ದಿನಾಂಕ	ಶುಕ್ರವಾರ, ಮಾರ್ಚ್ 20, 2026

ಏಪ್ರಿಲ್ 24, 2026 ರಂದು ಶುಕ್ರವಾರ **ಸಂಜೆ 5.00 ಗಂಟೆಯ** ನಂತರ NSDL ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸುತ್ತದೆ. ಸದಸ್ಯರು ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ನಂತರ ಬದಲಾಯಿಸಲು ಅನುಮತಿಸಲಾಗುವುದಿಲ್ಲ.

ಇ-ಮತದಾನಕ್ಕೆ ಸಂಬಂಧಿಸಿದ ವಿವರವಾದ ಸೂಚನೆಗಳನ್ನು ನೋಟಿಸ್‌ನ ಭಾಗವಾಗಿ ನೀಡಲಾಗಿದೆ, ಸದಸ್ಯರು ಮತ ಚಲಾಯಿಸುವ ಮೊದಲು ಅವುಗಳನ್ನು ಎಚ್ಚರಿಕೆಯಿಂದ ಓದಬೇಕು. ನೋಟಿಸ್ ಮತ್ತು ಅದರ ಕುರಿತಾದ ವಿವರಣಾತ್ಮಕ ಹೇಳಿಕೆಯನ್ನು ಕಂಪನಿಯ ವೆಬ್‌ಸೈಟ್ www.orklaindia.com ನಿಂದ ಡೌನ್‌ಲೋಡ್ ಮಾಡಬಹುದು. ಇದು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ನಲ್ಲಿಯೂ ಲಭ್ಯವಿದೆ.

ಠೇವಣಿದಾರರಲ್ಲಿ ಇಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗಾಗಿ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಮತ್ತು ಈ ಸೂಚನೆಯಲ್ಲಿ ನಿಗದಿಪಡಿಸಿದ ನಿರ್ಣಯಕ್ಕಾಗಿ ಇ-ಮತದಾನಕ್ಕಾಗಿ ಇ-ಮೇಲ್ ಐಡಿಗಳನ್ನು ನೋಂದಾಯಿಸುವ ಪ್ರಕ್ರಿಯೆ:

1. ಡಿಮ್ಯಾಟ್ ಮೋಡ್‌ನಲ್ಲಿ ಹೊಂದಿರುವ ಷೇರುಗಳು, ದಯವಿಟ್ಟು DPID-CLID (16 ಅಂಕಿಯ DPID + CLID ಅಥವಾ 16 ಅಂಕಿಯ ಫಲಾನುಭವಿ ID), ಹೆಸರು, ಕ್ಲೈಂಟ್ ಮಾಸ್ಟರ್ ಅಥವಾ ಕನ್ಸಾಲಿಡೇಟೆಡ್ ಅಕೌಂಟ್ ಸ್ಟೇಟ್‌ಮೆಂಟ್‌ನ ಪ್ರತಿ, PAN (PAN ಕಾರ್ಡ್‌ನ ಸ್ವಯಂ-ದೃಢೀಕರಿಸಿದ ಸ್ಕ್ಯಾನ್ ಮಾಡಿದ ಪ್ರತಿ), AADHAR (ಆಧಾರ್ ಕಾರ್ಡ್‌ನ ಸ್ವಯಂ-ದೃಢೀಕರಿಸಿದ ಸ್ಕ್ಯಾನ್ ಮಾಡಿದ ಪ್ರತಿ) ಅನ್ನು company.secretary@orklaindia.com ಗೆ ಒದಗಿಸಿ.
2. ಪರ್ಯಾಯವಾಗಿ, ಸದಸ್ಯರು ಮೇಲೆ ತಿಳಿಸಿದ ದಾಖಲೆಗಳನ್ನು ಒದಗಿಸುವ ಮೂಲಕ ಇ-ಮತದಾನಕ್ಕಾಗಿ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು evoting@nsdl.com ಗೆ ವಿನಂತಿಯನ್ನು ಕಳುಹಿಸಬಹುದು.
3. 3. ಪಟ್ಟಿ ಮಾಡಲಾದ ಕಂಪನಿಗಳು ಒದಗಿಸುವ ಇ-ವೋಟಿಂಗ್ ಸೌಲಭ್ಯದ ಕುರಿತು ಡಿಸೆಂಬರ್ 9, 2020 ರಂದು SEBI ಸುತ್ತೋಲೆಯ ಪ್ರಕಾರ, ಡಿಮ್ಯಾಟ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ವೈಯಕ್ತಿಕ ಸದಸ್ಯರು ಠೇವಣಿದಾರರು ಮತ್ತು ಠೇವಣಿ ಭಾಗವಹಿಸುವವರೊಂದಿಗೆ ನಿರ್ವಹಿಸಲ್ಪಡುವ ತಮ್ಮ ಡಿಮ್ಯಾಟ್ ಖಾತೆಯ ಮೂಲಕ ಮತ ಚಲಾಯಿಸಲು ಅನುಮತಿಸಲಾಗಿದೆ. ಇ-ವೋಟಿಂಗ್ ಸೌಲಭ್ಯವನ್ನು ಪ್ರವೇಶಿಸಲು ಸದಸ್ಯರು ತಮ್ಮ ಡಿಮ್ಯಾಟ್ ಖಾತೆಯಲ್ಲಿ ತಮ್ಮ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿಯನ್ನು ಸರಿಯಾಗಿ ನವೀಕರಿಸಬೇಕಾಗುತ್ತದೆ.

ಕಂಪನಿಯ ನಿರ್ದೇಶಕರ ಮಂಡಳಿ ("ಮಂಡಳಿ") ಅಂಚೆ ಮತಪತ್ರ ಮತ್ತು ಇ-ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವುದಕ್ಕಾಗಿ ಬೆಂಗಳೂರಿನ ವೃತ್ತಿಪರ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯಾದ ಮೆಸರ್ಸ್ ಬಿಎಂಪಿ & ಕಂ. ಎಲ್‌ಎಲ್‌ಪಿಯ ಪಾಲುದಾರರಾದ ಶ್ರೀ ಪ್ರಮೋದ್ ಎಸ್‌ಎಂ (ಎಫ್‌ಸಿಎಸ್ ಸಂಖ್ಯೆ: 7834, ಸಿಪಿ ನಂಬರ್: 13784) ಅಥವಾ ಅವರ ವಿಫಲತೆಗೆ ಮಣಿದು ಶ್ರೀ ಬಿಸ್ವಜಿತ್ ಘೋಷ್ (ಎಫ್‌ಸಿಎಸ್ ನಂಬರ್: 8750, ಸಿಪಿ ನಂಬರ್: 8239) ಅವರನ್ನು ಪರಿಶೀಲನಾಕಾರರನ್ನಾಗಿ ನೇಮಿಸಿದೆ.

ಇ-ಮತದಾನದ ಪರಿಶೀಲನೆ ಪೂರ್ಣಗೊಂಡ ನಂತರ ಪರಿಶೀಲನಾಕಾರರು ತಮ್ಮ ವರದಿಯನ್ನು ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿಗೆ ಅಥವಾ ಅಧ್ಯಕ್ಷರು ಅವರಿಂದ ಅಧಿಕಾರ ಪಡೆದ ಯಾವುದೇ ಇತರ ವ್ಯಕ್ತಿಗೆ ಸಲ್ಲಿಸುತ್ತಾರೆ ಮತ್ತು ಅಂಚೆ ಮತಪತ್ರಕ್ಕಾಗಿ ರಿಮೋಟ್ ಇ-ಮತದಾನದ ಅವಧಿ ಮುಗಿದ ಎರಡು ಕೆಲಸದ ದಿನಗಳಲ್ಲಿ ಇ-ಮತದಾನದ ಮೂಲಕ ಮತದಾನದ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ. ಸ್ಕ್ರೂಟಿನೈಜರ್ ವರದಿಯೊಂದಿಗೆ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ (www.orklaindia.com), NSDL ವೆಬ್‌ಸೈಟ್ www.evoting.nsdl.com ಮತ್ತು ಕಂಪನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ BSE ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಪ್ರದರ್ಶಿಸಲಾಗುತ್ತದೆ. ಹೆಚ್ಚುವರಿಯಾಗಿ, ಫಲಿತಾಂಶಗಳನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿರುವ ಸೂಚನಾ ಫಲಕದಲ್ಲಿಯೂ ಇರಿಸಲಾಗುತ್ತದೆ. ಅಗತ್ಯವಿರುವ ಬಹುಮತದಿಂದ ಅಂಗೀಕರಿಸಲ್ಪಟ್ಟ ನಿರ್ಣಯಗಳನ್ನು ಶುಕ್ರವಾರ, ಏಪ್ರಿಲ್ 24, 2026 ರಂದು ಅಂಗೀಕರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸದಸ್ಯರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) ಮತ್ತು ಸದಸ್ಯರಿಗಾಗಿ ಇ-ಮತದಾನ ಬಳಕೆದಾರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ 022 - 4886 7000 ಗೆ ಕರೆ ಮಾಡಿ ಅಥವಾ NSDL ನ ಉಪ ವ್ಯವಸ್ಥಾಪಕರಾದ ಶ್ರೀ ಫಲ್ಗುಣಿ ಚಕ್ರವರ್ತಿ ಅವರಿಗೆ evoting@nsdl.com ನಲ್ಲಿ ವಿನಂತಿಯನ್ನು ಕಳುಹಿಸಬಹುದು.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
ಒರ್ಕ್ಲಾ ಇಂಡಿಯಾ ಲಿಮಿಟೆಡ್ ಗಾಗಿ
(ಮೊದಲು ಇದರ ಹೆಸರು ಇತ್ತು "ಒರ್ಕ್ಲಾ ಇಂಡಿಯಾ ಪ್ರೈವೇಟ್ ಲಿಮಿಟೆಡ್")

ಕೌಶಿಕ್ ಶೇಷಾದ್ರಿ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ(ಕಂಪ್ಲೈನ್ಸ್ ಆಫಿಸರ್)
ICSI ಸದಸ್ಯತ್ವ ನಂಬರ್ : A41800

ದಿನಾಂಕ: ಮಾರ್ಚ್ 26, 2026
ಸ್ಥಳ: ಬೆಂಗಳೂರು

ದಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ
ಕಛೇರಿ: ನಂ.6, "ಲಕ್ಷ್ಮೀ ಸದನ" 5ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-560018

ಚಿನ್ನಾಭರಣಗಳ ಹರಾಜು ನೋಟೀಸು

ಈ ಮೂಲಕ ಚಿನ್ನದ ಮೇಲೆ ಸಾಲ ಪಡೆದ ಸಾಲಗಾರರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ತಿಳಿಸಿರುವ ಸಾಲಗಾರರು ಬ್ಯಾಂಕಿಗೆ ಕಟ್ಟಬೇಕಿದ್ದ ಚಿನ್ನದ ಸಾಲವನ್ನು ಮರು ಪಾವತಿಸಲು ವಿಫಲರಾಗಿರುತ್ತಾರೆ. ನೋಂದಾಯಿತ ಅಂಚೆ ಮೂಲಕ ಅವರಿಗೆ ಕಳುಹಿಸಿದ ನೋಟೀಸ್‌ಗಳು ಅವರಿಗೆ ತಲುಪಿವೆ/ತಲುಪದೆ ಬ್ಯಾಂಕ್‌ಗೆ ಹಿಂತಿರುಗಿವೆ ಮತ್ತು ಈ ನೋಟೀಸ್ ಮೂಲಕ ತಿಳಿಸುವುದೇನೆಂದರೆ ದಿನಾಂಕ: **27.03.2026** ರೊಳಗೆ ತಮ್ಮ ಎಲ್ಲಾ ಬಾಕಿಗಳನ್ನು ಆಯಾ ಚಿನ್ನದ ಸಾಲ ಖಾತೆಗಳಲ್ಲಿ ನವೀಕೃತ ಬಡ್ಡಿ ಮತ್ತು ಎಲ್ಲಾ ವೆಚ್ಚ ಶುಲ್ಕಗಳು/ವೆಚ್ಚಗಳನ್ನು ಒಳಗೊಂಡಂತೆ ಮರು ಪಾವತಿ ಮಾಡಲು ವಿಫಲವಾದರೆ ದಿನಾಂಕ: **30.03.2026 ರ ಸಂಜೆ 4.00 ಗಂಟೆಗೆ** ಅವರು ಅಡಮಾನ ಮಾಡಿದ ಚಿನ್ನಾಭರಣಗಳನ್ನು ಆಯಾ ಶಾಖೆಯ ಆವರಣದಲ್ಲಿ ಸಾರ್ವಜನಿಕ ಹರಾಜು ಮಾಡಲಾಗುವುದು. ಇದಕ್ಕಾಗಿ, ಸಂಬಂಧಿತ ಸಾಲಗಾರರಿಗೆ ಉಂಟಾಗುವ ಯಾವುದೇ ಅನಾನುಕೂಲತೆ ಅಥವಾ ಹಾನಿಗಳಿಗೆ ಬ್ಯಾಂಕಿನವರು ಜವಾಬ್ದಾರರಾಗಿರುವುದಿಲ್ಲ. ಮುಂದಿನ ಸೂಚನೆ ಮತ್ತು ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಹರಾಜನ್ನು ರದ್ದುಗೊಳಿಸುವ / ಮುಂದೂಡುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಶಾಖೆ ಹೆಸರು & ಸಾಲಗಾರರ ಹೆಸರು	ಈಡು ಮಾಡಿರುವ ಚಿನ್ನಾಭರಣಗಳು	ತೂಕ ಗ್ರಾಂ	ತೂಕ ಮಿ.ಗ್ರಾ	ಸಾಲದ ಖಾತೆ ಸಂಖ್ಯೆ	ಬಾಕಿ ಮೊತ್ತ ರೂ.	ದೂರವಾಣಿ ಸಂಖ್ಯೆ
ಯಶವಂತಪುರ ಶರಣಬಸಪ್ಪ	ಕಡಗ	43	900	119005 821923	ರೂ. 2,18,582/-	9620700424

ದಿನಾಂಕ : 25.03.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ,
ಯಶವಂತಪುರ ಶಾಖೆ

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೊರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೊರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **14.05.2021** ರಂದು ಕರೆದು ಸಾಲಗಾರ **ರಾಗೇಶ್ ಪಿ ಮತ್ತು ನಿಮ್ಯಾ ಕೆ ಸಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 60,66,723.75 (ಅರವತ್ತು ಲಕ್ಷದ ಅರವತ್ತಾರು ಸಾವಿರದ ಏಳುನೂರ ಇಪ್ಪತ್ಮೂರು ಮತ್ತು ಎಪ್ಪತ್ತೈದು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00332726** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **08.05.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.03.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (**ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಬಾಕಿ ಇರುವ ಮೊತ್ತ **ರೂ. 60,66,723.75 (ಅರವತ್ತು ಲಕ್ಷದ ಅರವತ್ತಾರು ಸಾವಿರದ ಏಳುನೂರ ಇಪ್ಪತ್ಮೂರು ಮತ್ತು ಎಪ್ಪತ್ತೈದು ಪೈಸೆ ಮಾತ್ರ) 08.05.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂಖ್ಯೆ. 403, ನಾಲ್ಕನೇ ಮಹಡಿ, ಕೃಷ್ಣಸಿಂಫನಿ, ಪುರಸಭೆ ಸಂಖ್ಯೆ.1, ಸರ್ವೆ ಸಂಖ್ಯೆ. 522/2 ಮತ್ತು ಸರ್ವೆ ಸಂಖ್ಯೆ. 523/2, ಕಲ್ಕೆರೆ ಗ್ರಾಮ, ಕೃಷ್ಣರಾಜಪುರಂ, ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು - 560036, ಕರ್ನಾಟಕ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 24.03.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)**

ನಮೂನೆ ಸಂ. ಐಎನ್‌ಸಿ-19
ಸೂಚನೆ
[ನಿಯಮ 22ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಿಸಿದಂತೆ]

1. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 8 ರ ಸಬ್-ಸೆಕ್ಷನ್ (5) ರ ಅನುಸಾರವಾಗಿ, **ಅನಲಿಟಿಕ್ಸ್ ಟ್ರೈನಿಂಗ್ ಆಂಡ್ ರಿಸರ್ಚ್ ಕೌನ್ಸಿಲ್ ಎ ಸೆಕ್ಷನ್ 8, CIN U80301KA2018NPL118308,** ಕ್ಕೆ ಕಂಪನಿಗಳ ಕಾಯಿದೆ 2013 ರ ಸೆಕ್ಷನ್ 8(5) ರ ಅಡಿ ನೀಡಲಾದ ಪರವಾನಗಿಯನ್ನು ರದ್ದುಗೊಳಿಸಲು ಮತ್ತು ಅದರ ಹೆಸರಿಗೆ "**ಪ್ರೈವೇಟ್ ಲಿಮಿಟೆಡ್**" ಎಂಬ ಪದವನ್ನು ಸೇರಿಸಲು ಕಂಪನಿಗಳ ರಿಜಿಸ್ಟ್ರಾರ್ ರವರಿಗೆ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.
2. **ಕಂಪನಿಯ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ:**
ಕಂಪನಿಯ ಮುಖ್ಯ ಉದ್ದೇಶ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಶಿಕ್ಷಣ ನೀಡುವುದಾಗಿತ್ತು. ಆದಾಗ್ಯೂ ಪ್ರೈವೇಟ್ ಲಿಮಿಟೆಡ್ ಕಂಪನಿಯಾಗಿ ಪರಿವರ್ತನೆಯಾದ ನಂತರ, ಕಂಪನಿಯು ತನ್ನ ಸ್ಥಾಪನೆಯಾದ ಒಂದು ವರ್ಷದೊಳಗೆ ತನ್ನ ವ್ಯವಹಾರವನ್ನು ಪ್ರಾರಂಭಿಸಲು ವಿಫಲವಾಗಿದೆ ಮತ್ತು ಇಂದಿಗೂ ಯಾವುದೇ ವ್ಯವಹಾರ ಚಟುವಟಿಕೆಗಳನ್ನು ಪ್ರಾರಂಭಿಸಿಲ್ಲ ಮತ್ತು ಮುಂದುವರಿಸಿಲ್ಲ ಎಂಬ ಕಾರಣಕ್ಕಾಗಿ ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 248 ರ ಅಡಿಯಲ್ಲಿ ಸ್ಟ್ರೈಕ್ ಆಫ್ ಮಾಡಲು ಉದ್ದೇಶಿಸಿದೆ ಎಂದು ಅರ್ಜಿ ಸಲ್ಲಿಸಲು ಉದ್ದೇಶಿಸಿದೆ.
3. ಮೆಮರಾಂಡಮ್ ಡ್ರಾಫ್ಟ್ ನ ಪ್ರತಿ ಮತ್ತು ನಿರ್ಧರಿತ ಕಂಪನಿಯ ಆರ್ಟಿಕಲ್‌ಗಳನ್ನು **ಹಳೆ ನಂ. 26, ಹೊಸ # 245, ಸ್ಕಂದ ಹೌಸ್, 3ನೇ ಕ್ರಾಸ್, 1ನೇ ಮುಖ್ಯ ರಸ್ತೆ, ರಂಗನಾಥ ಲೇಔಟ್, ಬೆಂಗಳೂರು, ಬೆಂಗಳೂರು, ಕರ್ನಾಟಕ-560083** ಇಲ್ಲಿ ಕೆಲಸದ ಸಮಯದಲ್ಲಿ ಪರಿಶೀಲಿಸಬಹುದು
4. ಈ ಮೂಲಕ ಸೂಚನೆ ನೀಡುವುದೇನೆಂದರೆ, ಈ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವ ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿ, ನಿಗಮ ಅಥವಾ ಕಾರ್ಪೊರೇಟ್ ಸಂಸ್ಥೆಯು **ಕಂಪನಿಗಳ ರಿಜಿಸ್ಟ್ರಾರ್** ಗೆ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ (30) ಒಳಗಾಗಿ **ರಿಜಿಸ್ಟ್ರಾರ್, 'ಇ' ವಿಂಗ್, 2 ನೇ ಮಹಡಿ, ಕೇಂದ್ರೀಯ ಸದನ, ಕೊರಮಂಗಲ, ಬೆಂಗಳೂರು-560034, ಕರ್ನಾಟಕ** ಈ ವಿಳಾಸಕ್ಕೆ ಪತ್ರ ಮುಖೇನ ತಮ್ಮ ಆಕ್ಷೇಪಣೆಯನ್ನು ತಿಳಿಸಬಹುದು ಮತ್ತು ಒಂದು ಪ್ರತಿಯನ್ನು ಅರ್ಜಿದಾರರಿಗೆ, **ಹಳೆ ಸಂಖ್ಯೆ 26, ಹೊಸ #245, ಸ್ಕಂದ ಹೌಸ್, 3 ನೇ ಕ್ರಾಸ್, 1 ನೇ ಮುಖ್ಯ ರಸ್ತೆ, ರಂಗನಾಥ ಲೇಔಟ್, ಬೆಂಗಳೂರು, ಕರ್ನಾಟಕ, 560083** ಈ ವಿಳಾಸಕ್ಕೆ ಕಳುಹಿಸಬೇಕು.

ಅನಲಿಟಿಕ್ಸ್ ಟ್ರೈನಿಂಗ್ ಆಂಡ್ ರಿಸರ್ಚ್ ಕೌನ್ಸಿಲ್ ಗಾಗಿ
ಸಹಿ/-
ಉನ್ನಿಕೃಷ್ಣನ್ ದಿನೇಶ್ ಕುಮಾರ್
(ವ್ಯವಸ್ಥಾಪಕ ನಿರ್ದೇಶಕ, DIN 08225221)
ದಿನಾಂಕ: 26.03.2026
#43, ಬನ್ನೇರುಘಟ್ಟ ರಸ್ತೆ, ಐಐಎಂಬಿ ಕ್ಯಾಂಪಸ್,
ಬಿಳೇಕಹಳ್ಳಿ ಬೆಂಗಳೂರು ದಕ್ಷಿಣ ಬೆಂಗಳೂರು 560076

ಪ್ರತಿ ಪಾಲಿಕೆಗೆ 4ರಿಂದ 6 ಸಾವಿರ ಕೋಟಿ ಆಯವ್ಯಯ ನಿರೀಕ್ಷೆ: ಮಹೇಶ್ವರ್ ರಾವ್

ಮಾ.27, 28ಕ್ಕೆ ಜಿಬಿಎ ಬಜೆಟ್

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳ ಬಜೆಟ್ ಮಾ.27 ಹಾಗೂ 28 ರಂದು ಮಂಡನೆಯಾಗಲಿದ್ದು, ಜಿಬಿಎ ರಚನೆಯಾದ ನಂತರದ ಮೊದಲ ಬಜೆಟ್ ಮಂಡನೆಗೆ ಮುಹೂರ್ತ ನಿಗದಿಯಾಗಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪ್ರಕಟಿಸಿದ್ದಾರೆ.

ಮಾ.26 ಶುಕ್ರವಾರ ಹಾಗೂ ಮಾ. 28 ಶನಿವಾರ ಎರಡು ದಿನಗಳ ಕಾಲ ಬಜೆಟ್ ಮಂಡನೆ ನಡೆಯಲಿದ್ದು, ಮೊದಲ ದಿನವಾದ ಶುಕ್ರವಾರ (ಮಾ.27) ಎರಡು ನಗರ ಪಾಲಿಕೆಗಳ ಬಜೆಟ್ ಮಂಡನೆ ನಡೆಯಲಿದ್ದು, ಎರಡನೇ ದಿನವಾದ ಶನಿವಾರ (ಮಾ.28) ಉಳಿದ ಮೂರು ನಗರ ಪಾಲಿಕೆಗಳ ಬಜೆಟ್ ಮಂಡನೆ ನಡೆಯಲಿದೆ. ಪ್ರತಿ ನಗರ ಪಾಲಿಕೆಯೂ ತಮ್ಮ ತಮ್ಮ ವಲಯ ಮಟ್ಟದಲ್ಲಿ ಬಜೆಟ್ ಮಂಡನೆಗೆ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಈಗಾಗಲೇ ಆಡಳಿತಾಧಿಕಾರಿಗಳ ಅನುಮೋದನೆ ಕೂಡ ದೊರೆತಿದೆ. ಆಯಾ ವಲಯದ ಹಣಕಾಸು ವಿಭಾಗದ ಮುಖ್ಯಸ್ಥರು ಬಜೆಟ್ ಮಂಡಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರತಿಯೊಂದು ಪಾಲಿಕೆಗಳ ಆಯವ್ಯಯ ಬಜೆಟ್ 4 ರಿಂದ 6 ಸಾವಿರ ಕೋಟಿ ಆಗಿರಲಿದ್ದು, ಆಯಾ ಪಾಲಿಕೆಗಳು ಆದಾಯ ಸ್ವೀಕೃತಿ, ವೆಚ್ಚ ಆಧರಿಸಿ

ಬಜೆಟ್ ಗಾತ್ರವನ್ನು ಸಿದ್ಧಪಡಿಸಿವೆ. ರಸ್ತೆಗಳ ಅಭಿವೃದ್ಧಿ, ಪಾದಚಾರಿ ಮಾರ್ಗಗಳ ನಿರ್ಮಾಣ, ಕೆರೆಗಳ ಅಭಿವೃದ್ಧಿ, ಉದ್ಯಾನ, ಶಾಲಾ-ಕಾಲೇಜುಗಳ ನಿರ್ವಹಣೆ, ಕಸದ ಸಮಸ್ಯೆ ಹಾಗೂ ಇನ್ನಿತರೆ ಮೂಲಸೌಕರ್ಯಗಳ ಕೊರತೆಗಳ ನಿವಾರಣೆಗೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಲಿವೆ. ಮಾ.25ರಂದು ಪೂರ್ವ ನಗರ ಪಾಲಿಕೆ ಹಾಗೂ ದಕ್ಷಿಣ ನಗರ ಪಾಲಿಕೆಯು ಬಜೆಟ್ ಮಂಡಿಸಲಿವೆ. ಮಾ.26ರಂದು ಉತ್ತರ, ಪಶ್ಚಿಮ ಮತ್ತು ಕೇಂದ್ರ ನಗರ ಪಾಲಿಕೆಗಳು ಆಯವ್ಯಯ ಮಂಡಿಸಲು ತಯಾರಿ ಮಾಡಿಕೊಂಡಿವೆ.

ನಗರ ಪಾಲಿಕೆ ಬಜೆಟ್

ಮಾ.27, ಶುಕ್ರವಾರ

- ಪೂರ್ವ ನಗರ ಪಾಲಿಕೆ: ಎಂ.ಎಲ್.ಆರ್ ಕನ್ವೆನ್ಷನ್ ಸೆಂಟರ್, ವೈಟ್ ಫೀಲ್ಡ್, ಗರುಡಾಚಾರ್ ಪಾಳ್ಯ, ಮಹದೇವಪುರ. ಬೆ.09:30ಕ್ಕೆ.
- ಕೇಂದ್ರ ನಗರ ಪಾಲಿಕೆ: ಸರ್. ಪುಟ್ಟಣ್ಣ ಚೆಟ್ಟಿ ಪುರಭವನ, ಮ. 12:30ಕ್ಕೆ.

ಮಾ.28, ಶನಿವಾರ

- ಉತ್ತರ ನಗರ ಪಾಲಿಕೆ: ಅಂಬೇಡ್ಕರ್ ಭವನ, ಯಲಹಂಕ ನ್ಯೂ ಟೌನ್, ಬೆಳಗ್ಗೆ 9:30ಕ್ಕೆ
- ಪಶ್ಚಿಮ ನಗರ ಪಾಲಿಕೆ: ಬಿ.ಡಬ್ಲ್ಯೂ.ಎಸ್. ಎಸ್.ಬಿ ಸುವರ್ಣ ಭವನ (ಅಮ್ಮಣ್ಣಿ ಕಾಲೇಜು ಹತ್ತಿರ), ಮಲ್ಲೇಶ್ವರ. ಮಧ್ಯಾಹ್ನ 12:30ಕ್ಕೆ
- ದಕ್ಷಿಣ ನಗರ ಪಾಲಿಕೆ: ಜಿ.ಪಂ. ಸಭಾಂಗಣ, ಬನಶಂಕರಿ ದೇವಸ್ಥಾನ ಹತ್ತಿರ ಮ.2:30ಕ್ಕೆ

ಆರ್‌ಸಿಬಿ ವಿಜಯೋತ್ಸವ ಕಾಲ್ತುಳಿತದಲ್ಲಿ ಸಾವನ್ನಪ್ಪಿದ 11 ಮಂದಿ ಸ್ಮಾರಕವನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಅನಾವರಣಗೊಳಿಸಿದರು.

ಕಾಲ್ತುಳಿತದಲ್ಲಿ ಮೃತರಾದ 11 ಮಂದಿಗೆ ಗೌರವ ಸಮರ್ಪಣೆ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸ್ಮಾರಕ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆಯ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ 11 ಅಭಿ ಮಾನಿಗಳ ನೆನಪಿನಲ್ಲಿ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಸ್ಮಾರಕವನ್ನು ಅನಾವರಣಗೊಳಿಸಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಹೊರ ಆವರಣ ದಲ್ಲಿ ನಿರ್ಮಿಸಲಾದ ಈ ಸ್ಮಾರಕವನ್ನು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಅನಾವರಣಗೊಳಿಸಿ, ಮೃತ ಅಭಿಮಾನಿಗಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಗೌರವ ಅರ್ಪಿಸಿದರು. ಈ ವೇಳೆ ಮಾತನಾಡಿ, ಕ್ರೀಡೆಯ ಮೇಲಿನ ಅಭಿಮಾನ ಪ್ರಾಣ ಬಲಿ ತೆಗೆದುಕೊಳ್ಳುವಂತಾ ಗಬಾರದು. ಮೃತಪಟ್ಟ 11 ಯುವಕರ ಕುಟುಂಬದ ನೋವಿನಲ್ಲಿ ನಾವೆಲ್ಲರೂ ಭಾಗಿ ಯಾಗಿದ್ದೇವೆ. ಅವರ ಸವಿನೆನಪಿಗಾಗಿ ಮತ್ತು ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸಬಾರದು ಎಂಬ ಎಚ್ಚರಿಕೆಗಾಗಿ ಈ ಸ್ಮಾರಕವನ್ನು ನಿರ್ಮಿಸಲಾಗಿದೆ, ಎಂದು ತಿಳಿಸಿದರು.

ಕ್ರೀಡಾಸ್ಫೂರ್ತಿಯ ಸಂಕೇತ

ಕ್ರೀಡಾಂಗಣದ ಪ್ರವೇಶ ದ್ವಾರದ ಬಳಿಯ ಹೊರ ಆವರಣದಲ್ಲಿ ಮೃತ 11 ಅಭಿಮಾನಿಗಳ ಹೆಸರನ್ನು ಸ್ಮಾರಕದ ಮೇಲೆ ಕೆತ್ತಲಾಗಿದ್ದು, ಕ್ರೀಡಾ ಸ್ಫೂರ್ತಿಯ ಸಂಕೇತವಾಗಿ ವಿನ್ಯಾಸಗೊಳಿಸಲಾಗಿದೆ. ಕ್ರೀಡಾ ಂಗಣಕ್ಕೆ ಬರುವ ಸಾವಿರಾರು ಅಭಿ ಮಾ ನಿಗಳಿಗೆ ಭದ್ರತೆ ಮತ್ತು ಶಿಸ್ತಿನ ಮಹತ್ವವನ್ನು ಸಾರು ವ ಉದ್ದೇಶ ಹೊಂದಿದೆ. ಸ್ಮಾರಕ ಅನಾವರಣದ ಸಮಯದಲ್ಲಿ ಎನ್.ಎ.ಹ್ಯಾರೀಸ್, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ಸಂತೋಷ್ ಮೆನಾನ್, ಡಿ.ಎಸ್. ಅರುಣ್, ವಿನಯ್ ಮೃತ್ಯಂಜಯ, ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಇದ್ದರು.

ಯುದ್ಧದಿಂದ ರಸ್ತೆ ಕಾಮಗಾರಿ ವಿಳಂಬ

ಬೆಂಗಳೂರು: ಇಸ್ರೇಲ್-ಇರಾನ್ ನಡುವಿನ ಯುದ್ಧದ ಹಿನ್ನೆಲೆ ಬಿಟುಮೆನ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ನಗರದ ಪ್ರಮುಖ ರಸ್ತೆಗಳ ಡಾಂಬರೀಕರಣ ಕಾಮಗಾರಿಗಳು ಅರ್ಧಕ್ಕೆ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ.

ಡಾಂಬರು ಮಿಶ್ರಣಕ್ಕೆ ಅತ್ಯಗತ್ಯವಾಗಿರುವ ಬಿಟುಮೆನ್' ಕಚ್ಚಾ ತೈಲದ ಉಪ ಉತ್ಪನ್ನವಾಗಿದ್ದು, ಭಾರತಕ್ಕೆ ಇದರ ಬಹುಪಾಲು ಪೂರೈಕೆ ಕೊಲ್ಲಿ ರಾಷ್ಟ್ರಗಳಿಂದ ಆಗುತ್ತದೆ. ಯುದ್ಧದಿಂದಾಗಿ ಹಡಗುಗಳ ಸಂಚಾರ ಮತ್ತು ಪೂರೈಕೆಗೆ ಪೆಟ್ಟು ಬಿದ್ದಿದೆ. ಬೆಂಗಳೂರಿನ ಗುತ್ತಿಗೆದಾರರು ಮಂಗಳೂರು ರಿಫೈನರೀಸ್ ಮತ್ತು ಮದ್ರಾಸ್ ರಿಫೈನರೀಸ್ ಮೂಲಕ ಬಿಟುಮೆನ್ ಪಡೆಯುತ್ತಿದ್ದರು. ಆದರೆ ಈಗ ಅಲ್ಲಿಯೂ ಪೂರೈಕೆ ಕಡಿಮೆಯಾಗಿದೆ. ಪೂರೈಕೆ ಕಡಿಮೆ ಇರುವುದರಿಂದ ಬಿಟುಮೆನ್ ಬೆಲೆ ಗಗನಕ್ಕೇರಿದೆ.

ಹಿಂದೆ ಒಂದು ಟನ್ ಬಿಟುಮೆನ್‌ಗೆ 45,000 ರು. ಇದ್ದ ದರ, ಈಗ 60,000 ರು.ಗೆ ಏರಿಕೆಯಾಗಿದೆ. ದರ ಏರಿಕೆಯಿಂದಾಗಿ ಗುತ್ತಿಗೆದಾರರ ವೆಚ್ಚ ವಿಪರೀತ ಹೆಚ್ಚಾಗಿದ್ದು, ಹಳೆಯ ದರದಲ್ಲಿ ಕಾಮಗಾರಿ ಮುಂದುವರಿಸುವುದು ಅಸಾಧ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಅನೇಕ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಜಿಬಿಎ ಕಾಂಟ್ರಾಕ್ಟರ್ ಸಂಘದ ಅಧ್ಯಕ್ಷ ಮಂಜುನಾಥ್, ಯುದ್ಧದ ಕಾರಣದಿಂದ ಟಾರ್ ಸರಬರಾಜು ಸ್ಥಗಿತಗೊಂಡಿದೆ. ಅಲ್ಲಿಂದ ಟಾರ್ ಸರಬರಾಜು ಆಗದಿರುವುದರಿಂದ ಇದನ್ನೇ ಬಳಕೆ ಮಾಡಿಕೊಂಡು ಹೆಚ್ಚುವರಿ ಹಣಕ್ಕೆ ಡಿಮ್ಯಾಂಡ್ ಮಾಡುತ್ತಿದ್ದಾರೆ.

ಒಂದು ಟನ್ 51 ಸಾವಿರ ರುಪಾಯಿ ಇತ್ತು, ಈಗ 61-62 ಸಾವಿರ ರುಪಾಯಿಗೆ ಡಿಮ್ಯಾಂಡ್ ಮಾಡುತ್ತಿದ್ದಾರೆ. ಇದರಿಂದಾಗಿ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಸಂಕಷ್ಟ ವ್ಯಕ್ತಪಡಿಸಿದ್ದಾರೆ.

ಸಿಆರ್‌ಪಿಎಫ್ ಆವರಣದಲ್ಲಿ ನೂತನ ಕೆರೆ ನಿರ್ಮಾಣ

ಬೆಂಗಳೂರು: ಯಲಹಂಕದಲ್ಲಿರುವ ಸಿಆರ್‌ಪಿಎಫ್ ಆವರಣದಲ್ಲಿ 3 ಎಕರೆ ವಿಸ್ತೀರ್ಣದ ನೂತನ ಕೆರೆ ನಿರ್ಮಿಸಲಾಗಿದೆ. ಆಟೋ ಮೊಟಿವ್ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಟೆಕಿಯಾನ್ ಸಂಸ್ಥೆ ಮತ್ತು ಬ್ಲೂ ಡಾಟ್ ಪ್ರತಿಷ್ಠಾನದ ನೇತೃತ್ವದಲ್ಲಿ, ಹಾಗೂ ಇತರೆ ಕಂಪನಿಗಳ ಸಹಭಾಗಿತ್ವದೊಂದಿಗೆ ಹೂಳು ತುಂಬಿದ್ದ ತೀವ್ರ ಹದಗೆಟ್ಟ ಪರಿಸ್ಥಿತಿಯ ಚಿಕ್ಕ ಕೆರೆಯನ್ನು ಸಂಪೂರ್ಣವಾಗಿ ಬದಲಿಸಲಾಗಿದೆ. ಹಿಂದೆ ನಿರ್ಲಕ್ಷ್ಯಕ್ಕೊಳಗಾಗಿದ್ದ ಈ ಸ್ಥಳ ಈಗ ಆರಂಭದಿಂದಲೇ ಅಚ್ಚುಕಟ್ಟಾಗಿ ವಿನ್ಯಾಸಗೊಂಡ ಸಮೃದ್ಧ ಪರಿಸರ ವ್ಯವಸ್ಥೆ ಹೊಂದಿದೆ. ಈ ಸಹಭಾಗಿತ್ವದ ಕಾರ್ಯದಿಂದ ನಮ್ಮ ಯಲಹಂಕ ಸಿಆರ್‌ಪಿಎಫ್ ಆವರಣದಲ್ಲಿ ಮೂರು ಏಕರೆ ವ್ಯಾಪ್ತಿಯಲ್ಲಿ ಜೀವಂತ ಕೆರೆಯೊಂದು ನಿರ್ಮಾಣವಾಗಿದೆ. ಜೈವಿಕ ವೈವಿಧ್ಯತೆ, ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸಲಿದೆ ಎಂದು ಸಿಆರ್‌ಪಿಎಫ್ ಉಪ ಮಹಾನಿರೀಕ್ಷಕರಾದ ಪದ್ಮ ಕುಮಾರ್ ಹೇಳಿದರು.

ಐಪಿಎಲ್ ಪಂದ್ಯ: ಮೆಟ್ರೋ ವಿಸ್ತರಣೆ

ಬೆಂಗಳೂರು: ಐಪಿಎಲ್ ಪಂದ್ಯ ವೀಕ್ಷಣೆಗೆ ತೆರಳುವವರಿಗಾಗಿ ನಮ್ಮ ಮೆಟ್ರೋ ರೈಲು ಸಂಚಾರದ ಅವಧಿಯನ್ನು ಐಪಿಎಲ್ ಪಂದ್ಯದ ದಿನದಂದು ವಿಸ್ತರಣೆ ಮಾಡಿದೆ.

ಈ ಬಗ್ಗೆ ಬಿಎಂಆರ್‌ಸಿಎಲ್ ಮಾಹಿತಿ ನೀಡಿದ್ದು, ಮಾ.28 ರಂದು ನಡೆಯಲಿರುವ ಟಾಟಾ ಐಪಿಎಲ್ ಟಿ-20 ಕ್ರಿಕೆಟ್ ಪಂದ್ಯದ ಪ್ರಯುಕ್ತ ಮೆಟ್ರೋದ ಎಲ್ಲಾ ಟರ್ಮಿನಲ್ ನಿಲ್ದಾಣಗಳಿಂದ ಕೊನೆಯ ಮೆಟ್ರೋ ಸೇವೆಯನ್ನು ರಾತ್ರಿ 11:00 ಗಂಟೆಯಿಂದ ಮುಂದಿನ ದಿನದ ಮುಂಜಾನೆ 2:00 ಗಂಟೆಯವರೆಗೆ ವಿಸ್ತರಿಸಲಾಗಿದೆ. ಐಪಿಎಲ್ ಪಂದ್ಯದ ಟಿಕೆಟ್‌ಗಳಲ್ಲಿ ನಮ್ಮ ಮೆಟ್ರೋ ಕ್ಯೂಆರ್ ಕೋಡ್ ಎರಡು ಪ್ರಯಾಣಕ್ಕೆ, ಐಪಿಎಲ್ ಟಿಕೆಟ್ ಮೇಲೆಯೇ ಮುದ್ರಿತವಾಗಿರುತ್ತದೆ ಅಥವ ಡಿಜಿಟಲ್ ಐಪಿಎಲ್ ಟಿಕೆಟ್‌ಗಳೊಂದಿಗೆ ಲಭ್ಯವಿರುತ್ತದೆ ಎಂದು ತಿಳಿಸಿದೆ.

ಕಬ್ಬನ್ ರಸ್ತೆ ಭಾಗದಿಂದ ಸ್ಟೇಡಿಯಂಗೆ ಪ್ರವೇಶ /ನಿರ್ಗಮನ ಗೇಟ್‌ಗಳನ್ನು ಬಳಸುವ ಪ್ರೇಕ್ಷಕರು ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣವನ್ನು ಬಳಸುವಂತೆ ಹಾಗೂ ಲಿಂಕ್ ರಸ್ತೆ ಭಾಗದಿಂದ ಪ್ರವೇಶ / ನಿರ್ಗಮನ ಗೇಟ್‌ಗಳನ್ನು ಬಳಸುವ ಪ್ರೇಕ್ಷಕರು ಸಮೀಪದಲ್ಲಿರುವ ಮಹಾತ್ಮ ಗಾಂಧಿ ರಸ್ತೆ ಮೆಟ್ರೋ ನಿಲ್ದಾಣವನ್ನು ಬಳಸುವಂತೆ ಸೂಚಿಸಲಾಗಿದೆ. ಮೆಟ್ರೋ ನಿಲ್ದಾಣಗಳಲ್ಲಿ ಹೆಚ್ಚುವರಿ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಿದ್ದು, ಪಂದ್ಯದ ದಿನಗಳಲ್ಲಿ ಮೆಟ್ರೋ ನಿಲ್ದಾಣಗಳ ಪಾರ್ಕಿಂಗ್ ಸೌಲಭ್ಯವನ್ನು ಎರಡು ಚಕ್ರ ವಾಹನಗಳಿಗೆ 30 ರು., ಕಾರುಗಳಿಗೆ 60 ರು. ನಿಗದಿತ ದರದಲ್ಲಿ ಒದಗಿಸಲಾಗುತ್ತದೆ. ಈ ದರವು ಆ ದಿನದ ಮೆಟ್ರೋ ಸೇವೆ ಮುಕ್ತಾಯವಾಗುವವರೆಗೆ ಮಾನ್ಯವಾಗಿರುತ್ತದೆ ಎಂದು ತಿಳಿಸಿದೆ.

ಪಂದ್ಯಗಳ ವೇಳಾಪಟ್ಟಿ

- ವೈಟ್‌ಫೀಲ್ಡ್ (ಕಾಡುಗೋಡಿ)ನಿಂದ ರಾತ್ರಿ 12.30ಕ್ಕೆ ಮತ್ತು ಚೆಲ್ಲಘಟ್ಟದಿಂದ ರಾತ್ರಿ 12.45ಕ್ಕೆ.
- ರೇಷ್ಮೆ ಸಂಸ್ಥೆ ಹಾಗೂ ಮಾದಾವರ ದಿಂದ ರಾತ್ರಿ 12.45ಕ್ಕೆ.
- ಬೊಮ್ಮಸಂದ್ರದಿಂದ ರಾತ್ರಿ 01.00ಕ್ಕೆ ಹಾಗೂ ಆರ್.ವಿ. ರಸ್ತೆಯಿಂದ ರಾತ್ರಿ 02.00ಕ್ಕೆ.
- ನಾಡಪ್ರಭು ಕೆಂಪೇಗೌಡ ನಿಲ್ದಾಣ-ಮಜೆಸ್ಟಿಕ್‌ನಿಂದ ನಾಲ್ಕು ದಿಕ್ಕುಗಳಿಗೆ ಮಧ್ಯರಾತ್ರಿ 01:30ಕ್ಕೆ ಕೊನೆಯ ರೈಲು ಹೊರಡಲಿದೆ

ಏರ್‌ಪೋರ್ಟ್ ಮೆಟ್ರೋ ಮಾರ್ಗಕ್ಕೆ 2 ಚಾಲಕ ರಹಿತ ರೈಲು

ಬೆಂಗಳೂರು: ನಮ್ಮ ಮೆಟ್ರೋದ ನೀಲಿ ಮಾರ್ಗಕ್ಕೆ ಮುಂದಿನ ವಾರಗಳಲ್ಲಿ ಬಿಇಎಂಎಲ್ ಎರಡು ಚಾಲಕ ರಹಿತ ಮೆಟ್ರೋ ರೈಲುಗಳನ್ನು ಪೂರೈಕೆ ಮಾಡಲಿದೆ.

ಹೆಚ್ಚು ವಾಹನ ದಟ್ಟಣೆಯಿರುವ ಬೆಂಗಳೂರು ಹೊರವರ್ತುಲ ರಸ್ತೆಯ ಕೆ.ಆರ್‌ಪುರ, ಮಹದೇವಪುರ, ಎಚ್‌ಎಸ್‌ಆರ್ ಬಡಾವಣೆ, ಬೆಳ್ಳಂದೂರು, ಮಾರತ್ತಹಳ್ಳಿ ಸೇರಿದಂತೆ ಈ ಭಾಗಗಳಲ್ಲಿ ಐಟಿ ಕಂಪನಿಗಳ ಸಂಖ್ಯೆ ಹೆಚ್ಚಿದ್ದು, ಇದೆಲ್ಲ ಗಮನದಲ್ಲಿಟ್ಟುಕೊಂಡು ಸಿಲ್ಕ್ ಬೋರ್ಡ್, ಕೆ.ಆರ್ ಪುರ ನೀಲಿ ಮೆಟ್ರೋ ಮಾರ್ಗವನ್ನು ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಎರಡು ಮೆಟ್ರೋ ರೈಲು ಸೆಟ್‌ಗಳು ಶೀಘ್ರವೇ ಬೈಯಪ್ಪನಹಳ್ಳಿ ಡಿಪೋಗೆ ಬರಲಿವೆ.

ಸುಮಾರು 55 ಕಿ.ಮೀ ಉದ್ದದ ನೀಲಿ ಮೆಟ್ರೋ ಮಾರ್ಗವು ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳುತ್ತಿದ್ದು, ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರದವರೆಗೆ ಮೊದಲ ಹಂತದಲ್ಲಿ (2ಎ) 18 ಕಿ.ಮೀ , ಎರಡನೇ ಹಂತದಲ್ಲಿ ಕೆ.ಆರ್ ಪುರದಿಂದ ದೇವನಹಳ್ಳಿ ವಿಮಾನ ನಿಲ್ದಾಣವರೆಗೆ ಸುಮಾರು 37 ಕಿ.ಮೀ (2ಬಿ)

ಯೋಜನೆಯ ಕಾಮಗಾರಿ ನಡೆಯುತ್ತಿದೆ. ಇದೀಗ ಎರಡು ಸೆಟ್ ರೈಲುಗಳನ್ನು ಬಿಇಎಂಎಲ್ ಮೆಟ್ರೊ ಡಿಪೋಗೆ ಕಳುಹಿಸಲಿದೆ. ರೈಲುಗಳು ಬರುತ್ತಿದ್ದಂತೆ ಲಗೇಜ್ ರ್‍ಯಾಕ್‌ಗಳೊಂದಿಗೆ ಪರೀಕ್ಷೆಗಳು ಆರಂಭವಾಗಲಿವೆ ಎಂದು ಬಿಎಂಆರ್‌ಸಿಎಲ್ ಮೂಲಗಳು ಮಾಹಿತಿ ನೀಡಿವೆ.

ಐದು ರೈಲುಗಳಿಂದ ಗುಲಾಬಿ ಮಾರ್ಗ ಕಾರ್ಯಾಚರಣೆ: ಮೊದಲ ಹಂತದಲ್ಲಿ ಮುಂದಿನ ಮೇ ತಿಂಗಳಲ್ಲಿ ತೆರೆಯಲಿರುವ ಮೆಟ್ರೋ ಗುಲಾಬಿ ಮಾರ್ಗಕ್ಕೆ ರೈಲು ಬೋಗಿ ಉತ್ಪಾದಕ ಕಂಪನಿ ಬಿಇಎಂಎಲ್ ಈಗಾಗಲೇ ಐದು ರೈಲು ಸೆಟ್ ನೀಡಿದೆ. ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ ಒಟ್ಟು 7.5 ಕಿ.ಮೀ ಮಾರ್ಗದಲ್ಲಿ ಸದ್ಯಕ್ಕೆ 5 ರೈಲುಗಳಿಂದ ಕಾಯಾಚರಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಪ್ರೋಟೋಟೈಪ್ ಮಾದರಿಯ ಚಾಲಕರಹಿತ ರೈಲುಗಳ ಪ್ರಾಯೋಗಿಕ ಸಂಚಾರ, ಟ್ರ್ಯಾಕ್ ಪರಿಶೀಲನೆ, ರೈಲುಗಳ ತಪಾಸಣೆ, ವಿವಿಧ ಪರೀಕ್ಷೆಗಳು ನಡೆಯುತ್ತಿವೆ. ಏಪ್ರಿಲ್ ತಿಂಗಳಲ್ಲಿ ಪರೀಕ್ಷೆಗಳು ಪೂರ್ಣಗೊಳ್ಳುತ್ತಿದ್ದಂತೆ ಮೇ ತಿಂಗಳಲ್ಲಿ ಪಿಂಕ್ ಲೈನ್ ಕಾರ್ಯಾಚರಣೆ ಆರಂಭವಾಗಲಿದೆ. ಕಳೆದ ಶನಿವಾರದಿಂದ ಆರ್‌ಡಿಎಸ್ಒ ಅಧಿಕಾರಿಗಳು ಅಂತಿಮ ಪರಿಶೀಲನೆ, ಸುರಕ್ಷತಾ ತಪಾಸಣೆ ಕೈಗೊಂಡಿದ್ದಾರೆ. ಉಳಿದ 13 ಕಿ.ಮೀ ತಾವರೆಕರೆಯಿಂದ ನಾಗವಾರವರೆಗಿನ ಪಿಂಕ್ ಲೈನ್ ಮಾರ್ಗವನ್ನು ಎರಡನೇ ಹಂತದಲ್ಲಿ ಇದೇ ಡಿಸೆಂಬರ್ 2026ಕ್ಕೆ ತೆರೆಯಲು ಅಧಿಕಾರಿಗಳು ಸಜ್ಜಾಗಿದೆ.

ಅನಧಿಕೃತ ಪ್ಲೆಕ್ಸ್, ಬ್ಯಾನರ್ ತೆರವು ಕಾರ್ಯಾಚರಣೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರವನ್ನು ಸ್ವಚ್ಛ, ಸುಂದರ ಹಾಗೂ ನಿಯಮಬದ್ಧವಾಗಿಡುವ ಉದ್ದೇಶದಿಂದ ಕಳೆದ ಮೂರು ದಿನಗಳಿಂದ ನಗರ ಪಾಲಿಕೆಯ ಆಯುಕ್ತ ಕೆ ಎನ್ ರಮೇಶ್ ನಿರ್ದೇಶನದಂತೆ ಅನಧಿಕೃತ ಪ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸುವ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಯಿತು. ಈ ಅಭಿಯಾನದಲ್ಲಿ ವಿವಿಧ ವಿಭಾಗಗಳಲ್ಲಿ ವ್ಯಾಪಕವಾಗಿ ಕಾರ್ಯಾಚರಣೆ ನಡೆಸಿ ಸಾವಿರಾರು ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಲಾಯಿತು. ಈ ಅಭಿಯಾನವು ನಗರದಲ್ಲಿ ಅನಧಿಕೃತ ಜಾಹೀರಾತುಗಳನ್ನು ನಿಯಂತ್ರಿಸುವುದು, ರಸ್ತೆ ಸುರಕ್ಷತೆ ಹೆಚ್ಚಿಸುವುದು ಹಾಗೂ ನಗರ ಸೌಂದರ್ಯವನ್ನು ಕಾಪಾಡುವುದು ಎಂಬ ಉದ್ದೇಶ ಹೊಂದಿದೆ.

ದಕ್ಷಿಣ ನಗರ ಪಾಲಿಕೆ ವತಿಯಿಂದ ಮುಂದಿನ ದಿನಗಳಲ್ಲಿಯೂ ಇಂತಹ ಕಾರ್ಯಾಚರಣೆಗಳನ್ನು ಮುಂದುವರಿಸಿ, ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ.

ಭಾರತದ ಅದ್ಭುತ ಗ್ರೂಪ್ ಪ್ರವಾಸಗಳು

ಸಸ್ಯಾಹಾರಿ ಊಟೋಪಹಾರ | ನುರಿತ ಮಾರ್ಗದರ್ಶನ | A / C ವಾಹನ | A / C ರೂಮ್ | ಟ್ರಾವೆಲ್ ಇನ್ಶೂರೆನ್ಸ್



01 ಚಾರ್ ಧಾಮ್ ಯಾತ್ರಾ — 15 ದಿನಗಳು
ಹರಿದ್ವಾರ, ಹನುಮಾನ್ ಚೆಟ್ಟಿ, ಯಮುನೋತ್ರಿ, ಉತ್ತರಕಾಶಿ, ಗಂಗಾನಾನಿ, ಗಂಗೋತ್ರಿ, ರುದ್ರಪ್ರಯಾಗ, ಗುಪ್ತಕಾಶಿ, ಕೇದಾರನಾಥ, ಪೀಪಲ್ ಕೋಟಿ, ಮಾನ, ಕೇಶವ ಪ್ರಯಾಗ, ಕರ್ಣ ಪ್ರಯಾಗ, ಬದರಿನಾಥ, ವಿಷ್ಣು ಪ್ರಯಾಗ, ಜೋಷಿಮಠ, ನಂದ ಪ್ರಯಾಗ, ಋಷಿಕೇಶ, ದೆಹಲಿ.
ದಿನಾಂಕ: APR 19, 22, 25, 28. MAY 4, 7, 10, 13, 19, 22, 25, 28. JUN 4, 7, 10, 13, 19, 22, 25, 28. JUL 4, 7, 10, 13. AUG 14, 28. SEP 1, 4, 7, 10, 16, 19, 22, 25, 28. OCT 4, 7, 10, 13. 19, 22.
7022259008

02 ಶಿಮ್ಲಾ - ಮನಾಲಿ - ವೈಷ್ಣೋದೇವಿ — 14 ದಿನಗಳು
ನವದೆಹಲಿ, ಕುರುಕ್ಷೇತ್ರ, ಚಂಡೀಗಡ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಅಟಲ್ ಟನಲ್, ಸೋಲಾಂಗ್ ವ್ಯಾಲಿ (opt), ಬೈಜನಾಥ್, ಕಾಂಗ್ರಾ ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಧರ್ಮಶಾಲಾ (Opt), ಕಟ್ರಾ, ವೈಷ್ಣೋದೇವಿ, ವಾಘಾ ಬಾರ್ಡರ್, ಅಮೃತಸರ.
ದಿನಾಂಕ: APR 2, 10, 17, 24. MAY 8, 22. JUN 5, 19. JUL 10, 24. AUG 7, 21. SEP 4, 11, 25. OCT 9, 16, 23. NOV 13, 27. DEC 11.
7022259001

03 ಅಯೋಧ್ಯಾ - ಕಾಶಿ - ಗಯಾ — 6/9 ದಿನಗಳು
ನೈಮಿಶಾರಣ್ಯ, ಅಯೋಧ್ಯಾ, ಪ್ರಯಾಗರಾಜ್ (ತ್ರಿವೇಣಿ ಸಂಗಮ), ಚಿತ್ರಕೂಟ, ವಾರಣಾಸಿ (ಕಾಶಿ), ಸಾರನಾಥ, ಗಯಾ, ಬೋಧಗಯಾ.
ದಿನಾಂಕ: APR 10, 24. MAY 8. JUNE 5, 19. JUL 3, 17. AUG 7, 21. SEP 4, 18, 25. OCT 2, 9, 23, 30. NOV 13, 27. DEC 4, 18.
9448083008

04 ಗೋಲ್ಡನ್ ಟ್ರಯಾಂಗಲ್ ಪ್ರವಾಸ — 6 ದಿನಗಳು
ಜೈಪುರ, ಆಗ್ರಾ, ಮಥುರಾ, ಬೃಂದಾವನ, ನವದೆಹಲಿ.
ದಿನಾಂಕ: APR 10, 24. MAY 8, 22. JUNE 5, 19. JUL 3, 17. AUG 7, 21. SEP 4, 18. OCT 2, 16. NOV 6, 20. DEC 4, 18.
7975001525

05 ಶಿಮ್ಲಾ - ಕುಲು - ಮನಾಲಿ — 9 ದಿನಗಳು
ನವದೆಹಲಿ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಅಟಲ್ ಟನಲ್, ಸೋಲಾಂಗ್ ವ್ಯಾಲಿ (opt), ಮಣಿಕರ್ಣಿಕಾ, ಚಂಡೀಗಡ
ದಿನಾಂಕ: APR 15, 29. MAY 13, 27. JUNE 10, 24. JUL 8, 22. AUG 12, 26. SEP 9, 23. OCT 7, 21. NOV 11, 25. DEC 9, 23.
9364104365

06 ಅಮೃತಸರ - ಧರ್ಮಶಾಲಾ - ವೈಷ್ಣೋದೇವಿ — 9 ದಿನಗಳು
ಕಾಂಗ್ರಾ ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಧರ್ಮಶಾಲಾ, ಡಾಲ್‌ಹೌಸಿ, ಖಜಿಯಾರ್, ಕಟ್ರಾ, ವೈಷ್ಣೋದೇವಿ
ದಿನಾಂಕ: APR 10, 18. MAY 15, 23. JUN 12, 20. JUL 17, 25. AUG 14, 22. SEP 11, 19. OCT 16, 24. NOV 6, 14. DEC 11, 19.
9364104366

07 ಕಾಶ್ಮೀರ - ವೈಷ್ಣೋದೇವಿ ಪ್ರವಾಸ — 8 ದಿನಗಳು
ಪಹಲ್ ಗಾಂವ್, ಸೋನ್ಮಾರ್ಗ್, ಶ್ರೀನಗರ, ಗುಲ್ಮಾರ್ಗ್, ಕಟ್ರಾ, ವೈಷ್ಣೋದೇವಿ
ದಿನಾಂಕ: APR 5, 12, 20, 27. MAY 10, 17, 25. JUN 1, 14,21. JUL 5, 13. AUG 9, 16. SEP 6, 13. OCT 4, 11, 19, 26. NOV 8, 15, 23, 30. DEC 13, 20.
7022259005

08 ಮಸ್ಸೋರಿ - ಕಾರ್ಬೆಟ್ - ನೈನಿತಾಲ್ — 12 ದಿನಗಳು
ಮಸ್ಸೋರಿ, ಕೆಂಪ್ಟಿ ಫಾಲ್ಸ್, ಹರಿದ್ವಾರ, ಋಷಿಕೇಶ, ಕೌಸಾನಿ, ಜಿಮ್ ಕಾರ್ಬೆಟ್ ನ್ಯಾಷನಲ್ ಪಾರ್ಕ್, ಬೈಜನಾಥ್, ಭಾಗೇಶ್ವರ್, ಜೋಗೇಶ್ವರ್, ಭೀಮ್ ತಾಲ್, ನೌಕುಚಿಯಾತಾಲ್, ಸತ್ತಾಲ್, ಕೈಂಚಿಧಾಮ್, ನೈನಿತಾಲ್, ದೆಹಲಿ.
ದಿನಾಂಕ: APR 10. MAY 8, 22. JUN 5, 19. JUL 17. AUG 7, 21. SEP 4, 18. OCT 2, 16. NOV 6, 20. DEC 4, 18.
7022259003



09 ದಕ್ಷಿಣ ಭಾರತ ಪ್ರವಾಸ — 10 ದಿನಗಳು
ಕಂಚೀಪುರಂ, ಚಿದಂಬರಂ, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ರಾಮೇಶ್ವರಂ, ಮಧುರೈ, ಕನ್ಯಾಕುಮಾರಿ, ನಾಗರಕೋಯಿಲ್, ಸುಚಿಂದ್ರ, ತಿರುವನಂತಪುರಂ, ಕಾಲಡಿ, ಗುರುವಾಯೂರು, ನಂಜನಗೂಡು.
ದಿನಾಂಕ: APR 16, 30. MAY 7, 21. JUN 4, 18. JUL 9, 23. AUG 6, 20. SEP 10, 24. OCT 8, 22. NOV 12, 19, 26. DEC 5, 12, 19.
9364088424



10 ಪೂರ್ವ ಭಾರತ ಪ್ರವಾಸ — 13 ದಿನಗಳು
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ದಕ್ಷಿಣೇಶ್ವರ, ಕಲ್ಕತ್ತಾ, ಗಂಗಾ ಸಾಗರ, ಹೌರಾ, ಸಿಲಿಗುರಿ, ಮಿರಿಕ್, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗ್ ಟಕ್, ನವಜಲಪೈಗುರಿ
ದಿನಾಂಕ: APR 13. MAY 11. JUN 15. AUG 17. SEP 14. OCT 12. NOV 16. DEC 14.
9364104373

11 ಪುರಿ - ಕೊನಾರ್ಕ್ - ಕಲ್ಕತ್ತಾ — 6 ದಿನಗಳು
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ದಕ್ಷಿಣೇಶ್ವರ, ಕಲ್ಕತ್ತಾ, ಗಂಗಾ ಸಾಗರ, ಹೌರಾ.
ದಿನಾಂಕ: APR 2, 8, 30. MAY 6. JUN 4, 10. JUL 2, 9. AUG 6, 12. SEP 3, 9. OCT 1, 7. NOV 5, 11. DEC 3, 9.
9364104373

12 ಪೂರ್ವ ಹಿಮಾಲಯ ಪ್ರವಾಸ — 10 ದಿನಗಳು
ನವಜಲಪೈಗುರಿ, ಡಾರ್ಜಿಲಿಂಗ್, ಗ್ಯಾಂಗ್ ಟಕ್, ತ್ಸಾಂಗೋ ಸರೋವರ, ನಮ್ಚಿ ಚಾರ್ ಧಾಮ್, ಪೆಲ್ಲಿಂಗ್, ಪೆಮಾಯಾಂಗ್ಟ್ಸೆ, ಕಾಲಿಮ್ ಪಾಂಗ್
ದಿನಾಂಕ: APR 19. MAY 17. JUN 21. AUG 23. SEP 20. OCT 18. NOV 22. DEC 20.
7022259008

13 ಉಜ್ಜಯಿನಿ - ಓಂಕಾರೇಶ್ವರ - ಭೋಪಾಲ್ — 6 ದಿನಗಳು
ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಾಹೇಶ್ವರ, ಓಂಕಾರೇಶ್ವರ.
ದಿನಾಂಕ: APR 9, 14, 19. MAY 7, 12. JUN 4, 9. JUL 9, 14. AUG 6, 11, 16. SEP 10, 15, 20. OCT 8, 13, 18. NOV 5, 10, 15, 20. DEC 3, 8, 13, 18, 23.
7022259001

ಅಡಿಗಾಸ್ ಯಾತ್ರಾ
+91 94494 78944
www.adigasyatra.com
News Website : www.adigasyatranews.com
care@adigasyatra.com
Follows Us :
Facebook Instagram News Website Youtube

ಸಮಾಚಾರ ಸಣ್ಣದಲ್ಲ

ಮನೆ ಕುಸಿದು ಬಾಲಕಿ ಸಾವು: ನಾಲ್ವರಿಗೆ ಗಾಯ

ಕೋಲಾರ: ಸಿಲಿಂಡರ್ ಬ್ಲಾಸ್ಟ್ ಆದ ಪರಿಣಾಮ ಮನೆ ಕುಸಿದು ಬಿದ್ದು ಬಾಲಕಿ ಸಾವನ್ನಪ್ಪಿದ ಘಟನೆ ಕೋಲಾರ ಮುಳಬಾಗಿಲು ನಗರದಲ್ಲಿ ನಡೆದಿದೆ. ಈ ಅವಘಡದಲ್ಲಿ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಮೃತ ಬಾಲಕಿಯನ್ನು ವಹಿನೂರ್ (15) ಎಂದು ಗುರುತಿಸಲಾಗಿದೆ. ಗಾಯಾಳುಗಳನ್ನು ಸುಹೇಲ್, ಕೌಸರ್, ಅಯಾಜ್ ಮತ್ತು ಅಬ್ಜರ್ ಎಂದು ಗುರುತಿಸಲಾಗಿದೆ. ಗಾಯಾಳುಗಳನ್ನು ಕೋಲಾರದ ಖಾಸಗಿ ಆಸ್ಪತ್ರೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಮುಳಬಾಗಿಲು ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ನಾಗಲ್ಯಾಂಡ್ ಮೂಲದ ಯುವತಿ ನೇಣಿಗೆ ಶರಣು

ಚಿಕ್ಕಮಗಳೂರು: ನಾಗಾಲ್ಯಾಂಡ್ ಮೂಲದ ಯುವತಿಯೊಬ್ಬಳ ಶವ ಚಿಕ್ಕಮಗಳೂರಿನ ಅರವಿಂದ ನಗರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೃತ ಯುವತಿಯನ್ನು ಲಿನ್ಸುಲಾ (22) ಎಂದು ಗುರುತಿಸಲಾಗಿದೆ. ಯುವತಿ ರೆಸಾರ್ಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದಳು. ಲಿನ್ಸುಲಾಳಿಗೆ ರಾಜೇಶ್ ಹಾಗೂ ತೇಜಸ್ ಹಿಂಸೆ ನೀಡುತ್ತಿದ್ದರು ಎಂದು ಲಶಿಲಾ ಇಂಚುಗರ್ ಎಂಬವರು ಬಸವನಹಳ್ಳಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವದಂತಿಗೆ ಬಂಕ್‌ಗಳಲ್ಲಿ ನೂಕುನುಗ್ಗಲು

ಮಧ್ಯಪ್ರಾಚ್ಯ ರಾಷ್ಟ್ರಗಳಗಳಲ್ಲಿ ಮುಂದುವರಿದಿರುವ ಯುದ್ಧ ಹಲವು ಉದ್ಯಮಕ್ಕೆ ಹೊಡೆತ ಕೊಟ್ಟಿದೆ. ಕಲಬುರಗಿ ಸೇರಿ ಹಲವೆಡೆ ಸಿಲಿಂಡರ್ ಗ್ಯಾಸ್‌ಗಳ ಅಭಾವ ಆಗಿದ್ದು, ಸಿಲಿಂಡರ್‌ಗಾಗಿ ಜನ ಸರತಿ ಸಾಲಿನಲ್ಲಿ ಕಾದು ಕುಳಿತಿದ್ದಾರೆ. ಇನ್ನು ರಾಯಚೂರು, ಕೊಪ್ಪಳ, ಯಾದಗಿರಿ, ಬಾಗಕೋಟೆ, ಬೆಳಗಾವಿ ಸೇರಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಪೆಟ್ರೋಲ್, ಡೀಸೆಲ್ ಅಭಾವದ ವದಂತಿ ಸುದ್ದಿ ಹಬ್ಬಿದ ಪರಿಣಾಮ ಇಂಧನ ತುಂಬಿಸಿಕೊಳ್ಳಲು ಬಂಕ್‌ಗಳಲ್ಲಿ ಜನಸಂದಣಿ ಆಗಿ ನೂಕು ನುಗ್ಗಲು ಉಂಟಾಗಿದೆ.

ಸಿಲಿಂಡರ್‌ಗಾಗಿ 2 ಕಿಲೋ ಮೀಟರ್ ಸರತಿ ಸಾಲು: ಸಿಲಿಂಡರ್ ಗ್ಯಾಸ್‌ಗಾಗಿ ಕಲಬುರಗಿ ಜಿಲ್ಲೆ ಆಳಂದ ಪಟ್ಟಣದ ಸೋನಾ ಗ್ಯಾಸ್ ಏಜೆನ್ಸಿ ಮುಂಭಾಗ ಮಂಗಳವಾರ ಸಂಜೆಯಿಂದಲೇ ನೂರಾರು ಜನರು ಜಮಾಯಿಸಿದ್ದು, ಬಿರು ಬಿಸಿಲಿನಲ್ಲಿ ಸಾಲು ನಿಂತಿದ್ದ ಯುವಕನೊಬ್ಬ ಮೂರ್ಛೆ ಹೋಗಿ ಬಿದ್ದಿದ್ದು ಕೂಡಲೇ ಸ್ಥಳೀಯರು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

ಸೋನಾ ಗ್ಯಾಸ್ ಏಜೆನ್ಸಿಯ ಗೋಡೌನ್‌ನಿಂದ ಸುಮಾರು 2 ಕಿಲೋಮೀಟರ್ ದೂರದವರೆಗೆ ಗ್ರಾಹಕರು ಸಿಲಿಂಡರ್ ಹಿಡಿದು ಸಾಲುಗಟ್ಟಿ ನಿಂತಿದ್ದಾರೆ. ಮಂಗಳವಾರ ಸಂಜೆ 6 ಗಂಟೆಯಿಂದಲೇ ಆರಂಭವಾದ ಈ ಸಾಲು ಬುಧವಾರವೂ ಮುಂದುವರಿದಿದೆ. ಗ್ರಾಮೀಣ ಭಾಗದ ಜನರೂ ಸಹ ಗ್ಯಾಸ್‌ಗಾಗಿ ಪಟ್ಟಣಕ್ಕೆ ಲಗ್ಗೆ ಇಡುತ್ತಿದ್ದು, ನೆಟ್‌ವರ್ಕ್ ಸಮಸ್ಯೆಯಿಂದಾಗಿ ಆನ್‌ಲೈನ್ ಬುಕಿಂಗ್ ವಿಳಂಬವಾಗುತ್ತಿರುವುದು ಜನರಲ್ಲಿ ಭೀತಿ ಮೂಡಿಸಿದೆ. ಗೃಹಬಳಕೆಯ ಸಿಲಿಂಡರ್‌ಗಳಿಗೆ ಬೇಡಿಕೆ ಹೆಚ್ಚಾಗಿದ್ದರೂ, ಏಜೆನ್ಸಿಯ ಪೂರೈಕೆ ವ್ಯವಸ್ಥೆ ಹದಗೆಟ್ಟಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ವದಂತಿ ಹರಡಿದರೆ ಕಾನೂನು ಕ್ರಮ: ಡಿಸಿ ಬೆಳಗಾವಿ ಜಿಲ್ಲೆಯಲ್ಲಿ ಸಿಲಿಂಡರ್, ಇಂಧನ ಕೊರತೆ ಇಲ್ಲ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಟ್ಟು ಆತಂಕಕ್ಕೆ ಒಳಗಾಗಬಾರದು. ವದಂತಿ ಹರಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಎಚ್ಚರಿಕೆ ನೀಡಿದ್ದಾರೆ.

ಬೆಳಗಾವಿ ಜಿಲ್ಲೆ ಹಾಗೂ ನಗರದಲ್ಲಿ ಯಾವುದೇ ರೀತಿಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಕೊರತೆ ಇಲ್ಲ. ಬಂಕ್ ಗಳಲ್ಲಿ ಸ್ಟಾಕ್ ಖಾಲಿಯಾದರೆ ನಗರದಲ್ಲಿ ಕೇವಲ ಐದು ಗಂಟೆಗಳಲ್ಲಿ ಸ್ಟಾಕ್ ಲಭ್ಯವಾಗಲಿದೆ. ಇಂಧನ ಕೊರತೆ ವದಂತಿಗೆ ಕಿವಿಗೊಡಬಾರದು ಎಂದರು.

ಪೆಟ್ರೋಲ್, ಡೀಸೆಲ್ ಬಾಟಲ್, ಕ್ಯಾನ್‌ಗೆ ಹಾಕುವಂತಿಲ್ಲ : ವಾಹನಗಳ ಟ್ಯಾಂಕ್‌ಗಳಿಗೆ ಮಾತ್ರ ನೇರವಾಗಿ ಪೆಟ್ರೋಲ್, ಡೀಸೆಲ್ ಹಾಕಬೇಕು. ಯಾವುದೇ ರೀತಿಯ ಕ್ಯಾನ್ ಅಥವಾ ಬಾಟಲಿಯಲ್ಲಿ ಇಂಧನ ಪೂರೈಸಲು ಅವಕಾಶವಿಲ್ಲ. ಪ್ರತ್ಯೇಕ ಕಂಟೈನರ್‌ಗಳಲ್ಲಿ ಇಂಧನ ಸಂಗ್ರಹಿಸುವುದು ಅತ್ಯಂತ ಅಪಾಯಕಾರಿ ಹಾಗೂ ಕಾನೂನುಬಾಹಿರವಾಗಿದ್ದು, ಅನಾಹುತಗಳಿಗೆ ಕಾರಣವಾಗಬಹುದು ಎಂದು ಆಹಾರ ಇಲಾಖೆ ಎಚ್ಚರಿಕೆ ನೀಡಿದೆ.

ಇಂಧನವನ್ನು ಕೇವಲ ವಾಹನಗಳ ಟ್ಯಾಂಕ್‌ಗಳಿಗೆ ಮಾತ್ರ ಭರ್ತಿ ಮಾಡಬೇಕು. ಬಾಟಲಿ ಅಥವಾ ಪ್ರತ್ಯೇಕ ಕಂಟೈನರ್‌ಗಳಲ್ಲಿ ಇಂಧನ ನೀಡದಂತೆ ಪೆಟ್ರೋಲ್ ಬಂಕ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಸಾರ್ವಜನಿಕರು ಸಹಕರಿಸಿ, ಅಗತ್ಯಕ್ಕಿಂತ ಹೆಚ್ಚಿನ ಇಂಧನವನ್ನು ಸಂಗ್ರಹಿಸಿ ಆತಂಕ ಸೃಷ್ಟಿಸಬಾರದು ಎಂದು ಎಚ್ಚರಿಕೆ ನೀಡಲಾಗಿದೆ.

ಗ್ಯಾಸ್ ಸಿಲಿಂಡರ್‌ಗಾಗಿ ಕಲಬುರಗಿಯ ಆಳಂದದಲ್ಲಿ ರಾತ್ರಿಯಿಡೀ ಕಾದು ಕುಳಿತಿದ್ದ ಜನ.

ಬಂಕ್‌ಗಳಿಗೆ ಮುಗಿಬಿದ್ದ ಜನ

ಯುದ್ಧದಿಂದ ತೈಲ ಪೂರೈಕೆ ಸ್ಥಗಿತ ಹಾಗೂ ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಲಿದೆ ಎಂಬ ವದಂತಿ ಸುದ್ದಿ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದ್ದಂತೆ ಬೆಳಗಾವಿ, ಯಾದಗಿರಿ, ರಾಯಚೂರು ಜಿಲ್ಲೆಗಳ ಬಂಕ್‌ಗಳಿಗೆ ಜನ ಮುಗಿಬಿದ್ದು ವಾಹನಗಳಿಗೆ ಪೆಟ್ರೋಲ್, ಡೀಸೆಲ್ ತುಂಬಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ಬಾಟಲ್, ಬ್ಯಾರಲ್, ಕಂಚಿನ ಕೊಡಪಾನಗಳಲ್ಲಿ ಪೆಟ್ರೋಲ್ ಸಂಗ್ರಹ ಮಾಡಿಕೊಳ್ಳುತ್ತಿದ್ದಾರೆ. ಯಾದಗಿರಿ ನಗರದ ಶಿವಂ ಪೆಟ್ರೋಲ್ ಬಂಕ್ ಹತ್ತಿರ ನೂರಾರು ಬೈಕ್ ಗಳು ಜಮೆಯಾಗಿ ಪೆಟ್ರೋಲ್ ಹಾಕಿಸಿಕೊಳ್ಳಲು ಹರಸಾಹಸ ಪಟ್ಟರು.

ಕಂಚಿನ ಕೊಡಪಾನದಲ್ಲಿ ಡೀಸೆಲ್ ತುಂಬಿಸಿಕೊಂಡು ತೆರಳುತ್ತಿರುವ ವ್ಯಕ್ತಿ.

ಪ್ರಾಚಾರ್ಯರ ಕಾರ್ಯಾಲಯ, ಜಿಲ್ಲಾ ತರಬೇತಿ ಸಂಸ್ಥೆ,
ಬೆಂಗಳೂರು ಗ್ರಾಮಾಂತರ, ಕನಕಪುರ ರಸ್ತೆ, ಬನಶಂಕರಿ, ಬೆಂಗಳೂರು–70

NO: DTI/65/ADMN/EST/2026-DTI-BRU-DTI DATE: 23.03.2026

ಟೆಂಡರ್ ಪ್ರಕಟಣೆ

ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬರು ಟ್ಯಾಲಿ ಸಹಾಯಕರು ಮತ್ತು ಒಂದು ಗ್ರೂಪ್ 'ಡಿ' ಸಿಬ್ಬಂದಿ ಸೇವೆಯನ್ನು ಪಡೆಯಲು ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ ಪ್ರಕಟಿಸಲಾಗಿರುವ ಟೆಂಡರ್ ವಿವರ ಕೆಳಗಿನಂತಿದೆ.

1) ಟೆಂಡರ್ ಸಂಖ್ಯೆ: ATI/2025-26/SE0104 ಟೆಂಡರ್ ಮೊತ್ತ ರೂ. 5,95,804.00
2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 23.03.2026
3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 06.04.2026 ಮಧ್ಯಾಹ್ನ 3.00 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು (10.00 AM - 5.30 PM)

ಸಹಿ/– ಪ್ರಾಚಾರ್ಯರು,
ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ

DIPR/CP/SMCL/6441/2025-26

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

KMCRI/SUP(5)/Plastic Surgery/Tender-01/555/2025-26 Dated 24.03.2026

ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ ಇವರು **ಅರ್ಹ ಟೆಂಡರದಾರರು, ಉತ್ಪಾದಕರು, ಅಧಿಕೃತ ಏಜೆಂಟ್ಸ್ ಮತ್ತು ಅಧಿಕೃತ ವಿತರಕರಿಂದ ಕೆ.ಎಂ.ಸಿ.&ಆರ್.ಐ. ಆಸ್ಪತ್ರೆಗೆ ಅವಶ್ಯವಿರುವ Plastic Surgery ವಿಭಾಗಕ್ಕೆ Anaesthesia workstation ವೈದ್ಯಕೀಯ ಉಪಕರಣವನ್ನು ಪೂರೈಸುವುದಕ್ಕಾಗಿ** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪೂರೈಕೆ ಕಾಯ್ದೆ 1999 ಶಾಸನ 2000 ಅನ್ವಯ ಇ–ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು, ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ htpps://www.kppp.karnataka.gov.in ನಲ್ಲಿ ಪಡೆಯಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು)
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸೋಮವಾರಪೇಟೆ ಉಪವಿಭಾಗ, ಸೋಮವಾರಪೇಟೆ
OFFICE OF THE ASSISTANT CONSERVATOR OF FORESTS, SOMWARPET SUB DIVISION, SOMWARPET
ದೂರವಾಣಿ ಸಂಖ್ಯೆ:08276–284352 Email: acfsomwarpet11@gmail.com
ಸಂಖ್ಯೆ: ಎ2/ಬಿಜಿಟಿ/ವಿವ–78/2025–26/2026–27 ದಿನಾಂಕ: 24–03–2026

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ / ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 2026–27ನೇ ಸಾಲಿಗೆ ವಿವಿಧ ಯೋಜನೆ / ಯೋಜನೇತರ ಲೆಕ್ಕಶೀರ್ಷಿಕೆಯಡಿ ಅನುದಾನ ಹಂಚಿಕೆ /ಬಿಡುಗಡೆಯಾಗುವ ನಿರೀಕ್ಷಣೆಯಲ್ಲಿ ಋತುಮಾನಕ್ಕೆ ಅನುಗುಣವಾಗಿ ಕೈಗೊಳ್ಳಬೇಕಾದ ವಿವಿಧ ಮುಂದುವರೆದ ಅರಣ್ಯೀಕರಣ / ಅರಣ್ಯೇತ್ತರ ಕಾಮಗಾರಿಗಳನ್ನು ನಿರ್ವಹಿಸುವ / ಕೈಗೊಳ್ಳುವ ಬಗ್ಗೆ – 2.0 Portal https://kppp.karnataka.gov.in ಮೂಲಕ ಮೊದಲನೇ ಟೆಂಡರನ್ನು ದಿನಾಂಕ : 08–04–2026ರಂದು ಆಹ್ವಾನಿಸಲಾಗಿದೆ. ಒಂದು ವೇಳೆ ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದಲ್ಲಿ, ಇದೇ ಕಾಮಗಾರಿಗೆ ಮತ್ತು ಟೆಂಡರ್ ಅಧಿಸೂಚನೆಯಲ್ಲಿ ಇರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ ಎರಡನೆ ಬಾರಿಗೆ ಟೆಂಡರನ್ನು (ಮರು ಟೆಂಡರ್) ದಿನಾಂಕ : 18–04–2026 ರಂದು ನಡೆಸಲಾಗುವುದು.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸೋಮವಾರಪೇಟೆ ಉಪ ವಿಭಾಗ, ಸೋಮವಾರಪೇಟೆ : 08276–284352
ದಿನಾಂಕ: 24–04–2026
ಸ್ಥಳ : ಸೋಮವಾರಪೇಟೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸೋಮವಾರಪೇಟೆ ಉಪ ವಿಭಾಗ,
ಸೋಮವಾರಪೇಟೆ.

ರೈಲ್ವೆ ಇಲಾಖೆಯಿಂದ 19 ವಿಶೇಷ ರೈಲುಗಳು ಕಾಯಂ

ಬೆಂಗಳೂರು: ಕರ್ನಾಟಕದಲ್ಲಿ ಸಂಚರಿಸುತ್ತಿದ್ದ 19 ವಿಶೇಷ ರೈಲುಗಳನ್ನು ರೈಲ್ವೆ ಮಂಡಳಿ ಕಾಯಂ ಸೇವೆಗೆ ಪರಿವರ್ತಿಸಿದ್ದು, ಟಿಕೆಟ್ ದರದಲ್ಲಿಯೂ ಸಹ ಗಣನೀಯ ಇಳಿಕೆಯನ್ನು ಮಾಡಿದೆ.

ಯಶವಂತಪುರ–ತಾಳಗುಪ್ಪ ಸೇರಿದಂತೆ 6 ವಿಶೇಷ ರೈಲು ಸೇವೆಗಳೂ ಇನ್ನು ಮುಂದೆ ಖಾಯಂ ಆಗಲಿದ್ದು, ಪ್ರಯಾಣಿಕರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡ ರೈಲ್ವೇ ಮಂಡಳಿ ಈ ಕ್ರಮಕ್ಕೆ ಮುಂದಾಗಿದೆ. ಕರ್ನಾಟಕದಲ್ಲಿ ಸಂಚರಿಸುತ್ತಿದ್ದ 19 ವಿಶೇಷ ರೈಲುಗಳನ್ನು ಖಾಯಂ ಸೇವೆಗೆ ಪರಿವರ್ತಿಸಿದ್ದು, ಇದರಲ್ಲಿ 6 ಎಕ್ಸ್‌ಪ್ರೆಸ್, 9 ಮೆಮು/ಡೆಮು ಹಾಗೂ 4 ಪ್ಯಾಸೆಂಜರ್ ರೈಲುಗಳು ಸೇರಿವೆ. ಈ ನಿರ್ಧಾರದಿಂದ ಬೆಂಗಳೂರು, ಮೈಸೂರು, ಶಿವಮೊಗ್ಗ ಸೇರಿದಂತೆ 15ಕ್ಕೂ ಹೆಚ್ಚು ಜಿಲ್ಲೆಗಳ ಜನರಿಗೆ ಪ್ರಯಾಣ ಸೌಲಭ್ಯ ಹೆಚ್ಚಾಗಲಿದೆ.

ವಿಶೇಷ ರೈಲುಗಳಾಗಿ ಓಡುತ್ತಿದ್ದ ಸೇವೆಗಳು ಸಾಮಾನ್ಯವಾಗಿ ಹೆಚ್ಚಿನ ದರ ಹಾಗೂ ಅನಿಶ್ಚಿತ ವೇಳಾಪಟ್ಟಿಯಿಂದ ಪ್ರಯಾಣಿಕರಿಗೆ ತೊಂದರೆ ಉಂಟುಮಾಡುತ್ತಿದ್ದವು. ಈಗ ಖಾಯಂ ಸೇವೆಗೆ ಪರಿವರ್ತನೆಯಾದ ಹಿನ್ನೆಲೆಯಲ್ಲಿ ಟಿಕೆಟ್ ದರದಲ್ಲಿ ಗಮನಾರ್ಹ ಇಳಿಕೆ ಕಂಡುಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಸ್ಲೀಪರ್ ಕೋಚ್‌ಗಳಲ್ಲಿ ಸುಮಾರು ಶೇ30 ರವರೆಗೆ ಮತ್ತು ಸಾಮಾನ್ಯ ಟಿಕೆಟ್‌ಗಳಲ್ಲಿ ಶೇ 10–15ರವರೆಗೆ ದರ ಕಡಿಮೆ ಯಾಗಲಿದೆ.

6 ವಿಶೇಷ ರೈಲುಗಳು ಕಾಯಂ

- **ಮೈಸೂರು–ಅಜ್ಮೀರ್ ಎಕ್ಸ್‌ಪ್ರೆಸ್ (ರೈ.ಸಂ 16281/16282) ವಾರಕ್ಕೊಮ್ಮೆ ಸಂಚಾರ**
- **ಬೆಂಗಳೂರು ದಂಡು–ಕಲಬುರಗಿ ಎಕ್ಸ್‌ಪ್ರೆಸ್ (ರೈ.ಸಂ 16563/16564) ವಾರಕ್ಕೊಮ್ಮೆ**
- **ಎಸ್‌ಎಂವಿಟಿ ಬೆಂಗಳೂರು–ಬೀದರ್ ಎಕ್ಸ್‌ಪ್ರೆಸ್ (ರೈ.ಸಂ 16559/16560) ವಾರಕ್ಕೊಮ್ಮೆ**
- **ಯಶವಂತಪುರ–ತಾಳಗುಪ್ಪ ಎಕ್ಸ್‌ಪ್ರೆಸ್ (ರೈ.ಸಂ16555/16556) ವಾರಕ್ಕೊಮ್ಮೆ**
- **ಹುಬ್ಬಳ್ಳಿ–ಯೋಗನಗರಿ ರಿಷಿಕೇಶ ಎಕ್ಸ್‌ಪ್ರೆಸ್ (ರೈ.ಸಂ17363/17364) ವಾರಕ್ಕೊಮ್ಮೆ**
- **ಮಡಗಾಂವ್–ಕಾರವಾರ ಎಕ್ಸ್‌ಪ್ರೆಸ್ (ರೈ.ಸಂ 10109/10110)**

9 ಮೆಮು, ಡೆಮು ರೈಲುಗಳ ಓಡಾಟ

- **ಬೆಂಗಳೂರು–ಹೊಸೂರು ಮೆಮು (ರೈ.ಸಂ 66595/96) ಪ್ರತಿದಿನ**
- **ಹುಬ್ಬಳ್ಳಿ–ವಿಜಯಪುರ ಮೆಮು (ರೈ.ಸಂ66501/02) ಪ್ರತಿದಿನ**
- **ಬೆಂಗಳೂರು–ಅಶೋಕಪುರಂ ಮೆಮು (ರೈ.ಸಂ66597/98) ಪ್ರತಿದಿನ**
- **ಬೆಂಗಳೂರು–ಅಶೋಕಪುರಂ ಮೆಮು (ರೈ.ಸಂ 06213/14) ವಾರಕ್ಕೆ 3 ಬಾರಿ ಸಂಚಾರ**
- **ಬಂಗಾರಪೇಟೆ–ಎಸ್‌ಎಂವಿಟಿ ಬೆಂಗಳೂರು ಮೆಮು (ರೈ.ಸಂ 66537/38) ಪ್ರತಿದಿನ**
- **ಹೊಸಪೇಟೆ–ಹುಬ್ಬಳ್ಳಿ ಡೆಮು (ರೈ.ಸಂ76507/08) ವಾರಕ್ಕೊಮ್ಮೆ**
- **ಬಳ್ಳಾರಿ–ದಾವಣಗೆರೆ ಡೆಮು (ರೈ.ಸಂ76509/10)ವಾರಕ್ಕೆ 6 ದಿನ**
- **ಬೆಂಗಳೂರು – ಹಾಸನ ಡೆಮು (ರೈ.ಸಂ66525/26)ವಾರಕ್ಕೆ 6 ದಿನ**
- **ಬಳ್ಳಾರಿ – ಹೊಸಪೇಟೆ ಡೆಮು (ರೈ.ಸಂ07397/98) ವಾರಕ್ಕೆ 6 ದಿನ ಸಂಚರಿಸಲಿದೆ**

ಐವರಿಗೆ ಸಾಹಿತ್ಯ ಅಕಾಡೆಮಿ ವಾರ್ಷಿಕ ಗೌರವ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗೌರವಿಸಲು ಕರ್ನಾಟಕ ಸಾಹಿತ್ಯ ಅಕಾಡೆಮಿ ತನ್ನ ವಾರ್ಷಿಕ ಪ್ರಶಸ್ತಿಗಳನ್ನು ಘೋಷಿಸಿದೆ. ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಗಮನಾರ್ಹ ಕೃತಿಗಳನ್ನು ರಚಿಸಿದ ಲೇಖಕರನ್ನು ಈ ಬಾರಿ ಆಯ್ಕೆ ಮಾಡಲಾಗಿದೆ.

ಲೇಖಕಿ ಡಾ.ವಸುಂಧರಾ ಭೂಪತಿ, ಪ್ರೊ. ಶಿವರಾಮಯ್ಯ, ಚಂದ್ರಶೇಖರ ತಾಳ್ಯ, ಡಾ. ಚಂದ್ರಕಾಂತ ಪೋಕಳೆ, ಡಾ.ಎಸ್.ತುಕಾರಾಂ ಅವರು 2025ನೇ ಸಾಲಿನ ವರ್ಷದ ಗೌರವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಡಾ.ನಿಷ್ಠಿ ರುದ್ರಪ್ಪ, ಡಾ.ವೀರೇಶ ಬಡಿಗೇರ, ಡಾ.ಸಿ.ಜಿ.ಲಕ್ಷ್ಮೀಪತಿ, ಕಂನಾಡಿಗ ನಾರಾಯಣ, ರೂಪ ಹಾಸನ, ಜಯರಾಮ್ ರಾಯಪುರ, ಕುಮುದಾ ಸುಶೀಲ್, ಡಾ.ಓ.ನಾಗರಾಜು, ಬಿ.ಎಂ.ಬಶೀರ್, ಡಾ.ಜ್ಯೋತಿ ಅವರಿಗೆ 2025ನೇ ಸಾಲಿನ ಸಾಹಿತ್ಯ ಶ್ರೀ ಪ್ರಶಸ್ತಿ ಲಭಿಸಿದೆ ಎಂದು ಹೇಳಿದರು.

2024ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಭಾರತೀದೇವಿ.ಪಿ ಅವರ ಚಲಿಸುತ್ತಿವೆ ಚುಕ್ಕಿಗಳು, ಶಶಿ ತರೀಕೆರೆ ಅವರ ಪ್ಯೂಪಾ, ವೈ.ಎಸ್.ಹರಗಿ ಅವರ ಇಮಾಮ್ ಸಾಹೇಬರ ಕುದುರೆ, ಅನಿಲ್ ಗುನ್ನಾಪೂರ ಅವರ ಸರ್ವೆ ನಂಬರ್–97, ಡಾ.ಚಂದ್ರು ಕಾಳೇನಹಳ್ಳಿ ಅವರ ಗಂಧವತಿ, ಡಾ.ಶಿವರಾಜ ಬ್ಯಾಡರಹಳ್ಳಿ ಅವರ ಒಂದು ತಲೆ ಚವುರದ ಕಥೆ, ಮಲ್ಲಿಕಾರ್ಜುನ ಹುಲಗಬಾಳಿ ಅವರ ತಿರುಗಾಟ, ಎಂ.ಜಿ.ಹೆಗಡೆ ಅವರ ಆತ್ಮಕಥೆ ಚಿಮಣಿ ಬೆಳಕಿನಿಂದ, ಮಹಾಂತೇಶ ಪಾಟೀಲ ಅವರ ಬೆಳಕು ಬೆಳೆಯುವ ಹೊತ್ತು, ರಾಜಶೇಖರ ಕುಕ್ಕುಂದಾ ಅವರ ಬಿಸಿ ಬಿಸಿ ಬಾತು, ಶ್ರೀಧರ ತುಮರಿ ಅವರ ಪಕ್ಷಿಗಳ ವಿಸ್ಮಯ ವಿಶ್ವ, ಡಾ.ಎನ್.ಎನ್. ಚಿಕ್ಕಮಾದು ಅವರ ಪ್ರಜಾಮಾತೆ, ಡಾ.ಹಂಪನಹಳ್ಳಿ ತಿಮ್ಮೇಗೌಡರ ದಾಸೊಕ್ಕಲಿಗರು, ದು.ಸರಸ್ವತಿ ಅವರ ಜಾತಿ ಮತ್ತು ಲಿಂಗತ್ವ ಕೃತಿ, ಡಾ.ಹುಲಿಕುಂಟೆ ಮೂರ್ತಿ ಅವರ ನುಡಿ ಕಂಡಾಯ, ಲಕ್ಷ್ಮಣ ಶರೆಗಾರ ಅವರ ತಿದಿಯ ತುದಿಯ ಬೆಂಕಿಯ ಉಗುಳು, ಡಾ.ಪ್ರದೀಪ್ ಕೆಂಜಿಗೆ ಅವರ ನರವಾನರ ಕೃತಿ ಆಯ್ಕೆಯಾಗಿವೆ ಎಂದು ಮಾಹಿತಿ ನೀಡಿದರು. ಗೌರವ ಪ್ರಶಸ್ತಿ 50 ಸಾವಿರ ರು., ಸಾಹಿತ್ಯಶ್ರೀ ಪ್ರಶಸ್ತಿಗೆ 25 ಸಾವಿರ ರು., ಪುಸ್ತಕ ಬಹುಮಾನ 25 ಸಾವಿರ ರು., ಪುಸ್ತಕ ದತ್ತಿ ಬಹುಮಾನ 10 ಸಾವಿರ ರು. ನಗದು ಫಲಕ, ಶಾಲು, ಹಾರ, ಪ್ರಮಾಣ ಪತ್ರವನ್ನು ಒಳಗೊಂಡಿದೆ.

ಸಿಎಂ ಅಭಿನಂದನೆ

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನುಪಮ ಸೇವೆ ಸಲ್ಲಿಸಿದ ಹಿರಿಯ–ಕಿರಿಯ ಸಾಹಿತಿಗಳನ್ನು ಗುರುತಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡುವ ಗೌರವ ಪ್ರಶಸ್ತಿ, ಸಾಹಿತ್ಯಶ್ರೀ ಪ್ರಶಸ್ತಿ ಹಾಗೂ ಅತ್ಯುತ್ತಮ ಪುಸ್ತಕ ಬಹುಮಾನ ಪಡೆದ ಸಾಹಿತಿಗಳೆಲ್ಲರಿಗೂ ಹಾರ್ದಿಕ ಅಭಿನಂದನೆಗಳು. ಬರಹಗಳ ಮೂಲಕ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸುತ್ತಿರುವ ಜತೆಗೆ ಕನ್ನಡಿಗರ ವಿವೇಕ ಸದಾ ಎಚ್ಚರದ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತಿರುವ ತಮ್ಮೆಲ್ಲರ ಬದುಕು ಹಾಗೂ ಸಾಧನೆ ಹೊಸ ತಲೆಮಾರಿಗೆ ಸ್ಫೂರ್ತಿಯಾಗಲಿ. ಈ ಪ್ರಶಸ್ತಿಗಳು ಕನ್ನಡದಲ್ಲಿ ಇನ್ನಷ್ಟು ಉತ್ತಮ ಸಾಹಿತ್ಯದ ಸೃಷ್ಟಿಗೆ ಪ್ರೇರಣೆಯಾಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ದಾಳಿ ನಿಲ್ಲದು: ಇರಾನ್ ಕುಗ್ಗದ ಯುದ್ಧೋನ್ಮಾದ

← ಮೊದಲಪುಟದಿಂದ

ಇದೆ ವೇಳೆ, ಹೊರ್ಮುಜ್ ಜಲಸಂಧಿ ಬಿಕ್ಕಟ್ಟಿನ ಕುರಿತು ಮಾತನಾಡಿರುವ ಅವರು, ಇರಾನ್ ತೆಗೆದುಕೊಂಡಿರುವ ಕ್ರಮ ಮತ್ತು ಮುನ್ನೆಚ್ಚರಿಕೆಗಳು ಅಂತಾರಾಷ್ಟ್ರೀಯ ಕಾನೂನಿಗೆ ಅನುಸಾರವಾಗಿದೆ. ಇವು ನಮ್ಮ ಸಾರ್ವಭೌಮತ್ವ ಮತ್ತು ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುವ ಗುರಿ ಯನ್ನು ಹೊಂದಿವೆ. ಇರಾನ್ ವಿರುದ್ಧ ಆಕ್ರಮಣ ಕಾರಿ ಕೃತ್ಯಗಳನ್ನು ನಡೆಸಲು ಈ ಜಲಮಾರ್ಗ ವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಯುತ್ತದೆ ಎಂದು ಅರಘ್ಚಿ ಹೇಳಿದ್ದಾರೆ.

ಯುದ್ಧೋತ್ಸಾಹಕ್ಕೆ ಎಣೆಯಿಲ್ಲ

ಅಮೆರಿಕ ಆಡಳಿತವು ಮಂಗಳವಾರ ಇರಾನ್‌ಗೆ 15 ಅಂಶಗಳ ಯುದ್ಧ ವಿರಾಮ ಯೋಜನೆಯನ್ನು ಸಲ್ಲಿಸಿದೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿದ್ದರೂ ಇಂತಹ ಯಾವುದೇ ಪ್ರಸ್ತಾವನೆಯನ್ನು ಇರಾನ್ ತಳ್ಳಿ ಹಾಕಿದ್ದು, ಯುದ್ಧ ದೀರ್ಘಾವಧಿಗೆ ಮುದುವರಿಯುವ ಸಾಧ್ಯತೆ ಕಂಡು ಬಂದಿದೆ.

ನ್ಯೂಯಾರ್ಕ್ ಟೈಮ್ಸ್ ವರದಿಯ ಪ್ರಕಾರ, ಇರಾನ್ ತನ್ನ ಮೂರು ಪ್ರಮುಖ ಅಣು ಕೇಂದ್ರಗಳನ್ನು ನಿಷ್ಕ್ರಿಯಗೊಳಿಸಬೇಕು, ದೇಶದೊಳಗಿನ ಯುರೇನಿಯಂ ಶುದ್ಧೀಕರಣ ಪ್ರಕ್ರಿಯೆಯನ್ನು ನಿಲ್ಲಿಸಬೇಕು. ಕ್ಷಿಪಣಿ ಕಾರ್ಯಕ್ರಮವನ್ನು ಸ್ಥಗಿತಗೊಳಿಸಬೇಕು. ಹಾಗೆಯೇ ಹಮಾಸ್ ಸೇರಿದಂತೆ ಉಗ್ರ ಸಂಘಟನೆಗಳಿಗೆ ನೀಡುವ ಬೆಂಬಲವನ್ನು ನಿಲ್ಲಿಸುವುದು, ಹೊರ್ಮೂಜ್ ಜಲಸಂಧಿಯನ್ನು ಸಂಪೂರ್ಣವಾಗಿ ತೆರೆಯುವುದು 15 ಅಂಶಗಳ ಪ್ರಸ್ತಾವನೆಯಲ್ಲಿ ಸೇರಿದೆ.

ಕಲಬುರಗಿಯಲ್ಲಿ ಹಿಮಮಳೆ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನಾದ್ಯಂತ ಬುಧವಾರ ಸಂಜೆ ಸಂಭವಿಸಿದ ದಿಢೀರ್ ಹವಾಮಾನ ವೈಪರೀತ್ಯದಿಂದಾಗಿ ಭಾರೀ ಆಲಿಕಲ್ಲು ಮಳೆ ಸುರಿದಿದೆ.ತಾಲೂಕಿನ ಚೆನ್ನೂರ್, ಗಡಿಲಿಂಗದಳ್ಳಿ ಹಾಗೂ ರಾಣಾಪುರ ಕ್ರಾಸ್ ಗ್ರಾಮಗಳಲ್ಲಿ ಪ್ರಕೃತಿಯ ರೌದ್ರನರ್ತನಕ್ಕೆ ಇಡೀ ಪರಿಸರವೇ ಹಿಮಗಡ್ಡೆಯಾಗಿದೆ.

ಸತತ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆ ಅಬ್ಬರಕ್ಕೆ ರಸ್ತೆಗಳ ಮೇಲೆ ಒಂದರಿಂದ ಎರಡು ಅಡಿಯಷ್ಟು ಆಲಿಕಲ್ಲುಗಳು ರಾಶಿಯಾಗಿ ಬಿದ್ದಿದ್ದವು. ರಸ್ತೆಗಳು, ಮನೆಗಳ ಮೇಲ್ಛಾವಣಿ ಹಾಗೂ ಹೊಲಗದ್ದೆಗಳು ಸಂಪೂರ್ಣವಾಗಿ ಆಲಿಕಲ್ಲುಗಳಿಂದ ಆವೃತವಾಗಿದ್ದು, ನೋಡುಗರಿಗೆ ಕಾಶ್ಮೀರದ ಹಿಮಪಾತದ ಭ್ರಮೆ ಮೂಡಿಸುವಂತಿತ್ತು. ವಾಹನ ಸವಾರರು ಚಲಿಸಲಾಗದೆ ರಸ್ತೆ ಮಧ್ಯೆಯೇ ಸಿಲುಕಿಕೊಂಡಿದ್ದರಿಂದ ಕಿಲೋಮೀಟರ್ ಗಟ್ಟಲೆ ಸಂಚಾರ ದಟ್ಟಣೆ ಉಂಟಾಗಿತ್ತು.

ರೈತರ ಕಣ್ಣೀರು: ಅಕಾಲಿಕವಾಗಿ ಬಂದೆರಗಿದ ಈ ಮಳೆಯಿಂದಾಗಿ ಕಟಾವಿಗೆ ಬಂದಿದ್ದ ಬೆಳೆಗಳು ಮಣ್ಣುಪಾಲಾಗಿವೆ. ಆಲಿಕಲ್ಲುಗಳ ಹೊಡೆತಕ್ಕೆ ತೋಟಗಾರಿಕೆ ಬೆಳೆಗಳು ಹಾಗೂ ದ್ವಿದಳ ಧಾನ್ಯಗಳು ನೆಲಕಚ್ಚಿದ್ದು, ರೈತರು ಆತಂಕಕ್ಕೀಡಾಗಿದ್ದಾರೆ. ಬಲವಾದ ಗಾಳಿಗೆ ಮರಗಳು ಮತ್ತು ವಿದ್ಯುತ್ ಕಂಬಗಳು ಧರೆಗುರುಳಿದ್ದು, ಹಲವು ಹಳ್ಳಿಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಆಲಿಕಲ್ಲು ರಾಶಿ ಕರಗಲು ಸಾಕಷ್ಟು ಸಮಯ ಬೇಕಾದ ಕಾರಣ ಸಂಚಾರ ವ್ಯವಸ್ಥೆ ಸಹಜ ಸ್ಥಿತಿಗೆ ಮರಳಲು ಹರಸಾಹಸ ಪಡಬೇಕಾಯಿತು. ಜಿಲ್ಲಾಡಳಿತವು ತಕ್ಷಣವೇ ಹಾನಿಗೊಳಗಾದ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲು ಸೂಚಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ:ಬೆಂಅಪ್ರಾ/ನಯೋಸ/CLU–534/4538/2025–26 (E-206388) ದಿನಾಂಕ: 25.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	M/s AVS Enterprises Managing Partner Venugopal A.V. Srinivas C. # 213, Adakamaranahalli Village, Dasanapura Hobli, Bengaluru North Taluk	ಬೆಂಗಳೂರು ಉತ್ತರ	ದಾಸನಪುರ	ಕದರನಹಳ್ಳಿ	43/4	3–0	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಕದರನಹಳ್ಳಿ ಗ್ರಾಮದ ಸರ್ವೆ ನಂ.43/4 ರಲ್ಲಿ 03ಎ–00 ಗು ಜಮೀನನ್ನು ವ್ಯವಸಾಯಕ್ಕೆ ಬಳಸಲು ಸಾಧ್ಯವಿರುವುದಿಲ್ಲ. ನಮ್ಮ ಜಮೀನಿನ ಸುತ್ತಮುತ್ತ ವಸತಿ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ ಮತ್ತು ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಆರ್ಥಿಕ ಸ್ಥಿತಿ ಸುಭದ್ರ

← ಮೊದಲಪುಟದಿಂದ

ಇತರೆ ರಾಜ್ಯಗಳಿಗೆ ಹೋಲಿಸಿದರೆ ಉತ್ತಮ: ಕರ್ನಾಟಕದ ಬಜೆಟ್ ನ ಒಟ್ಟು ಗಾತ್ರ 4.48 ಲಕ್ಷ ಕೋಟಿ. ಇದರಲ್ಲಿ ವಿತ್ತಿಯ ಕೊರತೆ 97,449 ಕೋಟಿ ರು.ಗಳಾಗಿವೆ. ನೆರೆ ರಾಜ್ಯ ಕೇರಳದಲ್ಲಿ ಬಜೆಟ್ ಗಾತ್ರ 2,39,907 ಕೋಟಿ ರು.ಗಳಾಗಿದ್ದು ವಿತ್ತೀಯ ಕೊರತೆ 55,42 ಕೋಟಿ, ತಮಿಳುನಾಡಿ ನಲ್ಲಿ 4,67,264 ಬಜೆಟ್ ಗಾತ್ರವಿದೆ. 1,21,949 ವಿತ್ತೀಯ ಕೊರತೆಯಿದೆ. ಮಹಾರಾಷ್ಟ್ರ 8,33,993 ಕೋಟಿ ರು. ಬಜೆಟ್ ಗಾತ್ರ ಹೊಂದಿದ್ದು ವಿತ್ತೀಯ ಕೊರತೆ 1,50,491 ಕೋಟಿ ರು.ಗಳಿವೆ. 16ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯಗಳ ವಿತ್ತೀಯ ಕೊರತೆ ಶೇಕಡ 3ರ ಒಳಗಿರಬೇಕು. ಕೇಂದ್ರ ಸರಕಾರದ ವಿತ್ತೀಯ ಕೊರತೆ ಶೇಕಡ 4.2 ರ ಮಿತಿಯ ಒಳಗಿರಬೇಕು. ಕರ್ನಾಟಕ ವಿತ್ತೀಯ ಕೊರತೆಯನ್ನು ಸಮತೋಲನ ವಾಗಿ ನಿಬಾಯಿಸಿದೆ ಎಂದು ಸಮರ್ಥಿಸಿಕೊಂಡರು.

ಅಭಿವೃದ್ಧಿಯಲ್ಲಿ ಕೇಂದ್ರಕ್ಕಿಂತ ರಾಜ್ಯ ಮುಂದು: 2026–27ನೇ ಸಾಲಿನಲ್ಲಿ 4,48,04 ಕೋಟಿ ರು.ಗಾತ್ರದ ಬಜೆಟ್ ಆಗಿದೆ. 2025–26ನೇ ಸಾಲಿನಲ್ಲಿ 4,09,549 ಕೋಟಿ ರು. ಆಗಿತ್ತು. 38,455 ಕೋಟಿ ರು. ಬಜೆಟ್ ಗಾತ್ರದಲ್ಲಿ ಹೆಚ್ಚಳವಾಗಿದೆ. ಶೇ.9.4ರಷ್ಟು ಬೆಳವಣಿಗೆಯಾಗಿದೆ.

ಆರ್ಥಿಕವಾಗಿ ಮುಗ್ಗಟ್ಟು ಇದ್ದರೆ ಈ ಬೆಳವಣಿಗೆ ಆಗುತ್ತಿರಲಿಲ್ಲ. ಆದರೆ ಕೇಂದ್ರ ಸರಕಾರದ ಗಾತ್ರ ಶೇ.5.6ರಷ್ಟಿದೆ. 2025–26ನೇ ಸಾಲಿನಲ್ಲಿ ಕೇಂದ್ರದ ಬಜೆಟ್ 50.65 ಲಕ್ಷ ಕೋಟಿ ರು. ಆಗಿತ್ತು. ಪ್ರಸಕ್ತ ಸಾಲಿನಲ್ಲಿ 53.47 ಲಕ್ಷ ಕೋಟಿ ರೂ.ನಷ್ಟಾಗಿದೆ ಎಂದು ಅಂಕಿ ಅಂಶಗಳ ಸಹಿತ ವಿವರಿಸಿದರು. ಕರ್ನಾಟಕದ ಜಿಎಸ್‌ಡಿಪಿ 2026–27ನೇ ಸಾಲಿಗೆ 33,05,500 ಕೋಟಿ ರು. ಗಳಾಗಿವೆ. ಇದರ ನಿವ್ವಳ ಬೆಳವಣಿಗೆ ದರ ಶೇ.8.1ರಷ್ಟಿದೆ. ಆದರೆ ಭಾರತ ಸರಕಾರದ ಜಿಡಿಪಿ ದರ ಶೇ.7.4ರಷ್ಟಿದೆ. ಕರ್ನಾಟಕ ಸರಕಾರದ ಬೆಳವಣಿಗೆ ದರ ಭಾರತ ಸರಕಾರಕ್ಕಿಂತ ಹೆಚ್ಚಿದೆ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಕೇಂದ್ರದ ಮೇಲೆ ವಾಗ್ದಾಳಿ

ಇದೇ ವೇಳೆ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ ಅವರು, ಕೇಂದ್ರ ಸರಕಾರ ಒಟ್ಟು ತೆರಿಗೆ ಪಾಲಿನಲ್ಲಿ ಶೇ.50 ರಷ್ಟು ತೆರಿಗೆಯ ಪಾಲನ್ನು ರಾಜ್ಯಕ್ಕೆ ಕೊಡಬೇಕು. ವಿವಿಧ ತೆರಿಗೆಗಳಿಂದ ನಮ್ಮ ರಾಜ್ಯದಿಂದ 4.50 ಲಕ್ಷ ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗುತ್ತದೆ. ಅದರಲ್ಲಿ 14 ರಿಂದ 15 ಪೈಸೆಯಷ್ಟು ಮಾತ್ರ ನಮಗೆ ವಾಪಸು ಕೊಡುತ್ತದೆ. ಸೆಸ್, ಸರ್ ಚಾರ್ಜ್‌ಗಳ ಯಾವ ಪಾಲನ್ನೂ ರಾಜ್ಯಗಳಿಗೆ ಕೊಡುವುದಿಲ್ಲ ಎಂದು ಆರೋಪಿಸಿದರು. 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಶೇ.1.1ರಷ್ಟು ಕಡಿಮೆಯಾಯಿತು. ವಿಶೇಷ ಅನುದಾನ 1,493 ಕೋಟಿ ರು. ಬೆಂಗಳೂರಿನ ಪೆರಿಫೆರಲ್ ರಸ್ತೆ ಹಾಗೂ ಕೆರೆಗಳ ಅಭಿವೃದ್ಧಿಗೆ ತಲಾ 3 ಸಾವಿರ ಕೋಟಿ ರು.ಗಳಂತೆ ಒಟ್ಟು 11,495 ಕೋಟಿ ರು. ಗಳಲ್ಲಿ ಕೇಂದ್ರದಿಂದ ಒಂದು ರುಪಾಯಿಯೂ ಬರಲಿಲ್ಲ. ಇದು ಅನ್ಯಾಯವಲ್ಲವೇ? ಎಂದು ಪ್ರಶ್ನಿಸಿದರು.

ಒತ್ತಡಕ್ಕೆ ಮಣಿಯಲ್ಲ, ಹಿಂದೆ ಸರಿಯಲ್ಲ



ದಾವಣಗೆರೆ: ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಟಿಕೆಟ್ ಸಿಗದೇ ಮನನೊಂದು ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಾನು ನಾಮಪತ್ರ ಸಲ್ಲಿಸಿದ್ದು, ಯಾವುದೇ ಒತ್ತಡ, ಆಸೆಆಮಿಷಗಳಿಗೆ ಮಣಿದು, ಸ್ಪರ್ಧೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಕಾಂಗ್ರೆಸ್ ವಿರುದ್ಧ ಬಂಡಾಯ ಎದ್ದಿರುವ ಸ್ವತಂತ್ರ ಅಭ್ಯರ್ಥಿ ಸಾಧಿಕ್ ಪೈಲ್ವಾನ್ ಸ್ಪಷ್ಟಪಡಿಸಿದರು.

ಮಾಧ್ಯಮವೊಂದರಲ್ಲಿ ಬಂಡಾಯ ಅಭ್ಯರ್ಥಿ ಸಾಧಿಕ್ ಪೈಲ್ವಾನ್ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಸ್ಪರ್ಧಾಕಣದಿಂದ ಹಿಂದೆ ಸರಿದು, ಯು ಟರ್ನ್ ಹೊಡೆದಿದ್ದು ಚುನಾವಣಾ ಕಣದಿಂದ ಹೊರ ಹೋಗಲಿದ್ದಾರೆ ಎಂದು ಸುದ್ದಿ ಪ್ರಸಾರವಾದ ಹಿನ್ನೆಲೆಯಲ್ಲಿ ಬುಧವಾರ ದಾವಣಗೆರೆಯಲ್ಲಿ ಮಾಧ್ಯಮಕ್ಕೆ ಸ್ಪಷ್ಟನೆ ನೀಡಿದ ಅವರು ಸುಳ್ಳು ಸುದ್ದಿ ಪ್ರಸಾರವಾಗುತ್ತಿದ್ದು, ಸ್ಪರ್ಧೆಯಿಂದ ಹಿಂದೆ ಸರಿಯಲು ಹಲವು ನಾಯಕರು ಒತ್ತಾಯಿಸಲು ಹಾಗೂ ಮನವೊಲಿಸಲು ಸಂಪರ್ಕಿಸಿದ್ದು, ನಾನು ಯಾವುದೇ ಕಾರಣದಿಂದ ಹಿಂದೆ ಸರಿಯುವುದಿಲ್ಲ ಎಂದು ಸ್ಪಷ್ಟ ನಿರ್ಧಾರ ತಿಳಿಸಿದ್ದೇನೆ ಎಂದು ತಿಳಿಸಿದರು. ನನ್ನನ್ನು ಮನವೊಲಿಸುವ ಬದಲು ಅಲ್ಪಸಂಖ್ಯಾತ, ಅಹಿಂದ ಸಮುದಾಯ ಮನವೊಲಿಸಿ ಅವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ. ನೂರಕ್ಕೆ ನೂರು ನಾನು ಸ್ಪರ್ಧೆಯಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಬೀದರ್ ಡಿಸಿಗೆ ಹೊರಟ್ಟಿ ಸಮನ್ಸ್

ವಿಧಾನ ಪರಿಷತ್: ವಿಧಾನ ಪರಿಷತ್ ಸದಸ್ಯರಾಗಿ ನಾಲ್ಕೂವರೆ ವರ್ಷ ಕಳೆದರೂ ಕಾಂಗ್ರೆಸ್ ಸದಸ್ಯ ಭೀಮ ರಾವ್ ಪಾಟೀಲ್ ಅವರಿಗೆ ಬೀದರ್ ಜಿಲ್ಲಾಧಿಕಾರಿ ಕಚೇರಿ ನೀಡಿಲ್ಲ ಎಂದು ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ಸದನದಲ್ಲಿ ಆಕ್ಷೇಪಿಸಿದರು. ಇತ್ತೀಚೆಗೆ ದಿನಗಳಲ್ಲಿ ಪರಿಷತ್ ಸದಸ್ಯರಿಗೆ ಅವಮಾನ ಆಗುತ್ತಿದೆ. ಭೀಮರಾವ್ ಅವರು ಶಾಸಕರಾಗಿ ನಾಲ್ಕೂವರೆ ವರ್ಷವಾದರೂ ಬೀದರ್ ಜಿಲ್ಲಾಧಿಕಾರಿಗಳ ಕಚೇರಿ ನೀಡಿಲ್ಲ. ಹಕ್ಕು ಭಾಧ್ಯತಾ ಸಮಿತಿಯಿಂದ ಶಿಫಾರಸು ಮಾಡಿದರೂ ಈ ಬಗ್ಗೆ ಜಿಲ್ಲಾಧಿಕಾರಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ಆರೋಪಿಸಿದರು. ಸಭಾಪತಿ ಕಚೇರಿಯಿಂದ 2023ರಲ್ಲಿ ಪತ್ರ ಬರೆದು ಭೀಮರಾವ್ ಪಾಟೀಲ್ ಗೆ ಕಚೇರಿ ನೀಡುವಂತೆ ತಿಳಿಸಲಾಗಿದೆ. ಅಲ್ಲದೇ ಬೀದರ್‌ನಲ್ಲಿ ನಡೆದ ಹಕ್ಕು ಭಾಧ್ಯತಾ ಸಮಿತಿ ಸಭೆ ಸೇರಿ ಪಾಟೀಲ್‌ಗೆ ಕಚೇರಿ ನೀಡುವಂತೆ ಸೂಚನೆ ನೀಡಿತ್ತು. ಆದರೂ ಭೀಮ ರಾವ್‌ಪಾಟೀಲ್‌ಗೆ ಈವರೆಗೆ ಕಚೇರಿ ಒದ ಗಿಸಿಲ್ಲ. ಕೂಡಲೇ ಜಿಲ್ಲಾಧಿ ಕಾರಿಗೆ ಸಮನ್ಸ್ ನೀಡಿ ಸದನಕ್ಕೆ ಕರೆಸಿ ಛೀಮಾರಿ ಹಾಕಿ ಶಿಕ್ಷೆ ನೀಡಬೇಕು ಎಂದರು. ಈ ವೇಳೆ ಸಭಾಪತಿ ಬಸವರಾಜ್ ಹೊರಟ್ಟಿ ಅವರು, ಬೀದರ್ ಜಿಲ್ಲಾ ಧಿಕಾರಿಗಳು ಗುರುವಾರ ತಮ್ಮ ಕಚೇರಿಯಲ್ಲಿ ಖುದ್ದು ಹಾಜರಿರಬೇಕು ಎಂದು ಆದೇಶಿಸಿದರು.

271 ಪ್ರಶ್ನೆಗಳಿಗೆ ಉತ್ತರವೇ ಇಲ್ಲ!

ವಿಧಾನ ಪರಿಷತ್: ಅಧಿವೇಶನ ಆರಂಭದ ದಿನ ದಿಂದ ಮಾ.24ರವರೆಗೆ 271 ಪ್ರಶ್ನೆಗಳಿಗೆ ಸರಕಾರದಿಂದ ಉತ್ತರ ಬಂದಿಲ್ಲ ಎಂದು ಅಧಿ ಕಾರಿಗಳ ಕಾರ್ಯವೈಖರಿಗೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು. ನಗರಾ ಭಿವೃದ್ಧಿ ನಗರ ಇಲಾಖೆ ಒಂದರಲ್ಲೇ 41 ಪ್ರಶ್ನೆಗಳಿಗೆ ಇಲಾಖೆ ಅಧಿಕಾರಿಗಳು ಉತ್ತರ ನೀಡಿಲ್ಲ. ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಲ್ಲಿ 30 ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಬೃಹತ್ ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ 28 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ. ಮುಖ್ಯಮಂತ್ರಿ ಅವರು ನಿಭಾಯಿಸುತ್ತಿರುವ ಇಲಾಖೆಗಳಿಂದ ಒಟ್ಟು 11 ಪ್ರಶ್ನೆಗಳಿಗೆ ನಿರುತ್ತರ. ಒಟ್ಟು 21 ಇಲಾಖೆಗಳಿಂದ 271 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ ಎಂದು ಆರೋಪಿಸಿದರು.

ಮೊದಲ ಬಾರಿಗೆ ಟಿಕೆಟ್ ಸಿಗಲಿಲ್ಲ

ವಿಧಾನಸಭೆ: ರಾಜಕೀಯ ಪಯಣದ ಬಗ್ಗೆ ಮಾತನಾಡಿದ ಸಿದ್ದರಾಮಯ್ಯ ಅವರು, 1983ರಲ್ಲಿ ಜನತಾದಳ ಮತ್ತು ಕರ್ಪೂರದಳ ಮೈತ್ರಿಯಾದವು. ನನಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಸಿಗ ಲಿಲ್ಲ. ಟಿಕೆಟ್ ಸಿಗದ ಕಾರಣಕ್ಕಾಗಿ ಸಲ್ಲಿಸಿದ ನಾಮ ಪತ್ರ ಹಿಂಪಡೆಯಲು ನನ್ನದೇ ಸ್ಕೂಟರ್‌ನಲ್ಲಿ ಹೋಗುತ್ತಿದೆ. ಅರ್ಧ ದಾರಿಯಲ್ಲಿ ಅದನ್ನು ನಿಲ್ಲಿಸಿ, ಕೆಟ್ಟು ಹೋಗಿದೆ ಎಂದು ಹೇಳಿದರು. ಮೂರು ಗಂಟೆಯವರೆಗೂ ಅದು ಮತ್ತೆ ಸ್ಟಾರ್ಟ್ ಆಗ್ಲಿಲ್ಲ. ನಾಮಪತ್ರ ಹಿಂಪಡೆಯುವ ಅವಧಿ 3 ಗಂಟೆಗೆ ಮುಕ್ತಾಯವಾಯಿತು. ಸ್ಕೂಟರ್ ಇದ್ದಕ್ಕಿದ್ದಂತೆ ಸ್ಟಾರ್ಟ್ ಆಯ್ತು. ಆದರೆ ಚುನಾವಣಾಧಿಕಾರಿ ಸಮಯ ಮೀರಿದ್ದರಿಂದ ನಾಮಪತ್ರ ಇಲ್ಲ. ಅನಿವಾರ್ಯವಾಗಿ ನಾನು ತಕ್ಕಡಿ ಗುರುತಿ ನೊಂದಿಗೆ ಪಕ್ಷೇತರನಾಗಿ ಸ್ಪರ್ಧಿಸ ಬೇಕಾಯಿತು. ಮೈತ್ರಿ ಪಕ್ಷದಿಂದ ನಿಂತಿದ್ದ ಜನತಾದಳದ ತಮ್ಮಯ್ಯ ಠೇವಣಿ ಕಳೆದುಕೊಂಡರು. ನಾನು ಮೂರು ಸಾವಿರ ಮತಗಳ ಅಂತರದಿಂದ ಗೆದ್ದಿದ್ದೆ ಎಂದರು.

ಕೇಂದ್ರಕ್ಕಿಂತ ಆರ್ಥಿಕ ಬೆಳವಣಿಗೆಯಲ್ಲಿ ಕರ್ನಾಟಕ ಮುಂದಿದೆ
ಅಭಿವೃದ್ಧಿ ಯೋಜನೆಗಳಿಗೆ ಸಾಲ ಮಾಡುವುದು ತಪ್ಪಲ್ಲ: ಸಿಎಂ

ರಾಜ್ಯದ್ದು ತುಂಬಿದ ಬಜೆಟ್ ಕೇಂದ್ರದ್ದು ಖಾಲಿ ಚೊಂಬು

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯದ ಬಜೆಟ್ ತುಂಬಿದ ಕೊಡವೇ ಹೊರತು, ಕೇಂದ್ರ ಸರಕಾರದ ಬಜೆಟ್‌ನಂತೆ ಖಾಲಿ ಚೊಂಬಾಗಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ ಬಜೆಟ್ ಸಮರ್ಥಿಸಿಕೊಂಡರು.

2026-27ನೇ ಸಾಲಿನ ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು, ತಾವು ಮಂಡಿಸಿ ರುವ 17ನೇ ಬಜೆಟ್ ಅನ್ನು ಸಮರ್ಥಿಸಿಕೊಳ್ಳುವ ಜತೆಜತೆಗೆ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಬಜೆಟ್ ಮೇಲಿನ ಸುದೀರ್ಘ ಉತ್ತರ ದಲ್ಲಿ ತಮ್ಮ ರಾಜಕೀಯ ಜೀವನ, ನಾಯಕತ್ವ ಬದಲಾವಣೆ, ಸೈದ್ಧಾಂತಿಕ ನಿಲುವು ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿದರು.

ಪ್ರತಿಪಕ್ಷದವರು ಬಜೆಟನ್ನು ಟೀಕಿಸುವಾಗ ಖಾಲಿ ಚೊಂಬು ಎಂದು ಹೇಳಿದ್ದಾರೆ. ಆದರೆ ನಾನು ಮಂಡಿಸಿರುವ 17ನೇ ಬಜೆಟ್ ಕರ್ನಾಟಕಕ್ಕೆ ಖಾಲಿ ಚೊಂಬಲ್ಲ, ಭರ್ತಿ ಚೊಂಬು ಎಂದು ತಿವಿದರು. ಈ ವೇಳೆ ಆಡಳಿತ ಪಕ್ಷದ ಶಾಸಕರು ಮೇಜು ಕುಟ್ಟಿ ಸ್ವಾಗತಿಸಿದರು. ಕೇಂದ್ರದ ಬಜೆಟ್ ಬಗ್ಗೆ ಮಾತನಾಡುವಾಗ ನಾನು ಕರ್ನಾಟಕಕ್ಕೆ ಖಾಲಿ ಚೊಂಬು ಕೊಟ್ಟಿದ್ದಾರೆ ಎಂದು ಟೀಕಿಸಿದ್ದೆ. ಅದಕ್ಕೆ ಪ್ರತಿಯಾಗಿ ಬಿಜೆಪಿಯವರು ರಾಜ್ಯದ ಬಜೆಟ್ ಬಗ್ಗೆ ಖಾಲಿ ಚೆಂಬು ಎಂದಿದ್ದಾರೆಂದು ಟೀಕಿಸಿದರು.

ಪ್ರತಿಪಕ್ಷದವರು ಬಜೆಟನ್ನು ಟೀಕೆ ಮಾಡಿದ ಮಾತ್ರಕ್ಕೆ ಮಾವಿನ ಹಣ್ಣು ಬೇವಿನ ಹಣ್ಣಾಗಲು ಸಾಧ್ಯವಿಲ್ಲ. ಬೇವಿನ ಹಣ್ಣು ಮಾವಿನ ಹಣ್ಣಾಗಲು ಸಾಧ್ಯವಿಲ್ಲ. ಹಾಗೆ ಟೀಕೆ ಮಾಡಿದ ಮಾತ್ರಕ್ಕೆ ಬಜೆಟ್‌ನ ಗಂಭೀರತೆಯೂ ಹಾಳಾಗುವುದಿಲ್ಲ. ನಾಡಿನ ಜನರು ಬುದ್ಧಿವಂತರು. ಮಾವಿನ ಹಣ್ಣನ್ನು ಮಾವಿನ ಹಣ್ಣೆಂದೇ ಭಾವಿಸುತ್ತಾರೆ ಎಂದರು. ಪ್ರತಿಪಕ್ಷದ ನಾಯಕ ಆರ್.ಅಶೋಕ ಮಧ್ಯ ಪ್ರವೇಶಿಸಿ, ಮಾವಿನ ಹಣ್ಣಿನಲ್ಲಿ ಹುಳಿ ಬಂದಿದೆ ಎಂದು ಹೇಳಿದ್ದೆ ಎಂದಾಗ, ಸಿದ್ದರಾಮಯ್ಯ ಹುಳಿ ಬಂದಿದೆ ಎಂದು ಹೇಳಿಲ್ಲ. ಸಾಲವನ್ನು ಹೇಳಿ ದ್ದೀರಾ? ಕ್ರೆಡಿಟ್ ಕಾರ್ಡ್ ಬಜೆಟ್ ಎಂದು ಟೀಕಿಸಿ ದ್ದಾರೆ ಎಂದು ಅಕ್ಷೇಪವ್ಯಕ್ತಪಡಿಸಿದರು.

ಬಜೆಟ್ ಮೇಲಿನ ಚರ್ಚೆಯ ವೇಳೆ ಕೆಲವರು ಟೀಕಿಸಿದ್ದಾರೆ. ಕೆಲವರು ಸ್ವಾಗತಿಸಿದ್ದಾರೆ, ಇನ್ನು ಕೆಲವರು ವಿಮರ್ಶೆ ಮಾಡಿದ್ದಾರೆ. ಅವರೆಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ. ಪ್ರತಿಪಕ್ಷದ ನಾಯಕರು ಮಾಧ್ಯಮಗಳಿಗೆ ಆಕರ್ಷಕವಾಗಿ ಹೆಡ್‌ಲೈನ್ ಆಗುವಂತೆ ಅನೇಕ ಪದಪುಂಜಗಳನ್ನು ಬಳಸಿ ಟೀಕಿಸಿದ್ದಾರೆ. 182 ಪುಟಗಳ ಮುಂಗಡಪತ್ರಕ್ಕೆ ಸರಿಸಮಾನವಾಗಿ ಪ್ರತಿಪಕ್ಷ ನಾಯಕರು 3 ಗಂಟೆ 6 ನಿಮಿಷ ಬಜೆಟ್ ಮೇಲೆ ಮಾತನಾಡಿದ್ದಾರೆ. ವಿಪಕ್ಷ ನಾಯಕರು ಬಜೆಟ್ ಬಗ್ಗೆ ಆಳವಾದ ಅಧ್ಯಯನ ಮಾಡಿಲ್ಲ. ಒಂದು ವೇಳೆ ಮಾಡಿದ್ದರೆ ಬಜೆಟ್‌ನ ತಿರುಳು ಗೊತ್ತಾಗುತ್ತದೆ. ರಾಜ್ಯ ಮತ್ತು ದೇಶದ ರಾಜಕೀಯವು ಆರ್ಥಿಕತೆ ಇಲ್ಲದೇ ಇಲ್ಲ. ಬಜೆಟ್ ಮೇಲೆ ಮಾತನಾಡಿರುವವರು ಒಳ್ಳೆಯ ಸಂಸ ದೀಯಪಟು ಆಗುತ್ತಾರೆ. ಬಜೆಟ್ ಮೇಲೆ ಪತ್ರಿಕೆ ಗಳು, ವಿವಿ ಕ್ಷೇತ್ರಗಳ ತಜ್ಞರು, ಉದ್ಯಮಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಶ್ಲಾಘಿಸಿದ್ದಾರೆ. ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಅಭಿವೃದ್ಧಿಯಲ್ಲಿ ಕೇಂದ್ರಕ್ಕಿಂತ ರಾಜ್ಯ ಮುಂದು

2026-27ನೇ ಸಾಲಿನ ಮುಂಗಡಪತ್ರವು 4,48,04 ಕೋಟಿ ರು.ಗಾತ್ರದ ಬಜೆಟ್ ಆಗಿದೆ. 2025-26ನೇ ಸಾಲಿನಲ್ಲಿ 4,09,549 ಕೋಟಿ ರು. ಆಗಿತ್ತು. 38,455 ಕೋಟಿ ರು. ಬಜೆಟ್ ಗಾತ್ರದಲ್ಲಿ ಹೆಚ್ಚಳವಾಗಿದೆ. ಶೇ.9.4ರಷ್ಟು ಬೆಳವಣಿಗೆಯಾಗಿದೆ. ಆರ್ಥಿಕವಾಗಿ ಮುಗ್ಗಟ್ಟು ಇದ್ದರೆ ಈ ಬೆಳವಣಿಗೆ ಆಗುತ್ತಿರಲಿಲ್ಲ. ಆದರೆ ಕೇಂದ್ರ ಸರಕಾರದ ಗಾತ್ರ ಶೇ.5.6ರಷ್ಟಿದೆ. 2025-26ನೇ ಸಾಲಿನಲ್ಲಿ ಕೇಂದ್ರದ ಬಜೆಟ್ 50.65 ಲಕ್ಷ ಕೋಟಿ ರು. ಆಗಿತ್ತು. ಪ್ರಸಕ್ತ ಸಾಲಿನಲ್ಲಿ 53.47 ಲಕ್ಷ ಕೋಟಿ ರೂ.ನಷ್ಟಾಗಿದೆ ಎಂದು ಅಂಕಿ ಅಂಶಗಳ ಸಹಿತ ವಿವರಿಸಿದರು. ಕರ್ನಾಟಕದ ಜಿಎಸ್‌ಡಿಪಿ 2026-27ನೇ ಸಾಲಿಗೆ 33,05,500 ಕೋಟಿ ರು. ಗಳಾಗಿವೆ. ಇದರ ಬೆಳವಣಿಗೆ ದರ ಶೇ.8.1ರಷ್ಟಿದೆ. ಆದರೆ ಭಾರತ ಸರಕಾರದ ಜಿಎಸ್‌ಡಿಪಿ ದರ ಶೇ.7.4ರಷ್ಟಿದೆ. ಕರ್ನಾಟಕ ಸರಕಾರದ ಬೆಳವಣಿಗೆ ದರ ಭಾರತ ಸರಕಾರಕ್ಕಿಂತ ಹೆಚ್ಚಿದೆ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ವಿತ್ತೀಯ ಕೊರತೆಯು ಶೇ.3ರೊಳಗಿರಬೇಕು. ಒಟ್ಟು ಸಾಲವು ಶೇ.25ರ ಜಿಡಿಪಿ ಮೀರಬಾರದು ಎಂಬ ಆರ್ಥಿಕ ಶಿಸ್ತಿನ ಮಾನದಂಡಗಳನ್ನು ರಾಜ್ಯ ಸರಕಾರ ಪಾಲಿಸಿದೆ. ವಿತ್ತೀಯ ಕೊರತೆ ಶೇ.2.95 ರೊಳಗಿದ್ದು, ಸಾಲದ ಪ್ರಮಾಣ ಜಿಡಿಪಿಯ ಶೇ.24.94ರಷ್ಟಿದೆ. ಬಜೆಟ್‌ನಲ್ಲಿ ವಾಸ್ತವ ತಿಳಿಸಲಾ ಗಿದೆಯೇ ಹೊರತು. ಯಾರನ್ನೂ ದಾರಿ ತಪ್ಪಿಸು ತ್ತಿಲ್ಲ. ಆಯವ್ಯಯವು ಆರ್ಥಿಕ ಹೊಣೆಗಾರಿಕೆಯ ಮಾನದಂಡಗಳನ್ನು ಪಾಲಿಸಿದೆ. ಜನರಿಗೆ ಸಾಮಾ ಜಿಕ ನ್ಯಾಯ ನೀಡಿ, ಆರ್ಥಿಕ ಶಕ್ತಿ ತುಂಬುವುದು ಮುಖ್ಯ. ಮಹಿಳೆಯರು, ರೈತರು, ಕಾರ್ಮಿಕರು, ಹಿಂದುಳಿದವರಿಗೆ, ದೀನದಲಿತರಿಗೆ ಶಕ್ತಿ ತುಂಬು ವುದು ಮುಖ್ಯ ಎಂದು ಸಿಎಂ ಪ್ರತಿಪಾದಿಸಿದರು.

ಕೇಂದ್ರ ಸರಕಾರ ತೆರಿಗೆ ಪಾಲು ಕೊಡಬೇಕು

ಕೇಂದ್ರ ಸರಕಾರ ಒಟ್ಟು ತೆರಿಗೆ ಪಾಲಿನಲ್ಲಿ ಶೇ.50 ರಷ್ಟು ತೆರಿಗೆಯ ಪಾಲನ್ನು ರಾಜ್ಯಕ್ಕೆ ಕೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿ ಸಿದರು. ವಿವಿಧ ತೆರಿಗೆಗಳಿಂದ ನಮ್ಮ ರಾಜ್ಯದಿಂದ 4.50 ಲಕ್ಷ ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹ ವಾಗುತ್ತದೆ. ಅದರಲ್ಲಿ 14 ರಿಂದ 15 ಪೈಸೆಯಷ್ಟು ಮಾತ್ರ ನಮಗೆ ವಾಪಸು ಕೊಡುತ್ತದೆ. ಸೆಸ್, ಸರ್ ಚಾರ್ಜ್‌ಗಳ ಯಾವ ಪಾಲನ್ನೂ ರಾಜ್ಯಗಳಿಗೆ ಕೊಡುವುದಿಲ್ಲ ಎಂದು ಆರೋಪಿಸಿದರು. ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದ್ದು, ಕರ್ನಾಟಕ ಎರಡನೇ ಸ್ಥಾನ ದಲ್ಲಿದೆ. ಮಹಾರಾಷ್ಟ್ರ ದೊಡ್ಡ ರಾಜ್ಯವಾಗಿದ್ದು, 13 ಕೋಟಿ ಜನಸಂಖ್ಯೆ ಹೊಂದಿದ್ದರೆ ಕರ್ನಾಟಕ 7 ಕೋಟಿ ಜನಸಂಖ್ಯೆ ಹೊಂದಿದೆ. ದೊಡ್ಡ ರಾಜ್ಯ ವಾದ ಉ.ಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್ ರಾಜ್ಯಗಳಲ್ಲಿ ಈ ಪ್ರಮಾಣದ ಜಿಎಸ್‌ಟಿ ಸಂಗ್ರಹವಾಗಿಲ್ಲ ಎಂದರು. ರಾಜ್ಯದಲ್ಲಿ 8,24,359 ಕೋಟಿ ರು. ಸಾಲ ಮಾಡಿದ್ದೇವೆ. ಆದರೆ ಕೇಂದ್ರ ಸರಕಾರ 2014 ರಲ್ಲಿ 53.11 ಲಕ್ಷ ಕೋಟಿ ರು.ಗಳಿದ್ದ ಸಾಲದ ಪ್ರಮಾಣ 2026-27ರಲ್ಲಿ 218 ಲಕ್ಷ ಕೋಟಿ ರು. ಗೆ ಹೆಚ್ಚು ಸಾಲ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ನಂತರ 165 ಲಕ್ಷ ಕೋಟಿ ರು. ಸಾಲ ಮಾಡಿದೆ. ಅವರು ಸಾಲಗಾರ ರಲ್ಲವೇ? ಎಂದು ಪ್ರಶ್ನಿಸಿದರು. ಕೇಂದ್ರ ಸರಕಾರ ಈ ವರ್ಷ 16,96,000 ಕೋಟಿ ರು. ಸಾಲ ಮಾಡಿದ್ದರೆ ನಾವು 1.32 ಲಕ್ಷ ಕೋಟಿ ರು.ಸಾಲ ಮಾಡಿದ್ದೇವೆ. 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಶೇ.1.1 ರಷ್ಟು ಕಡಿಮೆಯಾಯಿತು. ವಿಶೇಷ ಅನುದಾನ 1,493 ಕೋಟಿ ರು. ಬೆಂಗಳೂರಿನ ಪೆರಿಫೆರಲ್ ರಸ್ತೆ ಹಾಗೂ ಕೆರೆಗಳ ಅಭಿವೃದ್ಧಿಗೆ ತಲಾ 3 ಸಾವಿರ ಕೋಟಿ ರು.ಗಳಂತೆ ಒಟ್ಟು 11,495 ಕೋಟಿ ರು. ಗಳಲ್ಲಿ ಕೇಂದ್ರದಿಂದ ಒಂದು ರುಪಾಯಿಯೂ ಬರಲಿಲ್ಲ. ಇದು ಅನ್ಯಾಯವಲ್ಲವೇ?, ನಮ್ಮ ತೆರಿಗೆ, ನಮ್ಮ ಹಕ್ಕು ಇದಕ್ಕಾಗಿ ನಾವು ದೆಹಲಿಯಲ್ಲಿ ಪ್ರತಿಭಟನೆ ಮಾಡಿದ್ದೆವು ಎಂದು ಸಮರ್ಥಿಸಿಕೊಂಡರು. ಆಗ ಬಿಜೆಪಿಯ ಶಾಸಕ ಸಿ.ಎನ್.ಅಶ್ವತ್ಥನಾರಾಯಣ, 100 ಲಕ್ಷ ಕೋಟಿ ರು. ಸಾಲ ಮರುಪಾವತಿಸಲಾ ಗಿದೆ. 200 ಲಕ್ಷ ಕೋಟಿ ರು.ನಷ್ಟು ಆಸ್ತಿ ಸೃಷ್ಟಿಸ ಲಾಗಿದೆ ಎಂದು ಸಮರ್ಥಿಸಿಕೊಂಡರು. ಅದಕ್ಕೆ ಆಡಳಿತ ಪಕ್ಷದವರು ವಿರೋಧ ವ್ಯಕ್ತಪಡಿಸಿದರು.

> ನ್ಯಾಯಯುತ ಪಾಲನ್ನು ಕೇಳುವುದು ನಮ್ಮ ಹಕ್ಕನ್ನು ರಕ್ಷಣೆ ಮಾಡಿಕೊಳ್ಳಬೇಕಿದೆ. ಆದರೆ 16ನೇ ಹಣಕಾಸು ಆಯೋಗದಲ್ಲಿ ಶೇ.13 ರಷ್ಟು ಅನುದಾನ ಹೆಚ್ಚಾಗಿದೆ. ಇದು ಸಮಾನ ತಂದಿದ್ದರೂ ನಾವು ಕೇಳಿದಷ್ಟು ಕೊಟ್ಟಿಲ್ಲ. ಇದಕ್ಕಾಗಿ ಪ್ರತಿಭಟನೆ, ಹೋರಾಟ ಮುಂದುವರಿಸ ಬೇಕಲ್ಲವೇ? ಎಂದು ಬಿಜೆಪಿಯವರನ್ನು ಪ್ರಶ್ನಿಸಿ ದರು. ಅಲ್ಲದೆ ಅಧಿವೇಶನ ಮುಗಿದ ಬಳಿಕ ನೀವು, ನಾವು, ಜೆಡಿಎಸ್‌ನವರು ಎಲ್ಲರೂ ಒಟ್ಟಾಗಿ ದೆಹಲಿಗೆ ಹೋಗಿ ಕೇಂದ್ರಕ್ಕೆ ಆಗ್ರಹಿಸೋಣ.
>
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

> ತೆರಿಗೆ ಪಾಲಿನಲ್ಲಿ ಶೇ.40 ರಷ್ಟು ನೀವು ಕೇಳಿದ್ದೀರಿ. ಆದರೆ ಪ್ರಧಾನಿ ನರೇಂದ್ರ ಮೋದಿಯವರು ಅದನ್ನು ಶೇ.41ಕ್ಕೆ ಹೆಚ್ಚಿಸಿದ್ದಾರೆ. ನೀವು ಧನ್ಯವಾದ ಹೇಳಿಲ್ಲ. ಧನ್ಯವಾದ ಹೇಳಲು ಹೋಗುವುದಾದರೆ ನಾನು ದೆಹಲಿಗೆ ಬರುತ್ತೇನೆ. ನೀವು ಯಾವ ಪ್ರಧಾನಿಯನ್ನು ಟೀಕಿಸದೆ, ವಿರೋಧಿಸದೇ ಬಿಟ್ಟಿಲ್ಲ. ದೇವೇಗೌಡರು, ಐ.ಕೆ. ಗುಜ್ರಾಲ್ ಸೇರಿದಂತೆ ಎಲ್ಲಾ ಪ್ರಧಾನಿಗಳಿಗೂ ಪತ್ರ ಬರೆದು ಟೀಕಿಸಿದ್ದೀರಿ. ನಿಮ್ಮದು ಟೀಕೆ ಮಾಡುವ ಪಾರ್ಟಿ. ಹೀಗಾಗಿ ಯಾವ ಪ್ರಧಾನಿಗೂ ಬಿಟ್ಟಿಲ್ಲ.
>
> **-ಆರ್.ಅಶೋಕ್**, ಪ್ರತಿಪಕ್ಷ ನಾಯಕ

ಯುಗಾದಿಗೂ ಮಾಂಸ ತಿನ್ನುವೆ: ಸಿದ್ದರಾಮಯ್ಯ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಯುಗಾದಿ, ಶಿವರಾತ್ರಿಯ ಹಬ್ಬದ ದಿನವು ನಾನು ಮಾಂಸ ತಿನ್ನುತ್ತೇನೆ. ಅದರಲ್ಲಿ ತಪ್ಪೇನು, ಎಲ್ಲಾ ದಿನಗಳು ನನಗೆ ಒಂದೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕರ್ಮ ಸಿದ್ಧಾಂತವನ್ನು ನಾವು ನಂಬುವುದಿಲ್ಲ. ರಾಹುಕಾಲ, ಗುಳಿಕಕಾಲ, ಯಮಗಂಡಕಾಲ ಯಾವುದರ ಮೇಲೂ ನಂಬಿಕೆ ಇಲ್ಲ, ದೇವರನ್ನು ನಂಬುತ್ತೇನೆ. ಆದರೆ, ಮೂಢನಂಬಿಕೆಗಳಿಗೆ ಜೋತು ಬೀಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಬಹಳಷ್ಟು ಜನ ತಮ್ಮ ಈಗಿನ ಸ್ಥಿತಿ ಅಥವಾ ದುಸ್ಥಿತಿಗೆ ಹಿಂದಿನ ಜನ್ಮದ ಕರ್ಮ ಎಂದು ನಂಬುತ್ತಾರೆ. ನಾನು ಅದನ್ನು ನಂಬುವುದಿಲ್ಲ. ಮೂಢನಂಬಿಕೆಗಳಿಂದ ದೂರ ಇದ್ದೇನೆ ಎಂದರು. ಈ ವೇಳೆ ಆರ್.ಅಶೋಕ ಅವರು, ಹೇಳುವುದು ಒಂದು ಮಾಡುವುದು ಇನ್ನೊಂದು. ರಾಹುಕಾಲ ಕಳೆದ ಬಳಿಕ ಈ ಬಾರಿಯ ಬಜೆಟ್ ಮಂಡಿಸಿದ್ದೀರಾ. ಅಂಬೇಡ್ಕರ್, ಬಸವಣ್ಣ ಸೇರಿದಂತೆ ಹಲವಾರು ಸಿದ್ಧಾಂತಗಳನ್ನು ಹೇಳುತ್ತೀರಾ ಆದರೆ ನಿಮ್ಮ ಸಿದ್ಧಾಂತ ಯಾವುದು ಎಂದರು.

ನಾನು ಈ ಹಿಂದೆ ರಾಹುಕಾಲದಲ್ಲೂ ಬಜೆಟ್ ಮಂಡಿಸಿದ್ದೇನೆ. ಈ ಬಾರಿ ರಾಹುಕಾಲ ಕಳೆದ ಬಳಿಕ ಬಜೆಟ್ ಮಂಡಿಸಿದ್ದು ನಿಜ. ಅಧಿಕಾರಿಗಳು ಮತ್ತು ಮನೆಯವರು ಹೇಳಿದಂತೆ ಕೇಳಬೇಕಲ್ಲವೇ ಎಂದರು. ಆಗ ಅಶೋಕ ಅವರು ಈ ಹಿಂದೆ ರಾಹುಕಾಲದಲ್ಲಿ ಬಜೆಟ್ ಮಂಡಿಸಿದ ಸಂದರ್ಭವೇ ಬೇರೆ. ಈಗ ಮುಂದಿನ ಬಗ್ಗೆ ಬಜೆಟ್ ಅನ್ನು ನೀವು ಮಂಡಿಸುತ್ತೀರೋ ಇಲ್ಲವೋ ಎಂಬ ಗೊಂದಲದ ವಾತಾವರಣ ಇದೆ. ಅದಕ್ಕಾಗಿ ಕಾಲ ನೋಡಿ ಬಜೆಟ್ ಮಂಡಿಸಿ. ಮುಂದಿನ ಬಜೆಟ್ ಪೀಠಿಕೆ ಹಾಕಿಕೊಂಡಿದ್ದೀರಾ ಎಂದರು. ಆಗ ಸಿದ್ದರಾಮಯ್ಯ ಅವರು ನನಗೆ ಯಾವ ಕಾಲದ ಮೇಲು ನಂಬಿಕೆ ಇಲ್ಲ. ಹಬ್ಬದ ದಿನವೂ ಕೂಡ ಮಾಂಸ ತಿನ್ನುತ್ತೇನೆ ಎಲ್ಲವೂ ಅವರ ಅವರ ನಂಬಿಕೆ ಎಂದರು.

ಶಾಲಿನ ಕಥೆ: ಇನ್ನು ಸುದೀರ್ಘ ಉತ್ತರ ವೇಳೆ ಸಿದ್ದರಾಮಯ್ಯ ಅವರು ಶಾಲು ಹಾಕಲು ಶುರು ಮಾಡಿದ್ದ ಸ್ವಾರಸ್ಯಕರ ಚರ್ಚೆಯೂ ನಡೆಯಿತು. ಮಾತನಾಡುವಾಗ, ಮುಖ್ಯಮಂತ್ರಿ ಅವರ ಮಾತು ಶಾಲಿನ ಮೇಲೆ ಹೊರಳಿತು. ನಿನಗೆ ಶಾಲು ಧರಿಸುವುದರ ಮೇಲೆ ನಂಬಿಕೆಯಿದೆ. ನಾನು ಮೊದಲು ಟವಲ್ ಹಾಕುತಿದ್ದೆ. ಅದು ಪದೆಪದೇ ಬಿದ್ದು ಹೋಗುತ್ತಿತ್ತು. ಸ್ವಲ್ಪ ತುಂಡ ಇತ್ತು. ಅದಕ್ಕಾಗಿ ಈಗ ರೇಷ್ಮೆ ಹಾಕುತ್ತಿದ್ದೇನೆ. ಇದು ಸ್ವಲ್ಪ ದುಬಾರಿ ಎಂದರು. ಪಕ್ಕದಲ್ಲಿ ಇದೆ ಡಿ.ಕೆ.ಶಿವಕುಮಾರ್ 13,500 ರು. ಬೆಲೆ ಎಂದು ನೆನಪಿಸಿದರು. ನನ್ನದು ಮೈಸೂರು ರೇಷ್ಮೆ. ಡಿ.ಕೆ.ಶಿವಕುಮಾರ್ ಅವರ ಶಲ್ಯ ಉಲ್ಲನ್. ಜಗತ್ತಿನಲ್ಲಿ ಸಿಗುವ ಎಲ್ಲಾ ವಸ್ತುಗಳು ಈಗ ಬೆಂಗಳೂರು ಮೈಸೂರಿನಲ್ಲಿ ಲಭ್ಯವಾಗುತ್ತಿದೆ ಎಂದು ಸಿದ್ದ ರಾಮಯ್ಯ ಹೇಳಿದರು. ಈ ವೇಳೆ ಬಿಜೆಪಿ ಸುನಿಲ್ ಕುಮಾರ್ ನೀವು ಶಾಲು ಹಾಕಿ ಸಿಎಂ ಆಗಿದ್ದೀರಾ ಎಂಬ ಕಾರಣಕ್ಕೆ ಡಿ.ಕೆ.ಶಿವಕುಮಾರ್ ಕೂಡ ಶಾಲು ಹಾಕುತ್ತಿದ್ದಾರೆ ಎಂದರು.

> ಬಸವಣ್ಣನವರ ವಚನಗಳನ್ನು ಪಾಲಿಸಿದರೆ ಅರವಿಂದ್ ಬೆಲ್ಲದ್ , ಬಿಜೆಪಿಯಲ್ಲಿ ಇರುತ್ತಿರಲಿಲ್ಲ.
>
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

> ಮುಜರಾಯಿ ಇಲಾಖೆಯ ವತಿಯಿಂದ ಅನುದಾನ ನೀಡುತ್ತಿಲ್ಲ. ಮುಸ್ಲಿಮರು ಮಸೀದಿ ಕಟ್ಟಿಕೊಳ್ಳುತ್ತಾರೆ ನಾವೇನು ಮಾಡೋಣ ಬಡವರು ಎಂಬಂತೆ ನಾವು ಹೇಳಿಕೊಳ್ಳಬೇಕಾಗಿದೆ.
>
> **-ಅರವಿಂದ ಬೆಲ್ಲದ್,**
> ವಿಧಾನಸಭಾ ಪ್ರತಿಪಕ್ಷ ಉಪನಾಯಕ

ಪ್ರತಿಪಕ್ಷಗಳಿಗೆ ನೀರು ಕುಡಿಸಿದ ಸಿದ್ದು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಗ್ಗೆ ಉತ್ತರ ನೀಡುವಾಗ ಅಂಕಿ ಅಂಶಗಳು ಹಾಗೂ ಅಭಿವೃದ್ಧಿ ಯೋಜನೆಗಿಂತಲೂ ಹೆಚ್ಚಾಗಿ ಆರಂಭದಲ್ಲಿ ರಾಜಕೀಯ ವಿಚಾರಗಳನ್ನು ಚರ್ಚೆ ಮಾಡಿ ಸದನದಲ್ಲಿ ಸ್ವಾರಸ್ಯಕರ ಘಟನೆಗೆ ಸಾಕ್ಷಿಯಾಯಿತು. ಅದರಲ್ಲೂ ವಿರೋಧ ಪಕ್ಷಗಳು ಅಧಿಕಾರ ಹಂಚಿಕೆಯ ಸಂಬಂಧ ಪಟ್ಟಂತೆ ಪದೇಪದೇ ಕೆಣಕುತ್ತಿದ್ದವು ಅತಿ ಎಚ್ಚರಿಕೆಯಿಂದ ಉತ್ತರ ನೀಡಿದ ಸಿದ್ದರಾಮಯ್ಯ, ನಾನು ವಿರೋಧಪಕ್ಷಗಳಿಗೆ ರಾಜಕೀಯವಾಗಿ ನೀರು ಕುಡಿಸುತ್ತೇನೆ ಎಂದರು. ಬಜೆಟ್ ಮೇಲೆ ಮಾತನಾಡುವಾಗ ಸಾಲ ಹೆಚ್ಚು ಮಾಡಿಲ್ಲ ಎಂದು ಸಿದ್ದರಾಮಯ್ಯ ಸಮರ್ಥಿಸಿ ಕೊಂಡರು. ಆಗ ಪ್ರತಿಪಕ್ಷದ ನಾಯಕ ಆರ್.ಅಶೋಕ ಮಧ್ಯ ಪ್ರವೇಶಿಸಲು ಯತ್ನಿಸಿದರು. ಈ ರೀತಿ ಅಡ್ಡ ಬಾಯಿ ಹಾಕಿದ್ರೆ ನಾನು ದಾರಿ ತಪ್ಪುತ್ತೇನೆ ಎಂದರು.

ರಾಜಕೀಯ ಹಾದಿ ಮೆಲುಕು ಹಾಕಿದ ಸಿಎಂ

ಬಜೆಟ್‌ನಲ್ಲಿನ ಅಂಕಿ ಅಂಶಗಳ ಗೋಜಿಗಿಂತಲೂ ತಮ್ಮ ವೈಯಕ್ತಿಕ ರಾಜಕೀಯ, ಏರಿಳಿತ ಹಾಗೂ ಬಾಲ್ಯದ ಜೀವನಗಳನ್ನು ಮೆಲುಕು ಹಾಕುವುದರಲ್ಲಿ ಹೆಚ್ಚು ಸಮಯ ಕಳೆದರು. ತಾನು ಬಿಎಸ್‌ಸಿ ಪದವಿ ಮುಗಿಸು ವವರೆಗೂ ಹೊಲ ಉಳುತ್ತಿದ್ದೆ. ಪದವಿಯ ನಂತರ ತಮ್ಮ ತಂದೆ ದನ ಕರುಗಳಿಗೆ ನೀರು ಕುಡಿಸುವ ಜವಾ ಬ್ದಾರಿ ವಹಿಸಿದ್ದರು. ಬಾವಿಯಿಂದ ನೀರು ತರುವಾಗ ಬಿಂದಿಗೆಯನ್ನು ಮೇಲೆ ಕೆಳಗೆ ಮಾಡಿದಾಗ ನೀರಿನ ಮೇಲಿದ್ದ ಕಸ ಕಟ್ಟಿಗಳು ಪಕ್ಕಕ್ಕೆ ತೆರೆದುಕೊಳ್ಳುತ್ತಿದ್ದವು. ದನ ಕರಗಳಿಗೆ ನೀರು ಹಾಕಿ ಮತ್ತೆ ನೀರು ತುಂಬಿ ಕೊಳ್ಳಲು ಬಂದರೆ ಕಸ ಕಡ್ಡಿಗಳು ಮತ್ತೆ ಎಂದಿನಂತೆ ನೀರಿನ ಮೇಲ್ಮೈ ಆವರಿಸಿಕೊಳ್ಳುತ್ತಿದ್ದವು. ಮತ್ತೆ ಅವು ಗಳನ್ನು ಬದಿಗೆ ಸರಿಸಬೇಕಾಗುತ್ತಿತ್ತು. ಸಾಮಾಜಿಕ ಜಾತಿ ಹಾಗೂ ವರ್ಗ ವ್ಯವಸ್ಥೆಗಳು ನೀರಿನ ಮೇಲಿನ ಕಸದಂತೆ. ದಾರ್ಶನಿಕರು ಬಂದು ಬದಿಗೆ ಸರಿಸಿದರೆ ಸ್ವಲ್ಪ ಕಾಲದ ಬಳಿಕ ಮತ್ತೆ ಆವರಿಸಿಕೊಳ್ಳುತ್ತವೆ ಎಂದು ದೃಶ್ಯದ ಸಹಿತ ವಿವರಿಸುತ್ತಿದ್ದರು. ಈ ಸಂದರ್ಭದಲ್ಲಿ ಆರ್.ಅಶೋಕ ನಿಮ್ಮ ತಂದೆಗೆ ಬಹಳ ದೂರದೃಷ್ಟಿಯಿದ್ದು ನಿಮಗೆ ಆಗಲೇ ನೀರು ಕುಡಿಸುವ ತರಬೇತಿ ಕೊಟ್ಟಿದ್ದಾರೆ ಈಗ ನಮಗೆ ನೀರು ಕುಡಿಸುತ್ತಿದ್ದೀರಾ ಎಂದು ಹೇಳಿದರು.

ನಾನು ನಿನಗೆ ನೀರು ಕುಡಿಸಿ ಇಲ್ವಲ್ಲ ಎಂದು ಸಿದ್ದರಾಮಯ್ಯ ಹೇಳಿದಾಗ, ನಿಮ್ಮ ಪಕ್ಕದಲ್ಲಿದ್ದವರಿಗೆ ಡಿ.ಕೆ ಶಿವಕುಮಾರ್ ಅವರ ಹೆಸರು ಹೇಳದೆ ಅಶೋಕ ಮತ್ತೆ ಹೇಳಿದಾಗ ನಾನು ಯಾರಿಗೂ ನೀರು ಕುಡಿಸು ವುದಿಲ್ಲ ಎಂದ ಸಿದ್ದರಾಮಯ್ಯ ಅವರು, ನಾನು ದನ ಕರುಗಳಿಗೆ ಮಾತ್ರ ನೀರು ಕುಡಿಸುತ್ತಿದ್ದೆ. ಮನುಷ್ಯರಿಗೆ ಅಲ್ಲ. ಆದರೆ ವಿರೋಧ ಪಕ್ಷಗಳಿಗೆ ರಾಜಕೀಯವಾಗಿ ನೀರು ಕುಡಿಸುತ್ತೇನೆ. ಡಿ.ಕೆ.ಶಿವಕುಮಾರ್ ಅವರು ಅವರ ಮನೆಯಲ್ಲಿ ನೀರು ಕುಡಿಯುತ್ತಾರೆ ಎಂದು ಜಾರೆಯ ಉತ್ತರ ನೀಡಿದರು.

ವ್ಯಕ್ತಿಯ ಬ್ಯಾಗ್‌ನಲ್ಲಿ 6 ಲಕ್ಷ ರು. ಪತ್ತೆ

ಬೆಂಗಳೂರು: ಬುಧವಾರ ವಿಧಾನಸೌಧಕ್ಕೆ ಬಂದಿದ್ದ ವ್ಯಕ್ತಿ ಬ್ಯಾಗ್‌ನಲ್ಲಿ 6 ಲಕ್ಷ ರು.ಪತ್ತೆಯಾಗಿದೆ. ಕಾಂಗ್ರೆಸ್ ಶಾಸಕ ಯಶವಂತರಾಯಗೌಡ ಪಾಟೀಲ್ ಅವರನ್ನು ಭೇಟಿಯಾಗಲು ವಿಧಾನಸೌಧಕ್ಕೆ ಆಗಮನಿಸಿದ್ದು, ಪೊಲೀಸರು ಬ್ಯಾಗ್ ಪರಿಶೀಲಿಸಿದ ವೇಳೆ ಆರು ಲಕ್ಷ ರು. ಹಣ ಪತ್ತೆಯಾಗಿದೆ. ಕೂಡಲೇ ಯುವಕನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆಗೊಳಪಡಿಸಿದ್ದಾರೆ. ಇಷ್ಟು ದೊಡ್ಡ ಮೊತ್ತದ ಹಣದೊಂದಿಗೆ ಒಳಗೆ ಹೋಗುವಂತಿಲ್ಲ. ವಾಪಸ್ ಹೋಗಿ ಎಂದಿದ್ದಾರೆ. ಆದರೂ ಶಾಸಕರನ್ನು ನೋಡಲೇಬೇಕು ಎಂದು ಯುವಕ ಹಠ ಹಿಡಿದಿದ್ದ. ವಿಚಾರಣೆ ವೇಳೆ ಯುವಕ, ಇಂಡಿ ಕ್ಷೇತ್ರದ ಶಾಸಕ ಯಶವಂತರಾಯಗೌಡ ಪಾಟೀಲ್ ಅವರ ಲೆಟರ್ ಹೆಡ್ ಪಡೆಯಲು ಬಂದಿರುವುದಾಗಿ ಒಪ್ಪಿಕೊಂಡಿದ್ದು, ಹಣವನ್ನು ತನ್ನ ದೊಡ್ಡಪ್ಪನ ಚಿಕಿತ್ಸೆಗೆ ಬ್ಯಾಗ್‌ನಲ್ಲಿ ತಂದಿದ್ದೇನೆ ಎಂದು ಹೇಳಿದ್ದಾನೆ.

ನಾನೇ ಮುಖ್ಯಮಂತ್ರಿ: ಸಿದ್ದರಾಮಯ್ಯ

ವಿಧಾನಸಭೆ: ರಾಜ್ಯದ ಎಲ್ಲಾ 224 ಮಂದಿ ಶಾಸಕರು ಮುಖ್ಯಮಂತ್ರಿಯಾಗಲು ಅರ್ಹರಿದ್ದಾರೆ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ವಿಷಯದಲ್ಲಿ ನಯವಾಗಿ ಹೇಳಿ ಜಾರಿಕೊಂಡರು. ಆಯವ್ಯಯ ಅಂದಾಜುಗಳ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಉತ್ತರ ನೀಡುತ್ತಿದ್ದ ಮುಖ್ಯಮಂತ್ರಿ ಅವರನ್ನು ಬಿಜೆಪಿಯ ಹಿರಿಯ ಶಾಸಕ ಸುನೀಲ್ ಕುಮಾರ್ ಅವರು ಮಧ್ಯಪ್ರವೇಶಿಸಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೂ ಖುಷಿಯಾಗುತ್ತದೆ ಎಂದು ಹೇಳಲಿಲ್ಲ ಎಂದು ಕಾಲೆಳೆದರು. ಆಗ ಮುಖ್ಯಮಂತ್ರಿಗಳು ನಮ್ಮ ಪಕ್ಷದ ಹೈಕಮಾಂಡ್ ಹೇಳುವವರೆಗೂ ನಾನೇ ಮುಖ್ಯಮಂತ್ರಿ ಎಂಬುದನ್ನು ಪುನರುಚ್ಚರಿಸಿದರು. ಅಲ್ಲದೆ, ನಮ್ಮಲ್ಲಿ ಯಾರೇ ಮುಖ್ಯಮಂತ್ರಿಯಾದರೂ ಖುಷಿಯಾಗುತ್ತದೆ ಎಂದರು.

ಯೋಗ್ಯತೆ ಇದೆ.., ಯೋಗ ಬೇಕು

ವಿಧಾನಸಭೆ: : ಸಿದ್ದರಾಮಯ್ಯ ಅವರು ಸದನಲ್ಲಿ ಉತ್ತರ ನೀಡುವಾಗ ಶಾಸಕರು ಆಗಿರುವ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಮಾಹಿತಿಗಾಗಿ ಒಂದಷ್ಟು ಕಾಗದಗಳನ್ನು ಅವರಿಗೆ ತಂದುಕೊಟ್ಟರು. ಈ ರೀತಿ ಏನು ತಂದು ಕೊಡಬೇಡ ನನಗೆ. ಎಲ್ಲವೂ ನೆನಪಿದೆ ಎಂದು ಸಿದ್ದರಾಮಯ್ಯ ಅಸಹನೆಯಿಂದಲೇ ಹೇಳಿದರು. ತಕ್ಷಣವೇ ಬಸವರಾಜ ರಾಯರಡ್ಡಿ ಮುಜುಗರವಾಗುವುದನ್ನು ತಪ್ಪಿಸಲು, ಅವರು ಸದನದ ಒಳಗೂ ಆರ್ಥಿಕ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವ ಮೂಲಕ ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನ ಮಾಡಿದರು. ಅವರಿಗೆ ಮಂತ್ರಿ ಆಗುವ ಆಸೆ ಇದೆ ಎಂದು ಬಿಜೆಪಿಯ ಸುನಿಲ್ ಕುಮಾರ್ ಕೆಣಕಿದರು. ಆಗ ಸಿಎಂ ಇಲ್ಲಿರುವ ಎಲ್ಲರಿಗೂ ಸಚಿವರಾಗುವ ಅರ್ಹತೆ ಇದೆ ಎಂದು ಹೇಳಿದಾಗ, ಬಿಜೆಪಿಯ ಸುರೇಶ್ ಗೌಡ ಯೋಗ್ಯತೆ ಎಲ್ಲರಿಗೂ ಇದೆ ಯೋಗ ಬೇಕು ಎಂದರು.

ಶೈಕ್ಷಣಿಕ ಸಂಸ್ಥೆಯ ಭೂಮಿಗಳ ರಕ್ಷಣೆ, ಸಕ್ರಮಾತಿ ವಿಧೇಯಕ ಅಂಗೀಕಾರ

ಶಿಕ್ಷಣ ಇಲಾಖೆಯಲ್ಲಿಯೇ ಹೆಚ್ಚು ಜಮೀನು

ವಿಧಾನ ಪರಿಷತ್: ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿದ್ದ ಕರ್ನಾಟಕ ಸರಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ಬುಧವಾರ ಮತ್ತೊಮ್ಮೆ ಮೇಲ್ಮನೆಯಲ್ಲಿ ಅಂಗೀಕರಿಸಲಾಗಿದೆ.

ಬುಧವಾರ ಮೇಲ್ಮನೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಈ ವಿಧೇಯಕವನ್ನು ಪರ್ಯಾಲೋಚಿಸಿ, ಕಂದಾಯ ಇಲಾ ಖೆಯ ನಂತರ ಶಿಕ್ಷಣ ಇಲಾಖೆಯಲ್ಲಿಯೇ ಅತೀ ಹೆಚ್ಚು ಜಮೀನು ಹೊಂದಿದ್ದು, ಎಲ್ಲ ಸರಕಾರಿ ಶೈಕ್ಷಣಿಕ ಸಂಸ್ಥೆಗಳ ಸ್ವತ್ತುಗಳ ನಿಖರ ಹಾಗು ಭೂ-ದಾಖಲೆಗಳ ನಿರ್ವ ಹಣೆ, ಒತ್ತುವರಿ ತೆರವು ಮೊದಲಾದ ಕಾರ್ಯನಿರ್ವಹಣೆಗೆ ನುರಿತ ಕಾನೂನಾ ತ್ಮಕ ತಂಡ ಸಹ ರಚನೆಗೆ ಈ ನೂತನ ತಿದ್ದುಪಡಿಯಲ್ಲಿ ಅವಕಾಶವಿದೆ ಎಂದರು.

ಯಾವುದೇ ಖಾಸಗಿ ಜಾಗದಲ್ಲಿ ಕನಿಷ್ಠ 12 ವರ್ಷಗಳಿಂದ ಸತತವಾಗಿ ಸರಕಾರಿ ಶಾಲೆ ಅಥವಾ ಕಾಲೇಜು ನಡೆಯುತ್ತಿದ್ದರೆ, ಆ ಭೂಮಿ ಇನ್ನು ಮುಂದೆ ಅಧಿಕೃತವಾಗಿ ಸರಕಾರದ ಸ್ವತ್ತಾಗಲಿದೆ. ಈ ಭೂಮಿಯ ಮೇಲೆ ಈ ಹಿಂದೆ ಇದ್ದ ಸಾಲ, ಉತ್ತರಾಧಿಕಾರ ಸೇರಿದಂತೆ ವಿವಾದಗಳನ್ನು ಸಂಪೂರ್ಣವಾಗಿ ಮುಕ್ತಗೊಳಿಸಿ ಸರಕಾರದ ಹೆಸರಿಗೆ ನೋಂದಾಯಿಸಲಾಗುತ್ತದೆ ಎಂದರು. ಯಾವುದೋ ಕಾಲಘಟ್ಟದಲ್ಲಿ ವಕ್ಫ್‌ಗೂ ಸಹ ಶಾಲಾ ಜಮೀನುಗಳು ಹೋಗಿರಬಹುದು, ಈ ನಿಟ್ಟಿನಲ್ಲಿ ವಕ್ಫ್ ಮಂಡಳಿ ಹಾಗೂ ಇಲಾಖಾ ಸಚಿವರಿಗೂ ಸಹ ಈ ವಿಷಯವಾಗಿ ಚರ್ಚೆ ನಡೆಸಲಾಗುವುದು ಎಂಬ ವಿಷಯವನ್ನು ಸಹ ಪ್ರಕಟಿಸಿದರು.

ಅನೈತಿಕ ಚಟುವಟಿಕೆಗಳಿಗೆ ಕಡಿವಾಣ: ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಶಿಕ್ಷಣ ಇಲಾಖೆ ಸಹಿಸುವುದಿಲ್ಲ, ಇನ್ನು ಮುಂದೆ ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಕರ್ನಾಟಕ ಸರಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ವಿಧೇಯಕದ ಮೇಲೆ ನಡೆದ ಚರ್ಚೆಯ ವೇಳೆ ಬಿಜೆಪಿ ಸದಸ್ಯ ಪಿ.ಎಚ್. ಪೂಜಾರ್ ಅವರು, ನಮ್ಮ ಕುಟುಂಬ ದಾನವಾಗಿ ನೀಡಿದ ಶಾಲೆಯ ಕಟ್ಟಡ ಈಗ ಶಿಥಿಲಾವಸ್ಥೆಗೆ ತಲುಪಿದ್ದು, ಅಲ್ಲಿ ಜೂಜಾಡುವುದು, ಮದ್ಯ ಸೇವಿಸುವುದು ಸೇರಿದಂತೆ ಆ ಸ್ಥಳ ಅನೈತಿಕ ಚಟುವಟಿಕೆಗಳ ತಾಣವಾಗಿದೆ ಎಂದು ದೂರಿದರು. ಇದಕ್ಕೆ ಉತ್ತರಿಸಿದ ಸಚಿವರು, ಶಿಥಿಲಾ ವಸ್ಥೆಯ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳು ನಡೆದರೆ, ಸಹಿಸುವ ಪ್ರಶ್ನೆಯೇ ಇಲ್ಲ, ಇಂತಹ ಚಟುವಟಿಕೆ ನಡೆಸುವವರ ವಿರುದ್ಧ ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಪ್ರತಿಪಕ್ಷದ ಗದ್ದಲದ ನಡುವೆ ಮಸೂದೆಗೆ ಪರಿಷತ್ ಅಂಗೀಕಾರ

ಇವಿಎಂ ಬದಲು ಮತಪತ್ರಕ್ಕೆ ಅಸ್ತು

ವಿಧಾನ ಪರಿಷತ್: ಬಿಜೆಪಿ ಸದಸ್ಯರ ತೀವ್ರ ವಿರೋಧ, ಸಭಾತ್ಯಾಗದ ನಡುವೆಯೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಬದಲು ಮತ ಪತ್ರ (ಬ್ಯಾಲೆಟ್ ಪೇಪರ್) ಬಳಸಲು ಅವಕಾಶ ಕಲ್ಪಿಸುವ ಮಸೂದೆಗೆ ಸರಕಾರ ಬುಧವಾರ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ಪಡೆಯಿತು.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ತುದ್ದುಪಡಿ) ಮಸೂದೆಯನ್ನು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರ್ಯಾಲೋಚನೆಗೆ ಮಂಡಿಸಿದರು. ಗ್ರಾಮ ಸ್ವರಾಜ್ ಪಂಚಾಯತ್‌ರಾಜ್ ತಿದ್ದುಪಡಿ ವಿಧೇಯಕ ವಿರೋಧಿಸಿ ಪ್ರತಿಪಕ್ಷ ಸದಸ್ಯರು ಸಭಾ ತ್ಯಾಗ ಮಾಡಿದರು.

ವಿಧೇಯಕದ ಪರ್ಯಾಲೋಚನಾ ಪ್ರಸ್ತಾಪ ಮಂಡಿಸಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಭಾರತ ಸಂವಿಧಾನ 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಲು ಮತದಾರರ ಮತಪತ್ರದ ಗೌಪ್ಯತೆ, ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸುರಕ್ಷಿತಗೊಳಿಸಬೇಕಿದೆ ಎಂದು ಹೇಳಿದರು.

ಬಿಜೆಪಿ ಸದಸ್ಯ ಸಿಟಿ.ರವಿ ಅವರು ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದು, ಸಾಂವಿಧಾನಿಕ ಸಂಸ್ಥೆ ಮೇಲೆ ಅಪನಂಬಿಕೆ ಸರಿಯಲ್ಲ. ಇವಿಎಂ ಮೇಲೆ ನಂಬಿಕೆ ಇಲ್ಲದಿದ್ದರೆ ರಾಜೀನಾಮೆ ಕೊಡಿ. ಬ್ಯಾಲೆಟ್‌ನಲ್ಲೇ ಚುನಾವಣೆ ಎದುರಿಸೋಣ ಎಂದು ಸರಕಾರಕ್ಕೆ ಸವಾಲೆಸೆದರು. ಬ್ಯಾಲೆಟ್ ಪೇಪರ್ ಮೇಲೆ ಚುನಾವಣೆ ಬೇಡ. ತಂತ್ರಜ್ಞಾನದ ಜತೆ ಮುಂದೆ ಹೋಗಬೇಕು. ಕರ್ನಾಟಕ ಸರಕಾರ ತೀರಾ ಹಿಂದುಳಿದೆ ಎಂದರು.

ಇವಿಎಂನಿಂದ 140 ಸೀಟು, ಜನ ಏನ್ ಎಬ್ಬೆಟ್ಟು ಒತ್ತಿದ್ರಾ: ವಿಧೇಯಕ ಕುರಿತು ಎಸ್.ಎಲ್.ಬೋಜೆಗೌಡ ಮಾತನಾಡಿ, ಮತಪತ್ರದ ಮೂಲಕ ಚುನಾವಣೆ ನಡೆಸಿ. ಆದರೆ ಇವಿಎಂ ಮೇಲೆ ಅನುಮಾನ ವ್ಯಕ್ತಪಡಿಸಿ ಬ್ಯಾಲೆಟ್ ಪೇಪರ್ ತರುವುದು ಬೇಡ. ಅದನ್ನು ಕಡತದಿಂದ ತೆಗೆದುಹಾಕಿ ಎಂದರು. ಆಗಾದರೆ ವಿಧೇಯಕ ಸ್ವಾಗತಿಸಿ ಎಂದ ಕಾಂಗ್ರೆಸ್ ಸದಸ್ಯರು ಏರು ಧ್ವನಿಯಲ್ಲಿ ಕೂಗಿದಾಗ ತಿರುಗೇಟು ನೀಡಿದ ಬೋಜೆಗೌಡ ನೀವೆಲ್ಲಾ (ಕಾಂಗ್ರೆಸ್‌ನವರು) 140 ಸೀಟು ಗೆದ್ದು ಬಂದಿದ್ದು ಹೇಗೆ. ಜನ ಏನ್ ಎಬ್ಬೆಟ್ಟು ಒತ್ತಿದ್ರಾ?. ಇದೇ ಇವಿಎಂನಿಂದಲೇ ಗೆದ್ದಿರುವುದು ನೀವು (ಕಾಂಗ್ರೆಸ್) ಎಂದು ಆಡಳಿತ ಪಕ್ಷದ ವಿರುದ್ಧ ಕಿಡಿಕಾರಿದರು.

ವಿಶ್ವವಾಣಿ ಕ್ಲಬ್ ಹೌಸ್
26.03.2026
ಸಂಜೆ: 06.55 ರಿಂದ 08.05 ರವರೆಗೆ

ಗುರುವಾರದ ಅತಿಥಿ
ಶ್ರೀ. ಸಚಿನ್ ನಾಯಕ್
ವಿಷಯ
ಶೌರ್ಯ ಮಲೆ - ಕೃತಿ ಪರಿಚಯ
vishwavani.news

ದಿನ ವಿಶೇಷ

26 ಮಾರ್ಚ್ 2026 ಗುರುವಾರ

» ಸೂರ್ಯೋದಯ	: 6-26
» ಸೂರ್ಯಾಸ್ತ	: 6-38
» ತಿಥಿ	: ಅಷ್ಟಮಿ
» ನಕ್ಷತ್ರ	: ಆರ್ದ್ರ
» ಸಂವತ್ಸರ	: ಪರಾಭವ
» ಆಯನ	: ಉತ್ತರಾಯಣ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಶುಕ್ಲಪಕ್ಷ

ಸಂಪಾದಕೀಯ

ಭಾರತದ ನಿಲುವು ಜಗತ್ತಿಗೆ ಭರವಸೆ

ಒಂದು ಕಡೆ ಭಾರತ ರಷ್ಯಾದಿಂದ ತೈಲ ತರಿಸಿಕೊಳ್ಳದಂತೆ ಮಾಡಲು ಅಮೆರಿಕ ಗರಿಷ್ಠ ಪ್ರಯತ್ನ ಮಾಡುತ್ತಿದೆ. ಹಲವು ತಿಂಗಳು ಬೇಕಾಬಿಟ್ಟಿ ತೆರಿಗೆ ಹಾಕಿ, ರಷ್ಯಾದಿಂದ ತೈಲ ತರಿಸಿದರೆ ಇದೇ ಗತಿ ಎಂದು ಬೆದರಿಸಿತು. ಬಹಿರಂಗ ಜಗತ್ತಿಗೆ ತೋರಿಸಿಕೊಳ್ಳದಿದ್ದರೂ, ಅಂತರಂಗದಲ್ಲಿ ಭಾರತ ರಷ್ಯಾದಿಂದ ತೈಲ ಖರೀದಿಯನ್ನು ತುಸು ಕಡಿಮೆ ಮಾಡಿದೆಯೇ ಎಂಬ ಪ್ರಶ್ನೆಗಳು ಹುಟ್ಟಿಕೊಂಡಿದ್ದವು. ಆದರೆ ಇರಾನ್ ಮೇಲೆ ಅಮೆರಿಕ ದಾಳಿ ಮಾಡಿದ್ದೇ ತಡ, ಭಾರತ ರಷ್ಯಾದಿಂದ ದೊಡ್ಡ ಪ್ರಮಾಣದಲ್ಲಿ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವುದು ಖಚಿತವಾಗಿದೆ. ಮೊದಲು ಭಾರತಕ್ಕೆ ರಷ್ಯಾದಿಂದ ಹಡಗು ಹೊರಟಾಗ, ಯುದ್ಧವಾದ್ದರಿಂದ ನಾನೇ ಭಾರತಕ್ಕೆ ಒಂದು ತಿಂಗಳು ತರಿಸಿಕೊಳ್ಳಲು ಅನುಮತಿ ನೀಡಿದ್ದೇನೆ ಎಂದು ಯಾರೂ ಕೇಳದಿದ್ದರೂ ಅಮೆರಿಕ ತಾನೇ ಹೇಳಿಕೆಯನ್ನು ಬಿಡುಗಡೆ ಮಾಡಿತು. ನಮಗೆ ಯಾರ ಅಪ್ಪಣೆಯೂ ಬೇಕಾಗಿಲ್ಲ ಎಂದು ಭಾರತ ಬಲವಾಗಿ ಹೇಳಿತು. ಟ್ರಂಪ್ ಹೀಗೆ ಹಾಸ್ಯಾಸ್ಪದ ಹೇಳಿಕೆ ನೀಡುತ್ತಿರುವುದು ಇದು ಹೊಸತೇನಲ್ಲ. ಇದರ ಮಧ್ಯೆ ನಡೆದಿರುವ ಇನ್ನೊಂದು ಬೆಳವಣಿಗೆಯೆಂದರೆ ರಷ್ಯಾದಿಂದ ಮತ್ತೆ 6 ಕೋಟಿ ಬ್ಯಾರೆಲ್ ತೈಲವನ್ನು ಭಾರತ ಆಮದು ಮಾಡಿಕೊಳ್ಳುತ್ತಿದೆ. ಈ ತೈಲ ಮುಂದಿನ ತಿಂಗಳು ಭಾರತವನ್ನು ತಲುಪಲಿದೆ. ರಿಲಯನ್ಸ್ ಇಂಡಸ್ಟ್ರೀಸ್ ಇರಾನ್‌ನಿಂದಲೂ 50 ಲಕ್ಷ ಬ್ಯಾರೆಲ್ ತೈಲವನ್ನು ತರಿಸಿಕೊಳ್ಳಲು ಸಿದ್ಧವಾಗಿದೆ. ಅಮೆರಿಕ ಭಾರತವನ್ನು ನಿಯಂತ್ರಿಸಲು ಯತ್ನಿಸಿದಂತೆಲ್ಲ ಅದು ತನ್ನ ಯತ್ನದಲ್ಲಿ ಸೋಲುತ್ತಿದೆ. ಭಾರತ ತನ್ನ ಅಗತ್ಯಕ್ಕೆ ತಕ್ಕಂತೆ ಇಡೀ ಜಗತ್ತಿನಲ್ಲಿ ವ್ಯವಹಾರ ನಡೆಸುತ್ತಿದೆ. ಪರಸ್ಪರ ವೈರಿಗಳಾದ ಅಮೆರಿಕ, ರಷ್ಯಾ ಎರಡರೊಂದಿಗೂ ಉತ್ತಮ ಸಂಬಂಧವನ್ನೇ ಉಳಿಸಿಕೊಂಡಿದೆ. ಹಾಗಂತ ತನ್ನ ಹಿತಾಸಕ್ತಿಯಲ್ಲಿ ಎಲ್ಲೂ ರಾಜಿ ಮಾಡಿಕೊಂಡಿಲ್ಲ. ಇತ್ತ ಕಡೆ ಇಸ್ರೇಲ್ ಜೊತೆಗೆ ಉತ್ತಮ ಬಾಂಧವ್ಯ ಹೊಂದಿರುವ ಭಾರತ, ಆ ಕಡೆ ಇಸ್ರೇಲ್‌ನ ವೈರಿ ಇರಾನ್ ನೊಂದಿಗೂ ಅಷ್ಟೇ ಉತ್ತಮ ಸ್ನೇಹವನ್ನು ಇರಿಸಿಕೊಂಡಿದೆ. ಇರಾನ್‌ನ ಹೊರ್ಮುಜ್ ಜಲಸಂಧಿಯಲ್ಲಿ ಭಾರತದ ತೈಲ ಹಡಗುಗಳು ಸಿಲುಕಿಕೊಂಡಿದ್ದರೂ, ಇರಾನ್ ಮುತುವರ್ಜಿ ವಹಿಸಿ ಈ ಹಡಗುಗಳು ಭಾರತದತ್ತ ಹೊರಡಲು ನೆರವಾಗಿದೆ. ಭಾರತ ಇಲ್ಲಿ ಒಂದು ಕಡೆ ವಾಲಿಲ್ಲ. ಪ್ರಸ್ತುತ ಜಗತ್ತಿನ ಪ್ರಬಲ ಶಕ್ತಿಯಾಗಿರುವ ಭಾರತದ ಈ ನಿಲುವು ಇಡೀ ಜಗತ್ತಿಗೇ ಭರವಸೆಯಾಗಿದೆ.

ಸೊಂಪಾದಕೀಯ

ನಿಮಗೆ ಇಷ್ಟವಿಲ್ಲದಿದ್ದರೂ ಹಾಗೆ ಮಾಡ್ತಾರೆ

ಬೆಂಗಳೂರಲ್ಲಿ ಒಂದು ಮೂರು, ನಾಲ್ಕು ವರ್ಷಗಳಿಂದ ನಿಲ್ಲಿಸಿದ್ದ ವಾಹನಗಳನ್ನು ಸಂಚಾರಿ ಪೊಲೀಸರು ಎತ್ತಾಕಿಕೊಂಡು ಹೋಗುವ ಪ್ರಸಂಗಗಳಿಗೆ ವಿರಾಮ ನೀಡಲಾಗಿತ್ತು. ಹಾಗಾಗಿ ಗೋಳಿಟ್ಟ ಮಾಲೀಕರು, ಎಡವಟ್ಟು ಪೊಲೀಸರು... ಹೀಗೆ ತರಹೇವಾರಿ ಮಾದರಿಯಲ್ಲಿ ಬೈದಾಟಗಳು ನಿಂತುಹೋಗಿದ್ದವು. ಬಹುಶಃ ದೀರ್ಘಕಾಲದ ವಿರಾಮದಿಂದ ಪ್ರೇಕ್ಷಕರಿಗೆ ಬೇಸರವಾಗಿದ್ದಿರಬಹುದು. ಮತ್ತೆ ಟೋಯಿಂಗ್ ಶುರುಮಾಡಲು ನಿರ್ಧರಿಸಲಾಗಿದೆ. ನಿಲುಗಡೆಗೆ ಅವಕಾಶವಿಲ್ಲದ ಜಾಗದಲ್ಲಿ ನಿಲ್ಲಿಸಿದರೆ ದಂಡ ಹಾಕುವುದು ಮಾತ್ರವಲ್ಲ, ನಿಮ್ಮ ವಾಹನಗಳನ್ನು ನಿಮಗೆ ಇಷ್ಟವಿಲ್ಲದಿದ್ದರೂ, ನೀವಿಲ್ಲದಿರುವ ಸಂದರ್ಭ ನೋಡಿ ಎಳೆದೊಯ್ದು, ಅದಕ್ಕೂ ಶುಲ್ಕ ಹಾಕುತ್ತಾರೆ. ಕಷ್ಟಪಟ್ಟು ಟೋಯಿಂಗ್ ಮಾಡಿದ್ದೇವೆ, ಕಟ್ಟಿ 500, 1000 ಎನ್ನುತ್ತಾರೆ. ಹಾಗಂತ ಈ ಬಾರಿ ಯಾವುದೇ ಒಳಒಪ್ಪಂದಕ್ಕೆ ಅವಕಾಶವಿಲ್ಲ ಎನ್ನಲಾಗಿದೆ. ವಾಹನಗಳಿಗೆ ಸಿಸಿಟಿವಿ ಹಾಕುವುದು ಮಾತ್ರವಲ್ಲ, ಸಿಬ್ಬಂದಿಗೆ ಬಾಡಿ ವಾರ್ನ್ ಕ್ಯಾಮೆರಾ ಅಳವಡಿಸಲಾಗುತ್ತದೆ. ಸುಮ್ಮನೆ ಪೊಲೀಸರು, ಮಾಲೀಕರು ಜಗಳ ಮಾಡಿಕೊಂಡಂತೆ ಮಾಡಿ ಅಲ್ಲಲ್ಲೇ ವ್ಯವಹಾರ ಮುಗಿಸುವುದು ಬೇಡ. ಆದಾಯ ಪ್ರಾಮಾಣಿಕವಾಗಿ ಸರಕಾರಕ್ಕೆ ಬರಲಿ ಎನ್ನುವುದು ಸದುದ್ದೇಶ. ಇಂತಹ ಸದುದ್ದೇಶಗಳೆಲ್ಲ ಭಾರತದಲ್ಲಿ ಯಶಸ್ವಿಯಾಗಬೇಕಾದರೆ ಸಂಬಂಧಪಟ್ಟ ವ್ಯಕ್ತಿಗಳಿಗೆ ಅದಿರಬೇಕು. ಸರಕಾರ ಏನೇ ನಿಯಮ ಮಾಡಿದರೂ, ಮನುಷ್ಯ-ಮನುಷ್ಯನ ನಡುವೆ ಹೊಂದಾಣಿಕೆ ಚೆನ್ನಾಗಿದ್ದರೆ ಏನುಪಯೋಗ? ದೇಶದಲ್ಲಿ ಸರಕಾರದ ನಿಯಮಗಳಿಗಿಂತ ನಂಗೂ ಬೇಡ ನಿಂಗೂ ಬೇಡ ಇಷ್ಟು ಕೊಡಿ ಸಾಕು ಎನ್ನುವ ಸರಳಸೂತ್ರ ಬಹಳ ಪರಿಣಾಮಕಾರಿಯಾಗಿರುತ್ತವೆ. ಇಡೀ ದೇಶದಲ್ಲಿ ಪರ್ಯಾಯ ಸರಕಾರವನ್ನು ನಡೆಸುತ್ತಿರುವುದೇ ಇಂತಹ ವ್ಯವಸ್ಥೆ ಎಂದು ತಿಳಿದವರು ಹೇಳುತ್ತಾರೆ.

ಸಂಪಾದಕರ ಸದ್ಯಶೋಧನೆ

ಮನುಷ್ಯ-ನಾಯಿಯ ಸಂಬಂಧ

ಸುಮಾರು ಹತ್ತು ವರ್ಷಗಳ ಹಿಂದೆ, ನಾನು 'ಲಸ್ಸಿ ಕಮ್ಸ್ ಹೋಮ್' (Lassie Come Home) ಎಂಬ ಸಿನಿಮಾ ನೋಡಿದ್ದೆ. ಅದು ಪ್ರಾಣಿ ಮತ್ತು ಮನುಷ್ಯನ ನಡುವಿನ ಅವಿನಾಭಾವ ಸಂಬಂಧವನ್ನು ಸಾರುವ ಒಂದು ಅಪರೂಪದ ಸಿನಿಮಾ. ಬಡತನದಿಂದ ಯಾರ್ಕ್‌ಶೈರ್‌ನ ಒಂದು ಕುಟುಂಬವು ತಮ್ಮ ಪ್ರೀತಿಯ ನಾಯಿ ಲಸ್ಸಿಯನ್ನು ಒಬ್ಬ ಶ್ರೀಮಂತನಿಗೆ ಮಾರಾಟ ಮಾಡುತ್ತದೆ. ಆತ ಲಸ್ಸಿಯನ್ನು ನೂರಾರು ಮೈಲಿ ದೂರದ ಸ್ಕಾಟ್ಲೆಂಡ್‌ಗೆ ಕರೆದೊಯ್ಯುತ್ತಾನೆ. ಆದರೆ ತನ್ನ ಯಜಮಾನನಾದ ಬಾಲಕ ಜೋಯನ್ನು ಅಗಲಿರಲಾರದ ಲಸ್ಸಿ, ಅಲ್ಲಿಂದ ತಪ್ಪಿಸಿಕೊಂಡು ಹಿಂತಿರುಗಲು ನಿರ್ಧರಿಸುತ್ತದೆ. ದಾರಿಯುದ್ದಕ್ಕೂ ಹಸಿವು, ಸುರಿವ ಮಳೆ, ಕಡಿದಾದ ಪರ್ವತಗಳು ಮತ್ತು ನದಿಗಳನ್ನು ದಾಟುತ್ತಾ ಲಸ್ಸಿ ಸಾಹಸಮಯ ಪ್ರಯಾಣ ಬೆಳೆಸುತ್ತದೆ. ದಾರಿಯಲ್ಲಿ ಹಲವು ಕಷ್ಟಗಳನ್ನು ಎದುರಿಸಿದರೂ, ತನ್ನ ಅಚಲವಾದ ನಿಷ್ಠೆ ಮತ್ತು ಪ್ರೀತಿಯಿಂದಾಗಿ ಅಂತಿಮವಾಗಿ ತನ್ನ ಹಳೆಯ ಮನೆಗೆ ಮತ್ತು ಜೋಯ ಬಳಿಗೆ ಬಂದು ಸೇರುತ್ತದೆ. ಪ್ರಾಣಿಗಳ ನಿಷ್ಠೆಗೆ ಈ ಸಿನಿಮಾ ಒಂದು ಅದ್ಭುತ ಉದಾಹರಣೆ. ಇದು ಸಿನಿಮಾ ಆಯಿತು. ನಿಜ ಜೀವನದಲ್ಲಿ ಇಂಥದೇ ಒಂದು ಪ್ರಸಂಗ ನಡೆದಿದೆ. ಕಳ್ಳರಿಂದ ಅಪಹರಣಕ್ಕೊಳಗಾಗಿದ್ದ ಏಳು ಸಾಕು ನಾಯಿಗಳು, ಸಾವು ಮತ್ತು ಸಂಕೋಲೆಗಳಿಂದ ತಪ್ಪಿಸಿಕೊಂಡು 17 ಕಿಮೀಗಳಷ್ಟು ದೂರ ಕ್ರಮಿಸಿ ತಮ್ಮ ಮನೆ ಸೇರಿದ ಘಟನೆ ಈಶಾನ್ಯ ಚೀನಾದ ಹಳ್ಳಿಯೊಂದರಲ್ಲಿ ನಡೆದಿದೆ. ಅಲ್ಲಿ ಸಾಕುಪ್ರಾಣಿಗಳ ಕಳ್ಳತನದ ಜಾಲವು ಸಕ್ರಿಯವಾಗಿತ್ತು. ಒಂದು ರಾತ್ರಿ, ಏಳು ನಾಯಿಗಳನ್ನು ಈ ಜಾಲವು ಅಪಹರಿಸಿತು. ಬಹುಶಃ ಇವುಗಳನ್ನು ಮಾಂಸದ ಮಾರುಕಟ್ಟೆಗೋ ಅಥವಾ ದೂರದ ನಗರಗಳಿಗೋ, ಮಾರಾಟ ಮಾಡುವ ಉದ್ದೇಶ ಕಳ್ಳರಿಗಿತ್ತು. ಮನೆಯ ಸದಸ್ಯರಂತೆ ಬೆಳೆದಿದ್ದ ಆ ಮೂಕ ಪ್ರಾಣಿಗಳಿಗೆ ಅಂದು ಎದುರಾಗಿದ್ದು ಅತಿದೊಡ್ಡ ಅಪಾಯ. ಕಗ್ಗತ್ತಲಲ್ಲಿ ಅವುಗಳನ್ನು ಕಟ್ಟಿ ಹಾಕಿ, ವಾಹನವೊಂದರಲ್ಲಿ ತುಂಬಿಸಿ ದೂರದ ಪ್ರದೇಶಕ್ಕೆ ಸಾಗಿಸಲಾಯಿತು. ಯಾವ ಹಂತದಲ್ಲಿ ಈ ನಾಯಿಗಳು ಕಳ್ಳರಿಂದ ತಪ್ಪಿಸಿಕೊಂಡವು ಎಂಬುದು ನಿಖರವಾಗಿ ತಿಳಿಯದಿದ್ದರೂ, ಅವುಗಳ ಜಾಣ್ಮೆ ಮೆಚ್ಚುವಂಥದ್ದು. ಕಳ್ಳರ ಕಣ್ಣು ತಪ್ಪಿಸಿ ಈ ಏಳು ನಾಯಿಗಳು ಒಟ್ಟಾಗಿ ತಪ್ಪಿಸಿಕೊಂಡವು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೇವಲ ಒಂದು ನಾಯಿಯಲ್ಲ, ಏಳೂ ನಾಯಿಗಳು ಒಟ್ಟಾಗಿ ಸಂಘಟಿತವಾಗಿ ಈ ನಿರ್ಧಾರ ತೆಗೆದುಕೊಂಡಿದ್ದು. ಅಲ್ಲಿಂದ ಆರಂಭವಾಯಿತು ಅವುಗಳ 17 ಕಿಮೀಗಳ ಸುದೀರ್ಘ ಪಯಣ. ಈ ಹಾದಿ ಸುಲಭವಾಗಿರಲಿಲ್ಲ. ವೇಗವಾಗಿ ಚಲಿಸುವ ವಾಹನಗಳ ನಡುವೆ ಹೆದ್ದಾರಿಯನ್ನು ದಾಟುವುದು ಸಣ್ಣ ವಿಷಯವಲ್ಲ. ಹುಲ್ಲುಗಾವಲು ಮತ್ತು ಕಾಡುಹಾದಿಯಲ್ಲಿ ಹಾಗೂ ದಾರಿ ತಿಳಿಯದ ಅಪರಿಚಿತ ಪ್ರದೇಶಗಳಲ್ಲಿ ವಾಸನೆಯನ್ನು ಹಿಡಿಯುತ್ತಾ ಅವು ಸಾಗಬೇಕಿತ್ತು. ಎರಡು ದಿನಗಳ ಕಾಲ ಹಸಿವು ಮತ್ತು ಬಾಯಾರಿಕೆಯನ್ನು ಸಹಿಸಿಕೊಂಡು ಸಾಗಬೇಕಿತ್ತು. ಎರಡು ದಿನಗಳ ಸತತ ನಡಿಗೆಯ ನಂತರ, ದಣಿದಿದ್ದ ಆ ಏಳು ಜೀವಗಳು ತಮ್ಮ ಹಳ್ಳಿಯನ್ನು ತಲುಪಿದವು. ಅವುಗಳ ಮಾಲೀಕರು ತಮ್ಮ ಪ್ರೀತಿಯ ಸಾಕುಪ್ರಾಣಿಗಳು ಮತ್ತೆ ಸಿಗುತ್ತವೆ ಎಂಬ ಭರವಸೆಯನ್ನೇ ಕೈಬಿಟ್ಟಿದ್ದರು. ಆದರೆ, ದೂಳು ಹಿಡಿದ ಮೈಯೊಂದಿಗೆ, ಬಳಲಿದ ಕಾಲಿನೊಂದಿಗೆ ಆ ನಾಯಿಗಳು ತಮ್ಮ ಮನೆಯ ಬಾಗಿಲಲ್ಲಿ ನಿಂತಾಗ ಮಾಲೀಕರ ಸಂತೋಷಕ್ಕೆ ಪಾರವೇ ಇರಲಿಲ್ಲ. ಪ್ರಾಣಿಗಳು ತಮ್ಮ ಮನೆಗೆ ಮರಳಲು ಬಳಸುವ ಹೋಮಿಂಗ್ ಇನ್‌ಸ್ಟಿಂಕ್ಟ್ ಎಂಬ ಸಹಜ ಪ್ರವೃತ್ತಿ ಈ ಘಟನೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ನಾಯಿಗಳು ಭೂಮಿಯ ಕಾಂತೀಯ ಕ್ಷೇತ್ರ ಮತ್ತು ವಾಸನೆಯ ಪ್ರಬಲ ಶಕ್ತಿಯನ್ನು ಬಳಸಿ ದಿಕ್ಕುಗಳನ್ನು ಗುರುತಿಸುತ್ತವೆ. ಈ ಏಳು ನಾಯಿಗಳ ನಡುವಿನ ಗುಂಪುಗಾರಿಕೆ ಅವುಗಳನ್ನು ಸುರಕ್ಷಿತವಾಗಿಡಲು ಸಹಾಯ ಮಾಡಿತು. ಇಂದು ಜಗತ್ತು ಯುದ್ಧದ ಕಾರ್ಮೋಡ, ಆರ್ಥಿಕ ಮುಗ್ಗಟ್ಟು ಮತ್ತು ಮಾನವೀಯತೆಯ ಕೊರತೆಯಿಂದ ಬಳಲುತ್ತಿದೆ. ಇಂಥ ಸಮಯದಲ್ಲಿ, ಈ ಪ್ರಾಣಿಗಳು ಪ್ರದರ್ಶಿಸಿದ ನಿಷ್ಠೆ ಮತ್ತು ಜಿಗುಟುತನ ನಮಗೆ ಬದುಕಿನ ಮೇಲೆ ಭರವಸೆ ಮೂಡಿಸುತ್ತದೆ. ಚೀನಾದ ಈ ಏಳು ನಾಯಿಗಳ ಸಾಹಸಗಾಥೆ ಅಚಲ ಪ್ರೀತಿ, ವಿಶ್ವಾಸದ ಸಂಕೇತ. ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಸಂಬಂಧ ಎಷ್ಟು ಆಳವಾದುದು ಎಂಬುದಕ್ಕೆ ಇದು ಸಾಕ್ಷಿ. ಆ ನಾಯಿಗಳು ಕೇವಲ 17 ಕಿಮೀ ದೂರವನ್ನಷ್ಟೇ ಕ್ರಮಿಸಲಿಲ್ಲ, ಬದಲಾಗಿ ಪ್ರೀತಿಯ ಶಕ್ತಿ ಎಂತಹುದು ಎಂಬುದನ್ನು ಇಡೀ ಜಗತ್ತಿಗೆ ತೋರಿಸಿಕೊಟ್ಟವು.

ಭಾರತದ ಚರಿತ್ರೆಯ ಮಹಾ ತಿರುವಿನ ತಾಣದಲ್ಲಿ ನಿಂತಾಗ..!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಬೆಂಗಳೂರಿನಿಂದ ಎರಡೂವರೆ ತಾಸು ವಿಮಾನ ಪ್ರಯಾಣ ಮಾಡಿ ಕೋಲ್ಕತಾದಲ್ಲಿ ಇಳಿದು, ಅಲ್ಲಿಂದ ರಸ್ತೆ ಮಾರ್ಗವಾಗಿ ಸುಮಾರು ಮೂರೂವರೆ ಗಂಟೆ ಪ್ರಯಾಣ ಮಾಡಿದಾಗ, ಭಾರತ ಇತಿಹಾಸವನ್ನು ಬದಲಿಸಿದ ಒಂದು ಐತಿಹಾಸಿಕ ತಾಣದಲ್ಲಿದ್ದೆ. ಅಲ್ಲಿನ ಗಾಳಿಯಲ್ಲಿ ಈಗ ಯುದ್ಧದ ಕಿರುಚಾಟವಿಲ್ಲ, ಬದಲಿಗೆ ಮಾವಿನ ತೋಪುಗಳ ನಡುವೆ ಹಳೆ ನೆನಪಿನ ಘಮವಷ್ಟೇ ಬಾಕಿ ಉಳಿದಿದೆ. ನಾನು ಹೈಸ್ಕೂಲಿನಲ್ಲಿದ್ದಾಗ ಕೇಳಿದ, ಓದಿದ ಹೆಸರದು. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಭದ್ರವಾಗಿ ನೆಲೆಯೂರಲು ನಾಂದಿ ಹಾಕಿದ ಕದನಕ್ಕೆ ಸಾಕ್ಷಿಯಾದ ಊರು ಅದು. ಭಾಗೀರಥಿ ನದಿಯ ದಂಡೆಯ ಮೇಲಿರುವ ಈ ಊರು, ಇಂದು ಮಂಪರು ನಿದ್ದೆಯಲ್ಲಿರುವ ಹಳ್ಳಿಯಂತೆ ಕಂಡರೂ, ಅದು ಅಂದು ಇಡೀ ದೇಶದ ಹಣೆಬರಹವನ್ನು ಬದಲಿಸಿದ ಕದನಕ್ಕೆ ಸಾಕ್ಷಿಯಾಗಿತ್ತು. ಅಲ್ಲಿನ ಪಲಾಶ ಹೂಗಳು ಈಗಲೂ ಅಷ್ಟೇ ಕೆಂಪಾಗಿ ಅರಳಿ ನಿಂತಿವೆ. ಬಹುಶಃ ಅಂದು ಹರಿದ ಸೈನಿಕರ ರಕ್ತದ ಬಣ್ಣವನ್ನೇ ಈ ಮಣ್ಣು ಹೀರಿಕೊಂಡು ಇಂದಿಗೂ ಕಾಪಾಡಿಕೊಂಡಿದೆಯೇನೋ ಎಂಬ ಗುಮಾನಿ ಕಾಡುತ್ತದೆ. ಭಾರತದ ಇತಿಹಾಸದ ಗತಿಯನ್ನೇ ಬದಲಿಸಿದ, ದೇಶದ ಚರಿತ್ರೆಯಲ್ಲಿ ಬಹುಚರ್ಚಿತವಾದ ಊರಿನಲ್ಲಿ ಇದ್ದೇನೆ ಎಂದು ನನ್ನನ್ನೇ ನಂಬಿಸಿಕೊಳ್ಳಲು ತುಸು ಸಮಯ ಹಿಡಿಯಿತು.

ಪ್ಲಾಸಿ!

ಇಂದಿಗೂ ಸ್ಥಳೀಯರ ಬಾಯಲ್ಲಿ 'ಪಲಾಸಿ' ಎಂದೇ ಕರೆಯಿಸಿಕೊಳ್ಳುವ ಈ ಊರು 269 ವರ್ಷಗಳ ಹಿಂದೆ, ಒಂದು ಭೀಕರ ಕದನ (ಪ್ಲಾಸಿ ಕದನವೆಂದೇ ಕುಖ್ಯಾತ)ಕ್ಕೆ ಮೂಕಸಾಕ್ಷಿಯಾಗಿತ್ತು. ಅಂದು ಈ ಕದನದಲ್ಲಿ ಬ್ರಿಟಿಷರು ಸೋತಿದ್ದರೆ ಈ ದೇಶದ ನಕ್ಷೆ ಹೇಗಿರುತ್ತಿತ್ತು ಎಂದು ಯೋಚಿಸುವುದು, ತಪ್ಪಿಹೋದ ರೈಲನ್ನು ನೆನಪಿಸಿಕೊಂಡು ಪ್ಲಾಟ್‌ಫಾರ್ಮ್ ಮೇಲೆ ಸುಮ್ಮನೆ ಕೂತ ಹಾಗೆ. ಆದರೆ ಅಂದು ಆಗಿದ್ದೇ ಬೇರೆ.

ಔರಂಗಜೇಬನ ಮರಣದ (1707ರಲ್ಲಿ) ನಂತರ ಮೊಘಲ್ ಸಾಮ್ರಾಜ್ಯವು ಕ್ಷೀಣಿಸತೊಡಗಿತು. ಕೇಂದ್ರ ಆಡಳಿತ ದುರ್ಬಲವಾದಂತೆ, ದೂರದ ಪ್ರಾಂತ್ಯಗಳ ಸುಬೇದಾರರು ಸ್ವತಂತ್ರರಾಗತೊಡಗಿದರು. ಬಂಗಾಳವು ಭಾರತದ ಅತ್ಯಂತ ಶ್ರೀಮಂತ ಪ್ರಾಂತ್ಯವಾಗಿತ್ತು, ಅಲ್ಲಿ ನವಾಬರ ಆಳ್ವಿಕೆ ಆರಂಭವಾಗಿತ್ತು. ಮುರ್ಷಿದ್ ಕುಲಿ ಖಾನ್‌ನಿಂದ ಆರಂಭವಾಗಿ ಅಲಿವರ್ದಿ ಖಾನ್‌ವರೆಗೆ ಬಂಗಾಳವು ಸಮೃದ್ಧವಾಗಿತ್ತು. ಅಲಿವರ್ದಿ ಖಾನ್ ಒಬ್ಬ ದಕ್ಷ ಆಡಳಿತಗಾರನಾಗಿದ್ದ. ಅವನು ಯುರೋಪಿಯನ್ ವ್ಯಾಪಾರಿಗಳ (ಬ್ರಿಟಿಷ್ ಮತ್ತು ಫ್ರೆಂಚ್) ಬಗ್ಗೆ ಜಾಗರೂಕನಾಗಿದ್ದ. ಅವನು ಅವರನ್ನು 'ಜೇನುಗೂಡಿನ ಜೇನ್ನೊಣ'ಗಳಿಗೆ ಹೋಲಿಸುತ್ತಿದ್ದ - 'ಅವುಗಳನ್ನು ಕೆಣಕದಿದ್ದರೆ ಜೇನು ತುಪ್ಪ ಕೊಡುತ್ತವೆ, ಕೆಣಕಿದರೆ ಕಚ್ಚಿ ಸಾಯಿಸುತ್ತವೆ' ಎಂದು ಹೇಳುತ್ತಿದ್ದ.

1756ರಲ್ಲಿ ಅಲಿವರ್ದಿ ಖಾನ್ ಮರಣ ಹೊಂದಿದಾಗ, ಅವನ ಮೊಮ್ಮಗ ಸಿರಾಜ್-ಉದ್-ದೌಲ ನವಾಬನಾದ. ಅತಿ ಮುಂಗೋಪಿಯಾಗಿದ್ದ ಸಿರಾಜ್‌ನ ಅಧಿಕಾರ ಸ್ವೀಕಾರವು ಸುಗಮವಾಗಿರಲಿಲ್ಲ, ಉತ್ತರಾಧಿಕಾರದ ವಿವಾದವು ಬ್ರಿಟಿಷರಿಗೆ ಭಾರತದ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಲು ಸುಸಂದರ್ಭವನ್ನು ಒದಗಿಸಿಕೊಟ್ಟಿತು. ಅಲಿವರ್ದಿ ಖಾನ್‌ಗೆ ಮೂವರು ಹೆಣ್ಣುಮಕ್ಕಳಿದ್ದರು, ಗಂಡು ಮಕ್ಕಳಿರಲಿಲ್ಲ, ಇವರಲ್ಲಿ ಕಿರಿಯ ಮಗಳ ಮಗನಾದ ಸಿರಾಜ್-ಉದ್-ದೌಲನನ್ನು ಅಲಿವರ್ದಿ ಖಾನ್ ತನ್ನ ಉತ್ತರಾಧಿಕಾರಿಯನ್ನಾಗಿ ಘೋಷಿಸಿದ್ದ. ಆದರೆ ಇದು ಕುಟುಂಬದ ಇತರ ಸದಸ್ಯರಲ್ಲಿ ತೀವ್ರ ಅಸಮಾಧಾನ ಮೂಡಿಸಿತು. ಅಲಿವರ್ದಿ ಖಾನ್‌ನ ಹಿರಿಯ ಮಗಳಾದ ಘಸೇಟಿ ಬೇಗಂ ಅತ್ಯಂತ ಮಹತ್ವಾಕಾಂಕ್ಷಿಯಾಗಿದ್ದಳು. ಸಿರಾಜ್ ನವಾಬನಾಗುವುದನ್ನು ಅವಳು ಸಹಿಸಲಿಲ್ಲ, ಅವಳು ತನ್ನ ಮಗನಾದ ಮುರಾದ್-ಉದ್-ದೌಲನನ್ನು ಸಿಂಹಾಸನದ ಮೇಲೆ ಕೂರಿಸಲು ಬಯಸಿದ್ದಳು. ಸೋದರಸಂಬಂಧಿ ಶೌಕತ್ ಜಂಗ್ ಪೂರ್ಣಿಯಾದ ಗವರ್ನರ್ ಆಗಿದ್ದ. ಈತ ತಾನೇ ಬಂಗಾಳದ ನಿಜವಾದ ವಾರಸುದಾರ ಎಂದು ಪ್ರತಿಪಾದಿಸಿ ಸಿರಾಜ್ ವಿರುದ್ಧ ದಂಗೆ ಎದ್ದಿದ್ದ. ಈ ಆಂತರಿಕ ವಿರೋಧಿಗಳು ನವಾಬನ ಆಸ್ಥಾನದ ಪ್ರಮುಖ ಅಧಿಕಾರಿಗಳಾದ ರಾಜ್‌ಬಲ್ಲಭ್‌ನ ಮತ್ತು ಜಗತ್ ಸೇಠ್‌ರ ಬೆಂಬಲವನ್ನು ಪಡೆದಿದ್ದರು. ಶೌಕತ್ ಜಂಗ್ ಮತ್ತು ಘಸೇಟಿ ಬೇಗಂ, ಸಿರಾಜ್-ಉದ್-ದೌಲನ ವಿರುದ್ಧ ಸಂಚು ರೂಪಿಸುತ್ತಿದ್ದರು. ಈ ಆಂತರಿಕ ಕಲಹವನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ಲಾಭಕ್ಕೆ ಬಳಸಿಕೊಳ್ಳಲು ಮುಂದಾಯಿತು.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತಕ್ಕೆ ಬಂದಾಗ ಅದರ ಪ್ರಾಥಮಿಕ ಉದ್ದೇಶ ಕೇವಲ 'ವ್ಯಾಪಾರ'ವಾಗಿತ್ತು. ಆದರೆ, ಹದಿನೆಂಟನೇ ಶತಮಾನದ ಬಂಗಾಳದ ರಾಜಕೀಯ ಅಸ್ಥಿರತೆಯು ಅವರಲ್ಲಿ ಆಡಳಿತದ ಆಸೆಯನ್ನು ಚಿಗುರಿಸಿತು. ಸಿರಾಜ್-ಉದ್-ದೌಲನ ಆಪ್ತವಲಯದಲ್ಲಿ ಉಂಟಾದ ಬಿರುಕನ್ನು ಬ್ರಿಟಿಷರು ಅತ್ಯಂತ ಚಾಣಾಕ್ಷತನದಿಂದ ಬಳಸಿಕೊಳ್ಳಲು ಹೊಂಚುಹಾಕಿತು. ನವಾಬನ ಆಸ್ಥಾನದ ರಹಸ್ಯಗಳನ್ನು ತಿಳಿಯಲು ಅವರು ಈ ಕೌಟುಂಬಿಕ ಕಲಹವನ್ನು ಕಿಟಕಿಯನ್ನಾಗಿ ಮಾಡಿಕೊಂಡರು. ಬಂಗಾಳದ ಶ್ರೀಮಂತ ವ್ಯಾಪಾರಿಗಳಾದ ಜಗತ್ ಸೇಠ್ ಮತ್ತು ಅಧಿಕಾರಿಗಳಾದ ರಾಜ್‌ಬಲ್ಲಭ್‌ಗೆ ಸಿರಾಜ್‌ನ ಕಠಿಣ ಧೋರಣೆಗಳು ಇಷ್ಟವಿರಲಿಲ್ಲ. ಬ್ರಿಟಿಷರು ಈ ಶ್ರೀಮಂತರೊಂದಿಗೆ ಸ್ನೇಹ ಬೆಳೆಸಿದರು. ನವಾಬನ ಆಸ್ಥಾನದಲ್ಲಿ ಯಾರು ಅತೃಪ್ತರಾಗಿದ್ದಾರೆ ಎಂಬುದನ್ನು ಪಟ್ಟಿ ಮಾಡಿ, ಅವರಿಗೆ ಆಮಿಷಗಳನ್ನು ಒಡ್ಡಿದರು. ಘಸೇಟಿ ಬೇಗಂನ ಆಪ್ತನಾದ ರಾಜ್‌ಬಲ್ಲಭ್‌ನ ಮಗ ಕೃಷ್ಣದತ್ತನು ಭಾರೀ ಪ್ರಮಾಣದ ಹಣದೊಂದಿಗೆ ಬ್ರಿಟಿಷರ ಬಳಿ ಆಶ್ರಯ ಪಡೆದಾಗ, ಸಿರಾಜ್ ಅವನನ್ನು ಹಿಂತಿರುಗಿಸುವಂತೆ ಆದೇಶಿಸಿದ. ಆದರೆ ಬ್ರಿಟಿಷರು ಈ ಆದೇಶವನ್ನು ತಿರಸ್ಕರಿಸುವ ಮೂಲಕ ನವಾಬನಿಗೆ ನೇರ ಸವಾಲು ಹಾಕಿದರು.

ಯುವಕನಾಗಿದ್ದ ಸಿರಾಜ್-ಉದ್-ದೌಲನಿಗೆ ಅನುಭವದ ಕೊರತೆಯಿದ್ದರೂ, ಸ್ವಾಭಿಮಾನ ಮತ್ತು ಧೈರ್ಯ ಹೆಚ್ಚಿತ್ತು. ಬ್ರಿಟಿಷರು ತನ್ನ ಶತ್ರುಗಳಾದ ಘಸೇಟಿ ಬೇಗಂ ಮತ್ತು ಶೌಕತ್ ಜಂಗ್‌ಗೆ ಸಹಾಯ ಮಾಡುತ್ತಿರುವುದು ತನ್ನ ಸಾರ್ವಭೌಮತ್ವಕ್ಕೆ ಮಾಡಿದ ಅವಮಾನ ಎಂದು ಆತ ಭಾವಿಸಿದ. ತನ್ನ ಕುಟುಂಬ ಸದಸ್ಯರು ತನ್ನ ವಿರುದ್ಧ ಕಾರಸ್ಥಾನ ಮಾಡುವುದನ್ನು ನೋಡಿ ಆತ ಸುಮ್ಮನೆ ಕೈಕಟ್ಟಿ ಕೂರುವುದು ಸಾಧ್ಯವೇ ಇರಲಿಲ್ಲ, ದೊಡ್ಡಮ್ಮ ಘಸೇಟಿ ಬೇಗಂಳನ್ನು ಗೃಹಬಂಧನದಲ್ಲಿಟ್ಟ, ಅವಳ ಸಂಪತ್ತನ್ನು ವಶಪಡಿಸಿಕೊಂಡು ಅವಳ ರಾಜಕೀಯ ಶಕ್ತಿಯನ್ನು ಕುಂದಿಸಿದ. 1756ರ ಅಕ್ಟೋಬರ್‌ನಲ್ಲಿ ನಡೆದ 'ಮಣಿಹಾರಿ' ಕದನದಲ್ಲಿ ಶೌಕತ್ ಜಂಗ್‌ನನ್ನು ಕೊಲ್ಲುವ ಮೂಲಕ ತನ್ನ ಆಂತರಿಕ ವಿರೋಧಿಯನ್ನು ಹತ್ತಿಕ್ಕಿದ.

ಈ ಮಧ್ಯೆ, ಬ್ರಿಟಿಷರಿಗೆ ಬಂಗಾಳದಲ್ಲಿ ತೆರಿಗೆ ರಹಿತ ವ್ಯಾಪಾರ ಮಾಡಲು 'ದಸ್ತಕ್' (ಪರವಾನಗಿ) ನೀಡಲಾಗಿತ್ತು. ಆದರೆ, ಕಂಪನಿಯ ಅಧಿಕಾರಿಗಳು ಈ ದಸ್ತಕ್‌ಗಳನ್ನು ತಮ್ಮ ವೈಯಕ್ತಿಕ ವ್ಯಾಪಾರಕ್ಕೂ ಬಳಸಲಾರಂಭಿಸಿದರು. ಇದರಿಂದ ಬಂಗಾಳದ ಸರಕಾರಕ್ಕೆ ಬರಬೇಕಿದ್ದ ಕಂದಾಯದಲ್ಲಿ ಭಾರಿ ಇಳಿಕೆಯಾಯಿತು. ಸ್ಥಳೀಯ ವ್ಯಾಪಾರಿಗಳು ತೆರಿಗೆ ಕಟ್ಟುತ್ತಿದ್ದರು, ಆದರೆ ಬ್ರಿಟಿಷರು ಉಚಿತವಾಗಿ ವ್ಯಾಪಾರ ಮಾಡುತ್ತಿದ್ದರು. ಇದನ್ನು ಸಿರಾಜ್-ಉದ್-ದೌಲ ಕಟ್ಟುನಿಟ್ಟಾಗಿ ವಿರೋಧಿಸಿದ. ಇದು ಕಂಪನಿ ಮತ್ತು ನವಾಬನ ನಡುವಿನ ಮೊದಲ ಸಂಘರ್ಷಕ್ಕೆ ಕಾರಣವಾಗಿತ್ತು. ಈ ಸಮಯದಲ್ಲಿ ಯುರೋಪಿನಲ್ಲಿ ಬ್ರಿಟಿಷರು ಮತ್ತು ಫ್ರೆಂಚರ ನಡುವೆ 'ಸಪ್ತವಾರ್ಷಿಕ ಯುದ್ಧ' ಆರಂಭವಾಗಿತ್ತು. ಅದರ ಪ್ರಭಾವದಿಂದ ಭಾರತದಲ್ಲೂ ಇವರು ಯುದ್ಧಕ್ಕೆ ಸಿದ್ಧತೆ ನಡೆಸಿದರು. ಬ್ರಿಟಿಷರು ತಮ್ಮ ವ್ಯಾಪಾರ ಕೇಂದ್ರವಾದ ಕೋಲ್ಕತಾದ ಫೋರ್ಟ್ ವಿಲಿಯಂ ಕೋಟೆಯನ್ನು ಬಲಪಡಿಸಲು ಮತ್ತು ಸುತ್ತಲೂ ಕಂದಕಗಳನ್ನು ತೋಡಲು ಆರಂಭಿಸಿದರು. ಇದನ್ನು ಗಮನಿಸಿದ ಸಿರಾಜ್, ತನ್ನ ಅನುಮತಿಯಿಲ್ಲದೇ ತನ್ನ ರಾಜ್ಯದಲ್ಲಿ ಕೋಟೆ ಕಟ್ಟುವುದು ಸಾರ್ವಭೌಮತ್ವಕ್ಕೆ ಧಕ್ಕೆ ಎಂದು ಭಾವಿಸಿ, ಕೋಟೆ ನಿರ್ಮಾಣ ನಿಲ್ಲಿಸಲು ಆದೇಶಿಸಿದನು. ಫ್ರೆಂಚರು ಒಪ್ಪಿದರು, ಆದರೆ ಬ್ರಿಟಿಷರು ನವಾಬನ ಆಜ್ಞೆಯನ್ನು ಧಿಕ್ಕರಿಸಿದರು.

ಬ್ರಿಟಿಷರ ಅಹಂಕಾರದಿಂದ ಕೆರಳಿದ ಸಿರಾಜ್-ಉದ್-ದೌಲ, 1756ರ ಜೂನ್‌ನಲ್ಲಿ ಕೋಲ್ಕತಾದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡ. ನವಾಬ 146 ಬ್ರಿಟಿಷ್ ಕೈದಿಗಳನ್ನು ಒಂದು ಸಣ್ಣ, ಕಿಟಕಿಗಳಿಲ್ಲದ ಕೋಣೆಯಲ್ಲಿ ಬಂಧಿಸಿದ್ದ. ಮರುದಿನ ಬೆಳಗ್ಗೆ ಉಸಿರುಗಟ್ಟಿ 123 ಜನರು ಸಾವನ್ನಪ್ಪಿದ್ದರು. ಈ ಘಟನೆಯು ಬ್ರಿಟಿಷರಲ್ಲಿ ಆಕ್ರೋಶವನ್ನುಂಟು ಮಾಡಿತು. ಕೋಲ್ಕತಾದ ಸೋಲಿನ ಸುದ್ದಿಯನ್ನು ಕೇಳಿದ ಬ್ರಿಟಿಷರು ಮದ್ರಾಸ್‌ನಿಂದ ರಾಬರ್ಟ್ ಕ್ಲೈವ್ ಮತ್ತು ಅಡ್ಮಿರಲ್ ವ್ಯಾಟ್ಸನ್ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದರು. ಕ್ಲೈವ್ ಕೋಲ್ಕತಾವನ್ನು ಮರುವಶಪಡಿಸಿಕೊಂಡ. ಅನಿವಾರ್ಯವಾಗಿ ಸಿರಾಜ್ 1757ರ ಫೆಬ್ರವರಿಯಲ್ಲಿ 'ಅಲಿ ನಗರ ಒಪ್ಪಂದ'ಕ್ಕೆ ಸಹಿ ಹಾಕಬೇಕಾಯಿತು. ಈ ಒಪ್ಪಂದದ ಪ್ರಕಾರ ಬ್ರಿಟಿಷರಿಗೆ ಮೊದಲಿನ ಎಲ್ಲ ಸವಲತ್ತುಗಳನ್ನು ನೀಡಲಾಯಿತು. ಆದರೆ ಇದು ಯುದ್ಧದ ಅಂತ್ಯವಾಗಿರಲಿಲ್ಲ, ಕೇವಲ ವಿಶ್ರಾಂತಿಯಾಗಿತ್ತು.



ಸಿರಾಜ್-ಉದ್-ದೌಲನನ್ನು ನೇರ ಯುದ್ಧದಲ್ಲಿ ಸೋಲಿಸುವುದು ಕಷ್ಟವೆಂದು ಅರಿತ ಕ್ಲೈವ್, ಸ್ಕೆಚ್ ಹಾಕಲಾರಂಭಿಸಿದ. ಆತ ಒಬ್ಬ ಚಾಣಾಕ್ಷ ಅಧಿಕಾರಿಯಾಗಿದ್ದ. ಸಿರಾಜ್‌ನ ಬಳಿ 50,000ಕ್ಕೂ ಹೆಚ್ಚು ಸೈನಿಕರಿದ್ದಾರೆ ಮತ್ತು ತಮ್ಮ ಬಳಿ ಕೇವಲ 3,000 ಸೈನಿಕರಿದ್ದಾರೆ ಎಂದು ತಿಳಿದಿದ್ದ ಕ್ಲೈವ್, ಯುದ್ಧದ ಮೈದಾನಕ್ಕಿಳಿಯುವ ಮುನ್ನವೇ ನವಾಬನ ಆಸ್ಥಾನವನ್ನು ಒಳಗಿನಿಂದಲೇ ಟೊಳ್ಳು ಮಾಡಲು ನಿರ್ಧರಿಸಿದ.

ಮೀರ್ ಜಾಫರ್ ಸಿರಾಜ್‌ನ ಮುಖ್ಯ ಸೇನಾಪತಿಯಾಗಿದ್ದ. ಅವನಿಗೆ ಬಂಗಾಳದ ನವಾಬನಾಗಬೇಕೆಂಬ ಆಸೆಯಿತ್ತು. ಕ್ಲೈವ್ ಈ ದೌರ್ಬಲ್ಯವನ್ನು ಬಳಸಿಕೊಂಡ. ಆತನ ತಲೆಯಲ್ಲಿ 'ಬಂಗಾಳದ ನವಾಬಗಿರಿ' ಹುಳಬಿಟ್ಟ. ಯುದ್ಧದ ಸಮಯದಲ್ಲಿ ನೀನು ನಿಮ್ಮ ಸೈನ್ಯದೊಂದಿಗೆ ತಟಸ್ಥವಾಗಿ ಉಳಿಯಬೇಕು ಮತ್ತು ಬ್ರಿಟಿಷರಿಗೆ ಬೆಂಬಲ ನೀಡಬೇಕು. ಇದಕ್ಕೆ ಬಹುಮಾನವಾಗಿ ಸಿರಾಜ್‌ನ ಪತನದ ನಂತರ ನಾವು ನಿನ್ನನ್ನು ಬಂಗಾಳದ ನವಾಬನನ್ನಾಗಿ ಮಾಡುತ್ತೇವೆ ಎಂಬ ಭರವಸೆಯನ್ನು ಮೀರ್ ಜಾಫರ್‌ಗೆ ಕ್ಲೈವ್ ನೀಡಿದ.

ಅಮಿಚಂದ್ ಎಂಬ ಶ್ರೀಮಂತ ವ್ಯಾಪಾರಿ, ಬ್ರಿಟಿಷರು ಮತ್ತು ನವಾಬನ ಆಸ್ಥಾನದ ಸಂಚುಕೋರರ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಿದ. ಈ ಸಂಚು ಯಶಸ್ವಿಯಾದರೆ ತನಗೆ ಭಾರಿ ಮೊತ್ತದ ಹಣ ಬೇಕೆಂದು ಅಮಿಚಂದ್ ಬೇಡಿಕೆಯಿಟ್ಟಿದ್ದ. ಆದರೆ ಕ್ಲೈವ್ ಅವನನ್ನೂ ವಂಚಿಸಿದ. ಕ್ಲೈವ್ ಎರಡು ಒಪ್ಪಂದ ಪತ್ರಗಳನ್ನು ತಯಾರಿಸಿದ - ಒಂದು ಅಸಲಿ (ಬಿಳಿ ಪತ್ರ) ಮತ್ತು ಇನ್ನೊಂದು ನಕಲಿ (ಕೆಂಪು ಪತ್ರ). ನಕಲಿ ಪತ್ರದಲ್ಲಿ ಅಮಿಚಂದ್‌ಗೆ ಹಣ ಕೊಡುವುದಾಗಿ ಬರೆದು ಅವನನ್ನು ನಂಬಿಸಿ ಸಂಚಿನಲ್ಲಿ ಭಾಗಿಯಾಗುವಂತೆ ಮಾಡಿದ. ರಾಯ್ ದುರ್ಲಭ್ ನವಾಬನ ಸೈನ್ಯದ ಒಂದು ದೊಡ್ಡ ವಿಭಾಗದ ಕಮಾಂಡರ್ ಆಗಿದ್ದ. ಇವನೂ ಕೂಡ ಮೀರ್ ಜಾಫರ್ ಮತ್ತು ಜಗತ್ ಸೇಠ್‌ರ ಗುಂಪಿಗೆ ಸೇರಿಕೊಂಡಿದ್ದ. ಯುದ್ಧದ ಸಮಯದಲ್ಲಿ ಇವನು ಸಹ ತನ್ನ ಸೈನಿಕರಿಗೆ ಯುದ್ಧ ಮಾಡದಂತೆ ತಡೆದ. ಇದು ಸಿರಾಜ್‌ನನ್ನು ಅಸಹಾಯಕನನ್ನಾಗಿ ಮಾಡಿತು.

ಕ್ಲೈವ್ ರೂಪಿಸಿದ ಈ ಕುತಂತ್ರವು ಯುದ್ಧ ಆರಂಭವಾಗುವ ಮೊದಲೇ ಬ್ರಿಟಿಷರ ಜಯವನ್ನು ಖಚಿತಪಡಿಸಿತ್ತು. ಜೂನ್ 23, 1757ರಂದು ಪ್ಲಾಸಿಯ ಮೈದಾನದಲ್ಲಿ ಯುದ್ಧ ಆರಂಭವಾಯಿತು. ಒಂದು ಕಡೆ ನವಾಬನ 50,000 ಸೈನಿಕರ ಬೃಹತ್ ಸೈನ್ಯವಿದ್ದರೆ, ಇನ್ನೊಂದು ಕಡೆ ರಾಬರ್ಟ್ ಕ್ಲೈವ್ ನೇತೃತ್ವದ ಕೇವಲ 3,000 ಬ್ರಿಟಿಷ್ ಸೈನಿಕರಿದ್ದರು. ಮೀರ್ ಜಾಫರ್ ಒಳಒಪ್ಪಂದದಂತೆ ಬ್ರಿಟಿಷರೊಂದಿಗೆ ಕೈಜೋಡಿಸಿದ. ಯುದ್ಧದ ಮಧ್ಯೆ ಹಠಾತ್ ಮಳೆ ಸುರಿಯಿತು. ಬ್ರಿಟಿಷರು ತಮ್ಮ ಮದ್ದುಗುಂಡುಗಳನ್ನು ಟಾರ್ಪಾಲಿನ್ ಬಳಸಿ ಸುರಕ್ಷಿತವಾಗಿರಿಸಿದ್ದರು. ಆದರೆ ನವಾಬನ ಮದ್ದುಗುಂಡುಗಳು ಒದ್ದೆಯಾಗಿ ಉಪಯೋಗಕ್ಕೆ ಬಾರದಂತಾದವು. ಸಿರಾಜ್‌ನ ನಿಷ್ಠಾವಂತ ಸೇನಾಪತಿ ಮೀರ್ ಮದನ್ ಮರಣ ಹೊಂದಿದಾಗ ನವಾಬ ಕಂಗೆಟ್ಟ. ಬ್ರಿಟಿಷರ ವಿರುದ್ಧ ಪ್ರಹಾರ ತೀಕ್ಷ್ಣಗೊಳಿಸುವಂತೆ ಆದೇಶಿಸಿದಾಗ, ಮುಖ್ಯ ಸೇನಾಪತಿ ಮೀರ್ ಜಾಫರ್ ತನ್ನ ಸೈನ್ಯದೊಂದಿಗೆ ನಿಷ್ಕ್ರಿಯನಾಗಿ ಉಳಿದುಬಿಟ್ಟ. ಇದು ಸಿರಾಜ್‌ನ ಸೈನ್ಯದಲ್ಲಿ ಗೊಂದಲ ಮೂಡಿಸಿತು. ಕೆಲ ಕ್ಷಣದಲ್ಲಿ ಸೈನಿಕರು ಚದುರಿಹೋದರು. ಇದಾದ ಬಳಿಕ ನವಾಬನ ಸೈನ್ಯ ಸೋಲೊಪ್ಪಿಕೊಂಡಿತು. ಅಷ್ಟೊತ್ತಿಗೆ ಸಿರಾಜ್‌ಗೆ ಇಡೀ ಸಂಚಿನ ಮರ್ಮ ಗೊತ್ತಾಗಿತ್ತು. ಆದರೆ ಕಾಲ ಮಿಂಚಿ ಹೋಗಿತ್ತು. ಸೈನಿಕರು ದಿಕ್ಕಾಪಾಲಾಗಿ ಓಡಿ ಹೋಗಿದ್ದರು. ನಂಬುಗಸ್ಥರೆಲ್ಲ ಕೈಕೊಟ್ಟಿದ್ದರು. ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಸಿರಾಜ್ ಯುದ್ಧಭೂಮಿಯಿಂದ ಮುರ್ಷಿದಾಬಾದ್‌ಗೆ ಪಲಾಯನ ಮಾಡಿದ. ಆದರೆ ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಮೀರ್ ಜಾಫರ್‌ನ ಮಗ ಮೀರನ್ ಸಿರಾಜ್‌ನನ್ನು ಸೆರೆಹಿಡಿದು ಅತ್ಯಂತ ಕ್ರೂರವಾಗಿ ಕೊಂದು ಹಾಕಿದ.

ಪ್ಲಾಸಿ ಕದನವು ಕೇವಲ ಒಂದು ಸಣ್ಣ ಯುದ್ಧವಾಗಿರಲಿಲ್ಲ, ಅದು ಭಾರತದ ದಾಸ್ಯದ ಆರಂಭವಾಗಿತ್ತು. ಬ್ರಿಟಿಷರು ಮೀರ್ ಜಾಫರ್‌ನನ್ನು ಬಂಗಾಳದ 'ಗೊಂಬೆ ನವಾಬ'ನನ್ನಾಗಿ ಮಾಡಿದರು. ಇದರೊಂದಿಗೆ ಬಂಗಾಳದ ಆಡಳಿತವು ಪರೋಕ್ಷವಾಗಿ ಬ್ರಿಟಿಷರ ಕೈವಶವಾಯಿತು. ಬಂಗಾಳದ ಅಪಾರ ಸಂಪತ್ತನ್ನು ಬ್ರಿಟಿಷರು ಲಂಡನ್‌ಗೆ ಸಾಗಿಸಲು ಶುರು ಮಾಡಿದರು. ಇದು ಭಾರತದ ಆರ್ಥಿಕ ಕುಸಿತಕ್ಕೆ ನಾಂದಿಯಾಯಿತು. ಪ್ಲಾಸಿಯ ಗೆಲುವಿನಿಂದ ಬಂದ ಆತ್ಮವಿಶ್ವಾಸ ಮತ್ತು ಹಣದ ಬಲದಿಂದ ಬ್ರಿಟಿಷರು ಇಡೀ ಭಾರತವನ್ನು ಗೆಲ್ಲುವ ಕನಸು ಕಂಡರು.

ಭಾಗೀರಥಿ ನದಿಯ ಮಂದಗತಿಯ ಹರಿವನ್ನು ನೋಡುತ್ತಾ ನಿಂತಾಗ, ಈ ಮಣ್ಣು ಅಂದು ಎಷ್ಟು ರಕ್ತವನ್ನು ಹೀರಿತ್ತು ಮತ್ತು ಎಷ್ಟು ದ್ರೋಹಕ್ಕೆ ಸಾಕ್ಷಿಯಾಗಿತ್ತು ಎಂಬ ಕಹಿ ಸತ್ಯ ಎದೆಯನ್ನು ಭಾರವಾಗಿಸುತ್ತದೆ. ಇಂದು ಪ್ಲಾಸಿ ಕೇವಲ ಒಂದು ಸ್ಮಾರಕವಾಗಿ, ಹಸಿರು ಹೊಲಗಳ ನಡುವೆ ಮೌನವಾಗಿ ಮಲಗಿರಬಹುದು. ಆದರೆ ಅಂದು ಇಲ್ಲಿ ನಡೆದ ಕೆಲವು ಗಂಟೆಗಳ ನಾಟಕವು ಭಾರತವನ್ನು ಸುಮಾರು ಎರಡು ಶತಮಾನಗಳ ಕಾಲ ಬ್ರಿಟಿಷರ ಗುಲಾಮಗಿರಿಗೆ ತಳ್ಳಿತು ಎಂಬುದು ಕಠೋರ ಸತ್ಯ. ಅಂದು ಪ್ಲಾಸಿಯಲ್ಲಿ ನಿಂತಾಗ ಈ ಎಲ್ಲ ನೆನಪುಗಳು ಮರುಕಳಿಸಿದವು.

ದಯಾಮರಣ: ಸಾವಿನ ನಿರೀಕ್ಷೆಯ ಮೌನ ಆಕ್ರಂದನ!

ಸಾವು-ನೋವು

ರವೀ ಸಜಂಗದ್ದೆ
vveditoped@gmail.com

ತನ್ನ ಬದುಕಿನ ದಾರಿ ಸುಗಮಗೊಳಿಸುವ ನೆಪ ಮಾಡಿಕೊಂಡು, ಒಬ್ಬ ಮತ್ತೊಬ್ಬನನ್ನು ಸಾಯಿಸಲು ಕಾರಣ-ನೆಪ ಹುಡುಕುವ ಘಟನೆಗಳನ್ನು ಕಾಲಾಂತರದಲ್ಲಿ ಈ ಜಗತ್ತು ನೋಡಿದೆ! ಶಾಂತಿ ಸ್ಥಾಪನೆ, ಸ್ಥಳೀಯ ಜನರ ಸುರಕ್ಷತೆ ಮುಂತಾದ ಹೆಸರಿನಲ್ಲಿ ಅಮೆರಿಕ, ರಷ್ಯಾ ಮುಂತಾದ ದೇಶಗಳು ನಡೆಸುತ್ತಿರುವ ನರಮೇಧಗಳೂ ನಮ್ಮ ಕಣ್ಣೆದುರು ಇವೆ. ಹೀಗೆ ಸಾಯಿಸುವುದಕ್ಕೆ ನೂರಾರು ಕಾರಣಗಳು, ಸಾವಿರಾರು ಸಮರ್ಥನೆಗಳು. ಇವೆಲ್ಲವೂ ತಂತಮ್ಮ ಮೂಗಿನ ನೇರಕ್ಕೆ ಮಾತ್ರ ಸರಿ ತೋರುವ ವಿಚಾರಗಳು- ಲೋಕದ ದೃಷ್ಟಿಯಲ್ಲಿ ಇಂತಹವೆಲ್ಲವೂ ಜನರ ಮಾರಣ ಹೋಮ, ಮರಣ ಶಾಸನ, ಅಷ್ಟೇ! ನೇರವಿಷಯಕ್ಕೆ ಬರುತ್ತೇನೆ. ಇದೆಲ್ಲದರ ವಿರಹಿತವಾದ, ಕಾನೂನಿನ ಮಾನ್ಯತೆ ಪಡೆದು, ದೀರ್ಘ ಅನಾರೋಗ್ಯದ ಕಾರಣದಿಂದಾಗಿ, ಹಂತಹಂತವಾಗಿ ರೋಗಿಯೊಬ್ಬನ ಜೀವ ತೆಗೆಯುವ ಪ್ರಕ್ರಿಯೆಯ ಹೆಸರು ದಯಾಮರಣ! ಸಂತ್ರಸ್ತರೊಬ್ಬರು ಜೀವಚ್ಛವವಾಗಿ ಬದುಕಿರುವುದಕ್ಕಿಂತ ಸಾವೇ ಸಾವಿರ ಪಾಲು ಲೇಸು ಎಂಬ ತೀರ್ಮಾನಕ್ಕೆ ಅನಾರೋಗ್ಯ ಪೀಡಿತರ ಪರಿವಾರದವರು ಬಂದು, ಅದನ್ನು ಕಾನೂನು ರೀತಿಯಲ್ಲಿ ದೃಢೀಕರಿಸಿ, ಆ ಮೂಲಕ ಅನಾರೋಗ್ಯ ಪೀಡಿತನ ಕಷ್ಟವನ್ನು ಪರಿಹರಿಸುವ ಪ್ರಕ್ರಿಯೆ ಈ ದಯಾಮರಣ. 13 ದೀರ್ಘ ವರ್ಷಗಳಿಂದ ಕೋಮಾ ಸ್ಥಿತಿಯಲ್ಲಿದ್ದ ಗಾಜಿಯಾಬಾದ್‌ನ ಹರೀಶ್ ರಾಣಾ ಎಂಬವರ ದಯಾಮರಣಕ್ಕೆ ಸುಪ್ರೀಂಕೋರ್ಟ್ ಇತ್ತೀಚೆಗೆ ಅನುಮತಿ ನೀಡಿತು. ಭಾರತದಲ್ಲಿ ಈ ರೀತಿ ದಯಾಮರಣ ಪಡೆದ ಮೊದಲ ಪ್ರಕರಣವಿದು. ಹೀಗೆ ದಯಾ ಮರಣಕ್ಕೆ ಅನುಮತಿ ಪಡೆದು ಮೊನ್ನೆ ಮಂಗಳವಾರ ಹೊಸದಿಲ್ಲಿಯ ಏಮ್ಸ್ ಆಸ್ಪತ್ರೆಯಲ್ಲಿ ಹರೀಶ್ ರಾಣಾ ಕೊನೆಯುಸಿರೆಳೆದರು. ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿ ಸಂಚಲನ ಮೂಡಿಸಿದ ಈ ವಿಷಯದ ಕುರಿತು ಒಂದಿಷ್ಟು ವಿವರಗಳು ಇಲ್ಲಿವೆ.

ಅಂದು ರಕ್ಷಾಬಂಧನ, ತಾರೀಕು ಆಗಸ್ಟ್ 20, 2013. ದೆಹಲಿ ಮೂಲದ ಹರೀಶ್ ರಾಣಾ ಚಂಡೀಗಢದ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನ ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿ. ವಾಸವಿದ್ದ ಹಾಸ್ಟೆಲ್‌ನ ನಾಲ್ಕನೆಯ ಮಹಡಿಯಿಂದ ಆಕಸ್ಮಿಕವಾಗಿ ಕೆಳಗೆ ಬಿದ್ದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ, ಕೋಮಾಕ್ಕೆ ಜಾರಿ ಸಂಪೂರ್ಣ ದೈಹಿಕ ಅಂಗವೈಕಲ್ಯಕ್ಕೆ ತುತ್ತಾದರು. ಕಳೆದ 13 ವರ್ಷಗಳಿಂದ ಹರೀಶ್ ರಾಣಾ ಉಸಿರಾಟಕ್ಕಾಗಿ ಟ್ರಾಕಿಯೊಸ್ಟೊಮಿ ಟ್ಯೂಬ್ ಮತ್ತು ಆಹಾರ ಸೇವನೆಗಾಗಿ ಗ್ಯಾಸ್ಟ್ರೋಜೆನೊಸ್ಟೊಮಿ ಟ್ಯೂಬನ್ನು ಅವಲಂಬಿಸಿ, ಹಾಸಿಗೆಗೆ ಸೀಮಿತವಾಗಿ ಜೀವಂತ ಶವದಂತೆ ಬದುಕುತ್ತಿದ್ದರು. ಅವರಿಗೆ, ಪೋಷಕರಿಗೆ ಮತ್ತು ಮನೆಯವರಿಗೆ ನಿತ್ಯ ನರಕಯಾತನೆ! 'ಇಂದಲ್ಲ ನಾಳೆ ಮಗನ ಆರೋಗ್ಯ ಸುಧಾರಿಸಬಹುದು' ಎಂದು ಆಶಾಭಾವನೆ ಹೊತ್ತು ಆತನ ಆರೈಕೆ ಮಾಡಲು ಸರ್ವಸ್ವವನ್ನೂ ತ್ಯಾಗ ಮಾಡಿದ ಆ ಹೆತ್ತವರ ಮಹದಾಸೆ ಪೂರೈಸಲೇ ಇಲ್ಲವಲ್ಲ. ಇಷ್ಟು ವರ್ಷ ಕಳೆದರೂ ಮಗನ ಆರೋಗ್ಯದಲ್ಲಿ ಯಾವುದೇ ಚೇತರಿಕೆ ಇಲ್ಲ. ಹೀಗೆ ದಿನಾಲೂ ನರಕ ಅನುಭವಿಸಿದ ಹೆತ್ತವರು ಆತನ ಸಂಕಟ ನೋಡಲಾಗದೆ ಆತನಿಗೆ ದಯಾ ಮರಣ ಪಾಲಿಸುವಂತೆ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದರು.

ದಯಾಮರಣದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಆ ಅರ್ಜಿಯನ್ನು ವಜಾಗೊಳಿಸಿತು. ಈ ಆಘಾತದ ನಂತರ ಹೆತ್ತವರು ಮಗನ ನರಕಸದೃಶ ಜೀವನ ಕೊನೆಗೊಳಿಸುವ ಅಂತಿಮ ಪ್ರಯತ್ನವಾಗಿ ಸುಪ್ರೀಂಕೋರ್ಟ್ ಕದ ತಟ್ಟಿದರು. ಹಲವಾರು ತಿಂಗಳುಗಳ ದೀರ್ಘ ವಿಚಾರಣೆ, ವಿವೇಚನೆ ಮತ್ತು ವಿವಿಧ ದೃಷ್ಟಿಕೋನಗಳಿಂದ ಈ ಸೂಕ್ಷ್ಮ ವಿಚಾರವನ್ನು ಪರಿಶೀಲಿಸಿದ ನ್ಯಾಯಾಲಯ ಅಂತಿಮವಾಗಿ 'ನಿಷ್ಕ್ರಿಯ ದಯಾಮರಣ ಮೂಲಭೂತ ಹಕ್ಕು' ಎಂದು ಗುರುತಿಸಿತು. 2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಮಹತ್ವದ ನಿಷ್ಕ್ರಿಯ ದಯಾಮರಣ ತೀರ್ಪನ್ನು ಕಾನೂನುಬದ್ಧಗೊಳಿಸಿ, ಘನತೆ-ಗೌರವದಿಂದ ಸಾಯುವ ಹಕ್ಕು ಉಲ್ಲೇಖಿಸಿ ಈ ಸಂಚಲನ ಭರಿತ ತೀರ್ಪು ನೀಡಿತು. ಹೀಗೆ ಆ ಕಾನೂನಿನಡಿಯಲ್ಲಿ ದಯಾಮರಣ ಪಡೆದ ಮೊದಲ ವ್ಯಕ್ತಿ ಹರೀಶ್ ರಾಣಾ. ನ್ಯಾಯದಾನದ ಇತಿಹಾಸದಲ್ಲಿ ಕಾನೂನಿನ ಚೌಕಟ್ಟು ಮೀರಿ, ಮಾನವೀಯ ಸಂವೇದನೆಗಳ ಪರಾಕಾಷ್ಠೆಯ ದ್ಯೋತಕವಾಗಿ ಈ ಪ್ರಕರಣ ಚರಿತ್ರೆಯಲ್ಲಿ ದಾಖಲಾಯಿತು! ಮಗನ ಸಾವಿಗಾಗಿ ಹೆತ್ತವರು ಅಂಗಲಾಚುವ ವಿಷಣ್ಣ ಸನ್ನಿವೇಶವನ್ನು ಊಹಿಸಿಕೊಳ್ಳಲೂ ಕಷ್ಟ!

ನ್ಯಾಯಮೂರ್ತಿಗಳಾದ ಪಾರ್ದಿವಾಲಾ ಮತ್ತು ವಿಶ್ವನಾಥನ್ ಅವರ ನ್ಯಾಯಪೀಠವು ಈ ದಯಾಮರಣ ಕೋರಿಕೆ ಪ್ರಕರಣವನ್ನು ತುಂಬಾ ಸೂಕ್ಷ್ಮವಾಗಿ ಪರಿಶೀಲಿಸಿತು. ಅರ್ಜಿ ವಿಚಾರಣೆ ಸಂದರ್ಭದಲ್ಲಿ 'ಇಲ್ಲಿ ಪ್ರಶ್ನೆ ಇರುವುದು ರೋಗಿಯ ಸಾವಿನಲ್ಲಿ ಯಾರಿಗಾದರೂ ಹಿತಾಸಕ್ತಿ ಇದೆಯೇ ಎಂಬುದಾಗಿ ಅಲ್ಲ. ಬದಲಿಗೆ ರೋಗಿಯ ಜೀವ ಉಳಿಸುವ ಚಿಕಿತ್ಸೆಯನ್ನು ಇನ್ನೂ ಮುಂದುವರಿಸುವುದರಿಂದ ರೋಗಿಗೆ ಏನಾದರೂ ಪ್ರಯೋಜನ ಇದೆಯೇ?' ಎಂದು ಪೀಠ ಪ್ರಶ್ನಿಸಿತು. ಅದಕ್ಕೆ ಯಾರ ಬಳಿಯೂ ಸಮರ್ಪಕ-ನಿಖರ ಉತ್ತರ ಇಲ್ಲದಿದ್ದರೂ ವೈದ್ಯಕೀಯ ವರದಿಗಳ ಪ್ರಕಾರ ರಾಣಾ ಚೇತರಿಕೆಯ ಸಾಧ್ಯತೆ ಶೂನ್ಯವಾಗಿತ್ತು - 'ಇಂದಲ್ಲ ನಾಳೆ ಮಗ ಹುಷಾರಾಗುತ್ತಾನೆ' ಎನ್ನುವ ಹರೀಶ್ ರಾಣಾ ಹೆತ್ತವರ ಆಶಾಭಾವನೆಯ ಹಾಗೆ! ಉಜ್ವಲ ಭವಿಷ್ಯ ಇರುವ ಹುಡುಗ 13 ವರ್ಷಗಳಿಂದ ಹಾಸಿಗೆ ಹಿಡಿದು ವೃದ್ಧ ಪೋಷಕರ ಮೇಲೆ ಅವಲಂಬಿತನಾಗಿದ್ದಾನೆ. ಅವರು ಸುದೀರ್ಘ ಕಾಲ ನಡೆಸಿದ ಹೋರಾಟ ಬೆಲೆಕಟ್ಟಲಾಗದ್ದು. ವೈದ್ಯಕೀಯ ಮಂಡಳಿಯ ವಿಸ್ತೃತ ವರದಿ ಮತ್ತು ಶಿಫಾರಸಿನ ಮೇರೆಗೆ ಜೀವರಕ್ಷಕ ಸಾಧನಗಳನ್ನು ಹಿಂಪಡೆಯಲು ಅನುಮತಿ ನೀಡಲಾಯಿತು. ತೀರ್ಪು ಓದಿದ ನ್ಯಾಯಮೂರ್ತಿ ಪಾರ್ದಿವಾಲಾ ಅವರು 'ಈ ಪ್ರಕರಣವು ನಮ್ಮೆಲ್ಲರನ್ನೂ ತೀವ್ರ ದುಃಖಕ್ಕೆ ದೂಡಿದೆ' ಎಂದು ಹೇಳಿ ಭಾವುಕರಾದರು! ತೀವ್ರ ನೋವಿನಲ್ಲಿದ್ದ ಪೋಷಕರ ಸ್ಥಿತಿ ಮತ್ತು ಹರೀಶ್ ರಾಣಾರ ದುರಂತಮಯ ಬದುಕನ್ನು ನೆನೆದು ಪಾರ್ದಿವಾಲಾ ಕಂಗಳು ತೇವಗೊಂಡವು. ತೀರ್ಪು ಓದುವಾಗ ನ್ಯಾಯಾಧೀಶರು ಬಹಿರಂಗವಾಗಿ ಕಣ್ಣೀರು ಹಾಕಿದ ಹೃದಯಸ್ಪರ್ಶಿ ಘಟನೆಯೊಂದು ಭಾರತದ ನ್ಯಾಯಾಂಗದಲ್ಲಿ ದಾಖಲಿಸಲ್ಪಟ್ಟಿತು!

ಸುಪ್ರೀಂ ಕೋರ್ಟ್ ದಯಾಮರಣ ಕರುಣಿಸಿದ ಸುದ್ದಿಯು ಹರೀಶ್ ರಾಣಾ ಮತ್ತವರ ಕುಟುಂಬ ವಾಸಿಸುವ ಗಾಜಿಯಾಬಾದ್‌ನ ರಾಜ್ ಎಂಪೈರ್ ಸೊಸೈಟಿ ಪರಿಸರದಲ್ಲಿ ಭಾರೀ ಭಾವನಾತ್ಮಕ ವಾತಾವರಣ, ಸನ್ನಿವೇಶ ಸೃಷ್ಟಿಸಿತು. ದಯಾಮರಣದ ಕೋರಿಕೆ ಸಲ್ಲಿಸಿ ಅದು ಪ್ರಾಪ್ತಿಯಾದಾಗ ಸಂಭ್ರಮಿಸಬೇಕೋ, ಮಗನನ್ನು ಕಳೆದುಕೊಳ್ಳುವ ವಿಚಾರದಲ್ಲಿ ಸಂಕಟಪಡಬೇಕೋ ಎಂದು ತಿಳಿಯದಂತಾದ ವಿಷಣ್ಣ ಪರಿಸ್ಥಿತಿ ಪೋಷಕರು ಮತ್ತು ಈ ವಿಷಯ ಕೇಳಿಸಿಕೊಂಡ ಪ್ರತಿಯೊಬ್ಬರದ್ದೂ! ವರ್ಷಗಳಿಂದಲೂ ಹರೀಶ್ ರಾಣಾ ಆರೋಗ್ಯಕ್ಕಾಗಿ ಪ್ರಯತ್ನಿಸಿದ ಮತ್ತು ಪ್ರಾರ್ಥಿಸಿದ ಮನೆಯವರು, ನೆರೆಹೊರೆಯವರು, ಸ್ನೇಹಿತರು, ಹಿತೈಷಿಗಳು, ಸಂಬಂಧಿಕರು ಈ ಸುದ್ದಿ ಕೇಳಿ ಮೌನವಾದರು. ಆ ಕ್ಷಣಕ್ಕೆ ಅವರೆಲ್ಲರ ಪರಿಸ್ಥಿತಿ ಹರೀಶ್ ಆರೋಗ್ಯ ಸ್ಥಿತಿಗಿಂತ ಭಿನ್ನವಾಗಿರಲಿಲ್ಲ! ತಂದೆ ಅಶೋಕ್ ರಾಣಾ ಅವರು ತಮ್ಮ ನೋವನ್ನು ಮರೆಮಾಚಲು ಯತ್ನಿಸಿದರೂ ಅವರ ಮುಖದಲ್ಲಿ ದುಗುಡ, ದುಃಖ ಸ್ಪಷ್ಟವಾಗಿ ಕಾಣಿಸುತ್ತಿತ್ತು. 'ನಮ್ಮ ಮನೆ ಮಗ ನಮ್ಮೆಲ್ಲರನ್ನೂ ಬಿಟ್ಟು ಹೋಗುತ್ತಿದ್ದಾನೆ. ಅವನಿಗೆ ಗೌರವಯುತ ಸಾವು ದೊರಕಿಸಲು ಸಾಧ್ಯವಾಗಿರುವುದು ಮಾತ್ರ ನಮಗೆ ಸ್ವಲ್ಪ ಸಮಾಧಾನ ನೀಡುತ್ತಿದೆ' ಎನ್ನುವಾಗ ಕಣ್ಣೀರು ಗಲ್ಲದ ಮೇಲಿನಿಂದ ಜಾರುತ್ತಿತ್ತು. ಬದುಕು ಕ್ರೂರ ಅನ್ನಿಸುವುದು ಇಂಥಾ ಸಂದರ್ಭಗಳಲ್ಲೇ!

ದಯಾಮರಣ ವಿಚಾರದಲ್ಲಿ ಅರುಣಾ ಶಾನುಭಾಗ್ ಹೆಸರಿನ ಹುಡುಗಿ/ಮಹಿಳೆಯ ದುರಂತ ಕತೆಯನ್ನು ಹೇಳಲೇಬೇಕು! ಮುಂಬೈನ ಆಸ್ಪತ್ರೆಯೊಂದರಲ್ಲಿ ನರ್ಸ್ ಆಗಿದ್ದ ಅರುಣಾ ಮೇಲೆ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದವನೊಬ್ಬ 1973ರ ನವೆಂಬರ್ 27ರಂದು ಹಲ್ಲೆ-ಅತ್ಯಾಚಾರ ಮಾಡಿದ ಪರಿಣಾಮ ಮೆದುಳಿಗೆ ಆಮ್ಲಜನಕ ಪೂರೈಕೆ ಸ್ಥಗಿತಗೊಂಡು ಅರುಣಾ ಕೋಮಾಗೆ ಜಾರಿದರು. ಅರುಣಾ ಸೇವೆ ಸಲ್ಲಿಸಿದ ಆಸ್ಪತ್ರೆಯ ದಾದಿಯರು ಮತ್ತು ಸಿಬ್ಬಂದಿ ಬರೋಬ್ಬರಿ ನಾಲ್ಕು ದಶಕಗಳ ಕಾಲ ಅರುಣಾರ ಆರೈಕೆ, ಶುಶ್ರೂಷೆ ಮಾಡಿದರು. 2009ರಲ್ಲಿ ಪತ್ರಕರ್ತೆ ಪಿಂಕಿ ಇರಾನಿಯವರು ಅರುಣಾರ ದಯನೀಯ ಸ್ಥಿತಿ ಕಂಡು ದಯಾಮರಣ ಕೋರಿ ಕೋರ್ಟಿಗೆ ಅರ್ಜಿ ಸಲ್ಲಿಸಿದರು. ವರ್ಷಗಳ ಕಾಲ ಅರುಣಾ ಅವರನ್ನು ಆರೈಕೆ ಮಾಡಿದ ಆಸ್ಪತ್ರೆಯ ಸಿಬ್ಬಂದಿ ಅರುಣಾ ಇನ್ನಷ್ಟು ದಿನ ಬದುಕಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದುದರಿಂದ ಈ ದಯಾಮರಣ ಅರ್ಜಿಯನ್ನು 2011ರ ಮಾರ್ಚ್ 7ರಂದು ಸುಪ್ರೀಂ ಕೋರ್ಟ್ ತಿರಸ್ಕರಿಸಿತು. ಜೊತೆಗೆ ದಯಾಮರಣಕ್ಕೆ ಸಂಬಂಧಿಸಿದಂತೆ ವಿವರವಾದ ಕಾನೂನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಫರ್ಮಾನು ಹೊರಡಿಸಿತು. 42 ವರ್ಷಗಳ ಕಾಲ ಕೋಮಾದಲ್ಲಿದ್ದ ಅರುಣಾ ಶಾನುಭಾಗ್ ನ್ಯುಮೋನಿಯಾ ರೋಗಕ್ಕೆ ತುತ್ತಾಗಿ 2015ರ ಮೇ 18ರಂದು ಕೊನೆಗೂ ನಿಧನರಾಗಿ, ಹೇಳಿಕೊಳ್ಳಲಾಗದ ತಮ್ಮ ನೋವಿನಿಂದ ಮುಕ್ತಿ ಪಡೆದರು!

ದಯಾಮರಣ ಕಾನೂನು: ದಯಾ ಮರಣದಲ್ಲಿ ಎರಡು ವಿಧ. ವೆಂಟಿಲೇಟರ್ ಬೆಂಬಲ, ಡಯಾಲಿಸಿಸ್ ಅಥವಾ ಕ್ಲಿನಿಕಲಿ ಅಸಿಸ್ಟೆಡ್ ನ್ಯೂಟ್ರಿಷನ್ ಮತ್ತು ಹೈಡ್ರೇಷನ್ ತರಹದ ಜೀವ ಉಳಿಸುವ ವೈದ್ಯಕೀಯ ಚಿಕಿತ್ಸೆ ತಡೆಯುವ/ಹಿಂತೆಗೆಯುವ ಮೂಲಕ ರೋಗಿಯ ಸ್ವಾಭಾವಿಕ ಸಾವಿಗೆ ಅನುಮತಿ ನೀಡುವ ವಿಧಾನ 'ನಿಷ್ಕ್ರಿಯ ದಯಾಮರಣ'. ಹರೀಶ್ ರಾಣಾ ವಿಚಾರದಲ್ಲಿ ಈ ವಿಧಾನವನ್ನು ಬಳಸಲಾಗಿದೆ. ವೈದ್ಯರು ಮಾರಕ ಔಷಧಿಗಳನ್ನು ನೀಡಿ, ತೀವ್ರ ರೋಗಗಳಿಂದ ಬಳಲುವ ರೋಗಿಯ ಜೀವ ತೆಗೆಯುವ, ಒಂದಷ್ಟು ಕ್ರೂರ ಅನಿಸುವ ವಿಧಾನ 'ಸಕ್ರಿಯ ದಯಾಮರಣ'. ಭಾರತದಲ್ಲಿ ಇದಕ್ಕೆ ಮಾನ್ಯತೆ ಇಲ್ಲ, ನೆದರ್ಲೆಂಡ್ ಮತ್ತು ಬೆಲ್ಜಿಯಂ ದೇಶಗಳಲ್ಲಿ ಇದು ಜಾರಿಯಲ್ಲಿದೆ.

ನಿಷ್ಕ್ರಿಯ ದಯಾಮರಣದಲ್ಲಿ ರೋಗಿಯ ಕುಟುಂಬದ ಜೊತೆ ಅನುಭವಿ ವೈದ್ಯರ ತಂಡ ಚರ್ಚಿಸಿ ಒಮ್ಮತವನ್ನು ದಾಖಲಿಸಲಾಗುತ್ತದೆ. ನಂತರ ಸ್ಥಳೀಯ ಮುಖ್ಯ ವೈದ್ಯಾಧಿಕಾರಿಯವರು ನೇಮಿಸಿದ ವೈದ್ಯರು ಮತ್ತೊಮ್ಮೆ ಈ ವಿಚಾರವನ್ನು ಪರಿಶೀಲಿಸಿ, ರೋಗಿಯ ಕುಟುಂಬದೊಡನೆ ಮಾತುಕತೆ ನಡೆಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ರೋಗಿಯು ಸ್ವತಃ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿರದ, ಹರೀಶ್ ರಾಣಾ ತರಹದ ಪ್ರಕರಣಗಳಲ್ಲಿ ಕುಟುಂಬ ಸದಸ್ಯರ ಮನವಿಯನ್ನು ಪರಿಶೀಲಿಸಿ, 'ಉತ್ತಮ ಹಿತಾಸಕ್ತಿ ತತ್ವ'ದ ಆಧಾರದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಹರೀಶ್ ರಾಣಾ ಪ್ರಕರಣದಲ್ಲಿ ಮೇಲೆ ಉಲ್ಲೇಖಿಸಿದ ಎರಡೂ ವೈದ್ಯತಂಡಗಳು ಮತ್ತು ಕುಟುಂಬವು ಸರ್ವಾನುಮತದಿಂದ ಚೇತರಿಕೆ ಅಸಾಧ್ಯವೆಂದು ಒಪ್ಪಿಕೊಂಡ ಕಾರಣ ನ್ಯಾಯಾಲಯವು ನಿಷ್ಕ್ರಿಯ ದಯಾಮರಣಕ್ಕೆ ಅನುಮತಿ ನೀಡಿತು!

ಅರುಣಾ ಶಾನುಭಾಗ್ ಅವರಿಗೆ ಸಿಗದ ನಿಷ್ಕ್ರಿಯ ದಯಾಮರಣದ ಅವಕಾಶ ಹರೀಶ್ ರಾಣಾಗೆ ಸಿಕ್ಕಿತು. ಹಾಗೆ ನೋಡಿದರೆ ದಯೆ ಮತ್ತು ಮರಣ ಒಟ್ಟಿಗೆ ಸಾಗುವುದಾದರೂ ಹೇಗೆ!? ದಯೆಯು ಯಾವಾಗಲೂ ಬದುಕಿನ ಒಟ್ಟಿಗೆ ಜೊತೆಯಾಗಬೇಕಾದದ್ದು ಮತ್ತು ಮರಣದ ಜೊತೆಯಲ್ಲಿ ಅಲ್ಲ ಎನ್ನುವುದು ನಿರ್ವಿವಾದ! ಇಂಥಾ ಸೂಕ್ಷ್ಮ ಮತ್ತು ಗಂಭೀರ ವಿಚಾರಗಳನ್ನು ಬೇರೆ ರೀತಿಯಲ್ಲಿ ನಿಭಾಯಿಸಲು, ಮರಣದ ಹೊರತಾದ ದಾರಿ ಕಂಡುಕೊಳ್ಳಲು ಸಾಧ್ಯವಿತ್ತೇ? ಎನ್ನುವ ಪ್ರಶ್ನೆ ಬಾರದಿರದು! AIIMSನಲ್ಲಿನ ಕೊನೆಯ ಕ್ಷಣದ ವಿಡಿಯೋದಲ್ಲಿ ಬ್ರಹ್ಮಕುಮಾರಿಯೊಬ್ಬರು ಹರೀಶ್ ರಾಣಾ ಹಣೆಗೆ ಏನೋ ಹಚ್ಚಿ 'ಹೊರಡುವ ಸಮಯ ಬಂದಿದೆ, ಎಲ್ಲರನ್ನೂ ಕ್ಷಮಿಸು, ಶಾಂತಿ ಪ್ರಾಪ್ತಿಯಾಗಲಿ' ಎಂದು ಹೇಳುವಾಗ ಕರುಳು ಕಿತ್ತು ಬರುವ ಅಸಹಾಯಕ ಸ್ಥಿತಿ.

ಕೊನೆಗೂ ಹರೀಶ್ ರಾಣಾ ಜೀವ ಕಳಕೊಂಡು ನಿಸ್ತೇಜವಾದರು; ಪ್ರತಿದಿನ ಸತ್ತು ಬದುಕುತ್ತಿದ್ದ ಅವರ ಹೆತ್ತವರು ಮನದ ಭಾರ ಕಳೆದುಕೊಂಡು ಹಗುರಾಗಿರಬಹುದೇನೋ!? ಈ ದುಃಖದ ಸಂದರ್ಭದಲ್ಲೂ ಹರೀಶ್ ರಾಣಾ ಅವರ ಕಣ್ಣುಗಳು ಸೇರಿದಂತೆ ವಿವಿಧ ಅಂಗಾಂಗಗಳನ್ನು ದಾನ ಮಾಡುವ ಸರ್ವಶ್ರೇಷ್ಠ ನಿರ್ಧಾರಕ್ಕೆ ಆತನ ತಂದೆತಾಯಿಗೆ ದೊಡ್ಡ ಸಲಾಂ. ಯಾರಿಗೂ ಹರೀಶ್ ರಾಣಾ ಮತ್ತು ಅವರ ಕುಟುಂಬ ಅನುಭವಿಸಿದ ನೋವು, ದುಗುಡ, ನರಕಯಾತನೆ ಬಾರದಿರಲಿ. ಈ ದಯಾಮರಣಕ್ಕಾಗಿ ಕೋರ್ಟಿಗೆ ಎಡತಾಗುವ, ಅರ್ಜಿ ಸಲ್ಲಿಸುವ ಹತಾಶೆ-ಅಸಹಾಯಕ ಸ್ಥಿತಿ ಯಾರೊಬ್ಬರಿಗೂ ಒದಗದಿರಲಿ. 'ದಯೆಯೇ ಧರ್ಮದ ಮೂಲವಯ್ಯಾ...' ಎಂದು ಸಾರುವ ಶ್ರೇಷ್ಠ ಪರಂಪರೆ ನಮ್ಮದು.

-(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಲತೀಫ್, ಚಾಮರಾಜಪೇಟೆ**
ಭಟ್ರೇ, ಒಂಟಿ ಸಲಗ ಆಟೋ ಮೇಲೆ ದಾಳಿ ಮಾಡಿದರೆ ಗಾಡಿ ಜಖಂ. ಹಾಗಾದರೆ ಕುಳಿತಿದ್ದವರು?
- **ಒಮ್ಮೆಗೆ ಖತಂ!**

- **ಗಣೇಶ ಶರ್ಮ, ಕತ್ರಿಗುಪ್ಪೆ**
ಭಟ್ರೇ, ಸೊಳ್ಳೆಗಳು ಮನುಷ್ಯರಿಗೆ ಕಚ್ಚಿದ ಮೇಲೆ ಯಾಕೆ ಹಾರಿ ಹೋಗುತ್ತವಲ್ಲ?
- **ಯಾಕಂದ್ರೆ, ಕಚ್ಚಿಸಿಕೊಂಡ ಮೇಲೆ ಮನುಷ್ಯರು 'ಥ್ಯಾಂಕ್ಸ್' ಹೇಳ್ತಾರೆ ಎನ್ನುವ ನಂಬಿಕೆ ಅವುಗಳಿಗಿಲ್ಲ!**

- **ರವಿ ಶಲ್ಯಪುರ, ಬೆಳಗಾವಿ**
ಭಟ್ರೇ, ಧುರಂಧರ್ ಸಿನಿಮಾವನ್ನು ನೋಡಿ ತೆಲುಗು ನಟರು ಪ್ರಶಂಸಿಸಿದ್ದಕ್ಕೆ ಪ್ರಕಾಶ ರೈ, ಅವರ ಮೇಲೆ ಮುನಿಸಿಕೊಂಡಿದ್ದಾರಲ್ಲ?
- **ಅವರವರ ಇಷ್ಟ-ಅನಿಷ್ಟ ಅವರವರಿಗೆ. ಈ ರೈ ಯಾವ ಸೀಮೆ ಕೊತ್ವಾಲನಂತೆ?!**

- **ಕೆ.ವಿ.ಗಿರೀಶ್, ಪಿರಿಯಾಪಟ್ಟಣ**
ಭಟ್ರೇ, ಮದುವೆಗೂ ಮುಂಚೆ ಹುಡುಗರು ಯಾಕೆ ಜಾಸ್ತಿ ಗಿಫ್ಟ್ ಕೊಡ್ತಾರೆ?
- **ಯಾಕಂದ್ರೆ, ಮೀನು ಗಾಳಕ್ಕೆ ಬೀಳೋವರೆಗೂ ಆಹಾರ ಹಾಕ್ತಾನೆ ಇರಬೇಕಾಗುತ್ತದಲ್ಲ?!**

- **ವಿಮಲಾ, ತುಮಕೂರು**
ಭಟ್ರೇ, ವೀರಪ್ಪ ಮೊಯಿಲಿಯವರಿಗೆ ಪ್ರತಿ ವರ್ಷ ಜ್ಞಾನಪೀಠ ತಪ್ಪಿ ಹೋಗುತ್ತಿದೆಯಲ್ಲ?
- **ವೀರಪ್ಪ ಮೊಯಿಲಿಯವರಿಗೆ ಪ್ರತಿ ವರ್ಷ ಅನ್ಯಾಯವಾಗುತ್ತಿದೆಯಲ್ಲ ಎಂದು ಕೇಳಿದ್ದಿದ್ದರೆ ಉತ್ತರಿಸುತ್ತಿದ್ದೆ!**

- **ಸಂಗೀತಾ ಎಂ., ಅರಸೀಕೆರೆ**
ಭಟ್ರೇ, ಕಾವ್ಯಕ್ಕಿರುವ ಶಕ್ತಿ ಖಡ್ಗಕ್ಕೂ ಇಲ್ಲ ಅಂತ ಇಲ್ಲೊಬ್ಬ ಹೇಳುತ್ತಾನಲ್ಲ?
- **ಈಗ ಖಡ್ಗವನ್ನು ಯಾರೂ ಉಪಯೋಗಿಸದೇ ಇರುವುದರಿಂದ ಹಾಗೆ ಹೇಳಿರಬಹುದಾ?!**

- **ಜಗದೀಶ ನವಿಲೆ, ಕುಣಿಗಲ್**
ಭಟ್ರೇ, ಅಲಾರಾಂ ಕ್ಲಾಕ್ ಕಂಡುಹಿಡಿದಿದ್ದು ಯಾಕೆ?
- **ನಮಗೆ ನೆಮ್ಮದಿಯಾಗಿ ನಿದ್ದೆ ಮಾಡೋಕೆ ಬರಲ್ಲ ಅಂತ ತೋರಿಸಿಕೊಡೋದಕ್ಕೆ!**

- **ನಾರಾಯಣ ಶೆಲ್ವ, ಶಿವಮೊಗ್ಗ**
ಭಟ್ರೇ, ಎಕ್ಸಾಮ್ ಹಾಲ್‌ನಲ್ಲಿ ಫ್ಯಾನ್ ಹಾಕಿರ್ತಾರಲ್ಲ, ಯಾಕೆ?
- **ಮೇಲಿಂದ ಹಾರಿಬರುವ ಉತ್ತರಗಳು ಹಾರಿ ಹೋಗಲಿ ಅಂತ!**

- **ಪೂರ್ಣೇಶ, (ಇಮೇಲ್ ಮೂಲಕ)**
ಭಟ್ರೇ, ಸ್ಕೂಲ್ ಬ್ಯಾಗ್ ಅಷ್ಟೊಂದು ಭಾರ ಇರುತ್ತದಲ್ಲ?
- **ಮಕ್ಕಳು ಅಷ್ಟೊಂದು ಜ್ಞಾನವನ್ನ ಹೊತ್ತುಕೊಳ್ಳಲು ಆಗಲ್ಲ ಅಂತ ಪುಸ್ತಕಗಳ ರೂಪದಲ್ಲಿ ಬೆನ್ನ ಮೇಲೆ ಹಾಕಿರ್ತಾರೆ!**

ನಮ್ಮ ವಿರುದ್ಧ ನಾವೇ ಸಾರಿದ ಯುದ್ಧ!



ಕಾಡುದಾರಿ
ಹರೀಶ್ ಕೇರ
vveditoped@gmail.com

ಅತ್ತ ಗಲ್ಫ್‌ನಲ್ಲಿ ಇರಾನ್- ಇಸ್ರೇಲ್-ಅಮೆರಿಕ ಹೊಡೆದಾಡಿಕೊಳ್ಳುತ್ತಿವೆ. ತೈಲ ರಿಫೈನರಿಗಳು ದಾಳಿಗೆ ತುತ್ತಾಗಿವೆ. ಉಭಯ ಪಕ್ಷಗಳ ಮುಂದಿನ ಗುರಿ ಬಹುಶಃ ವೈರಿಗಳ ಜಲ ಸಂಸ್ಕರಣಾಗಾರ ಆಗಿರಬಹುದು ಎಂಬ ಅಂದಾಜು. ಯಾಕೆಂದರೆ, ಸದಾ ಶುದ್ಧ ಕುಡಿಯುವ ನೀರಿಗೆ ತತ್ವಾರ ಅನುಭವಿಸುವ ಗಲ್ಫ್ ದೇಶಗಳಿಗೆ ಅವುಗಳೇ ಜೀವಾಳ. ಸಮರ ಎಲ್ಲ ನೈತಿಕ ನೆಲೆಗಳನ್ನು ದಾಟಿರುವುದರಿಂದ, ಯಾವ ಕ್ಷಣದಲ್ಲೂ ಅಂಥ ದಾಳಿ ನಡೆಯಬಹುದು ಎನ್ನಲಡ್ಡಿಯಿಲ್ಲ. ಅದೇನೋ ಸರಿ. ಆದರೆ ನಮ್ಮ ದೇಶದ, ರಾಜ್ಯದ ಜಲಮೂಲಗಳ ಸರ್ವನಾಶಕ್ಕಾಗಿ ನಾವೇ ಹೂಡಿರುವ ಯುದ್ಧದ ಬಗ್ಗೆ ನಿಮಗೆ ಗೊತ್ತೆ? ಇಲ್ಲಿ ನಾವು ಅಂದರೆ ಯಾರು, ಈ ಯುದ್ಧದ ಸ್ವರೂಪ ಏನು, ಇದರ ಹಿಂದಿನ ಉದ್ದೇಶ ಏನು, ಲಾಭ ಯಾರಿಗೆ, ನಷ್ಟ ಯಾರಿಗೆ ಎಂಬುದನ್ನೆಲ್ಲಾ ಮುಂದೆ ನೋಡಬಹುದು.

ಸಾಮಾನ್ಯವಾಗಿ ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಹರಿದುಬರುವ ನದಿಗಳ ನೀರು ಶುದ್ಧವಾಗಿರುತ್ತದೆ ಎಂದು ಭಾವನೆ. ಆದರೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಇತ್ತೀಚೆಗೆ ಒಂದು ವರದಿ ನೀಡಿತು. ಅದರಲ್ಲಿ, ನಮ್ಮ ರಾಜ್ಯದ ನದಿಗಳು ಎಷ್ಟು ಅಪಾಯಕಾರಿಯಾಗಿ ಮಲಿನಗೊಂಡಿವೆ ಎಂಬ ಅಂಕಿಅಂಶ ನೀಡಿತು. ಪಶ್ಚಿಮಘಟ್ಟಗಳಿಂದ ಬರುವ ನದಿಗಳೂ ಇದಕ್ಕೆ ಹೊರತಾಗಿಲ್ಲ. ಅಪ್ಪಟ ಮಲೆನಾಡಿನ ಕಾಡಿನೊಳಗೆಲ್ಲೋ ಹುಟ್ಟಿ ಹರಿದುಬರುವ ತುಂಗಾ ನದಿಯನ್ನು ಈ ಮಂಡಳಿ ರಾಜ್ಯದ ಅತ್ಯಂತ ಮಲಿನಕಾರಿ ನದಿಗಳ ಕೆಟಗರಿಗೆ ('ಸಿ') ಸೇರಿಸಿತು. ಅಲ್ಯೂಮಿನಿಯಂ ಅಂಶ ಅಪಾಯಕಾರಿ ಮಟ್ಟದಲ್ಲಿರುವುದರಿಂದ ನದಿಯ ನೀರು ಕುಡಿಯಲು ಮಾತ್ರವಲ್ಲ ಸ್ನಾನಕ್ಕೂ ಯೋಗ್ಯವಲ್ಲ ಎಂದು ಹೇಳಿತು.

ತುಂಗಾ ನದಿ ಮಾತ್ರವಲ್ಲ. ರಾಜ್ಯದಲ್ಲಿ 12 ಪ್ರಮುಖ ನದಿಗಳಲ್ಲಿ ಸುಮಾರು 700 ಕಿ.ಮೀ. ದೂರದಷ್ಟು ಹರಿಯುವ ನೀರು ಅಪಾಯಕಾರಿ ಮಟ್ಟದಲ್ಲಿ ಮಲಿನಗೊಂಡಿದೆಯಂತೆ. ರಾಜ್ಯದ ಜೀವನಾಡಿಗಳೆನಿಸಿದ ಕಾವೇರಿ, ಭದ್ರಾ, ಕಬಿನಿ, ಕೃಷ್ಣಾ, ಶಿಂಷಾ, ಭೀಮಾ, ನೇತ್ರಾವತಿ, ಅರ್ಕಾವತಿ, ಲಕ್ಷ್ಮಣತೀರ್ಥ, ಕಾಗಿಣಾ ಕೂಡ ವಿಪರೀತ ಗಲೀಜಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ತೊಳೆಯುವ ನೇತ್ರಾವತಿಯನ್ನು 'ಬಿ' ಕೆಟಗರಿಗೆ ಸೇರಿಸಲಾಗಿದೆ. ಅದರ ನೀರು ಕೂಡ ಸಂಸ್ಕರಿಸದೇ ಕುಡಿಯಲು ಅಯೋಗ್ಯವಂತೆ.

ಮಾಲಿನ್ಯಕ್ಕೆ ಹಲವು ಕಾರಣ. ಮುಖ್ಯವಾಗಿ ಪೇಟೆಗಳ ಚರಂಡಿ ನೀರು ಸಂಸ್ಕರಿಸದೇ ನದಿ ಸೇರುವುದು. ಆಮೇಲೆ ಕೈಗಾರಿಕೆಗಳ ತ್ಯಾಜ್ಯ. ತುಂಗೆಯ ಉದಾಹರಣೆ ನೋಡುವುದಾದರೆ, ಶಿವಮೊಗ್ಗ ಮಹಾನಗರ ಪಾಲಿಕೆ ಪ್ರತಿ ದಿನ 34 ದಶಲಕ್ಷ ಲೀಟರ್ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಸ್ಥಾಪಿಸಿದೆ. ಇದಕ್ಕೆ ಕೇವಲ 11 ದಶಲಕ್ಷ ಲೀಟರ್ ತ್ಯಾಜ್ಯ ನೀರು ಬರುತ್ತಿದೆ. ಕಾರಣ ಒಳಚರಂಡಿ ಸಂಪರ್ಕ ಸರಿಯಾಗಿಲ್ಲ. ಉಳಿದ 23 ದಶಲಕ್ಷ ಲೀಟರ್ ಕೊಳಚೆ ತುಂಗೆಗೆ ಹೋಗುತ್ತದೆ. ಇನ್ನು ದಟ್ಟ ಕಾಡುಗಳ ನಡುವಿನಿಂದ ಭೋರ್ಗರೆದು ಬರುವ ಉತ್ತರ ಕನ್ನಡದ ಕಾಳಿ ನದಿ ಕೂಡ, ದಾಂಡೇಲಿಯ ಕೊಳಚೆ ನೀರಿನಿಂದ ಕೊಳಕಾಗುತ್ತದೆ.

ಇನ್ನು ಮನುಷ್ಯರೇ ಬಿಡುವ ನೇರ ತ್ಯಾಜ್ಯ. ಮಲೆನಾಡು ಹಾಗೂ ಕರಾವಳಿಯ ನದಿ ತೀರಗಳಲ್ಲಿ ಕೆಲವು ಪ್ರಮುಖ ಧಾರ್ಮಿಕ ಕೇಂದ್ರಗಳಿವೆ. ಅಲ್ಲಿಗೆ ಪ್ರತಿವರ್ಷ ಒಂದೆರಡು ಕೋಟಿ ಯಾತ್ರಾರ್ಥಿಗಳು ಭೇಟಿ ನೀಡುತ್ತಾರೆ. ಅವರು ಉಳಿದುಕೊಂಡ ಗೆಸ್ಟ್‌ಹೌಸ್‌ಗಳು, ಹೋಟೆಲ್‌ಗಳಲ್ಲಿ ಮಾಡಿದ ಮಾನವ ತ್ಯಾಜ್ಯ ನೇರವಾಗಿ ನದಿಯ ಒಡಲು ಸೇರುತ್ತದೆ. ಇದಕ್ಕೆ ಸಾಕ್ಷಿಯೂ ಉಂಟು. ಮಾನವನ ಮಲದಲ್ಲಿ ಕೋಲಿಫಾರ್ಮ್ ಎಂಬ ಬ್ಯಾಕ್ಟೀರಿಯಾ ಇರುತ್ತದೆ. ಈ ಕೋಲಿಫಾರ್ಮ್ ಪ್ರಮಾಣ ನೇತ್ರಾವತಿ ನದಿಯ ನೀರಿನಲ್ಲಿ ಪ್ರತಿ 100 ಮಿಲಿ ಗ್ರಾಂಗೆ 13 ಎಂಪಿಎನ್ (ಮೋಸ್ಟ್ ಪ್ರೋಟಬಲ್ ನಂಬರ್) ಇದೆ.

ಪುಣ್ಯಕ್ಷೇತ್ರಗಳಲ್ಲಿ ಹರಿಯುವ ತುಂಗೆ, ನೇತ್ರಾವತಿ, ಕಾವೇರಿ ನದಿಗಳಿಗೆ ಇನ್ನೂ ಕೆಲವರ ಕಾಟ ಇದೆ. ಇವರಿಗೆ ಭಕ್ತಿಯ ಜೊತೆಗೆ ಸ್ವಚ್ಛತೆಯ ಪ್ರಜ್ಞೆ, ಸ್ವಚ್ಛತೆಯೇ ದೇವರು ಎಂಬ ತಿಳಿವಳಿಕೆ ಇಲ್ಲ. ಮಿಂದ ಬಳಿಕ ತಮ್ಮ ಬಟ್ಟೆಗಳನ್ನು ನದಿಗೇ ಬಿಸಾಡಿದರೆ ಪುಣ್ಯ ಬರುತ್ತದೆ ಎಂದು ಭಾವಿಸುವವರು ಇವರು. ಇದರಿಂದ ನದಿ ಎಷ್ಟು ಕೊಳಕಾಗುತ್ತದೆ ಎಂಬ ಯೋಚನೆ ಇವರಿಗಿಲ್ಲ. ಗಂಜಾಂನ ನಿಮಿಷಾಂಬ ಮತ್ತು ಶ್ರೀರಂಗಪಟ್ಟಣದ ವಿಶ್ವನಾಥ ದೇವಾಲಯಗಳಲ್ಲಿ ದೇಗುಲದ ಪಕ್ಕವೇ ಇರುವ ಕಾವೇರಿ ನದಿ ನೀರು ಕೊಳಕಾಗಿರುವುದರಿಂದ, ದೇವರ ಅಭಿಷೇಕಕ್ಕೆ ಇದನ್ನು ನೇರವಾಗಿ ಬಳಸುತ್ತಿಲ್ಲ. ಇದೆಲ್ಲ ಪಶ್ಚಿಮಘಟ್ಟಗಳಿಂದ ಬರುವ ನದಿಗಳ ಕತೆಯಾದರೆ, ಕೈಗಾರಿಕೆಗಳು ದಟ್ಟವಾಗಿರುವ ಬಯಲುಸೀಮೆ ಹಾಗೂ ಬೆಂಗಳೂರಿನ ನದಿಗಳ ಕತೆ ದೇವರಿಗೇ ಪ್ರೀತಿ.

ಇದೆಲ್ಲ ಜಲಮೂಲಗಳಾದ ನದಿಗಳ ಮೇಲೆ ಶ್ರೀಸಾಮಾನ್ಯರಾದ ನಾವೇ ಸಾರಿರುವ ಕ್ರೂರ ಯುದ್ಧದ ನಿದರ್ಶನ. ಇವೆಲ್ಲ ನಮ್ಮನಿಮ್ಮಂಥ ಸಾಮಾನ್ಯರ ಕತೆಯಾಯಿತು. ಇನ್ನೂ ದೊಡ್ಡವರ ಯುದ್ಧಗಳ ರೀತಿ ಬೇರೆ. ಉದಾಹರಣೆಗೆ ಎತ್ತಿನಹೊಳೆ ಎಂಬ ಪರಮವ್ಯರ್ಥ ಯೋಜನೆಯನ್ನು ನೋಡಿ. ಪಶ್ಚಿಮಘಟ್ಟಗಳಲ್ಲಿ ಹುಟ್ಟುವ ಹೊಳೆಗಳ ನೀರನ್ನು ಬಯಲುಸೀಮೆ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯಲು ಪೂರೈಸುವುದು ಇದರ ಉದ್ದೇಶ. ಈ ಯೋಜನೆ ಯಾವಾಗ ತುದಿ ಮುಟ್ಟುತ್ತದೆ, ನೀರು ಯಾವಾಗ ಎಲ್ಲಿಗೆ ಬರುತ್ತದೆ, ಎಲ್ಲಿಂದ ಎಷ್ಟು ನೀರು ಎತ್ತಲಾಗುತ್ತದೆ ಎಂಬುದು ನಿಖರವಾಗಿ ಯಾರಿಗೂ ಗೊತ್ತಿಲ್ಲ. 24 ಟಿಎಂಸಿ ನೀರು ಸಿಗುತ್ತದೆ ಎಂಬ ಹಸೀ ಸುಳ್ಳನ್ನು ಹೇಳುತ್ತಲೇ ಇದ್ದಾರೆ. ಯೋಜನೆ ಮುಂದೆ ಮುಂದೆ ಹೋಗುತ್ತಲೇ ಇದೆ. ಅಂದಾಜು ವೆಚ್ಚ ಈಗಾಗಲೇ 23,000 ಕೋಟಿಯನ್ನು ದಾಟಿದೆ. ಕಳೆದೆರಡು ವರ್ಷಗಳಲ್ಲಿ ಇದರ ಪೈಪ್‌ಲೈನ್ ಹಾದುಹೋದ ಜಾಗಗಳಲ್ಲಿ ಸೋರಿಕೆ, ಭೂಕಂಪನ, ಭೂಕುಸಿತ ಕಂಡುಬಂದಿದೆ. ಈ ಪ್ರದೇಶಗಳಲ್ಲಿ ಇರುವವರನ್ನು ದೇವರೇ ಕಾಪಾಡಬೇಕು. ಎತ್ತಿದ ನೀರು ಗುರಿ ತಲುಪುವುದಂತೂ ಕನಸಿನ ಮಾತು. ಎಲ್ಲಿಂದ ಎತ್ತಲಾಗಿದೆಯೋ ಅಲ್ಲಿಗೆ ಆಗುವ ಹಾನಿಯ ಬಗ್ಗೆ ಯಾರಿಗೂ ಕಾಳಜಿ ಇಲ್ಲ.

ಇದರ ಮೇಲಿನಿಂದ ಈಗ ಆಗುಂಬೆಯಲ್ಲಿ ಹಾಗೂ ಶಿರಾಡಿ ಘಾಟಿಯಲ್ಲಿ ಸುರಂಗ ಮಾರ್ಗದ ಯೋಜನೆಯ ಪ್ರಸ್ತಾವ ಮಾಡಲಾಗಿದೆ. ಎಲ್ಲವೂ ಕೋಟಿ ಯೋಜನೆಗಳೇ. ಮಂಗಳೂರು- ಬೆಂಗಳೂರು ಸಂಪರ್ಕಿಸುವ ಶಿರಾಡಿ ಘಾಟಿಯಲ್ಲಿ ಸುರಂಗ, ಗ್ರೀನ್ ಫೀಲ್ಡ್ ಮಾರ್ಗ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ ತಯಾರಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಇದು ಕಾರ್ಯಸಾಧು ಅಲ್ಲ ಎಂದು 2022ರಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಲೋಕಸಭೆಗೆ ಉತ್ತರ ನೀಡಿದ್ದರು. ಆದರೆ ಸುರಂಗ ನಿರ್ಮಾಣಕ್ಕೆ ಒಪ್ಪಿಗೆ ನೀಡುವಂತೆ ಕರ್ನಾಟಕ ಸರ್ಕಾರ 3 ಬಾರಿ ಕೇಂದ್ರಕ್ಕೆ ಮನವಿ ಸಲ್ಲಿಸಿದೆ. ಇನ್ನು ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳನ್ನು ಸಂಪರ್ಕಿಸುವ ಆಗುಂಬೆ ಘಾಟಿಯಲ್ಲಿ ರಾಷ್ಟ್ರೀಯ ಹೆದ್ದಾರಿ 169ಎ ಅಡಿಯಲ್ಲಿ ಸುರಂಗ ಮಾರ್ಗ ನಿರ್ಮಿಸಲು ಕೇಂದ್ರ ಸರ್ಕಾರ ಯೋಜನೆ ರೂಪಿಸುತ್ತಿದೆ. 2.33 ಕೋಟಿ ರು. ವೆಚ್ಚದಲ್ಲಿ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ಇವೆರಡೂ ಸಾರಿಗೆ ಮತ್ತು ಪ್ರವಾಸೋದ್ಯಮಕ್ಕೆ ಪೂರಕವಂತೆ.

ಶಿರಾಡಿ ಘಾಟಿಯ ಯೋಜನೆಯನ್ನೇನೋ ಸಮರ್ಥಿಸಿಕೊಳ್ಳಬಹುದು. ಇದು ರಾಜ್ಯದ ಬ್ಯುಸೀ ಹೆದ್ದಾರಿಗಳಲ್ಲೊಂದು. ಇಲ್ಲೂ ಪರಿಸರ ಸೂಕ್ಷ್ಮ ಅಂಶಗಳಿವೆ. ಆದರೆ ಆಗುಂಬೆಯ ಮೇಲಾಗುವ ದೌರ್ಜನ್ಯವನ್ನು ಸಹಿಸಿಕೊಳ್ಳುವುದಾದರೂ ಹೇಗೆ? ಯುನೆಸ್ಕೋ ಗುರುತಿಸಿದ ಜೀವವೈವಿಧ್ಯ ತಾಣಗಳಲ್ಲಿ ಒಂದಾಗಿರುವ ಆಗುಂಬೆಯ ಮೇಲೆ ಈ ಯೋಜನೆಯಿಂದ ಆಗಬಹುದಾದ ಹಾನಿಯ ಬಗ್ಗೆ, ಅದರ ಧಾರಣ ಶಕ್ತಿಯ ಬಗ್ಗೆ ಈ ರಾಜಕಾರಣಿಗಳಿಗೆ ಹೇಳುವವರು ಯಾರು? ಎಲ್ಲ ಯೋಜನೆಗಳೂ ಸೇರಿ ಕೊನೆಗೂ ಹಲ್ಲೆಯಾಗುವುದು ಜೀವವೈವಿಧ್ಯ, ಸಸ್ಯವೈವಿಧ್ಯದ ಮೇಲೆ. ಜೊತೆಗೆ ನೀರಿನ ಹರಿವಿನ ಮೇಲೆ.

ಇಲ್ಲಿ ಆಗುವ ಸಣ್ಣಸಣ್ಣ ಮಾನವ ಹಸ್ತಕ್ಷೇಪವೂ ಹೇಗೆ ಹಾನಿಕರ ಎಂಬುದಕ್ಕೆ ಒಂದು ನಿದರ್ಶನವಿದೆ. ಇತ್ತೀಚೆಗೆ ಕುದುರೆಮುಖ ಕಾಡಿಗೆ ಬೆಂಕಿ ಬಿತ್ತು. ಲಕ್ಷಗಟ್ಟಲೆ ಹೆಕ್ಟೇರ್ ಶೋಲಾ ಅರಣ್ಯ ಸುಟ್ಟು ಬೂದಿಯಾಯಿತು. ಇದೇನೂ ಪ್ರಾಕೃತಿಕ ಬೆಂಕಿಯಲ್ಲ. ಕಾಡಿನ ಬೆಂಕಿಯೆಲ್ಲವೂ ಮನುಷ್ಯಕೃತ್ಯವೇ. ಒಂದು ಬೆಂಕಿ ಬಿದ್ದರೆ ಆ ನಂತರದ ಮಳೆಗಾಲಕ್ಕೆ ಹುಲುಸಾಗಿ ಹುಲ್ಲು ಚಿಗುರುತ್ತದೆ ನಿಜ. ಆದರೆ ಪದೇಪದೆ ಬೆಂಕಿ ಬೀಳುತ್ತಲೇ ಇದ್ದರೆ ಈ ಹುಲ್ಲಿನ ಬೇರುಗಳೂ ಬೆಂದುಹೋಗಿ ಬೆಟ್ಟ ಬೋಳಾಗುತ್ತದೆ. ಶೋಲಾ ಕಾಡುಗಳ ಅಪರೂಪದ ಗುಣ ಎಂದರೆ, ಬೀಳುವ ಮಳೆನೀರನ್ನು ನಿಧಾನವಾಗಿ ಹರಿಯುವಂತೆ ಮಾಡಿ, ನಿಲ್ಲುವಂತೆ, ಇಂಗುವಂತೆ ಮಾಡಿ, ಈ ಬೆಟ್ಟಗಳು ನೀರಿನ ಖಜಾನೆಗಳಾಗುವಂತೆ ಮಾಡುವುದು. ವರ್ಷವಿಡೀ ಇಲ್ಲಿಂದ ಹೊರಡುವ ನದಿಗಳಿಗೆ ಇದೇ ನೀರ ಸೆಲೆ. ಎಲ್ಲಿ ಶೋಲಾ ಅರಣ್ಯ ಇಲ್ಲವೋ ಅಲ್ಲಿ ನೀರು ನಿಲ್ಲದೇ ಹರಿದುಹೋಗಿ ತೊರೆಗಳೂ ಬತ್ತುತ್ತವೆ. ನೆಲವೂ ಸವಕಳಿಯಾಗುತ್ತದೆ.

ಇದನ್ನು ಬರೆಯುತ್ತಿರುವಾಗಲೇ ಬರುತ್ತಿರುವ ಸುದ್ದಿ ಎಂದರೆ, ಮಲೆನಾಡು ಭಾಗದಲ್ಲಿ ನಡೆಯುತ್ತಿರುವ ಖನಿಜ ನಿಕ್ಷೇಪ ಸರ್ವೇಕ್ಷಣೆಯ ವರ್ತಮಾನ. ಚಿಕ್ಕಮಗಳೂರು, ದಕ್ಷಿಣ ಕನ್ನಡ ಸೇರಿದಂತೆ ಮಲೆನಾಡಿನ ಭಾಗದಲ್ಲಿ ಇತ್ತೀಚೆಗೆ ಕೆಲವು ತಿಂಗಳಿನಿಂದ ತಗ್ಗಿನಲ್ಲಿ ವಿಮಾನಗಳು ಹಾರಾಡುತ್ತಿವೆ. ಇವು ಬೇರೇನೂ ಅಲ್ಲ, ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ (GSI) ನಡೆಸುತ್ತಿರುವ ವೈಜ್ಞಾನಿಕ ಸಮೀಕ್ಷೆಯ ಲಘು ವಿಮಾನಗಳು. ಭೂಗರ್ಭದ ರಚನೆ, ಖನಿಜ ಸಂಪನ್ಮೂಲ ಮತ್ತು ಜಲ ಸಂಪನ್ಮೂಲಗಳ ಪತ್ತೆಗಾಗಿ ಈ ಹೈಟೆಕ್ ವೈಮಾನಿಕ ಸಮೀಕ್ಷೆ ನಡೆಯುತ್ತಿದೆ. ಪಶ್ಚಿಮ ಘಟ್ಟಗಳಲ್ಲಿ ಸಾಕಷ್ಟು ಖನಿಜ ನಿಕ್ಷೇಪ ಇರುವುದಂತೂ ನಿಜ. ಇದು ಪತ್ತೆಯಾಗಲೂಬಹುದು. ಆಮೇಲೇನಾಗುತ್ತದೆ? ಇದು ಸ್ಥಳೀಯರ, ಇಲ್ಲಿ ವನ್ಯವೈವಿಧ್ಯ ಮತ್ತು ಜಲಮೂಲದ ಮೇಲಿನ ತೂಗುಗತ್ತಿ ಎಂದು ತಿಳಿಯಲು ಹೆಚ್ಚಿನ ಜಾಣ್ಮೆ ಬೇಕಿಲ್ಲ.

ನಮ್ಮ ಜಲಸಂಪನ್ಮೂಲಗಳನ್ನು ಸಾಧ್ಯವಾದಷ್ಟು ಹಾಳುಗೆಡಹುವುದು ಹೊರತುಪಡಿಸಿ ಸಂರಕ್ಷಣೆಯ ಕುರಿತು ನಮ್ಮಲ್ಲಿ ಯಾವುದೇ ಯೋಜನೆಗಳು ಇಲ್ಲ. ಎಲ್ಲರೂ ಎಷ್ಟು ನೀರು ಮತ್ತು ಕಾಸು ದೋಚಬಹುದು ಎಂದು ನೋಡುತ್ತಿದ್ದಾರೆಯೇ ಹೊರತು, ಇದನ್ನು ಮುಂದಿನ ಜನಾಂಗಕ್ಕೂ ಉಳಿಸಿಕೊಂಡು ಹೋಗುವುದು ಹೇಗೆ ಎಂದು ಯೋಚಿಸುತ್ತಿಲ್ಲ. ನರಕವನ್ನು ಸೃಷ್ಟಿಸಿ ಹೋಗುವ ನಮ್ಮನ್ನು ಮುಂದಿನ ತಲೆಮಾರುಗಳು ಕ್ಷಮಿಸುವುದಿಲ್ಲ.

ಶ್ರೀರಾಮ ನವಮಿ

ಮುಂಡಾಜೆ ಕುಮಾರೇಶ್ವರ ಭಟ್

ರಾಜ ನಿರ್ಮಾತೃ ರಾಜಾರಾಮ...

ಕಂಜಾಯತ ಪತ್ರಾಯತ ಲೋಚನಾಯ
ಕರ್ಣಾವತಂಸೋಜ್ವಲ ಕುಂಡಲಾಯ ।
ಕಾರುಣ್ಯಪಾತ್ರಾಯ ಸುವಂಶಜಾಯ
ನಮೋಸ್ತು ರಾಮಾಯ ಸ ಲಕ್ಷ್ಮಣಾಯ॥

ಆದಿಗುರು ಶಂಕರಾಚಾರ್ಯ ವಿರಚಿತ ಸುಪ್ರಸಿದ್ಧ ಶ್ರೀರಾಮ ಪಂಚರತ್ನ ಸ್ತೋತ್ರದ ಆರಂಭದ ಈ ಚರಣದೊಂದಿಗೆ ಚೈತ್ರ ಶುದ್ಧ ನವಮಿಯ ಈ ಸಲದ ಶ್ರೀರಾಮನ ಭೂಮಿಗೆ ಅವತರಣವಾದ ದಿನವನ್ನು ಎದುರುಗೊಳ್ಳೋಣ. 'ಕಿಂಗ್ ಮೇಕರ್' ಕೋಸಲಾಧೀಶ! ಪ್ರಸ್ತುತ ರಾಜಕೀಯ ವಲಯದಲ್ಲಿ ಕಿಂಗ್‌ಗಳಿಗಿಂತಲೂ ಕಿಂಗ್ ಮೇಕರ್‌ಗಳಿಗೆ ಇರುವ ಮಹತ್ವ, ಪ್ರಭಾವ ಗಮನಿಸಿದಾಗ, ಈ ಸಲದ ಶ್ರೀರಾಮ ನವಮಿಯ ಪಾವನ ಪರ್ವದಲ್ಲಿ ರಾಜ ನಿರ್ಮಾತೃವಾಗಿ ರಾಜಾರಾಮನ ವ್ಯಕ್ತಿತ್ವದ ವಿಶಿಷ್ಟ ಮಜಲಿನ ಅವಲೋಕನ ಸಕಾಲಿಕವಾದುದು.

ಪತ್ನೀವಿಹೀನನಾಗಿ, ರಾಜ್ಯ, ಕೋಶ ಪರಿವಾರದಿಂದ ವಂಚಿತನಾಗಿ, ನಾರುಡೆಯುಟ್ಟು ಅವಧೂತನಂತೆ ತಮ್ಮ ಲಕ್ಷ್ಮಣನೊಂದಿಗೆ ಅಂಡಲೆಯುತ್ತಿದ್ದ ಸಂದರ್ಭ. ಸೀತಾನ್ವೇಷಣೆಯನ್ನು ಮಾಡುತ್ತಿದ್ದರೂ ವಾಲಿ ಸುಗ್ರೀವರ ವ್ಯಾಜ್ಯಕ್ಕೆ ವಿದಾಯ ಹೇಳುವ ನಿಟ್ಟಿನಲ್ಲಿ, ವಾಲಿಗೆ ಅಪರಾಧಕ್ಕೆ ತಕ್ಕ ದಂಡನೆ ನೀಡಿ ಸುಗ್ರೀವನನ್ನು ಕಪಿ ಸಮೂಹದ ರಾಜನನ್ನಾಗಿಸುತ್ತಾನೆ. ತಾನು ಸಾಮ್ರಾಟ ಪಟ್ಟಾಭಿಷೇಕದಿಂದ ವಂಚಿತನಾಗಿದ್ದರೂ ಸುಗ್ರೀವನನ್ನು ಕಿಷ್ಕಿಂಧೆಯ ಅಧಿಪತಿಯಾಗಿಸುತ್ತಾನೆ. ವಯೋವೃದ್ಧ ಸಾಮ್ರಾಟನ ದೌರ್ಬಲ್ಯಕ್ಕೆ ತಾನು ಬಲಿಪಶುವಾದೆನೆಂದು ಅರೆಕ್ಷಣವೂ ಯೋಚಿಸದೆ, ತದನಂತರದ ಸರಣಿ ಆಘಾತಗಳ ಮಧ್ಯೆಯೂ ನೈತಿಕ ಸ್ಥೈರ್ಯ ಕಳೆದುಕೊಳ್ಳದೆ ಈ ಸಂದರ್ಭ ರಾಮ ನಡೆದ ಪರಿ ವಿಸ್ಮಯ ಮೂಡಿಸುತ್ತದೆ !

ಮಾತ್ರ ಅಲ್ಲ, ತನ್ನ ತಪ್ಪಿನ ಅರಿವಾದ ಮಹಾವೀರ ವಾಲಿ ಮರಣಶಯ್ಯೆಯಲ್ಲಿ ತನ್ನ ಮಗ ಅಂಗದನನ್ನು ತೋರಿಸುತ್ತಾ, ಈ ಹುಡುಗನನ್ನು ನಿನ್ನ ಕೈಗೊಪ್ಪಿಸುತ್ತಿದ್ದೇನೆ, ರಘುಕುಲಾಧೀಶ ಎಂದಾಗ ; ತಕ್ಷಣ ಸುಗ್ರೀವ ಸಹಿತ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಕಪಿ ನಾಯಕರನ್ನು ನೋಡುತ್ತಾ, ಕಿಷ್ಕಿಂಧೆಯ ಯುವರಾಜನಾಗಿ ಕುಮಾರ ಅಂಗದನ ಸರ್ವಾಂಗೀಣ ಜವಾಬ್ದಾರಿ ನಮ್ಮೆಲ್ಲರದು ಎಂದು ಘೋಷಿಸಿದ ಪ್ರಸಂಗಾವಧಾನಿ ಶ್ರೀರಾಮ! ಹೀಗೆ ಮೊತ್ತ ಮೊದಲು ತನ್ನ ಅತ್ಯಂತ ಸಂಕಷ್ಟದ ಸನ್ನಿವೇಶದಲ್ಲೇ ರಾಘವನು ರಾಜ ನಿರ್ಮಾತೃ ಮಾತ್ರವಲ್ಲದೇ ಯುವರಾಜ ನಿರ್ಮಾತೃವಾಗಿಯೂ ನಮ್ಮ ಕಣ್ಣ ಮುಂದಿದ್ದಾನೆ.

ಇನ್ನು ರಾವಣನೊಂದಿಗೆ ಯುದ್ಧಸಿದ್ಧತೆಯಾಗುತ್ತಿದ್ದ ಸಂದರ್ಭ. ಬುದ್ಧಿವಾದದ ಮಾತಿಗೆ ಅಸಮಾಧಾನಗೊಂಡ ಅಣ್ಣ ರಾವಣನಿಂದ ಅವಮಾನವನ್ನೂ ಅನುಭವಿಸಿದ ತಮ್ಮ ವಿಭೀಷಣ ನೇರ ಬಂದು ಶರಣಾಗಿದ್ದು ಸಮುದ್ರದಂಡೆಯಲ್ಲಿ ಡೇರೆ ಹಾಕಿದ್ದ ಶತ್ರು ಪಾಳೆಯದ ಪ್ರಮುಖ ಶ್ರೀರಾಮನಿಗೆ! ಶರಣಾಗತ ರಕ್ಷಕನೂ ಆಶ್ರಿತವತ್ಸಲನೂ ಆದ ರಾಮ; ಕಪಿಗಳ ಒಡೆಯ ದಂಡನಾಯಕ ಸುಗ್ರೀವನ ಅಸಮ್ಮತಿಯ ಮಧ್ಯೆಯೂ ರಾಕ್ಷಸನಾದ ವಿಭೀಷಣನಿಗೆ ಆಶ್ರಯ ನೀಡಿದನು. ಅಷ್ಟೇ

ಅಲ್ಲ, ವಿಭೀಷಣನ ಇತ್ಯೋಪರಿಯನ್ನು ಹನುಮಂತನಿಂದ ತಿಳಿದ ರಾಮ ಅಲ್ಲೇ ಶರಧಿಯ ಜಲವನ್ನು ತರಿಸಿ ಶಿಬಿರದಲ್ಲೇ ಕಿರೀಟಧಾರಣೆ ಮಾಡಿಸಿ ಲಂಕೆಯ ಮುಂದಿನ ರಾಜ ಎಂದು ಸಾರುತ್ತಾನೆ! ತನ್ಮೂಲಕ ರಾಜನೀತಿಜ್ಞನಾಗಿ ರಾವಣನಿಗೆ ಸರಿಯಾದ ಸಂದೇಶವನ್ನೇ ರವಾನೆ ಮಾಡುತ್ತಾನೆ! ಹೀಗೆ ಶತ್ರುವಿನ ನೈತಿಕ ಸ್ಥೈರ್ಯ ಉಡುಗಿಸುವುದರೊಂದಿಗೆ ಅಸುರರಾದರೂ ಉತ್ತಮರಾದರೆ ಸ್ವೀಕಾರಾರ್ಹರು ಎಂಬ ಮಹಾನ್ ತತ್ವವನ್ನು ಜಗಕೆ ತೋರಿಸಿಕೊಟ್ಟಿದ್ದಾನೆ.

ರಾವಣವಧೆಯ ನಂತರ ವಿಭೀಷಣನನ್ನು ಲಂಕೆಯ ನೂತನ ರಾಜನಾಗಿಸಿ, ಸೀತಾದೇವಿ ಸಂಗಡ ಅಯೋಧ್ಯೆಗೆ ಹಿಂತಿರುಗಿ ತಮ್ಮಂದಿರ ಹಾಗೂ ಪುರಜನರ ಅಪೇಕ್ಷೆಯ ಮೇರೆಗೆ ಸಾಮ್ರಾಟನಾಗಿ ಪಟ್ಟಾಭಿಷಕ್ತನಾದ ಮೇಲೂ ರಾಮನು ತನ್ನ ವೈಶಿಷ್ಟ್ಯಪೂರ್ಣ ರಾಜ ನಿರ್ಮಾತೃ ಕೈಂಕರ್ಯವನ್ನು ಮುಂದುವರಿಸುತ್ತಾನೆ.

ಪ್ರಜಾಕಂಟಕನಾದ ಲವಣಾಸುರನನ್ನು ಸಂಹರಿಸಿದ ಸಹೋದರ ಶತ್ರುಘ್ನನನ್ನು ಲವಣಪುರಿಗೇ ಅರಸನಾಗಿಸುತ್ತಾನೆ ಶ್ರೀರಾಮ. ತನ್ನ ರಾಮಾವತಾರ ಸಮಾಪ್ತಿಯ ಸಮಯ ಹತ್ತಿರವಾಗುತ್ತಿರಲು, ತನ್ನ ಅವಳಿ ಮಕ್ಕಳಲ್ಲಿ ಹಿರಿಯನಾದ ಕುಶನನ್ನು ಕುಶಾವತಿಗೂ, ಲವನನ್ನು ಶ್ರಾವಸ್ತಿಗೂ ದೊರೆಗಳನ್ನಾಗಿಸುತ್ತಾನೆ. ಅದೇ ರೀತಿ ಭರತನ ಮಕ್ಕಳಾದ ತಕ್ಷ ಮತ್ತು ಪುಷ್ಕಳರು ಅನುಕ್ರಮವಾಗಿ ತಕ್ಷಶಿಲಾ ಮತ್ತು ಪುಷ್ಕಳಾವತಿಯನ್ನು ಆಳಿದರೆ, ಶತ್ರುಘ್ನನ ಸುತರಾದ ಸುಬಾಹು ಮಥುರಾವನ್ನೂ, ಶತ್ರುಘ್ನಾತಿ ವಿದಿಶಾಕ್ಕೂ ನೇತಾರರಾಗುತ್ತಾರೆ. ಅಂತೆಯೇ ಲಕ್ಷ್ಮಣ ಕುವರರಾದ ಅಂಗದ ಕುರುಪಾದವನ್ನೂ, ಚಂದ್ರಕೇತು ಚಂದ್ರಕಾಂತವನ್ನೂ ನೋಡಿಕೊಳ್ಳುವಂತೆ ರಾಮನೇ ವ್ಯವಸ್ಥೆ ಮಾಡುತ್ತಾನೆ. ಈ ರೀತಿಯಲ್ಲಿ ಕೋಸಲದ ಉತ್ತರಾಧಿಕಾರಿಗಳ ಶಕೆ ಆರಂಭವಾಗುತ್ತದೆ.

ಮರ್ಯಾದಾ ಪುರುಷೋತ್ತಮನಾಗಿ ನೆಗಳ್ತೆಯನ್ನು ಹೊಂದಿದ ರಾಜಾರಾಮನಷ್ಟು ಯುವರಾಜರನ್ನು ನೇಮಿಸಿದವರು ತ್ರೇತೆ ಹಾಗೂ ದ್ವಾಪರ ಯುಗಗಳೆರಡರಲ್ಲೂ ಬೇರೆಯವರನ್ನು ಕಾಣುವುದು ಅಸಂಭವ. ರಾಜನೀತಿ ವಿಶಾರದನಾಗಿ ರಾಮನಷ್ಟು ಪ್ರಖ್ಯಾತಿ ಗಳಿಸಿದವರು ಅನ್ಯತ್ರ ಅಲಭ್ಯ. ರಾಜ್ಯವಿಹೀನನಾಗಿದ್ದಾಗಲೂ ರಾಜ್ಯವಾಳುತ್ತಿದ್ದಾಗಲೂ ತನ್ನ ರಾಜನೀತಿಜ್ಞತೆಯನ್ನು ಏಕಪ್ರಕಾರವಾಗಿ ಮೆರೆದ ಶಕಪುರುಷ ಶ್ರೀರಾಮ ಸ್ಥಿತಪ್ರಜ್ಞತ್ವದ ಸಾಕಾರ ಮೂರ್ತಿಯೂ ಹೌದು !

ಯುವಪೀಳಿಗೆಯ 8 ಉತ್ತರಾಧಿಕಾರಿಗಳಿಗೆ ಸಾಮ್ರಾಜ್ಯವನ್ನು ಸಮನಾಗಿ ವಿಭಾಗಿಸಿ ಕೊಡುವುದೆಂದರೆ ಸರಳ ಮಾತಲ್ಲ. ಇನ್ನೊಂದು ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಶ್ರೀರಾಮನ ನಂತರದ ಪೀಳಿಗೆಯ ರಾಜಕುಮಾರರು ಯಾವುದೇ ದೈವತ್ವದ ಅಂಶವನ್ನು ಹೊಂದಿರದೆ ಕೇವಲ ಸೂರ್ಯವಂಶಜರಾಗಿ ಮಾತ್ರ ಉಳಿದಿದ್ದರು! ಚಿನ್ಮಯನಾದ ಶ್ರೀರಾಮನ ಲೆಕ್ಕ ಬೇರೆ! ಲಕ್ಷ್ಮಣ- ಭರತಾದಿಗಳು ಕೇವಲ ಅಗ್ರಜನ ಚರಣಸೇವೆಯಲ್ಲೇ ಸರ್ವವನ್ನೂ ಕಾಣುತ್ತಿದ್ದರು. ಮಾತ್ರವಲ್ಲ, ಅಣ್ಣನಂತೆ ಸ್ವಯಂ ಅವತಾರ ಪುರುಷರೂ ಆಗಿದ್ದರು.

ರಾಜಾರಾಮನಲ್ಲಿ ಹನುಮಂತನ ಬಗೆಯ ನಡೆಗೆ ಯಾರಿಗಾದರೂ ಅನುಮಾನವಿದ್ದಲ್ಲಿ ಅದನ್ನು ಪರಿಹರಿಸಲೇಬೇಕು. ವಂಶಜರನ್ನೂ ರಕ್ಕಸರನ್ನೂ ಕಾಲ-ಸಂದರ್ಭ-ಪ್ರದೇಶಕ್ಕನುಸಾರ ರಾಜರನ್ನಾಗಿಸಿದ ರಾಘವ, ತನ್ನ ಶರೀರದ ಕಣಕಣದಲ್ಲೂ, ಸಮಯದ ಕ್ಷಣ ಕ್ಷಣದಲ್ಲೂ (ಅದೂ ಅನಂತ ಕಾಲ! ಹನುಮನು ಚಿರಂಜೀವಿ ಎಂಬುದನ್ನು ಗಮನಿಸಬೇಕು) ತನ್ನನ್ನೇ ಧ್ಯಾನಿಸುವ ಆಂಜನೇಯನನ್ನೇಕೆ ಯಾವುದೇ ರಾಜ್ಯದ ರಾಜನನ್ನಾಗಿಸಲಿಲ್ಲ ?! ಎಂಬುದು. ಆದರೆ ಮುದ್ದಾಂ ತನ್ನ ಮಕ್ಕಳೂ ಸೇರಿದಂತೆ ಯಾರಿಗೂ ಶ್ರೀರಾಮನು ದೈವತ್ವವನ್ನು ಕರುಣಿಸದೆ ಕೇವಲ ಭೌತಿಕವಾದ ಹುದ್ದೆಯನ್ನು ಮಾತ್ರ ದೊರಕಿಸಿದ್ದ ಎಂಬುದು ಗಮನಾರ್ಹ! ಆದರೆ ಮಾರುತಿಯ ಸಂಗತಿ ಬೇರೆ. ತನ್ನ ನೆಚ್ಚಿನ ಭಕ್ತನಾದ ಹನುಮನಿಗೆ ದೈವತ್ವವನ್ನೇ ಅನುಗ್ರಹಿಸಿ ಯಕಶ್ಚಿತ್ ಪ್ರಾಪಂಚಿಕ ಭೋಗಗಳಿಂದ ಬಹಳ ಎತ್ತರದ ಸ್ಥಾನಕ್ಕೇರಿಸಿದ್ದಾನೆ ಎಂಬುದನ್ನು ಮರೆಯುವಂತಿಲ್ಲ, ರಾಮನವಮಿಯ ನಂತರ ಕೆಲವೇ ದಿನಗಳಲ್ಲಿ ಬರುವ ಹುಣ್ಣಿಮೆಗೆ ಆಚರಿಸಲ್ಪಡುವ 'ಹನುಮ ಜಯಂತಿ'ಗೆ ಇದರ ಕುರಿತು ಸ್ಥೂಲವಾಗಿ ನೋಡೋಣ.

ಹಾಗೆ ನೋಡಿದರೆ, ಶ್ರೀರಾಮಾವತಾರದ ಒಂದು ಉದ್ದೇಶವೇ ಲೋಕಕಂಟಕ ರಾವಣನನ್ನು ಸಂಹರಿಸಿ, ನ್ಯಾಯ ಸ್ಥಾಪಿಸಿ ದೇವತೆಗಳನ್ನು ಮತ್ತೆ ಸ್ವರ್ಗದಲ್ಲಿ ಪ್ರತಿಷ್ಠಾಪಿಸಲು! ಈ ನಿಟ್ಟಿನಲ್ಲೂ ದೇವತೆಗಳನ್ನು ಮತ್ತೆ ರಾಜರಾಗಿಸಿದ ದೇವ ದೇವೋತ್ತಮ ರಾಜಾಧಿರಾಜ ರಾಜಾರಾಮ ಸ್ತುತ್ಯರ್ಹ. ಶ್ರೀರಾಮ ನವಮಿ ಬ್ರಹ್ಮಾಂಡದ ಸಮಸ್ತ ಚರಾಚರರಿಗೆ ಶುಭ ತರಲಿ.

ಅಗ್ನಿವೀರರಿಗೆ ಸಿಕ್ಕ ಕಾಯಕಲ್ಪ ಎನ್‌ಸಿಸಿಗೂ ವಿಸ್ತರಿಸಬೇಕಿದೆ!

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದ ಯುವಜನತೆ ದೇಶದ ಬಲವಾದ ಶಕ್ತಿ. ಈ ಯುವಕರನ್ನು ಶಿಸ್ತಿನ, ನಾಯಕತ್ವದ ಮತ್ತು ದೇಶಭಕ್ತಿಯ ಮಾರ್ಗದಲ್ಲಿ ನಡೆಸುವ ಅತ್ಯಂತ ಪ್ರಮುಖ ಸಂಸ್ಥೆ ಎಂದರೆ NCC (National Cadet Corps) ರಾಷ್ಟ್ರೀಯ ವಿದ್ಯಾರ್ಥಿ ಸೇನೆ. ಇದು ಕೇವಲ ಒಂದು ತರಬೇತಿ ಕಾರ್ಯಕ್ರಮವಲ್ಲ, ಜೀವನ ರೂಪಿಸುವ ಶಾಲೆ. ಎನ್‌ಸಿಸಿ ಇತಿಹಾಸ ಗಮನಿಸಿದಾಗ, ಇದರ ಸ್ಥಾಪನೆ 1948ರಲ್ಲಿ ನಡೆಯಿತು. ಸ್ವಾತಂತ್ರ್ಯಾನಂತರ ದೇಶಕ್ಕೆ ಶಿಸ್ತಿನ ಯುವಕರ ಅಗತ್ಯವಿತ್ತು. ಅದಕ್ಕಾಗಿ ನ್ಯಾಷನಲ್ ಕೆಡೆಟ್ ಕೋರ್ ಆಕ್ಟ್- 1948 ಮೂಲಕ ಎನ್‌ಸಿಸಿ ಆರಂಭಿಸಲಾಯಿತು. ಯುವಕರಲ್ಲಿ ದೇಶಭಕ್ತಿ ಬೆಳೆಸುವುದು, ಸೈನಿಕ ತರಬೇತಿಯ ಪರಿಚಯ, ಶಿಸ್ತಿನ ಜೀವನ ಶೈಲಿ ಕಲಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಏಕತೆ ಮತ್ತು ಶಿಸ್ತು ಎಂಬುದು ಇದರ ಮಂತ್ರ ಮತ್ತು ಮುಖ್ಯಧ್ಯೇಯವಾಗಿದೆ. ಇದನ್ನು ಮೂರು ಪ್ರಮುಖ ವಿಭಾಗಗಳಲ್ಲಿ ರಚಿಸಲಾಗಿದ್ದು, ಆರ್ಮಿ ವಿಂಗ್ ಎಂಬುದರ ಅಡಿಯಲ್ಲಿ ಭೂಸೇನೆ ತರಬೇತಿ, ಡ್ರಿಲ್, ಆಯುಧ ತರಬೇತಿ ಇತ್ಯಾದಿಗಳಿದ್ದರೆ, ನೇವಿ ವಿಂಗ್‌ನಲ್ಲಿ ಸಮುದ್ರ ಸಂಬಂಧಿತ ತರಬೇತಿ, ನಾವಿಕ ಕೌಶಲ್ಯ ಸೇರಿವೆ. ಏರ್ ವಿಂಗ್ ವಿಭಾಗ ವಾಯುಪಡೆ ತರಬೇತಿ, ವಿಮಾನ ಮತ್ತು ಏರೋಮಾಡೆಲಿಂಗ್ ಒಳಗೊಂಡಿದೆ.

ಶಾರೀರಿಕ ಪರೀಕ್ಷೆ, ಮೂಲ ಸಂದರ್ಶನದ ಮೂಲಕ, 13ರಿಂದ 18 ವರ್ಷದೊಳಗಿನ ಶಾಲಾ ಮಟ್ಟ (ಜೂನಿಯರ್ ಡಿವಿಷನ್/ವಿಂಗ್) ಮತ್ತು 19-26 ವರ್ಷದೊಳಗಿನ ಕಾಲೇಜು ಮಟ್ಟದ (ಸೀನಿಯರ್ ಡಿವಿಷನ್ ವಿಂಗ್) ಮೂಲಕ ಎನ್‌ಸಿಸಿ ಸೇರಲು ಆಯ್ಕೆಪ್ರಕ್ರಿಯೆ ನಡೆಯುತ್ತದೆ. ದೇಶದ ಇತಿಹಾಸ, ಸೈನಿಕ ಜ್ಞಾನ, ನಕ್ಷೆ ಓದು ಸೇರಿದಂತೆ ಸಿದ್ಧಾಂತ ತರಬೇತಿ ಮತ್ತು ಡ್ರಿಲ್ (ಪರೇಡ್), ವೆಪನ್ ತರಬೇತಿ, ಫೀಲ್ಡ್ ಕ್ರಾಫ್ಟ್, ಅಡ್ವೆಂಚರ್ ಚಟುವಟಿಕೆಗಳು ಸೇರಿದಂತೆ ಪ್ರಾಯೋಗಿಕ ತರಬೇತಿಗಳು ನಡೆಯುತ್ತಿರುತ್ತವೆ.

ಇದರ ಪ್ರಮುಖ ಶಿಬಿರಗಳು ಮುಖ್ಯ ಆಕರ್ಷಣೆಯಾಗಿದ್ದು, ವಾರ್ಷಿಕ ತರಬೇತಿ ಕ್ಯಾಂಪ್ (ATC)- (ಪ್ರತಿವರ್ಷ ನಡೆಯುವ ತರಬೇತಿ ಶಿಬಿರ), ರಿಪಬ್ಲಿಕ್ ಡೇ ಕ್ಯಾಂಪ್ (RDC)- ದೆಹಲಿಯಲ್ಲಿ ನಡೆಯುವ ಅತ್ಯಂತ ಗೌರವಾನ್ವಿತ ಶಿಬಿರ, ನ್ಯಾಷನಲ್ ಇಂಟಿಗ್ರೇಷನ್ ಕ್ಯಾಂಪ್ (NIC) - ಭಾರತದ ವಿವಿಧ ರಾಜ್ಯಗಳ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸುವ ಶಿಬಿರ, ಟ್ರೆಕ್ಕಿಂಗ್ ಅಡ್ವೆಂಚರ್ ಕ್ಯಾಂಪ್- ಪರ್ವತಾರೋಹಣ, ಕ್ಯಾಂಪಿಂಗ್ ಇತ್ಯಾದಿಗಳು ದೇಶಾದ್ಯಂತ ಮಹತ್ವ ತೋರಿದ್ದವು.

ಇದರಲ್ಲಿ ಭಾಗಿಯಾದವರಿಗೆ ಎನ್‌ಸಿಸಿ ಪ್ರಮಾಣಪತ್ರಗಳು ದೊರೆಯುತ್ತಿದ್ದು, ಶಾಲಾಮಟ್ಟದಲ್ಲಿ, ಕಾಲೇಜುಮಟ್ಟದಲ್ಲಿ ಪ್ರಮಾಣಪತ್ರಗಳನ್ನೂ ನೀಡಲಾಗುತ್ತದೆ. ಇವು ಸೇನೆಗೆ ಸೇರಲು ಅರ್ಹತಾಪತ್ರಗಳಾಗಿಯೂ ಕೆಲಸ ಮಾಡುತ್ತಿದ್ದವು. ಪ್ರತಿವರ್ಷ ನವೆಂಬರ್ ತಿಂಗಳ ನಾಲ್ಕನೇ ಭಾನುವಾರ ಎನ್‌ಸಿಸಿ ದಿನವನ್ನು ಆಚರಿಸಲಾಗುತ್ತದೆ.

ಆತ್ಮವಿಶ್ವಾಸ, ನಾಯಕತ್ವ ಗುಣಗಳನ್ನು ಬೆಳೆಸುವ ಮೂಲಕ ಸೇನೆ, ಪೊಲೀಸ್, ಸರ್ಕಾರಿ ಉದ್ಯೋಗಗಳಲ್ಲಿ ಸೇರುವುದಕ್ಕೆ ಈ ತರಬೇತಿಗಳು ಪೂರಕವಾಗಿದ್ದವು. ದೈಹಿಕ ಫಿಟ್ನೆಸ್, ಮಾನಸಿಕ ಬಲ ಎನ್‌ಸಿಸಿ ವಿದ್ಯಾರ್ಥಿಗಳನ್ನು ಕೇವಲ ನಾಗರಿಕರನ್ನಾಗಿ ಮಾಡುವುದಿಲ್ಲ, ದೇಶಪ್ರೇಮ, ತ್ಯಾಗ, ಸೇವಾ ಮನೋಭಾವಗಳ ಮೂಲಕ ಅವರನ್ನು ದೇಶದ ಜವಾಬ್ದಾರಿಯುತ ಸೈನಿಕರನ್ನಾಗಿ ರೂಪಿಸುವಲ್ಲೂ ಸಹಾಯಕವಾಗಿದೆ. ಎನ್‌ಸಿಸಿ ಒಂದು ಸಂಸ್ಥೆಯಷ್ಟೇ ಅಲ್ಲ, ಅದು ಜೀವನದ ಒಂದು ಪಾಠಶಾಲೆ ಎಂಬಂತೆ, ಇಲ್ಲಿ ವಿದ್ಯಾರ್ಥಿಗಳು ಪುಸ್ತಕದ ಪಾಠವಲ್ಲ, ಜೀವನದ ಪಾಠ ಕಲಿಯುತ್ತಾರೆ. ಶಿಸ್ತು, ನಾಯಕತ್ವ, ದೇಶಭಕ್ತಿ ಈ ಮೂರು ಗುಣಗಳು ಎನ್‌ಸಿಸಿಯಿಂದ ದೊರೆಯುವ ಅಮೂಲ್ಯ ಸಂಪತ್ತು.

ಇಂದು ಯುವಕರು ಎನ್‌ಸಿಸಿಯಲ್ಲಿ ಭಾಗವಹಿಸಿದರೆ, ನಾಳೆ ದೇಶದ ಶಕ್ತಿಯಾಗಿ ಹೊರಹೊಮ್ಮುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸೌಲಭ್ಯ ಕೊರತೆ, ತರಬೇತಿ ಮೂಲಸೌಕರ್ಯ ಸಮಸ್ಯೆಗಳು, ವಿದ್ಯಾರ್ಥಿಗಳ ಆಸಕ್ತಿ ಕಡಿಮೆ ಸೇರಿದಂತೆ ಹಲವು ಸವಾಲುಗಳು ಎನ್‌ಸಿಸಿಯನ್ನು ರಾಷ್ಟ್ರವ್ಯಾಪಿಯನ್ನಾಗಿಸಲು ತಡೆಯೊಡ್ಡಿದವು ಎನ್ನಬಹುದು. ಪ್ರಸ್ತುತದಲ್ಲಿ, ಎನ್‌ಸಿಸಿಯ ಸಮಗ್ರ ಸುಧಾರಣೆ, ಹೊಸದೊಂದು ರೂಪರೇಖೆಯೊಂದಿಗೆ ಹೊಸ ತಲೆಮಾರಿನ ಯುವ ಮನಸುಗಳನ್ನು ತಲುಪುವ ಅಗತ್ಯವಿದೆ ಎಂದೆನಿಸುತ್ತದೆ. ಇದಕ್ಕಾಗಿ ನಿಗದಿತ ಅನುದಾನಗಳು, ಹೇಗೆ ಖರ್ಚು ಮಾಡಲಾಗುತ್ತಿದೆ? ಇದರ ಉತ್ಪನ್ನವೇನು? ಎಂದೆಲ್ಲ ಒರೆಗೆ ಹಚ್ಚಿ ನೋಡಬೇಕಾಗಿದೆ.

ರಚನಾತ್ಮಕ ಸುಧಾರಣೆಗಳ ಕಡೆಗೆ ಗಮನಿಸಿದಾಗ, ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಎನ್‌ಸಿಸಿ ಯುನಿಟ್‌ಗಳ ಹೆಚ್ಚಳಕ್ಕೆ ಒತ್ತು ನೀಡಬೇಕಾಗಿದೆ. ಶಾಲಾಮಟ್ಟದಲ್ಲಿ ಹೆಚ್ಚು ವ್ಯಾಪ್ತಿ (13-18 ವಯಸ್ಸು), ಜೊತೆಗೆ ಡಿಜಿಟಲ್ ಎನ್‌ಸಿಸಿ ರೂಪದಲ್ಲಿ ಆನ್‌ಲೈನ್ ಎನ್-ರೋಲ್‌ಮೆಂಟ್ ಪೋರ್ಟಲ್, ತರಬೇತಿ ಮಾಡ್ಯೂಲ್ಸ್ (ತಂತ್ರಾಂಶ ಆಧಾರಿತ ಕಲಿಕೆ), ವರ್ಚ್ಯುವಲ್ ಕಲಿಕೆ (ಡ್ರಿಲ್, ಮ್ಯಾಪ್ ರೀಡಿಂಗ್) ಕಲಿಕೆ-ಕಲಿಸುವಿಕೆಗೆ ಆದ್ಯತೆ ನೀಡಬೇಕು. ಇದರಿಂದಾಗಿ, ಸಂಪರ್ಕ-ಪಾರದರ್ಶಕತೆ-ಪ್ರಮಾಣತ್ವ ಹೆಚ್ಚುತ್ತದೆ. ಸದ್ಯ ನೀಡುತ್ತಿರುವ ತರಬೇತಿ ಪದ್ಧತಿಯಲ್ಲಿ ಸುಧಾರಣೆಗಳನ್ನು ತರಬೇಕಿದ್ದು, ಸ್ಕಿಲ್ ಆಧಾರಿತ ತರಬೇತಿ, ವಿಪತ್ತು ನಿರ್ವಹಣೆ, ಸೈಬರ್ ಭದ್ರತಾ ಮೂಲಗಳು, ಪ್ರಥಮ ಚಿಕಿತ್ಸೆ ಮತ್ತು ತುರ್ತು ಪ್ರತಿಕ್ರಿಯೆ, ಡ್ರೋನ್ ಕಾರ್ಯಾಚರಣೆಗಳು ಸೇರಿದಂತೆ ಎನ್‌ಸಿಸಿ ಒಂದು ಅತ್ಯಾಧುನಿಕ ಸ್ಕಿಲ್ ಅಕಾಡೆಮಿಯಂತೆ ಬದಲಾಗಬೇಕು.

ಮಹಿಳಾ ಭಾಗವಹಿಸುವಿಕೆಯನ್ನು ಹೆಚ್ಚಿಸಬೇಕಲ್ಲದೇ, ಇದಕ್ಕೆ ಪೂರಕವಾದ ವಾತಾವರಣ ನಿರ್ಮಿಸಬೇಕಿದೆ. ಇದಕ್ಕಾಗಿ, ಪ್ರತ್ಯೇಕ ಮೂಲಸೌಕರ್ಯಗಳನ್ನು, ಸುರಕ್ಷೆ ಮತ್ತು ಸಹಾಯಕ ವ್ಯವಸ್ಥೆಯನ್ನು ನಿರ್ಮಿಸಬೇಕಿದೆ. ಬುಡಕಟ್ಟು, ಕರಾವಳಿ ಪ್ರದೇಶಗಳ ಮೇಲೆ ಗಮನಹರಿಸಬೇಕಿದೆ. ಹೊಸ ಉನ್ನತಮಟ್ಟದ ಪಾಲಿಸಿಯನ್ನು ಪರಿಚಯಿಸುವ ಮೂಲಕ ಮಹತ್ತರ ಸುಧಾರಣೆ ತರುವ ಅಗತ್ಯ ಈ ವಿಭಾಗಕ್ಕಿದೆ. ನ್ಯಾಷನಲ್ ಯೂಥ್ ಸರ್ವೀಸ್ ಫ್ರೇಮ್‌ವರ್ಕ್ ಅಡಿಯಲ್ಲಿ ಎನ್‌ಸಿಸಿಯನ್ನು ಸೆಮಿ-ಕಂಪಲ್ಸರಿ ಮಾಡುವುದು, ಎಜುಕೇಷನ್ ಇಂಟಿಗ್ರೇಷನ್ ಮೂಲಕ ಎನ್‌ಸಿಸಿಯನ್ನು ಅಕಾಡೆಮಿಕ್ ಕ್ರೆಡಿಟ್ಸ್ (ಎನ್‌ಇಪಿಗೆ ಹೊಂದಿಕೊಂಡಂತೆ)ಗೆ ಜೊತೆಗೂಡಿಸಿ ಬೆಳೆಸಬಹುದಾಗಿದೆ.

ಇಲ್ಲಿ ಎರಡು ಪ್ರಶ್ನೆಗಳು ನಮಗೆ ಕಂಡುಬರುತ್ತವೆ. (1) ಎನ್‌ಸಿಸಿ ಅವಶ್ಯಕತೆ ಏನು? (2) ಇಂದಿನ ಕಾಲದಲ್ಲಿ ಅದು ನಿಜವಾಗಿಯೂ ಅಗತ್ಯವೇ? ಎಂಬುದನ್ನು ವಿಶ್ಲೇಷಿಸಿದಾಗ, ಹೊಸ ಯೋಜನೆಗಳ ಅಗತ್ಯತೆ, ಬದಲಾದ ಕಾಲಘಟ್ಟದಲ್ಲಿ ಪರಿಷ್ಕರಿಸುವ ಮಹತ್ವ ಕಂಡುಬರುತ್ತದೆ. ಎನ್‌ಸಿಸಿಯಂತಹ ಬಲವಾದ, ಅತ್ಯಂತ ಯೋಗ್ಯಪ್ರದವಾದ ಯೋಜನೆಗಳು ನಮ್ಮಲ್ಲಿದ್ದವು. ಆದರೂ, ಎನ್‌ಸಿಸಿ ದೇಶವ್ಯಾಪಿಯಾಗಲಿಲ್ಲ. ರಾಷ್ಟ್ರವನ್ನು ಯುವಜನತೆಯ ಜೊತೆಗೆ ಹೊಸದಾಗಿ ಕಟ್ಟುವ ಕಾರ್ಯಗಳು ನಡೆಯಲಿಲ್ಲ. ಕೋಟ್ಯಂತರ ಯುವಪಡೆ ರಾಷ್ಟ್ರಸೇವೆಗೆ ಪಣತೊಟ್ಟು ನಿಲ್ಲಬೇಕಿತ್ತು, ಅದಾಗಲಿಲ್ಲ. ಸಮಾಜದಲ್ಲಿ ಜಾತಿಗಳ ಕಂದಕ, ಅಸ್ಪೃಶ್ಯತೆ ಆತ್ಯಾಧುನಿಕ ಯುಗ ಬರುವವರೆಗೂ ಇತ್ತು, ಇನ್ನೂ ಅಲ್ಲಲ್ಲಿ ಕಾಣಸಿಗುತ್ತದೆ. ಎನ್‌ಸಿಸಿ ತರಬೇತಿ ಎಂಬುದು ಕೇವಲ ಪ್ರಮಾಣಪತ್ರ ಪಡೆಯುವುದಕ್ಕೆ, ಮುಂದಿನ ಹಂತದ ಉದ್ಯೋಗಕ್ಕೆ ಒಂದು ಮೆಟ್ಟಿಲಾಗುವಂತೆ ಬಳಸಿಕೊಳ್ಳುವ ಯೋಜನೆಯಾಯಿತು. ತರಬೇತಿ ಪಡೆದ ಯುವಜನತೆ ಸೇನೆ ಸೇರುವುದು ಎಲ್ಲೋ ತುಂಬಾ ಅಪರೂಪ ಎಂಬಂತಾಯಿತು.

ಇದೇ ಸಂದರ್ಭದಲ್ಲಿ, ಉತ್ತರ ಕೊರಿಯಾ, ದಕ್ಷಿಣ ಕೊರಿಯಾ, ಇಸ್ರೇಲ್, ಸಿಂಗಾಪುರ, ಮತ್ತು ಸ್ವಿಜರ್ಲೆಂಡ್‌ನಂತಹ ದೇಶಗಳು ತಮ್ಮ ನಾಗರಿಕರಿಗೆ ಕಡ್ಡಾಯ ಮಿಲಿಟರಿ ಸೇವೆ ಕಾಯ್ದೆಯನ್ನು ಹೊಂದಿವೆ. ಈ ದೇಶಗಳಲ್ಲಿ ಒಂದು ನಿರ್ದಿಷ್ಟ ವಯಸ್ಸಿನ ಯುವಕರು/ಯುವತಿಯರು ಕಡ್ಡಾಯವಾಗಿ ಸೇನೆಯಲ್ಲಿ ಸೇವೆ ಸಲ್ಲಿಸಬೇಕು. ಇತರೆ ದೇಶಗಳನ್ನು ಗಮನಿಸಿದಾಗ, ಏಷ್ಯಾಖಂಡದಲ್ಲಿ ಉತ್ತರ ಕೊರಿಯಾ (10 ವರ್ಷಗಳವರೆಗೆ), ದಕ್ಷಿಣಕೊರಿಯಾ, ಸಿಂಗಾಪುರ, ಇರಾನ್, ತೈವಾನ್, ಥೈಲ್ಯಾಂಡ್ ದೇಶಗಳು, ಯುರೋಪ್ ಖಂಡದಲ್ಲಿ ನಾರ್ವೆ, ಸ್ವೀಡನ್, ಫಿನ್‌ಲೆಂಡ್, ಆಸ್ಟ್ರಿಯಾ, ಸ್ವಿಜರ್ಲೆಂಡ್, ಡೆನ್ಮಾರ್ಕ್, ಗ್ರೀಸ್, ಎಸ್ಟೋನಿಯಾ ರಾಷ್ಟ್ರಗಳು, ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ (ಪುರುಷರಿಗೆ 3 ವರ್ಷ, ಮಹಿಳೆಯರಿಗೆ 2 ವರ್ಷ) ಮತ್ತು ಆಫ್ರಿಕಾ/ಅಮೆರಿಕ, ಕ್ಯೂಬಾ, ಎರಿಟ್ರಿಯಾಗಳಲ್ಲೂ ಸೇನಾಸೇವೆಯನ್ನು ಕಡ್ಡಾಯಗೊಳಿಸಲಾಗಿದೆ. ಭದ್ರತೆಯ ಕಾರಣಕ್ಕಾಗಿ ಮತ್ತು ನಾಗರಿಕ ಕರ್ತವ್ಯದ ಭಾಗವಾಗಿ ಈ ಕಾಯ್ದೆಗಳನ್ನು ಜಾರಿಗೆ ತರಲಾಗಿದೆ.

ಜಗತ್ತಿನಲ್ಲಿ ಇಷ್ಟೆಲ್ಲ ಬೆಳವಣಿಗೆ/ಬದಲಾವಣೆಗಳಾಗುತ್ತಿದ್ದರೂ, ನಮ್ಮ ಹಲವು ಯೋಜನೆಗಳು ಅತ್ಯಂತ ಪ್ರಭಾವಿಗಳಾಗಿದ್ದರೂ, ಜಾರಿಗೆ ತರುವಲ್ಲಿ ಸೋಲುತ್ತಿದ್ದವು ಮತ್ತು ಸುದೀರ್ಘ ಸಂಕಲ್ಪವಿಲ್ಲದೆ ಸೊರಗುತ್ತಿದ್ದವು. ಇಂತಹ ಸಂದರ್ಭದಲ್ಲಿಯೇ, ನಮ್ಮ ಇಂದಿನ ಯುವಜನತೆ ತಲೆಯೆತ್ತಿ ನಿಲ್ಲವಂತೆ ಮಾಡಿದ ಯೋಜನೆಯೇ ಅಗ್ನಿವೀರ್ ಯೋಜನೆ. ಮೊದಲೇ ಇದ್ದ ಎನ್‌ಸಿಸಿ ತರಬೇತಿಯನ್ನು ಸಮರ್ಪಕವಾಗಿ, ಸೈನ್ಯಸೇವೆ, ರಾಷ್ಟ್ರಸೇವೆಯತ್ತ ತಿರುಗಿಸಿದ್ದರೆ, ಅಗ್ನಿವೀರ್ ಎಂಬಂತಹ ಯೋಜನೆಗಳ ಅಗತ್ಯವಿರುತ್ತಿರಲಿಲ್ಲವೇನೋ? ಕೇವಲ ಐಡೆಂಟಿಟಿಗಾಗಿ ಎನ್‌ಸಿಸಿಯಲ್ಲಿ ಗುರುತಿಸಿಕೊಳ್ಳುವಂತಾಯಿತು ಎಂಬುದನ್ನು ಬಿಟ್ಟರೆ, ಯುವಕರನ್ನು ಗಂಭೀರವಾಗಿ ದೇಶಸೇವೆಯತ್ತ ಸೆಳೆಯಲಿಲ್ಲವೆನ್ನಬಹುದು. ಜೊತೆಗೆ, ಯೋಗ್ಯ ಹಣಕಾಸು ವ್ಯವಸ್ಥೆ, ಅಭ್ಯರ್ಥಿಗಳಿಗೆ ಆರ್ಥಿಕ ಸಹಾಯಗಳನ್ನು ಇದಕ್ಕೆ ಜೋಡಿಸಿದ್ದರೆ, ಇನ್ನೂ ಬಲವಾಗುತ್ತಿತ್ತೇನೋ? ಸದ್ಯಕ್ಕೆ, ಅಗ್ನಿವೀರ್ ಇಂದಿನ ಯುವಜನತೆಯನ್ನು ಸೈನ್ಯಸೇವೆಗೆ ಸೂಕ್ತ ಆರ್ಥಿಕ ಸಹಾಯ ಒಳಗೊಳ್ಳುವ ಮೂಲಕ, ಕೈಬೀಸಿ ಕರೆಯುತ್ತಿದೆ ಎನ್ನಬಹುದು.

2022ರಲ್ಲಿ ಪರಿಚಯವಾದ ಅಗ್ನಿಪಥ ಯೋಜನೆ ಭಾರತೀಯ ಸೇನೆಯ ಇತಿಹಾಸದಲ್ಲೇ ದೊಡ್ಡ ಬದಲಾವಣೆ. ಇದು ಕೇವಲ ನೇಮಕಾತಿ ವಿಧಾನ ಅಲ್ಲ, ಇದು ಯುವಶಕ್ತಿಗೆ ಒಂದು ರಾಷ್ಟ್ರೀಯ ವೇದಿಕೆ. 17.5 ರಿಂದ 21 ವರ್ಷದ ಯುವಕರು ಯಾವುದೇ ದೊಡ್ಡ ಹಿನ್ನೆಲೆ ಇಲ್ಲದಿದ್ದರೂ ದೇಶ ಸೇವೆ ಮಾಡುವ ಅವಕಾಶ ಇದಾಗಿದೆ. 4 ವರ್ಷವೆಂಬುದು ಚಿಕ್ಕ ಅವಧಿ ಅಲ್ಲ, ದೊಡ್ಡ ಪರಿವರ್ತನೆಯಾಗಿದೆ. ಕೆಲವರು ಕೇಳ್ತಾರೆ 4 ವರ್ಷ ಮಾತ್ರ ಯಾಕೆ? ಈ ನಾಲ್ಕು ವರ್ಷದಲ್ಲಿ ಕಠಿಣ ತರಬೇತಿ, ಶಿಸ್ತಿನ ಜೀವನ, ದೇಶಭಕ್ತಿ ನೇರ ಅನುಭವವು ಒಬ್ಬ ಸಾಮಾನ್ಯ ಯುವಕ ಡಿಸಿಪ್ಲಿನ್ಡ್, ಕಾನ್ಫಿಡೆಂಟ್, ರಾಷ್ಟ್ರಭಕ್ತ ವ್ಯಕ್ತಿಯಾಗಿ ರೂಪಾಂತರವಾಗುತ್ತಾನೆ. ಇದು ಕೇವಲ ಸೇನಾ ತರಬೇತಿ ಅಲ್ಲ, ವ್ಯಕ್ತಿತ್ವ ನಿರ್ಮಾಣ ತರಬೇತಿಯಾಗಿಯೂ ಬದಲಾವಣೆ ತರುತ್ತದೆ.

ಸೇನೆಯಲ್ಲಿ ಸೇವೆ ಮಾಡುವುದು ಕೂಡ ಆರ್ಥಿಕ ಭದ್ರತೆ, ಹೊಸ ದಾರಿಗಳನ್ನು ಅಗ್ನಿವೀರರಿಗೆ ಒದಗಿಸಿಕೊಡುತ್ತದೆ. ಉತ್ತಮ ಸಂಬಳ, ಸೇವೆ ಮುಗಿದ ಮೇಲೆ ಸೇವಾನಿಧಿ ರೂಪದಲ್ಲಿ ಸಿಗುವ ಲಕ್ಷಾಂತರ ರೂಪಾಯಿಗಳು ಹೊಸ ಜೀವನ ಆರಂಭಿಸಲು ಬಂಡವಾಳವಾಗಬಲ್ಲದು. ಅಗ್ನಿವೀರ್ ಯುವಕ, ಉದ್ಯಮ ಆರಂಭಿಸಬಹುದು, ಉನ್ನತ ಶಿಕ್ಷಣ ಪಡೆಯಬಹುದು ಅಥವಾ ಇನ್ನೊಂದು ವೃತ್ತಿಗೆ ಹೋಗಬಹುದು. ಇದು ಉದ್ಯೋಗ ಕೊಡುವ ಯೋಜನೆ ಅಲ್ಲ, ಜೀವನ ಕಟ್ಟಿಕೊಳ್ಳಲು ಶಕ್ತಿ ಕೊಡುವ ಯೋಜನೆ. ಅಗ್ನಿವೀರ್ ಯೋಜನೆಯ ದೊಡ್ಡ ಶಕ್ತಿ ಎಂದರೆ, ಸ್ಕಿಲ್ ಡೆವಲಪ್ಮೆಂಟ್. ಇದರಲ್ಲಿ ತಾಂತ್ರಿಕ ಜ್ಞಾನ, ನಾಯಕತ್ವ ಗುಣ, ತಂಡದಲ್ಲಿ ಕೆಲಸ ಮಾಡುವ ಕೌಶಲ್ಯಗಳನ್ನು ಕಲಿಯುತ್ತಾನೆ. ಸೇನೆ ಅದನ್ನೇ ಕೊಡ್ತಿದೆ.

ಇಂದು ಯುದ್ಧದ ಸ್ವರೂಪ ಬದಲಾಗಿದೆ. ಟೆಕ್ನಾಲಜಿ, ವೇಗ, ತ್ವರಿತ ನಿರ್ಧಾರ ಇವುಗಳಿಗೆ ಬೇಕಾದುದು ಯುವ ಮನಸ್ಸು, ಚುರುಕು ದೇಹ. ಅಗ್ನಿವೀರ್ ಮೂಲಕ ಸೇನೆ ಇನ್ನಷ್ಟು ಡೈನಾಮಿಕ್ ಆಗುತ್ತದೆ. ಹೊಸ ತಂತ್ರಜ್ಞಾನಗಳನ್ನು ವೇಗವಾಗಿ ಅಳವಡಿಸಿಕೊಳ್ಳುತ್ತದೆ. ಇದು ಭಾರತದ ರಕ್ಷಣಾ ಶಕ್ತಿಗೆ ಹೊಸ ದಿಕ್ಕು. ಯೋಜನೆಯ ಮೂಲ ರಚನೆಯು ವಯೋಮಿತಿ 17.5 – 21 ವರ್ಷ, ಸೇವಾ ಅವಧಿ 4 ವರ್ಷ ಮತ್ತು 6 ತಿಂಗಳು ತರಬೇತಿ, 3.5 ವರ್ಷ ಸಕ್ರಿಯ ಸೇವೆ. 4 ವರ್ಷಗಳ ನಂತರ, 25% ಶಾಶ್ವತ ನೇಮಕಾತಿ, 75% ನಿವೃತ್ತಿ (ಸೇವಾನಿಧಿ ಜೊತೆ) ಕೊಡಲಾಗುತ್ತದೆ. ಪ್ರತಿವರ್ಷ ಸರಾಸರಿ ನೇಮಕಾತಿ 45,000-50,000 ಅಗ್ನಿವೀರ್‌ಗಳು ಸೇರುತ್ತಿದ್ದು, ಮೂರು ವರ್ಷಗಳಲ್ಲಿ ಸುಮಾರು 1.5 ಲಕ್ಷ ಯುವಕರು ಸೇನೆಗೆ ಪ್ರವೇಶ ಹೊಂದುತ್ತಿದ್ದಾರೆ. ಕೇವಲ 6 ತಿಂಗಳಲ್ಲಿ ಸಾಮಾನ್ಯ ಯುವಕನೊಬ್ಬ ಸೈನಿಕನಾಗಿ ಬದಲಾಗುತ್ತಾನೆ. 2022-2025ರ ಅವಧಿಯಲ್ಲಿ ಕರ್ನಾಟಕದಿಂದ ಸುಮಾರು 8,000-12,000 ಯುವಕರು ಅಗ್ನಿವೀರ್ ಆಗಿ ಆಯ್ಕೆಯಾಗಿದ್ದು, ಪ್ರತಿ ವರ್ಷ ಸರಾಸರಿ 3,000 – 4,000 ಅಭ್ಯರ್ಥಿಗಳು ಎಂಬ ಅಂದಾಜಿದೆ.

ಸೇನೆ ಸೇರುವ ಯುವಕರಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಸೇನೆಗೆ ಹಳೆಯ ಪರಂಪರೆ, ಫಿಸಿಕಲ್ ಫಿಟ್ನೆಸ್ ಕಲ್ಚರ್, ಗ್ರಾಮೀಣ ಯುವಕರ ಉತ್ಸಾಹ ಇದಕ್ಕೆ ಕಾರಣವೆನ್ನಬಹುದು. ಸುಮಾರು 70%- 75% ಅಗ್ನಿವೀರ್ ಅಭ್ಯರ್ಥಿಗಳು ಗ್ರಾಮೀಣ ಭಾಗದಿಂದ ಹಾಗೂ 25%-30%ಗಳಷ್ಟು ನಗರ ಪ್ರದೇಶದಿಂದ ಸೇನೆ ಸೇರುತ್ತಿದ್ದಾರೆ. ಕರ್ನಾಟಕದ ಅಭ್ಯರ್ಥಿಗಳು ಬೆಳಗಾವಿ ರೆಜಿಮೆಂಟ್ ಸೆಂಟರ್, ಬೆಂಗಳೂರಿನ ಏರ್‌ಫೋರ್ಸ್ ತರಬೇತಿ ವಿಭಾಗ, ಕರಾವಳಿ ಭಾಗದ ನೌಕಾ ತರಬೇತಿ ವಿಭಾಗದಲ್ಲಿ ತರಬೇತಿ ಪಡೆಯುವ ಪ್ರಮುಖ ಕೇಂದ್ರಗಳಾಗಿವೆ. ಅಗ್ನಿವೀರ್ ಯೋಜನೆ – ಇದು ಕೇವಲ ನಾಲ್ಕು ವರ್ಷದ ಸೇನಾ ಸೇವೆಯ ಕಥೆ ಅಲ್ಲ, ಇದು ಯುವಕರ ಕನಸು, ದೇಶದ ಭದ್ರತೆ, ಸಮಾಜದ ಶಿಸ್ತು ಇವೆಲ್ಲವನ್ನು ಒಂದೇ ಹಾದಿಯಲ್ಲಿ ಕೊಂಡೊಯ್ಯುವ ಹೊಸ ಪ್ರಯೋಗ.

ಕರ್ನಾಟಕದ ಮಣ್ಣಿನಿಂದ ಎದ್ದು ಬರುತ್ತಿರುವ ಸಾವಿರಾರು ಯುವಕರು ಈ ದಾರಿಯಲ್ಲಿ ನಡೆಯುತ್ತಿರುವುದು ಒಂದು ಯೋಜನೆಯ ಯಶಸ್ಸಿಗಿಂತ ದೊಡ್ಡದು; ದೇಶದ ಭವಿಷ್ಯದ ಮೇಲೆ ಇಟ್ಟಿರುವ ನಂಬಿಕೆ. ಇಂದು ಅವರು ಅಗ್ನಿವೀರರು, ನಾಳೆಯ ನಾಯಕರು, ಉದ್ಯಮಿಗಳು, ರಕ್ಷಕರು. ಅಂತಿಮವಾಗಿ, ಈ ಯೋಜನೆ ನಮಗೆ ಹೇಳುವುದು 'ದೇಶಸೇವೆಗೆ ಕಾಲಮಿತಿಯಿರಬಹುದು, ದೇಶಭಕ್ತಿಗಲ್ಲ'. ಎನ್‌ಸಿಸಿ ವಿಭಾಗವೂ ಸೈನ್ಯ-ದೇಶಸೇವೆಗೆ ನಮ್ಮ ಯುಜನತೆಯನ್ನು ತಯಾರುಗೊಳಿಸುವಂತಾಗಲಿ, ಹೊಸ ರೂಪ ತಳೆದು ಮತ್ತೆ ವಿಜೃಂಭಿಸುವಂತಾಗಲಿ ಎಂದು ಆಶಿಸೋಣ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:69

ಸಮಾಚಾರ ಸಣ್ಣದಲ್ಲ

ತ.ನಾ: ಎಐಎಡಿಎಂಕೆ 23 ಅಭ್ಯರ್ಥಿ ಪ್ರಕಟ

ಚೆನ್ನೈ: ಏ.23ರಂದು ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಗೆ 'ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ'(ಎಐಎಡಿಎಂಕೆ) ಪಕ್ಷ 23 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬುಧವಾರ ಪ್ರಕಟಿಸಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ, ಮಾಜಿ ಸಿಎಂ ಎಡಪ್ಪಾಡಿ ಕೆ.ಪಳನಿಸ್ವಾಮಿ ಎಡಪ್ಪಾಡಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದು, ಬುಧವಾರ ಸಂಜೆ ಮೈಲಾಪುರದಿಂದ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ. ಸಿ.ವಿಜಯಭಾಸ್ಕರ್ ವಿರಳಿಮಲೈ, ಎಂ.ಆರ್.ವಿಜಯಭಾಸ್ಕರ್ ಕರೂರು, ಎಸ್.ಪಿ.ವೇಲುಮಣಿ ತೊಂಡಮುತ್ತೂರ್ ಮತ್ತು ಡಿ.ಜಯಕುಮಾರ್ ರಾಯಪುರಂ ಕ್ಷೇತ್ರದಿಂದ ಕಣಕ್ಕಿಳಿಯಲಿರುವ ಎಐಎಡಿಎಂಕೆಯ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ.

ಕಲುಷಿತ ನಗರಗಳು: ಭಾರತಕ್ಕೆ 6ನೇ ಸ್ಥಾನ

ದೆಹಲಿ: ಉತ್ತರ ಪ್ರದೇಶದ ಗಾಜಿಯಾಬಾದ್ ನಗರದ ಹೊರವಲಯದಲ್ಲಿರುವ ಲೋನಿ ಪ್ರದೇಶವೇ ವಿಶ್ವದ ಅತ್ಯಂತ ಕಲುಷಿತ ಪ್ರದೇಶ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ಸ್ವಿಜರ್ಲೆಂಡ್‌ನ ಐಕ್ಯುಏರ್ ಸಂಸ್ಥೆ 143 ದೇಶಗಳಲ್ಲಿನ 9446 ನಗರಗಳಲ್ಲಿ ಅಧ್ಯಯನ ನಡೆಸಿ ವಿಶ್ವದ ಕಲುಷಿದ ಪ್ರದೇಶಗಳ 2025ನೇ ವರ್ಷದ ಪಟ್ಟಿ ಪ್ರಕಟಿಸಿದೆ. ಇದರ ಪ್ರಕಾರ ವಿಶ್ವದಲ್ಲೇ ಅತ್ಯಂತ ಕಲುಷಿತ ಹವಾಮಾನ ಇರುವುದು ಪಾಕಿಸ್ತಾನದ ನಗರಗಳಲ್ಲಿ ಎಂದಾಗಿದೆ. ಬಾಂಗ್ಲಾದೇಶ, ತಜಕಿಸ್ತಾನ, ಚಾಡ್, ಕಾಂಗೋ ನಂತರದ ಸ್ಥಾನಗಳಲ್ಲಿವೆ. ಭಾರತ 6ನೇ ಸ್ಥಾನದಲ್ಲಿದೆ. 2024ರಲ್ಲಿ ಭಾರತ 5ನೇ ಸ್ಥಾನದಲ್ಲಿತ್ತು. 1 ವರ್ಷದಲ್ಲಿ ಒಂದು ಹಂತದ ಸುಧಾರಣೆ ಕಂಡುಬಂದಿದೆ. ಕಲುಷಿತ ನಗರಗಳ ಪಟ್ಟಿಯಲ್ಲಿ ಭಾರತದ ಬೈನಿರ್‌ಹತ್ ನಗರ 3, ದೆಹಲಿ 4, ಗಾಜಿಯಾಬಾದ್ ನಗರ 7, ಉಲಾ ನಗರ 10ನೇ ಸ್ಥಾನದಲ್ಲಿವೆ.

ಗಾರ್ಗ್ ಮೃತ್ಯು ಆಕಸ್ಮಿಕ: ಸಿಂಗಪುರ ಕೋರ್ಟ್

ಸಿಂಗಪುರ್: ಭಾರತದ ಜನಪ್ರಿಯ ಗಾಯಕ ಝುಬೀನ್ ಗರ್ಗ್ 2025ರ ಸೆ.19ರಂದು ಸಿಂಗಪುರ ಪ್ರವಾಸದಲ್ಲಿದ್ದಾಗ ಖಾಸಗಿ ದೋಣಿಯಲ್ಲಿ ಜಲ ಸಾಹಸ ಕ್ರೀಡೆಯಲ್ಲಿ ತೊಡಗಿದ್ದಾಗ ಆಕಸ್ಮಿಕವಾಗಿ ನೀರಿಗೆ ಬಿದ್ದು ಅಸುನೀಗಿದ್ದಾರೆ. ಈ ಘಟನೆಯಲ್ಲಿ ಯಾವುದೇ ಮುಚ್ಚುಮರೆ, ನಕಲಿ ಸೃಷ್ಟಿ ಎಂಬುದು ಇಲ್ಲ ಎಂದು ಸಿಂಗಪುರ್ ನ್ಯಾಯಾಲಯ ಬುಧವಾರ ಸ್ಪಷ್ಟವಾಗಿ ಹೇಳಿದೆ. ಪ್ರಕರಣದಲ್ಲಿ ಸಿಂಗಪುರ್ ಪೊಲೀಸ್ ಇಲಾಖೆಯ ತನಿಖೆ ಮತ್ತು ಸಂಗ್ರಹಿಸಿದ ಸಾಕ್ಷ್ಯಗಳು, ಪ್ರತ್ಯಕ್ಷದರ್ಶಿಗಳ ಹೇಳಿಕೆ ದಾಖಲಿಸಿರುವುದು, ಬಳಿಕ ಪೊಲೀಸರು ಸಲ್ಲಿಸಿರುವ ತನಿಖಾ ವರದಿ ಎಲ್ಲವೂ ಸಮರ್ಪಕವಾಗಿದೆ. ಭಾರತದ ಖ್ಯಾತ ಗಾಯಕನ ಸಾವು ಆಕಸ್ಮಿಕ ದುರಂತ ಅಷ್ಟೆ. ಅದರಲ್ಲಿ ಬೇರಾವುದೇ ಶಂಕೆಗೆ ಆಸ್ಪದವಿಲ್ಲ ಎಂದು ಕೋರ್ಟ್ ಸ್ಪಷ್ಟವಾಗಿ ಹೇಳಿದೆ ಎಂದು ಸ್ಟೇಟ್ ಕೋರೊನರ್ ಆಡಮ್ ನಾಖೋಡಾ ಅವರು ಸುದ್ದಿಗಾರರಿಗೆ ವಿವರ ನೀಡಿದ್ದಾರೆ.



ಕಾಶ್ಮೀರಿ ಪ್ರತ್ಯೇಕತಾವಾದಿ ಅಂದ್ರಾಬಿಗೆ ಜೀವಾವಧಿ

ದೆಹಲಿ: ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿಯಾಗಿದ್ದ ಕಾಶ್ಮೀರಿ ಪ್ರತ್ಯೇಕತಾವಾದಿ ಆಸಿಯಾ ಅಂದ್ರಾಬಿಗೆ ದೆಹಲಿಯ ವಿಶೇಷ ನ್ಯಾಯಾಲಯ ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯಿದೆ(ಯುಎಪಿಎ) ಅನ್ವಯ ಜೀವಾವಧಿ ಶಿಕ್ಷೆ ವಿಧಿಸಿದೆ. ಆಕೆಯ ಸಹಚರರಾದ ಸೋಫಿ ಫೆಹ್ಮಿದಾ ಮತ್ತು ನಹಿದಾ ನಸ್ರೀನ್‌ಗೂ ತಲಾ 30 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ನಿಷೇಧಿತ ಸಂಘಟನೆ ದುಖ್ತರನ್-ಎ-ಮಿಲ್ಲತ್(ಡಿಇಎಂ) ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಮೂವರೂ ದೋಷಿಗಳು ಎಂದು ನ್ಯಾಯಾಲಯ ಇದೇ ವರ್ಷದ ಜ.30ರಂದು ತೀರ್ಪು ನೀಡಿತ್ತು. ಸೆಕ್ಷನ್18(ಪಿತೂರಿ) ಮತ್ತು ಸೆಕ್ಷನ್ 38ರಡಿ(ಭಯೋತ್ಪಾದಕ ಸಂಘಟನೆ ಸದಸ್ಯತ್ವ) ಮತ್ತು ಯುಎಪಿಎ ಕಾಯಿದೆಯ ವಿವಿಧ ಕಲಂಗಳಡಿ ಆಸಿಯಾ ತಪ್ಪಿತಸ್ಥೆ. ಕ್ರಿಮಿನಲ್ ಪಿತೂರಿ ಮತ್ತು ದೇಶದ ವಿರುದ್ಧ ದಂಗೆ ನಡೆಸಲು ಮುಂದಾಗಿರುವುದು ಕೂಡಾ ಭಾರತೀಯ ದಂಡ ಸಂಹಿತೆ(ಐಪಿಸಿ) ಕಲಂಗಳಡಿ ದೋಷಿ ಎಂದು ನ್ಯಾಯಾಲಯ ಘೋಷಿಸಿತು. 1963ರಲ್ಲಿ ಜನಿಸಿದ ಅಂದ್ರಾಬಿ, ಶ್ರೀನಗರದ ಕಾಲೇಜಿನಿಂದ ಗೃಹ ವಿಜ್ಞಾನದಲ್ಲಿ ಪದವಿ ಪಡೆದಿದ್ದಾಳೆ.

{ **ಕಿಮ್ ಜಾಂಗ್ ಉನ್** } ಉ.ಕೊರಿಯ ಅಧ್ಯಕ್ಷ

ಅಮೆರಿಕ ವಿವಿಧ ದೇಶಗಳಲ್ಲಿ ಆಕ್ರಮಣ-ಭಯೋತ್ಪಾದನೆ ನಡೆಸುತ್ತಿದೆ. ಯಾವುದೇ ದೇಶದ ಘನತೆ, ಆಸಕ್ತಿ ಮತ್ತು ಅಂತಿಮ ವಿಜಯವನ್ನು ಅತ್ಯಂತ ಶಕ್ತಿಶಾಲಿ ಶಸ್ತ್ರಾಸ್ತ್ರಗಳಿಂದಷ್ಟೇ ಖಾತರಿಪಡಿಸಲು ಸಾಧ್ಯ. ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಯುದ್ಧ ಪ್ರತಿಯೊಂದು ದೇಶಕ್ಕೂ ಬಲಿಷ್ಠವಾದ ಸೇನಾಪಡೆ, ಶಸ್ತ್ರಾಸ್ತ್ರಗಳ ಅಗತ್ಯವನ್ನು ಎತ್ತಿ ತೋರಿಸುತ್ತಿದೆ.

ಹರಿಯಾಣ ರಾಜ್ಯದ ಗುರುಗ್ರಾಮ್‌ನ ಸೆಕ್ಟರ್ 54ರಲ್ಲಿ 3 ವರ್ಷದ ಹೆಣ್ಣು ಶಿಶು ಅತ್ಯಾಚಾರ । ಅತ್ಯಾಚಾರ ಸಂತ್ರಸ್ತ ಮಗುವಿಗೆ ಠಾಣೆಗೆ ಬರಲು ಸಮನ್ಸ್ ನೀಡಿದ್ದ ಪೊಲೀಸ್ ತನಿಖಾಧಿಕಾರಿ। ಪೊಲೀಸ್ ತನಿಖಾ ವೈಖರಿಗೆ ಸುಪ್ರೀಂ ಆಕ್ರೋಶ, ಸಮಗ್ರ ತನಿಖೆಗೆ ಎಸ್‌ಐಟಿ ರಚನೆಗೆ ಆದೇಶ

ನಾಚಿಕೆ ಆಗಲ್ಲವೇ?: ಹರಿಯಾಣ ಪೊಲೀಸರಿಗೆ ಸುಪ್ರೀಂ ಛೀಮಾರಿ

ದೆಹಲಿ: 3 ವರ್ಷದ ಹೆಣ್ಣು ಮಗುವಿನ ಮೇಲೆ ಅತ್ಯಾಚಾರ, 2 ತಿಂಗಳ ಅವಧಿಯಲ್ಲಿ ಹಲವು ಬಾರಿ ಲೈಂಗಿಕ ಕಿರುಕುಳ ನಡೆದಿದ್ದ ಪ್ರಕರಣದಲ್ಲಿ ಸಂತ್ರಸ್ತ 3 ವರ್ಷದ ಶಿಶುವಿಗೆ ವಿಚಾರಣೆಗಾಗಿ ಠಾಣೆಗೇ ಬರುವಂತೆ ಸಮನ್ಸ್ ನೀಡಿದ್ದ ಹರಿಯಾಣ ಪೊಲೀಸರು, ಇಡೀ ಪ್ರಕರಣವನ್ನು ತಲೆಕೆಳಗು ಮಾಡಿ ಆರೋಪಿಯನ್ನು ರಕ್ಷಿಸಲೆತ್ನಿಸಿ, ಈಗ ಸುಪ್ರೀಂ ಕೋರ್ಟ್‌ನಿಂದ ಛೀಮಾರಿಗೆ ಒಳಗಾಗಿದ್ದಾರೆ.

'ನಿಮಗೆ ನಾಚಿಕೆಯೇ ಆಗುವುದಿಲ್ಲವೇ?' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾ.ಜೊಯ್‌ಮಲ್ಯ ಬಾಗ್ಚಿ, ನ್ಯಾ.ವಿಪುಲ್ ಎಂ.ಪಾಂಚೋಲಿ ಅವರ ಪೀಠ ಹರಿಯಾಣ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದೆ.

ತನಿಖೆಯನ್ನು ಅತ್ಯಂತ ಕೆಟ್ಟದಾಗಿ ನಡೆಸಿದ್ದಾರೆ, ನಿಯಮಗಳನ್ನೆಲ್ಲಾ ಉಲ್ಲಂಘಿಸಿದ್ದಾರೆ, ಪ್ರಕರಣವನ್ನು ಮುಚ್ಚಿ ಹಾಕಿ ಆರೋಪಿಯನ್ನು ರಕ್ಷಿಸಲು ಏನೆಲ್ಲಾ ಮಾಡಲು ಸಾಧ್ಯವೋ ಅದನ್ನೆಲ್ಲಾ ಮಾಡಿದ್ದಾರೆ ಎಂದೂ ಸುಪ್ರೀಂ ಕೋರ್ಟ್ ಹರಿಯಾಣ ಪೊಲೀಸರ ವಿರುದ್ಧ ಕಿಡಿಕಾರಿದೆ.

ತನಿಖೆಯ ಹೆಸರಿನಲ್ಲಿ ಪದೇ ಪದೇ ಮಗುವನ್ನು ಠಾಣೆಗೆ, ಮಕ್ಕಳ ಕಲ್ಯಾಣಾಧಿಕಾರಿ ಕಚೇರಿಗೆ ಕರೆಸಿದ ಪೊಲೀಸ್ ಅಧಿಕಾರಿ, ಸಮವಸ್ತ್ರದಲ್ಲೇ ಪ್ರಶ್ನೆ ಮಾಡಿದ್ದಾರೆ. ಮಗುವಿನಲ್ಲಿ ಭಯ ಹುಟ್ಟುವಂತೆ ಮಾಡಿದ್ದಾರೆ. ಆ ಮೂಲಕ ಮಕ್ಕಳ ರಕ್ಷಣಾ ಕಾನೂನು-ಪೊಲೀಸ್ ತನಿಖಾ ವಿಧಾನದ ನಿಯಮಗಳನ್ನೇ ಉಲ್ಲಂಘಿಸಿದ್ದಾರೆ. ಎಫ್‌ಐಆರ್ ಸೇರಿದಂತೆ ಇಡೀ ತನಿಖಾ ವರದಿಯಲ್ಲೆಲ್ಲಾ ಸಂತ್ರಸ್ತ ಮಗುವಿನ ಹೆಸರನ್ನು ನಮೂದಿಸಿದ್ದಾರೆ. ಅಲ್ಲದೇ, ಆರೋಪಿಯನ್ನು ರಕ್ಷಿಸಲೆಂದೇ ಸಂತ್ರಸ್ತ ಮಗುವಿನ ವೈದ್ಯಕೀಯ ಪರೀಕ್ಷೆ ವರದಿಯನ್ನೇ ವೈದ್ಯರ ಮೂಲಕ ಬದಲಾಯಿಸಿದ್ದಾರೆ. ತನಿಖೆ ವೇಳೆ ಇಷ್ಟೆಲ್ಲಾ ಅಕ್ರಮಗಳನ್ನು ನಡೆಸಿರುವ, ತನಿಖೆಯನ್ನೇ ತಲೆಕೆಳಗು ಮಾಡಿ ಆರೋಪಿಯನ್ನು ರಕ್ಷಿಸಲೆತ್ನಿಸಿದ ಹರಿಯಾಣ ಪೊಲೀಸರ ನಡೆಯನ್ನು ಪೀಠ, 'ಸೂಕ್ಷ್ಮ ಸಂವೇದನೆ ಇಲ್ಲದ, ಕಾನೂನಿನ ಬಗ್ಗೆ ಸ್ವಲ್ಪವೂ ಗೌರ ಇಲ್ಲದ, ಮನುಷ್ಯತ್ವವನ್ನೇ ಮರೆತಿರುವ ಈ ಪೊಲೀಸರದು ಅತ್ಯಂತ ನಾಚಿಕೆಗೇಡಿನ ನಡವಳಿಕೆ. ತನಿಖಾಧಿಕಾರಿಗೆ ವೃತ್ತಿಪರತೆಯೇ ಇಲ್ಲ' ಎಂದು ಪೀಠ ಕಟುವಾಗಿ ಟೀಕಿಸಿದೆ.

ಘಟನೆ: ಹರಿಯಾಣ ರಾಜ್ಯದ ಗುರುಗ್ರಾಮ್‌ನ ಸೆಕ್ಟರ್ 54ರ ಸೊಸೈಟಿಯಲ್ಲಿ ಪೋಷಕರೊಂದಿಗೆ ವಾಸವಿದ್ದ 3 ವರ್ಷದ ಹೆಣ್ಣು ಶಿಶುವಿನ ಮೇಲೆ ಆರೋಪಿ ಅತ್ಯಾಚಾರ ನಡೆಸಿದ್ದಾನೆ. ಅಲ್ಲದೇ, 2 ತಿಂಗಳ ಕಾಲ ಲೈಂಗಿಕ ಕಿರುಕುಳ

ನೀಡಿದ್ದಾನೆ. ಆರೋಪಿ ಈ ಕಾಮದಾಟಕ್ಕೆ ಮನೆಗೆಲಸದವರೂ ನೆರವಾಗಿದ್ದಾರೆ ಎಂದು ಆರೋಪಿಸಲಾಗಿದೆ. ವಿಷಯ ತಡವಾಗಿ ತಿಳಿದ ಬಳಿಕ ಪೋಷಕರು ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ.

ಆದರೆ, ಪೊಲೀಸರು ಆರೋಪಿಯ ಪರವಾಗಿ ನಿಂತಿದ್ದಾರೆ. ಸಂತ್ರಸ್ತ ಮಗುವನ್ನು ಒಂದಲ್ಲ ಹಲವು ಬಾರಿ ಠಾಣೆಗೆ ಕರೆಸಿಕೊಂಡು, ಆರೋಪಿಯನ್ನೇ ಪಕ್ಕದಲ್ಲೇ ನಿಲ್ಲಿಸಿಕೊಂಡು ಮಗುವನ್ನು ಪ್ರಶ್ನೆ ಮಾಡಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಅಲ್ಲದೇ, ತನಿಖಾಧಿಕಾರಿ ಪೊಲೀಸ್ ಸಮವಸ್ತ್ರದಲ್ಲಿದ್ದುಕೊಂಡೇ ಸಂತ್ರಸ್ತೆಯನ್ನು ಪ್ರಶ್ನೆ ಮಾಡಿದ್ದಾರೆ. ಇದರಿಂದ ಮಗು ಭಯಕ್ಕೆ ಒಳಗಾಗಿದೆ ಎಂದು ಸಂತ್ರಸ್ತ ಮಗುವಿನ ಪರ ಹಾಜರಾಗಿದ್ದ ಹಿರಿಯ ವಕೀಲ ಮುಕುಲ್ ರೋಹ್ಟಗಿ ಪೀಠದ ಗಮನಕ್ಕೆ ತಂದರು.

ಇದರಿಂದ ಸಿಟ್ಟಿಗೆದ್ದ ತ್ರಿಸದಸ್ಯ ಪೀಠದಲ್ಲಿದ್ದ ನ್ಯಾಯಮೂರ್ತಿಗಳು, ಪೊಲೀಸರು ಮಗುವಿನ ಮನೆಗೇ ಹೋಗಿ ಹೇಳಿಕೆ ದಾಖಲಿಸಿಕೊಳ್ಳಬೇಕಿತ್ತು. ಬದಲಾಗಿ ಮಗುವನ್ನೇ ಠಾಣೆಗೆ ಕರೆಸಿದ್ದು ಸರಿಯಲ್ಲ. ಪುಟ್ಟ ಮಕ್ಕಳನ್ನು ಪೊಲೀಸ್ ಸಮವಸ್ತ್ರದಲ್ಲಿ ಪ್ರಶ್ನೆ ಮಾಡಬಾರದು ಎಂಬ ನಿಯಮ ಗೊತ್ತಿಲ್ಲವೇ? ಆರೋಪಿ ಎದುರೇ ಸಂತ್ರಸ್ತ ಮಗುವಿನ ಹೇಳಿಕೆ ಹೇಗೆ ದಾಖಲಿಸಿದಿರಿ? ಎಂದು ಪ್ರಶ್ನೆ ಮಾಡಿದ ಪೀಠ, ಪೊಲೀಸರು ಇಷ್ಟೊಂದು ಅಸೂಕ್ಷ್ಮವಾಗಲು ಹೇಗೆ ಸಾಧ್ಯ? ಎಂದು ಕಿಡಿಕಾರಿದೆ.

ಮಕ್ಕಳ ಸಮಿತಿಗೂ ತರಾಟೆ: ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ನಡವಳಿಕೆಗೂ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ಮಕ್ಕಳ ಕಲ್ಯಾಣ ಸಮಿತಿ ಈ ಅಧಿಕಾರಿಗಳನ್ನು ನೇಮಿಸಿದ್ದ ಯಾರು? ಇವರು ಎಂಥಾ ಅಧಿಕಾರಿಗಳು. ಮಗುವಿನ ಮನೆಗೆ ಹೋಗಿ ವಿಚಾರಣೆ ನಡೆಸಲು ನಿಮಗೆ ಏನಾಗಿತ್ತು? ಮಗುವನ್ನೇನು ಟೇಬಲ್-ಕುರ್ಚಿ ಎಂದುಕೊಂಡಿರುವಿರಾ? ಎಂದು ಸಿಜೆಐ ಖಾರವಾಗಿ ಪ್ರಶ್ನೆ ಮಾಡಿದ್ದಾರೆ.

ಆರೋಪಿ ರಕ್ಷಿಸಲು ಕಲಂ ಬದಲಾವಣೆ

ಪೊಲೀಸರು 3 ವರ್ಷದ ಮಗುವಿನ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪೋಕ್ಸೊ ಕಾಯಿದೆಯನ್ನು ಬಳಸದೇ ಪ್ರಕರಣದ ತೀವ್ರತೆಯನ್ನೇ ಕಡಿಮೆ ಮಾಡಿದ್ದಾರೆ. ಇದು ಅಪರಾಧ ಪ್ರಕ್ರಿಯೆಗಳ ವಿಚಾರಣೆ-ತನಿಖೆಯಲ್ಲಿನ ದೊಡ್ಡ ಲೋಪ ಎಂದೂ ಪೀಠ ಅಸಮಾಧಾನ ವ್ಯಕ್ತಪಡಿಸಿದೆ. 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ'(ಪೋಕ್ಸೊ) ಸೆಕ್ಷನ್ 6ರ ಬದಲು ಸೆಕ್ಷನ್ 10 ಬಳಸಲಾಗಿದೆ. ಸೆಕ್ಷನ್ 6ರಡಿ 20 ವರ್ಷ ಜೈಲು ಶಿಕ್ಷೆಯಾಗುತ್ತದೆ. ಹಾಗಾಗಿ ಆರೋಪಿಗೆ ಅನುಕೂಲ ಮಾಡಿಕೊಡಲೆಂದೇ ಸೆಕ್ಷನ್ 10ರಡಿ(10 ವರ್ಷ ಜೈಲು) ದೋಷಾರೋಪ ಮಾಡಲಾಗಿದೆ. ಇಲ್ಲಿಯೂ ಪೊಲೀಸರ ಷಡ್ಯಂತ್ರ ಎದ್ದುಕಾಣುತ್ತದೆ. 'ಘೋರ ಅಪರಾಧವನ್ನು ಲಘುವಾಗಿಸುವುದು ಸರಿಯೇ? ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ಬುಧವಾರದ ಕಲಾಪ ವೇಳೆ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದೆ.

ಮುಖ್ಯಾಂಶಗಳು

- 3 ವರ್ಷದ ಹೆಣ್ಣು ಶಿಶು ಆರೋಪಿಯಿಂದ 2 ತಿಂಗಳು ಲೈಂಗಿಕ ಕಿರುಕುಳ, ಮನೆಗೆಲಸದವರ ನೆರವು
- ಆರೋಪಿಯನ್ನು ರಕ್ಷಿಸುವ ಸಲುವಾಗಿ ಸಂತ್ರಸ್ತ ಶಿಶುವನ್ನು ಸತತ ಪ್ರಶ್ನಿಸಿ ಹಿಂಸಿಸಿದ ತನಿಖಾಧಿಕಾರಿ
- ಆರೋಪಿಯ ಪಕ್ಕದಲ್ಲೇ ಸಂತ್ರಸ್ತ ಮಗು ನಿಲ್ಲಿಸಿ ಸಮವಸ್ತ್ರದಲ್ಲಿದ್ದ ಪೊಲೀಸ್ ಅಧಿಕಾರಿಯಿಂದ ಪ್ರಶ್ನೆ
- ಹರಿಯಾಣ ಪೊಲೀಸ್ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡ ಸಿಜೆಐ ನೇತೃತ್ವದ ತ್ರಿಸದಸ್ಯ ಪೀಠ
- ತನಿಖಾ ತಂಡ ವಿರುದ್ಧವೂ ತನಿಖೆಗೆ ಐಪಿಎಸ್ ಅಧಿಕಾರಿ ನೇತೃತ್ವದ ಎಸ್‌ಐಟಿ ರಚನೆಗೆ ನಿರ್ದೇಶನ

ನ್ಯಾಯಮೂರ್ತಿಗಳ ಕಿಡಿನುಡಿ

'3 ವರ್ಷದ ಮಗುವಿನ ಹೇಳಿಕೆ, ಸಿಸಿಟಿವಿ ದೃಶ್ಯಗಳನ್ನೂ ನೀವು ನಂಬಿಲ್ಲವೇ? ನಿಮಗೆ ನಾಚಿಕೆ ಆಗಬೇಕು. ಈ ಸರಕಾರದಲ್ಲಿ ಕಾನೂನಿಗೆ ಏನಾದರೂ ಬೆಲೆ ಇದೆಯೇ? ಶಿಶುವಿನ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಸಾಕ್ಷಿಗಳು ಸ್ಪಷ್ಟವಾಗಿದ್ದರೂ ಆರೋಪಿಗಳನ್ನು ರಕ್ಷಿಸಲು ಪ್ರಯತ್ನಿಸಲಾಗಿದೆ ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಕಿಡಿಕಾರಿದ್ದಾರೆ.ಸಂತ್ರಸ್ತ ಮಗು ಮತ್ತು ಪೋಷಕರ ಬಳಿ ಅತ್ಯಾಚಾರ ಸಾಬೀತುಪಡಿಸುವಂತಹ ಯಾವುದೇ ಪುರಾವೆ ಇಲ್ಲ ಎಂಬುದನ್ನು ದೃಢಪಡಿಸಲು ಪೊಲೀಸ್ ಕಮಿಷನರ್‌ರಿಂದ ಹಿಡಿದು ಸಬ್-ಇನ್‌ಸ್ಪೆಕ್ಟರ್‌ವರೆಗೂ ಗುರುಗ್ರಾಮ್‌ನ ಇಡೀ ಪೊಲೀಸ್ ಪಡೆ ಶ್ರಮಿಸಿದೆ. ಪೊಲೀಸರೂ ಇಷ್ಟೊಂದು ಕೆಳಮಟ್ಟಕ್ಕೆ ಇಳಿಯಲು ಸಾಧ್ಯವೇ? ನಿಮಗೆಲ್ಲಾ ನಾಚಿಕೆ ಆಗಬೇಕು. ಸಂತ್ರಸ್ತ ಮಗು ಮತ್ತು ಕುಟುಂಬದೊಂದಿಗೆ ಸ್ವಲ್ಪವೂ ಮನುಷ್ಯತ್ವವಿಲ್ಲದೆ ವರ್ತಿಸಲಾಗಿದೆ ಎಂದು ಸಿಜೆಐ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಅತ್ಯಾಚಾರಕ್ಕೊಳಗಾದ ಮಗು ಮತ್ತು ಪೋಷಕರ ಜತೆ ಪೊಲೀಸ್ ಅಧಿಕಾರಿಗಳ ನಡವಳಿಕೆ ಬಹಳ ಕೆಟ್ಟದಾಗಿದೆ. ಇದು ಅತ್ಯಾಚಾರ ಸಂತ್ರಸ್ತೆಯೊಬ್ಬರಿಗೆ ಮಾಡಿದ ಅತ್ಯಂತ ಕೆಟ್ಟ ಅವಮಾನ' ನ್ಯಾ.ಜೋಯ್‌ಮಲ್ಯ ಬಾಗ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಸ್‌ಐಟಿ ರಚಿಸಿ: ಸರಕಾರಕ್ಕೆ ಸೂಚನೆ

3 ವರ್ಷದ ಹೆಣ್ಣು ಶಿಶುವಿನ ಮೇಲಿನ ಅತ್ಯಾಚಾರ ಪ್ರಕರಣವನ್ನು ಹೊಸದಾಗಿ ಪೂರ್ಣ ಮನುಷ್ಯ ಸಂವೇದನೆಯೊಂದಿಗೆ ತನಿಖೆ ಮಾಡಬೇಕಿದೆ. ಅದಕ್ಕೆ ಹಿರಿಯ ಮಹಿಳಾ ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿ ಎಂದು ಹರಿಯಾಣ ರಾಜ್ಯ ಸರಕಾರಕ್ಕೆ ತ್ರಿಸದಸ್ಯ ಪೀಠ ಬುಧವಾರ ಆದೇಶಿಸಿದೆ.ಆರೋಪಿಯನ್ನು ರಕ್ಷಿಸಲೆತ್ನಿಸಿದ ಪೊಲೀಸ್ ತನಿಖಾಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧವೂ ತನಿಖೆ ನಡೆಸುವಂತೆ ಪೀಠ ಆದೇಶಿಸಿದೆ. ಅಲ್ಲದೇ, ಗುರುವಾರವೇ ಪ್ರಕರಣದ ಎಲ್ಲಾ ದಾಖಲೆ, ಕಡತಗಳನ್ನೂ 'ಎಸ್‌ಐಟಿ' ವಶಕ್ಕೆ ಒಪ್ಪಿಸುವಂತೆ ಆದೇಶಿಸಿದೆ.ಗುರುಗ್ರಾಮ್ ವಿಭಾಗದ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್ ಅರೋರಾ ಮತ್ತು ಇತರೆ ಹಿರಿಯ ಪೊಲೀಸ್ ಅಧಿಕಾರಿಗಳಿಗೂ ಶೋಕಾಸ್ ನೋಟಿಸ್ ನೀಡಲೂ ಆದೇಶಿಸಿದೆ. ಮಗುವಿನ ವೈದ್ಯಕೀಯ ವರದಿಯನ್ನೇ ಬದಲಿಸಿದ ವೈದ್ಯರ ವಿರುದ್ಧವೂ ದೋಷಾರೋಪ ಹೊರಿಸುವಂತೆ ಪೀಠ ನಿರ್ದೇಶನ ನೀಡಿದೆ. ಗುರುಗ್ರಾಮ್ ಮ್ಯಾಜಿಸ್ಟ್ರೇಟ್ ಕೂಡಾ ಆರೋಪಿ ಸಮ್ಮುಖವೇ ಸಂತ್ರಸ್ತ ಮಗುವನ್ನು ಹೇಗೆ ಪ್ರಶ್ನೆ ಮಾಡಿದರು? ಈ ಕುರಿತು ನ್ಯಾಯಾಲಯ ಮತ್ತು ಜಿಲ್ಲಾ ನ್ಯಾಯಾಧೀಶರಿಂದ ಉತ್ತರ ಬರಬೇಕಿದೆ ಎಂದೂ ಪೀಠ ಹೇಳಿದೆ.

ಇರಾನ್ ವಿರುದ್ಧ ಯುದ್ಧ 27ನೇ ದಿನ । ಅಮೆರಿಕದ ಬಲಿಷ್ಠ ಯುದ್ಧನೌಕೆ ಮೇಲೇ ಇರಾನ್‌ನ ಕ್ಷಿಪಣಿ ಪ್ರಯೋಗ

ಅಬ್ರಹಾಂ ಲಿಂಕನ್‌ಗೆ ಕ್ಷಿಪಣಿ ದಾಳಿ: ಇರಾನ್

ವಾಷಿಂಗ್ಟನ್/ಟೆಹರಾನ್: ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಫೆ.28ರಂದು ಆರಂಭಿಸಿದ ಯುದ್ಧ ಬುಧವಾರಕ್ಕೆ 26ನೇ (ಗುರುವಾರ 27ನೇ) ದಿನಕ್ಕೆ ಕಾಲಿಟ್ಟಿದೆ.

ಹೊರ್ಮುಜ್ ಜಲಸಂಧಿಯ ಮೇಲೇ ಪ್ರಭುತ್ವ ಸಾಧಿಸುವ ಉದ್ದೇಶದಿಂದ ಮುಂದೆ ಸಾಗಿ ಬರುತ್ತಿದ್ದ ಅಮೆರಿಕದ ಶಕ್ತಿಶಾಲಿ ಯುದ್ಧನೌಕೆ ಅಬ್ರಹಾಂ ಲಿಂಕನ್ ಮೇಲೆ ಇರಾನ್ ಬುಧವಾರ ಪ್ರಬಲ ಕ್ಷಿಪಣಿಗಳನ್ನು ಉಡಾಯಿಸಿದೆ.

ಅಮೆರಿಕದ ಅತ್ಯಧಿಕ ಸಂಖ್ಯೆಯ ಯುದ್ಧ ವಿಮಾನಗಳನ್ನು ಹೊತ್ತು ಸಾಗುವ ಬಲಿಷ್ಠ ಯುದ್ಧ ನೌಕೆ ಅಬ್ರಹಾಂ ಲಿಂಕನ್‌ನ ಚಾಲನೆಯ ದಿಕ್ಕನ್ನು ಬದಲಿಸುವ ಉದ್ದೇಶದಿಂದ ನೇವಿ ಖಾಡೆರ್ ಕ್ರೂಸ್ ಮಿಸೈಲ್(ಯುದ್ಧನೌಕೆ ವಿನಾಶಕ ಕ್ಷಿಪಣಿ) ಪ್ರಯೋಗಿಸಿರುವುದಾಗಿ ಇರಾನ್ ವಾಯುಪಡೆ ಹೇಳಿಕೊಂಡಿದೆ. ಈ ಹೇಳಿಕೆಯನ್ನು ಇರಾನ್ ಸರಕಾರಿ ಟಿವಿ ಚಾನೆಲ್‌ಗಳಲ್ಲಿಯೇ ಬುಧವಾರ ಬಿತ್ತರಿಸಲಾಗಿದೆ. ಆದರೆ, ಅಬ್ರಹಾಂ ಲಿಂಕನ್ ನೌಕೆ ಸುರಕ್ಷಿತವಾಗಿದೆ. ಅದಕ್ಕೆ ಯಾವುದೇ ಹಾನಿ ಆಗಿಲ್ಲ ಎನ್ನಲಾಗಿದೆ.

ಇಂದು(ಬುಧವಾರ) ನಡೆಸಿರುವುದು ಒಂದು ಎಚ್ಚರಿಕೆ ದಾಳಿಯಷ್ಟೇ. ಅಮೆರಿಕದ ಈ ಯುದ್ಧ ನೌಕೆ ಇನ್ನಷ್ಟು ದೂರ ಹೊರ್ಮುಜ್‌ನತ್ತ ಮುಂದುವರಿದರೆ ಬಲವಾದ ಹೊಡೆತ ಕೊಡುತ್ತೇವೆ ಎಂದು ಇರಾನ್ ನೌಕಪಡೆಯ ಕಮಾಂಡರ್ ರೇರ್ ಅಡ್ಮಿರಲ್ ಶಹ್ರಾಮ್ ಇರಾನಿ ಎಚ್ಚರಿಕೆ ನೀಡಿದ್ದಾರೆ.

ಶಾಂತಿ ಮಂತ್ರ: ಅಮೆರಿಕ ಶಾಂತಿ ಮಾತುಕತೆ ಪ್ರಸ್ತಾಪದ ಜತೆಗೆ ಯುದ್ಧದ ಚಟುವಟಿಕೆಗಳನ್ನೂ ಮುಂದುವರಿಸಿದೆ. ಇಸ್ರೇಲ್ ಕೂಡಾ ಇರಾನ್‌ನ ಇಸ್ಫಹಾನ್ ನಗರದಲ್ಲಿನ ಜಲಾಂತರ್ಗಾಮಿ ತಯಾರಿಕಾ ಘಟಕದ ಮೇಲೆ ದಾಳಿ ಮಾಡಿರುವುದಾಗಿ ಹೇಳಿಕೊಂಡಿದೆ.

ಒಂದೆಡೆ ರಾಜತಾಂತ್ರಿಕ ನಡೆ ಮತ್ತೊಂದೆಡೆ ಸೇನಾಪಡೆಗಳಲ್ಲಿನ ಸಿದ್ಧತೆ ಎರಡನ್ನೂ ಏಕಕಾಲದಲ್ಲಿ ಮಾಡುತ್ತಿರುವ ಅಮೆರಿಕ, ವಾಯುಪಡೆಯ 2000 ಪ್ಯಾರಾಟ್ರೂಪರ್ಸ್‌ಗಳನ್ನು ಇರಾನ್ ನಲ್ಲಿನ ಸಂಘರ್ಷ ಭೂಮಿಗೆ ನಿಯೋಜನೆ ಮಾಡಿದೆ.

ಮಿಲಿಟರಿ ಉಪಸ್ಥಿತಿಯನ್ನು ಬಲಪಡಿಸಲು ವಾಯುಪಡೆ ಮತ್ತು ನೌಕಾಪಡೆ ಯೋಧರ ಮತ್ತಷ್ಟು ತುಕಡಿಗಳನ್ನೂ ಕೊಲ್ಲಿ ಪ್ರದೇಶಕ್ಕೆ ನಿಯೋಜಿಸಿದೆ. ಈ ಸಂಬಂಧ ಪೆಂಟಗನ್ ಮಂಗಳವಾರ ಆದೇಶ ಹೊರಡಿಸಿದೆ.

ಈಗಾಗಲೇ ಕೊಲ್ಲಿ ಪ್ರದೇಶದಲ್ಲಿ ಅಮೆರಿಕ ನೌಕಾಪಡೆಯ 4500 ಯೋಧರು ಸೇರಿದಂತೆ ಅಮೆರಿಕದ ಸೇನಾಪಡೆಗಳ ಒಟ್ಟು 7000 ಸೈನಿಕರ ದೊಡ್ಡ ತಂಡವೇ ಯುದ್ಧ ಕಾರ್ಯಾಚರಣೆಗಳಲ್ಲಿ ತೊಡಗಿಸಿ ಕೊಂಡಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರಕಾರ, ಇದೇ ವೇಳೆ ಸಂಘರ್ಷ ಕಡಿಮೆ ಮಾಡುವ ಸಂಬಂಧ ಇರಾನ್‌ಗೆ 15 ಅಂಶಗಳ ಪ್ರಸ್ತಾವನೆ ಕಳುಹಿಸಿದೆ ಎಂದು ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ.

ಈಮಧ್ಯೆ, ಇರಾನ್ನ ಸೇನೆಯು ಇಸ್ರೇಲ್ ಮತ್ತು ಕೊಲ್ಲಿ ಪ್ರದೇಶದ ಮೇಲೆ ದಾಳಿಗಳನ್ನು ಹೆಚ್ಚಿಸಿದೆ. ಕುವೈತ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆಯೂ ಬುಧವಾರ ದಾಳಿ ಮಾಡಿದೆ.

ಅಮೆರಿಕದ ಬಲಿಷ್ಠ ಯುದ್ಧನೌಕೆ ಅಬ್ರಹಾಂ ಲಿಂಕನ್ ಮೇಲೇ ಇರಾನ್‌ನ ಕ್ಷಿಪಣಿ ಪ್ರಯೋಗ-ಎಚ್ಚರಿಕೆ

ವಿಕಿರಣ ಸೋರಿಕೆ?: ಕುವೈತ್ ಎಚ್ಚರಿಕೆ

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಪರಮಾಣು ಘಟಕಗಳ ಮೇಲಿನ ದಾಳಿಯ ಪರಿಣಾಮವಾಗಿ ವಿಕಿರಣ ಸೋರಿಕೆ ಆಗಿರುವ ಸಂಭವವಿದೆ. ನಾಗರಿಕರು ಎಚ್ಚರಿಕೆಯಿಂದ ಇರಬೇಕು ಎಂದು ಕುವೈತ್ ಬುಧವಾರ 'ಎಸ್‌ಒಎಸ್' ಸಂದೇಶವನ್ನು ಹೊರಡಿಸಿದೆ.ಇರಾನ್‌ನ ಪರಮಾಣು ಸ್ಥಾವರದ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ಮಾಡಿದ್ದರೆ, ಇನ್ನೊಂದೆಡೆ, ಇಸ್ರೇಲ್‌ನ ನೆಗೆವ್ ಮರುಭೂಮಿಯಲ್ಲಿನ ಪರಮಾಣು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಸಮೀಪದಲ್ಲಿಯೇ ದಿಮೋನ(ಮಿನಿ ಭಾರತ) ಮತ್ತು ಅರಾದ್ ಪಟ್ಟಣಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿತ್ತು ಎಂಬುದು ಉಲ್ಲೇಖಾರ್ಹ.

ಭಾರತ ವಿಶ್ವಾಸಾರ್ಹ ಪಾತ್ರ: ಇರಾನ್

ದೆಹಲಿ: ಪಶ್ಚಿಮ ಏಷ್ಯಾದಲ್ಲಿನ ಇರಾನ್ ಮತ್ತು ಅಮೆರಿಕ-ಇಸ್ರೇಲ್ ನಡುವಿನ ಉದ್ವಿಗ್ನತೆ ಕಡಿಮೆ ಮಾಡುವುದರಲ್ಲಿ ಭಾರತ ವಿಶ್ವಾಸಾರ್ಹ ಪಾತ್ರ ವಹಿಸಬಹುದಾಗಿದೆ ಎಂಬುದು ಇರಾನ್ ನಂಬಿಕೆಯಾಗಿದೆ. ಭಾರತ ಹಾಗೆ ಮಾಡಿದಲ್ಲಿ ಪರಿಣಾಮಕಾರಿ ಮತ್ತು ಸಕಾರಾತ್ಮಕ ಫಲಿತಾಂಶ ನಿರೀಕ್ಷಿಸಬಹುದಾಗಿದೆ ಎಂದು ದೆಹಲಿಯಲ್ಲಿರುವ ಇರಾನ್ ರಾಯಭಾರಿ ಮೊಹಮ್ಮದ್ ಫತಾಲಿ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ವಿದ್ಯುತ್ ಸ್ಥಾವರಗಳು ಮತ್ತು ಮೂಲಸೌಕರ್ಯ ನೆಲೆಗಳ ಮೇಲೆ ದಾಳಿ ಮಾಡುವ ಬೆದರಿಕೆಗೆ 5 ದಿನಗಳ ವಿರಾಮ ಘೋಷಿಸಿ, ಮಾತುಕತೆಗೆ ಕರೆ ನೀಡಿದ ನಂತರ ಇರಾನ್ ರಾಯಭಾರಿಯಿಂದ ಈ ಹೇಳಿಕೆ ಹೊರಬಿದ್ದಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ತನ್ನ ಬಲವಾದ ಸ್ಥಾನ ಮತ್ತು ಸಮತೋಲಿತ, ತಟಸ್ಥ ವಿದೇಶಾಂಗ ನೀತಿಯಿಂದಾಗಿ ಭಾರತ ಮಧ್ಯಸ್ಥಿಕೆ ವಹಿಸಬಹುದಾಗಿದೆ. ಇದು ಶಾಂತಿ ಮಾತುಕತೆ ಪ್ರೋತ್ಸಾಹಿಸಲು ಮತ್ತು ಎದುರಾಳಿ ದೇಶಗಳ ನಡುವೆ ಸಂವಾದ ಉತ್ತೇಜಿಸಲು ನೆರವಾಗುತ್ತದೆ ಎಂದು ಅವರು ದೆಹಲಿಯಲ್ಲಿ ಸುದ್ದಿಸಂಸ್ಥೆಗೆ ಬುಧವಾರ ಪ್ರತಿಕ್ರಿಯಿಸಿದ್ದಾರೆ.

ಹಲವು ದೇಶಗಳೊಂದಿಗಿನ ಸಮತೋಲಿತ ಸಂಬಂಧಗಳಿಂದಾಗಿ ಭಾರತವನ್ನು ತಟಸ್ಥ ಮತ್ತು ವಿಶ್ವಾಸಾರ್ಹ ದೇಶ ಎಂದು ಪರಿಗಣಿಸಲಾಗುತ್ತದೆ. ದೇಶಗಳ ನಡುವಿನ ತಪ್ಪು ತಿಳಿವಳಿಕೆ ನಿವಾರಿಸಲು ಮತ್ತು ರಾಜತಾಂತ್ರಿಕ ಮಾರ್ಗಗಳನ್ನು ಬಲಪಡಿಸಲು ಭಾರತ ಸಹಾಯ ಮಾಡಬಲ್ಲದಾಗಿದೆ ಎಂದು ಫತಾಲಿ

ಸಿಲಿಂಡರ್ ಬುಕ್ಕಿಂಗ್ ಅವಧಿ ಬದಲಿಸಿಲ್ಲ, ಪೆಟ್ರೋಲ್ ಇದೆ

ದೆಹಲಿ: ಅಡುಗೆ ಅನಿಲ ಸಿಲಿಂಡರ್ ಬುಕಿಂಗ್ ಅವಧಿಯಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಿಲ್ಲ ಎಂದು ಕೇಂದ್ರ ಸರಕಾರ ಬುಧವಾರ ಸ್ಪಷ್ಟನೆ ನೀಡಿದೆ.

ಎಲ್‌ಪಿಜಿ ಸಿಲಿಂಡರ್ ರಿಫೀಲ್ ಬುಕ್ಕಿಂಗ್ ಅವಧಿಯಲ್ಲಿ ಬದಲಾವಣೆಗಳಾಗಿವೆ ಎಂಬ ವರದಿಗಳು ತಪ್ಪಾಗಿವೆ. ಸದ್ಯ ಜಾರಿಯಲ್ಲಿರುವ ಬುಕಿಂಗ್ ಅವಧಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ದೇಶದಲ್ಲಿ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಸರಬರಾಜಿನಲ್ಲಿ ಯಾವುದೇ ಸಮಸ್ಯೆ ಇಲ್ಲ. ಅಗತ್ಯದಷ್ಟು ಸಂಗ್ರಹವಿದೆ ಎಂದು ಈ ಕುರಿತು ಇಂಡಿಯನ್ ಆಯಿಲ್ ಕಾರ್ಪೊರೇಷನ್(ಐಒಸಿ) ತಿಳಿಸಿದೆ.

ಗ್ಯಾಸ್ ಸಿಲಿಂಡರ್ ಬುಕಿಂಗ್ ಅವಧಿ ಪ್ರಧಾನ ಮಂತ್ರಿ ಉಜ್ವಲ ಯೋಜನೆ(ಪಿಎಂಯುವೈ)ಗೆ 45 ದಿನ, ನಗರ ಪ್ರದೇಶಕ್ಕೆ 25 ದಿನ, ಗ್ರಾಮೀಣ ಭಾಗಕ್ಕೆ 45 ದಿನಗಳಾಗಿರುತ್ತದೆ. ಇದರಲ್ಲಿ ಯಾವುದೇ ಬದಲಾವಣೆಯಿಲ್ಲ. ಕಂಪನಿಗಳಿಂದ ಬರುವ ಅಧಿಕೃತ ಮಾಹಿತಿಗಳನ್ನಷ್ಟೇ ಗಮನಿಸಿ. ವದಂತಿಗಳಿಗೆ, ಸುಳ್ಳು ಸುದ್ದಿಗಳಿಂದ ಗಾಬರಿಗೊಂಡು ತರಾತುರಿಯಲ್ಲಿ ಗ್ಯಾಸ್ ಸಿಲಿಂಡರ್ ಬುಕ್ ಮಾಡಲು ಮುಂದಾಗಬೇಡಿ ಎಂದು ಐಒಸಿ ತನ್ನ ಬಳಕೆದಾರರಲ್ಲಿ ಮನವಿ ಮಾಡಿದೆ.



ವದಂತಿ ನಂಬದಿರಿ: ಪೆಟ್ರೋಲ್-ಡೀಸೆಲ್ ಕೊರತೆಯಾಗಿದೆ ಎಂಬ ವದಂತಿ ನಂಬಿ ವಾಹನಗಳ ಚಾಲಕರು ದೇಶದ ವಿವಿಧೆಡೆ ಪೆಟ್ರೋಲ್ ಬಂಕ್‌ಗಳಲ್ಲಿ ಸಾಲುಗಟ್ಟುತ್ತಿರುವುದು ಸರಿಯಲ್ಲ. ದೇಶದಲ್ಲಿ ಪೆಟ್ರೋಲ್-ಡೀಸೆಲ್ ಸಂಗ್ರಹ ಸಾಕಷ್ಟಿದೆ. ವದಂತಿಗಳನ್ನು ನಂಬಿ ವಾಹನಗಳ ಮಾಲೀಕರು ಆತಂಕಕ್ಕೆ ಒಳಗಾಗ ಬಾರದು ಎಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ.(ಬಿಪಿಸಿಎಲ್) ಅಧಿಕೃತ ಪ್ರಕಟಣೆ ಮೂಲಕ ದೇಶದ ಜನರಲ್ಲಿ ಮನವಿ ಮಾಡಿದೆ.

ಜಗ್‌ವಸಂತ್, ಪೈನ್ ಗ್ಯಾಸ್ ಎಲ್‌ಪಿಜಿ ಸಾಗಣೆ ನೌಕೆಗಳ ಆಗಮನ

ಭಾರತಕ್ಕೆ ಮತ್ತೆ 92,162 ಟನ್ ಎಲ್‌ಪಿಜಿ ಲಭ್ಯ

ಜಗ್ ವಸಂತ್

ಇಂದು ಬೆಳಗ್ಗೆ ಕಾಂಡ್ಲಾಗೆ



- ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಲ್ ಹಮ್ರಿಯಾಹ್ ಆಂಚ್ ಬಂದರಿನಿಂದ ಮಾ.21ರಂದು ಹೊರಟ ಜಗ್ ವಸಂತ್.
- ಪರ್ಷಿಯನ್ ಕೊಲ್ಲಿ ಪ್ರದೇಶದಿಂದ ಹೊರಟಿರುವ ಜಗ್ ವಸಂತ್ ಹಡಗಿನಲ್ಲಿ 47,612 ಮೆಟ್ರಿಕ್ ಟನ್ ಎಲ್‌ಪಿಜಿ ಭರ್ತಿ.
- ಜಗ್ ವಸಂತ್ ಐಎಂಒ 9307750 ನೌಕೆಯಲ್ಲಿ 33 ಭಾರತೀಯ ಸಿಬ್ಬಂದಿ, ಮಾ.25ರಂದು ಅರಬ್ಬೀ ಸಮುದ್ರದಲ್ಲಿ ಸಂಚಾರ.
- ಇರಾನ್‌ನ ಹೊರ್ಮುಝ್ ಜಲಸಂಧಿಯನ್ನು ಮಾ.23ರಂದು ದಾಟಿದ ಭಾರತದ ಧ್ವಜವಿರುವ ಜಗ್ ವಸಂತ್ ಎಲ್‌ಪಿಜಿ ನೌಕೆ.
- ಬುಧವಾರ ಮಧ್ಯಾಹ್ನ ಗುಜರಾತ್‌ನ ಕಾಂಡ್ಲಾ ಬಂದರಿನಿಂದ 450 ನಾಟಿಕಲ್ ಮೈಲು ದೂರದಲ್ಲಿ ಸಂಚರಿಸುತ್ತಿದ್ದ ಜಗ್‌ವಸಂತ್.
- ಗಂಟೆಗೆ 11.6 ನಾಟಿಕಲ್ ಕಿಮೀ ವೇಗದ ಜಗ್ ವಸಂತ್, ಗುರುವಾರ ಬೆಳಗ್ಗೆ ಗುಜರಾತ್‌ನ ಕಾಂಡ್ಲಾ ಬಂದರು ಸೇರುವ ನಿರೀಕ್ಷೆ
- ಜಗ್ ವಸಂತ್ ಮತ್ತು ಪೈನ್ ಗ್ಯಾಸ್ ನೌಕೆಗಳಿಂದ ಈಗ ಒಟ್ಟಾರೆ 92612 ಮೆಟ್ರಿಕ್ ಟನ್ ಎಲ್‌ಪಿಜಿ ಭಾರತಕ್ಕೆ ಸರಬರಾಜಾಗುತ್ತಿದೆ.

ಪೈನ್ ಗ್ಯಾಸ್

ನಾಳೆ ರಾತ್ರಿ ಮಂಗಳೂರಿಗೆ



- ಪೈನ್ ಗ್ಯಾಸ್ ಎಲ್‌ಪಿಜಿ ನೌಕೆ ಮಾ.21 ರಂದು ಯುಎಇನ ಅಲ್ ಹಮ್ರಿಯಾಹ್ ಆಂಚ್ ಬಂದರಿನಿಂದ ಹೊರಟಿದೆ.
- 225.27 ಮೀ. ಉದ್ದದ ಪೈನ್ ಗ್ಯಾಸ್ ನೌಕೆಯಲ್ಲಿ 45 ಸಾವಿರ ಟನ್ ಎಲ್‌ಪಿಜಿ, 27 ಭಾರತೀಯ ನಾವಿಕ ಸಿಬ್ಬಂದಿ.
- ತ್ರಿವರ್ಣ ಧ್ವಜವಿರುವ ಪೈನ್ ಗ್ಯಾಸ್ ನೌಕೆ ಐಎಂಒ 9315680, ಗಂಟೆಗೆ 12 ನಾಟಿಕಲ್ ಕಿಮೀ ವೇಗದಲ್ಲಿ ಸಂಚಾರ.
- ಬುಧವಾರ ನವ ಮಂಗಳೂರು ಬಂದರಿಂದ 1100 ನಾಟಿಕಲ್ ಮೈಲು ದೂರ ಅರಬ್ಬಿ ಸಮುದ್ರದಲ್ಲಿ ನೌಕೆ ಪಯಣ.
- 20 ವರ್ಷ ಹಳೆ ಸರಕು ಸಾಗಣೆ ನೌಕೆ ಕರ್ನಾಟಕದ ನವ ಮಂಗಳೂರಿಗೆ ಶುಕ್ರವಾರ ರಾತ್ರಿ 8.30ಕ್ಕೆ ಆಗಮಿಸುವ ನಿರೀಕ್ಷೆ.
- ಹೊರ್ಮುಝ್ ಜಲಸಂಧಿಯಲ್ಲನ್ನೂ ಭಾರತದ ಧ್ವಜದ 20 ಸರಕು ಸಾಗಣೆ ನೌಕೆ, ಅದರಲ್ಲಿ 6 ನೌಕೆಯಲ್ಲಿ ಎಲ್‌ಪಿಜಿ ಭರ್ತಿ.
- 540 ಭಾರತೀಯ ನಾವಿಕರು ಸುರಕ್ಷಿತ: ನೌಕಾ ಸಚಿವಾಲಯ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಮಾಹಿತಿ.

ಸಮಾಚಾರ ಸಣ್ಣದಲ್ಲ

ರಂಗ ಪುರಸ್ಕಾರ, ನಾಟಕ ಪ್ರದರ್ಶನ

ಬೆಂಗಳೂರು: ಇದೇ ತಿಂಗಳ 30ರಂದು ಸಂಜೆ ನಯನ ರಂಗಮಂದಿರದಲ್ಲಿ ಪರಂಪರಾ ಕಲ್ಚರಲ್ ಫೌಂಡೇಶನ್ ವತಿಯಿಂದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಪರಂಪರಾ ರಂಗ ಪುರಸ್ಕಾರ ಪ್ರದಾನ ಮತ್ತು ಏಕವ್ಯಕ್ತಿ ನಾಟಕ ಪ್ರದರ್ಶನ ನಡೆಯಲಿದೆ. ಹಿರಿಯ ರಂಗನಟ, ನಿರ್ದೇಶಕ ಹಾಗೂ ಆಕಾಶವಾಣಿ ಧ್ವನಿ ಕಲಾವಿದ ಹೆಚ್. ಎಸ್. ರಾಮಕೃಷ್ಣ ಮತ್ತು ಹಿರಿಯ ರಂಗನಟಿ, ನಿರ್ದೇಶಕಿ, ಗಾಯಕಿ ರತ್ನ ಸಕಲೇಶಪುರ ಅವರಿಗೆ ಪರಂಪರಾ ರಂಗ ಪುರಸ್ಕಾರ ನೀಡಿ ಗೌರವಿಸಲಾಗುತ್ತದೆ. ಸಮಾರಂಭದಲ್ಲಿ ಹೆಸರಾಂತ ನಾಟಕಕಾರ, ನಟ, ಸಾಹಿತಿ ಡಾ. ನಾ. ದಾಮೋದರ ಶೆಟ್ಟಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಅಶೋಕ ಎನ್.ಚಲವಾದಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪರಂಪರಾದ ಅಧ್ಯಕ್ಷ ಜಿ ಪಿ ರಾಮಣ್ಣ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಡಾ.ಎಚ್. ಎನ್.ಮೀರಾ ಅಭಿನಯದ ಪಂಚವರ್ಣೆ ನಾಟಕ ಪ್ರದರ್ಶನ ಇರಲಿದ್ದು, ಪ್ರಸಿದ್ಧ ನಾಟಕಕಾರ, ನಿರ್ದೇಶಕ ಡಾ. ಬೇಲೂರು ರಘುನಂದನ್ ನಿರ್ದೇಶನದಲ್ಲಿ ಈ ನಾಟಕ ಮೂಡಿಬರಲಿದೆ.

ಕೆಪಿಎಸ್‌ಸಿ ಪ್ರಕರಣ: ಹೈ ಆದೇಶ ರದ್ದು

ದೆಹಲಿ: ಆಯ್ಕೆಯಾದ ಅಭ್ಯರ್ಥಿಯು ನೇಮಕಾತಿ ಪೂರ್ವ ಔಪಚಾರಿಕತೆಗಳನ್ನು ಪೂರ್ಣಗೊಳಿಸಲು ವಿಫಲವಾದಲ್ಲಿ ಅಥವಾ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದರೆ



ಅದೇ ಆಯ್ಕೆ ಪಟ್ಟಿಯಿಂದ ನೇಮಕಾತಿಯನ್ನು ಹಕ್ಕಿನ ವಿಷಯವಾಗಿ ಪಡೆಯಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಪ್ರತಿವಾದಿಯನ್ನು ಉಪವಿಭಾಗಾಧಿಕಾರಿ (ಕೆಎಎಸ್) ಹುದ್ದೆಗೆ ಪರಿಗಣಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಸಂದೀಪ್‌ಮೆಹ್ತಾ ಅವರ ಪೀಠ ರದ್ದುಪಡಿಸಿದೆ. ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆಯಲ್ಲಿ ವೇಯ್ಟಿಂಗ್ ಲಿಸ್ಟ್ (ನಿರೀಕ್ಷಣಾ ಪಟ್ಟಿ) ಅಥವಾ ಹೆಚ್ಚುವರಿ ಪಟ್ಟಿಗಾಗಿ ನಿರ್ದಿಷ್ಟ ಶಾಸಕಾಂಗ ನಿಯಮಗಳಿಲ್ಲ, ಹೀಗಾಗಿ ಆಯ್ಕೆಯಾದ ಅಭ್ಯರ್ಥಿಯು ಹುದ್ದೆಗೆ ವರದಿ ಮಾಡಿಕೊಳ್ಳದಿದ್ದರೆ ಬೇರೆ ಅಭ್ಯರ್ಥಿಯು ಆ ಹುದ್ದೆಯನ್ನು ಕೇಳುವಂತಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ.

ಗುಜರಾತ್: ಏಕರೂಪ ನಾಗರಿಕ ಸಂಹಿತೆ ಜಾರಿ

ಗುಜರಾತ್: ಉತ್ತರಾಖಂಡದ ಬಳಿಕ ಗುಜರಾತ್ ಈಗ ಏಕರೂಪ ನಾಗರಿಕ ಸಂಹಿತೆ ಮಸೂದೆಯನ್ನು ಅಂಗೀಕಾರ ಮಾಡಿದೆ. ಮದುವೆ, ವಿಚ್ಛೇದನ, ಉತ್ತರಾಧಿಕಾರ ಮತ್ತು ಲಿವ್-ಇನ್ ಸಂಬಂಧಗಳನ್ನು ನಿಯಂತ್ರಿಸಲು ಗುಜರಾತ್ ವಿಧಾನ ಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ ಮಸೂದೆ ಅಂಗೀಕರಿಸಲಾಗಿದೆ. ಇದಕ್ಕೂ ಮೊದಲು 2024ರ ಫೆಬ್ರವರಿ ತಿಂಗಳಲ್ಲಿ ಉತ್ತರಾಖಂಡ ಈ ಮಸೂದೆಯನ್ನು ಮೊದಲು ಅಂಗೀಕಾರ ಮಾಡಿತ್ತು. ಈ ಮೂಲಕ ಏಕರೂಪ ನಾಗರಿಕ ಸಂಹಿತೆ ಮಸೂದೆ ಅಂಗೀಕರಿಸಿದ ಎರಡನೇ ರಾಜ್ಯವಾಗಿ ಗುಜರಾತ್ ಗುರುತಿಸಿಕೊಂಡಿದೆ. ಜಾತಿ, ಧರ್ಮವನ್ನು ಲೆಕ್ಕಿಸದೆ ಮದುವೆ, ವಿಚ್ಛೇದನ, ಉತ್ತರಾಧಿಕಾರ ಮತ್ತು ಲಿವ್-ಇನ್ ಸಂಬಂಧಗಳನ್ನು ನಿಯಂತ್ರಿಸಲು ಸಾಮಾನ್ಯ ಕಾನೂನು ಚೌಕಟ್ಟನ್ನು ಪ್ರಸ್ತಾಪಿಸುವ ಮಸೂದೆಯನ್ನು ವಿರೋಧ ಪಕ್ಷ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷ (ಎಎಪಿ) ಅನುಮೋದಿಸದ ಕಾರಣ ಬಹುಮತದ ಧ್ವನಿಮತದೊಂದಿಗೆ ಗುಜರಾತ್ ವಿಧಾನಸಭೆಯು ಏಕರೂಪ ನಾಗರಿಕ ಸಂಹಿತೆ ಮಸೂದೆಯನ್ನು ಅಂಗೀಕರಿಸಿದೆ.

ಕಾಮಗಾರಿ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಆಯುಕ್ತರು | ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ

ಪಾದಚಾರಿ ಮಾರ್ಗಗಳ ಸಮಗ್ರ ಪರಿಶೀಲನೆ ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಂಬರುವ ಮಳೆಗಾಲದ ಹಿನ್ನೆಲೆಯಲ್ಲಿ ರಸ್ತೆ, ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ಸಮಗ್ರ ಪರಿಶೀಲನೆ ನಡೆಸಿ ಯಾವುದೇ ತೊಂದರೆಗಳು ಉಂಟಾಗದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ ತಿಳಿಸಿದರು.

ಮುಂಬರುವ ಮಳೆಗಾಲದ ಹಿನ್ನೆಲೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು, ರಸ್ತೆ ಸುವ್ಯವಸ್ಥೆ, ರಾಜಕಾಲುವೆ ಹಾಗೂ ಚರಂಡಿಗಳ ನಿರ್ವಹಣೆ ಮತ್ತು ಗೇಲ್ ಹಾಗೂ ಗೇಲ್ ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳ ಕುರಿತು ಕಾಮಗಾರಿ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದರು.

ಮಳೆಗಾಲದ ಸಂದರ್ಭದಲ್ಲಿ ಯಾವುದೇ ಅನಾಹುತಗಳು ಸಂಭವಿಸದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಂಡು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿದುಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಯಾವುದೇ ಪ್ರದೇಶದಲ್ಲಿ ಪ್ರವಾಹ ಉಂಟಾಗದಂತೆ ವಿಶೇಷ ಗಮನ ಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರಾಜಕಾಲುವೆ ಹಾಗೂ ಚರಂಡಿಗಳಲ್ಲಿ ನೀರಿನ ಹರಿವಿಗೆ ಅಡ್ಡಿಯಾಗುವ ಹೂಳು ಮತ್ತು ತ್ಯಾಜ್ಯಗಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು. ಪಾದಚಾರಿ ಮಾರ್ಗಗಳ ಸ್ಥಿತಿಯನ್ನು ಪರಿಶೀಲಿಸಿ ಅಗತ್ಯವಿರುವ ಸ್ಥಳಗಳಲ್ಲಿ ಸ್ಟೋನ್ ಡೆಸ್ಕ್ ಅಳವಡಿಸಿ ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಮುಂಜಾಗ್ರತಾ ಕ್ರಮದ ಅಂಗವಾಗಿ ಸಹಾಯಕ ಅಭಿಯಂತರರು ವಾರ್ಡ್ ಮಟ್ಟದಲ್ಲಿ ಕ್ಷೇತ್ರಕ್ಕೆ ತೆರಳಿ ಪರಿಶೀಲನೆ ನಡೆಸಿ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಸೂಚಿಸಿದರು.

ರಸ್ತೆ ಅಗಲೀಕರಣಕ್ಕೆ ಕ್ರಮ

ಅಗತ್ಯವಿರುವ ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆ ಅಗಲೀಕರಣ ಕಾರ್ಯಗಳನ್ನು ಕೈಗೊಳ್ಳಬೇಕು. ಈ ಕಾರ್ಯಗಳನ್ನು ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ಡಾ. ರಾಜೇಂದ್ರ ಕೆ.ವಿ ಸೂಚನೆ ನೀಡಿದರು. ಗೇಲ್ ಹಾಗೂ ಗೇಲ್ ಗ್ಯಾಸ್ ಸಂಸ್ಥೆಗಳ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳನ್ನು ಷರತ್ತುಬದ್ಧವಾಗಿ ಹಾಗೂ ನಿಯಮಾನುಸಾರವಾಗಿ ಕೈಗೊಳ್ಳುವಂತೆ ಸೂಚಿಸಿ, ರಸ್ತೆ ಕಟಿಂಗ್‌ಗೆ ಸಂಬಂಧಿಸಿದ ವಿಚಾರಗಳನ್ನು ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಬಾಕಿ ಇರುವ ಗೇಲ್ ಗ್ಯಾಸ್ ಗೆ ಸಂಬಂಧಿತ ಪ್ರಕರಣಗಳನ್ನು ತ್ವರಿತವಾಗಿ ನಿವಾರಣೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಮುಖ್ಯ ಅಭಿಯಂತರರಾದ ಸ್ವಯಂಪ್ರಭಾ ಹಾಗೂ ವಿಶ್ವನಾಥ್, ಅಧೀಕ್ಷಕ ಅಭಿಯಂತರರು, ವಿವಿಧ ವಿಭಾಗಗಳ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಸೇರಿದಂತೆ ಇತರ ಅಧಿಕಾರಿಗಳು ಇದ್ದರು.

ದಕ್ಷಿಣ ನಗರ ಪಾಲಿಕೆ ಸಭಾಂಗಣದಲ್ಲಿ ಇಂದು ಏಲಂ

ತೆರಿಗೆ ಬಾಕಿ: 42 ಆಸ್ತಿಗಳ ಹರಾಜು

ಬೆಂಗಳೂರು: ಬೆಂಗಳೂರಿನ ವಿವಿಧ ಪ್ರದೇಶದಲ್ಲಿ ಜಿಬಿಎ ಹಾಗೂ ಪಾಲಿಕೆಗಳು ಸುದೀರ್ಘ ಅವಧಿಯಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರ ಆಸ್ತಿಗಳನ್ನು ಹರಾಜು ಹಾಕುವುದಕ್ಕೆ ಮುಂದಾಗಿದೆ ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್ ರಮೇಶ್ ಮಾಹಿತಿ ನೀಡಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳಿಂದ ಸ್ವೀಕರಿಸಲಾಗುವ ಆಸ್ತಿತೆರಿಗೆಯನ್ನು ಪಾಲಿಕೆಯಲ್ಲಿ ಸಾರ್ವಜನಿಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಅಥವಾ ನಿರ್ವಹಿಸಲು ಉಪಯೋಗಿಸಲಾಗುತ್ತದೆ. ಜಿಬಿಎ ಕಾಯಿದೆ 2025ರ ಅಡಿಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಸ್ವತ್ತುಗಳು ಪ್ರತಿಯೊಂದು ಆರ್ಥಿಕ ಸಾಲಿನಲ್ಲಿ ಆಸ್ತಿತೆರಿಗೆ ಪಾವತಿ ಮಾಡಬೇಕಾಗಿರುತ್ತದೆ. ಆಸ್ತಿತೆರಿಗೆ ಪಾವತಿಸದ ಪ್ರಕರಣಗಳಲ್ಲಿ ಆಸ್ತಿತೆರಿಗೆ ವಸೂಲಿ ಮಾಡುವ ಕಾರ್ಯವಿಧಾನವನ್ನು ಆಸ್ತಿತೆರಿಗೆ ನಿರ್ಧರಣೆ, ವಸೂಲಾತಿ ಮತ್ತು ನಿರ್ವಹಣೆ ನಿಯಮಗಳು 2024ರ ಅಡಿಯಲ್ಲಿ ಅಧಿಸೂಚಿಸಲಾಗಿತ್ತು.

ಈ ಕಾಯಿದೆ ಹಾಗೂ ನಿಯಮಗಳಲ್ಲಿ ತಿಳಿಸಿರುವಂತೆ ಆಸ್ತಿ ತೆರಿಗೆ ಸುಸ್ತಿದಾರರಿಗೆ ಕಾರಣ ಕೇಳಿ ಪತ್ರ, ಆಸ್ತಿತೆರಿಗೆ ಬೇಡಿಕೆ ಪತ್ರಜಾರಿ ಮಾಡಲಾಗಿದ್ದು, ಸಾಕಷ್ಟು ಕಾಲಾವಕಾಶವನ್ನು ನೀಡಲಾದ ನಂತರದಲ್ಲೂ ಬಾಕಿ ಉಳಿಸಿಕೊಂಡ ಪ್ರಕರಣಗಳ ಮಾಲೀಕರಿಗೆ ನಿಯತಕಾಲಿಕವಾಗಿ ಮೊಬೈಲ್ ಸಂದೇಶಗಳ ಮೂಲಕ ತಮ್ಮ ಸ್ವತ್ತಿನ ಆಸ್ತಿತೆರಿಗೆಯನ್ನು ಪಾವತಿಸಲು ತಿಳಿಸಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ಗುರುವಾರದಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರು ಜಯನಗರದ 2ನೇ ಬ್ಲಾಕ್‌ನಲ್ಲಿರುವ ದಕ್ಷಿಣ ನಗರ ಪಾಲಿಕೆಯ 2ನೇ ಮಹಡಿಯ ಸಂಭಾಗಣದಲ್ಲಿ ವಲಯ ಜಂಟಿ ಆಯುಕ್ತರ ಅಧ್ಯಕ್ಷತೆಯಲ್ಲಿ 42 ಆಸ್ತಿತೆರಿಗೆ ಸುಸ್ತಿದಾರರೆಂದು ಗುರುತಿಸಲಾಗಿರುವ ಸ್ವತ್ತುಗಳಿಂದ ಹರಾಜಿನ ಮೂಲಕ ಬೇಬಾಕಿ ಆಸ್ತಿತೆರಿಗೆ ವಸೂಲಾತಿ ಮಾಡಲಾಗುವುದು. ಅಂತಹ ಸ್ವತ್ತುಗಳ ಮಾಹಿತಿಯನ್ನು ಅದೇ ಕಟ್ಟಡದಲ್ಲಿನ ವಲಯ ಜಂಟಿ ಆಯುಕ್ತರು (ಜಯನಗರ ವಲಯ-1) ಕಚೇರಿಯ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ ಎಂದು ಪಾಲಿಕೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಘನತಾಜ್ಯ ವಿಲೇವಾರಿ ನಿಯಮ ಪಾಲಿಸದವರ ವಿರುದ್ಧ ಕ್ರಮ

ಸುರಕ್ಷತಾ ಧಿರಿಸುಗಳೊಂದಿಗೆ ಘನತ್ಯಾಜ್ಯ ಸಂಗ್ರಹಿಸಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಪ್ರತಿ ಮನೆ-ಮನೆಯಿಂದಲೇ ವಿಂಗಡಿಸಿದ ಘನತ್ಯಾಜ್ಯವನ್ನು ತಪ್ಪದೇ ಎಲ್ಲಾ ಸುರಕ್ಷತಾ ಧಿರಿಸು (ಸಮವಸ್ತ್ರ, ಕೈಗವಸು, ಮುಖಗವಸು, ಗಮ್ ಬೂಟ್ ಮತ್ತು ಇತರೆ ಅವಶ್ಯಕ ಸಾಧನ-ಸಲಕರಣೆಗಳೊಂದಿಗೆ ಸಂಗ್ರಹಿಸಿ ಸಾಗಿಸಿ ಎಂದು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ಆದೇಶಿಸಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ವಿಭಾಗೀಯ ಅಧಿಕಾರಿಗಳು ಆಟೋಟಿಪ್ಪರ್ ವಾಹನಗಳ ಚಾಲಕರು ಮತ್ತು ಸಹಾಯಕರು ಗಳನ್ನು ಒತ್ತಾಯ ಪೂರ್ವಕವಾಗಿ ಕಸ ವಿಂಗಡಿಸುವ ಕಾರ್ಯಕ್ಕೆ ಒಳಪಡಿಸಿಕೊಂಡು ಘನತಾಜ್ಯ ವಿಲೇವಾರಿ ನಿಯಮದ ವಿರುದ್ಧವಾಗಿ ನಡೆಸಿಕೊಳ್ಳಲಾಗುತ್ತಿದ್ದು, ಕಾರ್ಮಿಕರು ತಮ್ಮ ಉದ್ಯೋಗವನ್ನು ತ್ಯಜಿಸಲು ಸಿದ್ಧರಿರುವ ಬಗ್ಗೆ ಹಾಗೂ ಕಾರ್ಮಿಕರನ್ನು ಚಿಂದಿ ಆಯುವವರೆಂದು ಉಲ್ಲೇಖಿಸಿ, ಸೇವಾ ಕಾರ್ಯವನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿ ಮುಂಜಾಗ್ರತಾ ಕ್ರಮವಾಗಿ ಘನತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣೆಗಾಗಿ ಪರ್ಯಾಯ ವ್ಯವಸ್ಥೆಯನ್ನು ಸಿದ್ದತೆ ಮಾಡಿಕೊಳ್ಳುವಂತೆ ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಘನತ್ಯಾಜ್ಯ ನಿರ್ವಹಣಾ ನಿಯಮಗಳು-2016 ಹಾಗೂ ಘನತ್ಯಾಜ್ಯ ನಿರ್ವಹಣಾ ಉಪವಿಧಿಗಳು-2020ರನ್ವಯ ಹಸಿ, ಒಣ ಮತ್ತು ಇತರೆ (ಸ್ಥಳೀಯ ನೈರ್ಮಲ್ಯ) ಗಳಾಗಿ ವಿಂಗಡಿಸಿದ ತ್ಯಾಜ್ಯವನ್ನು ಪ್ರಾಥಮಿಕವಾಗಿ ಸಂಗ್ರಹಿಸಿ ಸಾಗಿಸಬೇಕಾಗಿದ್ದು ಶಾಸನಬದ್ಧ ಕರ್ತವ್ಯವಾಗಿರುತ್ತದೆ. ಏ.1ರಿಂದ ಜಾರಿಗೊಳ್ಳುವ ಘನತ್ಯಾಜ್ಯ ನಿರ್ವಹಣಾ ನಿಯಮಗಳು-2026ಗಳನ್ವಯ ಹಸಿ, ಒಣ ಮತ್ತು ಸ್ಥಳೀಯ ನೈರ್ಮಲ್ಯ ವಿಶೇಷ ಕಾಳಜಿಯುಳ್ಳಗಳಾಗಿ ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸಬೇಕಾಗಿರುತ್ತದೆ ಮತ್ತು ಇದೂ ಸಹ ಶಾಸನಬದ್ಧ ಜವಾಬ್ದಾರಿಯಾಗಿರುತ್ತದೆ.

ಪ್ರತೀ ಮನೆ-ಮನೆಯಿಂದ ವಿಂಗಡಿಸಿದ ಘನತ್ಯಾಜ್ಯವನ್ನು ಸಂಗ್ರಹಿಸಿದಲ್ಲಿ ಕಪ್ಪು ಚುಕ್ಕೆಗಳು ಉದ್ಭವಿಸುವುದಿಲ್ಲ ಹಾಗೂ ತದನಂತರದ ತ್ಯಾಜ್ಯ ವಿಂಗಡಣೆಯ ಪ್ರಮೇಯವೇ ಇರುವುದಿಲ್ಲ, ಆದರೆ ಸೇವಾದಾರ ಸಂಸ್ಥೆಗಳು ಮಿಶ್ರ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸುತ್ತಿರುವುದನ್ನು ಮತ್ತು ಯಾವುದೇ ಸುರಕ್ಷಾ ಧಿರಿಸು ಧರಿಸದೇ ಕಾರ್ಯನಿರ್ವಹಿಸುತ್ತಿರುವುದನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗಿರುತ್ತದೆ.

> **ಮಿಶ್ರ ತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣಿಕೆಯು ಶಾಸನಾತ್ಮಕ ನಿಯಮಗಳಿಗೆ ತದ್ವಿರುದ್ಧವಾಗಿದ್ದು, ಅದಕ್ಕಾಗಿ ದಂಡವನ್ನು ವಿಧಿಸಬಹುದಾಗಿರುತ್ತದೆ. ಮೇಲಾಗಿ, ಸುರಕ್ಷತಾ ಧಿರಿಸುಗಳೊಂದಿಗೆಯೇ ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸುವುದು ಸೇವಾದಾರರಿಗೆ ನೀಡಲಾಗಿರುವ ಆದೇಶ/ಕಾರ್ಯಾದೇಶದ ಭಾಗವಾಗಿರುತ್ತದೆ. ಸರಬರಾಜು ಆದೇಶ/ಕಾರ್ಯಾದೇಶದ ಭಾಗವಾಗಿರುತ್ತದೆ.**
>
> -ಕರೀಗೌಡ, ಕಾರ್ಯನಿರ್ವಹಣಾಧಿಕಾರಿ, ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮುಖ್ಯ

ರಾಷ್ಟ್ರಕವಿಯ 144ನೇ ಹುಟ್ಟುಹಬ್ಬ ಕಾರ್ಯಕ್ರಮ | ಪೈ ಅವರು ಮೂಲತಃ ಸಂಶೋಧಕರು: ಹಂಪನಾ

ಕನ್ನಡ ಸಾಹಿತ್ಯಕ್ಕೆ ಗೋವಿಂದ ಪೈ ಕೊಡುಗೆ ಅಪಾರ

ಬೆಂಗಳೂರು: ಕನ್ನಡ ಸಾಹಿತ್ಯ ವಿಸ್ತಾರಕ್ಕೆ ರಾಷ್ಟ್ರಕವಿ ಗೋವಿಂದ ಪೈ ಅವರ ಕೊಡುಗೆ ಅಪಾರ ಹಾಗೂ ಅನನ್ಯವಾದುದಾಗಿದೆ ಎಂದು ಭಾಷಾ ವಿದ್ವಾಂಸ ಹಂಪ ನಾಗರಾಜಯ್ಯ ಅಭಿಪ್ರಾಯಪಟ್ಟರು.

ಕನ್ನಡ ಸಂಘರ್ಷ ಸಮಿತಿಯು ಕನ್ನಡ ಸಾಹಿತ್ಯಪರಿಷತ್ತಿನಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಎಂ. ಗೋವಿಂದಪೈ ಅವರ 144ನೇ ಹುಟ್ಟುಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕನ್ನಡವನ್ನು ಕಟ್ಟಿ, ಬೆಳೆಸಿ ಅದರ ತೇಜಸ್ಸಿಗೆ ಗೋವಿಂದ ಪೈ ಕಾರಣರಾಗಿದ್ದಾರೆ, ಅವರು ಮೂಲತ: ಸಂಶೋದಕರಾಗಿದ್ದರು. ಒಳ್ಳೆಯ ನಾಟಕಗಳನ್ನೂ ಸಹ ರಚಿಸಿದ್ದಾರೆ. ಅವರ ಸಂಶೋಧನಾ ಬರಹಗಳು ಮತ್ತು ಸೃಜನಾತ್ಮಕ ಸಾಹಿತ್ಯ ಭಂಡಾರವು ಅಧ್ಯಯನ ಮಾಡುವವರಿಗೆ ಹಾಗೂ ಸಂಶೋಧಕರಿಗೆ ಪ್ರೇರಣೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯಮಟ್ಟದ ಕವನ ಸ್ಪರ್ಧೆಯಲ್ಲಿ ವಿಜೇತರಾದ ಜಯರಾಮ ರೈ ಕುಂಜಾಡಿಗೆ ಪ್ರಥಮ ಬಹುಮಾನ, ಡಾ. ಶ್ರೀನಿವಾಸಪ್ರಸಾದ್ ಡಿ.ಎಸ್.ಗೆ ದ್ವಿತೀಯ ಬಹುಮಾನ ಹಾಗೂ ಮೋಹನಯರಗೊಪ್ಪಗೆ ತೃತೀಯ ಬಹುಮಾನಗಳನ್ನು ಹಂಪ ನಾಗರಾಜಯ್ಯ ವಿತರಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ. ಡಿ.ಕೆ. ಚಿತ್ತಯ್ಯ ಪೂಜಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಎ.ಐ.ಬಳಸಿಕೊಂಡು ಕೃತಿಚೌರ್ಯ ಮಾಡುತ್ತಿರುವುದು ಬಹಳ ಖೇದಕರ ಸಂಗತಿಯಾಗಿದೆ ಎಂದರು. ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ ಆಶಯ ಮಾತುಗಳನ್ನಾಡಿ ದರು. ಜಂಟಿ ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ಅವರು ಕಾರ್ಯಕ್ರಮ ನಿರೂಪಿಸಿದರು. ಗಾಯಕ ಎಚ್.ಸಿ. ಉಮೇಶ್ ನಾಡಗೀತೆ ಪ್ರಸ್ತುತಪಡಿಸಿದರು.

ಕನ್ನಡ ಸಂಘರ್ಷ ಸಮಿತಿಯು ಕನ್ನಡ ಸಾಹಿತ್ಯಪರಿಷತ್ತಿನಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಎಂ. ಗೋವಿಂದಪೈ ಅವರ 144ನೇ ಹುಟ್ಟುಹಬ್ಬ ಕಾರ್ಯಕ್ರಮವನ್ನು ಗೋವಿಂದ ಪೈ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಲಾಯಿತು. ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ, ಪ್ರಾಧ್ಯಾಪಕ ಡಾ. ಡಿ.ಕೆ. ಚಿತ್ತಯ್ಯ ಪೂಜಾರ್, ಭಾಷಾ ವಿಜ್ಞಾನಿ ಹಂಪ ನಾಗರಾಜಯ್ಯ, ಹಿರಿಯ ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಹಾಗೂ ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಭಾಗಿಯಾಗಿದ್ದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಎಂ.ಬಿ. ಪಾಟೀಲ್ ಭೇಟಿ

ರಾಜ್ಯ ಬಲಗೈ ಸಮುದಾಯಗಳ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಹಾಗೂ ವಿವಿಧ ದಲಿತ ಸಂಘಟನೆಗಳು ಒಳ ಮೀಸಲಾತಿ ರಹಿತ, ಹಳೆ ಮೀಸಲಾತಿಯ ಜಾರಿಗಾಗಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದವು.

ಈ ಸಂದರ್ಭದಲ್ಲಿ ಕೈಗಾರಿಕೆ ಸಚಿವರಾದ ಎಂ. ಬಿ. ಪಾಟೀಲ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದರು.

ಸಮಾವೇಶ ಸ್ಥಳದಲ್ಲಿ ಜ್ಞಾನಪ್ರಕಾಶ್ ಮಹಾಸ್ವಾಮಿ, ಸಮುದಾಯದ ಗುರುಗಳು ಹಾಗೂ ಹಿರಿಯರು ಸಚಿವರಿಗೆ ಮನವಿ ಸಲ್ಲಿಸಿದರು.

'ನಮ್ಮ ಸರಕಾರ ಮತ್ತು ಪಕ್ಷವು ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರ ತತ್ವಗಳಲ್ಲಿ ಅಚಲ ನಂಬಿಕೆ ಹೊಂದಿದೆ. ಯಾವುದೇ ಸಮುದಾಯಕ್ಕೆ ಅನ್ಯಾಯವಾಗಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟ ಪಡಿಸಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ, ಮಾರ್ಚ್ 27ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಹಾಗೂ ಸಂಪುಟ ಸದಸ್ಯರೊಂದಿಗೆ ವಿಸ್ತೃತವಾಗಿ ಚರ್ಚಿಸಿ, ಎಲ್ಲರಿಗೂ ನ್ಯಾಯ ಒದಗಿಸುವ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಎಂ. ಬಿ. ಪಾಟೀಲ್ ಅವರು ತಿಳಿಸಿದರು.

ಈ ವೇಳೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಬಿಬಿಎಂಪಿ ಮಾಜಿ ಮಹಾಪೌರರಾದ ಆರ್. ಸಂಪತ್ ರಾಜ್ ಉಪಸ್ಥಿತರಿದ್ದರು.

ಫ್ರೀಡಂಪಾರ್ಕ್‌ನಲ್ಲಿ ಆಯೋಜಿಸಿದ್ದ ಒಳ ಮೀಸಲಾತಿ ವಿರೋಧಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಪ್ರತಿಭಟನೆಗೆ ಹಮ್ಮಿಕೊಂಡಿತ್ತು.

ಪಿಎನ್‌ಜಿ ಇದ್ದೆಡೆ ಎಲ್‌ಪಿಜಿ ಸಿಗದು

ದೆಹಲಿ: ಪೈಪ್‌ಗಳ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಸಂಪರ್ಕ ಲಭ್ಯವಿರುವ ಪ್ರದೇಶಗಳಲ್ಲಿ ಗ್ರಾಹಕರು ಅದಕ್ಕೆ ಬದಲಾಯಿಸದಿದ್ದರೆ, ಮೂರು ತಿಂಗಳ ನಂತರ ಮನೆಗಳಿಗೆ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ಸ್ಥಗಿತಗೊಳಿಸಲಾಗುವುದು ಎಂದು ಸರಕಾರ ಆದೇಶ ಹೊರಡಿಸಿದೆ. ಈ ಆದೇಶವು ಅನಿಲ ಪೈಪ್‌ಲೈನ್ ಜಾಲದ ವಿಸ್ತರಣೆಯನ್ನು ವೇಗಗೊಳಿಸುವ ಮತ್ತು ಒಂದೇ ಇಂಧನ ಮೂಲದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.

ಮಧ್ಯಪ್ರಾಚ್ಯ ಯುದ್ಧದಿಂದಾಗಿ ಭಾರತವು ಪೂರೈಕೆಯಲ್ಲಿ ಅಡಚಣೆಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಈ ಕ್ರಮವನ್ನು ಜಾರಿಗೆ ತರಲಾಗಿದೆ. ಇದು ಪ್ರಮುಖ ಮೂಲಗಳಿಂದ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಸಾಗಣೆಯ ಮೇಲೆ ಪರಿಣಾಮ ಬೀರಿದೆ. ಸರಕಾರವು ಮನೆಗಳು ಮತ್ತು ವಾಣಿಜ್ಯ ಸಂಸ್ಥೆಗಳು ಪಿಎನ್‌ಜಿ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದೆ. ಇದು ಪೈಪ್‌ಲೈನ್‌ಗಳ ಮೂಲಕ ನೇರವಾಗಿ ಅಡುಗೆಮನೆಯ ಬರ್ನರ್‌ಗಳಿಗೆ ಸರಬರಾಜು ಮಾಡಲ್ಪಡುತ್ತದೆ. ಬುಕಿಂಗ್ ಮರುಪೂರಣದ ಅಗತ್ಯವನ್ನು ನಿವಾರಿಸುತ್ತದೆ. ಇಂಧನ ಸುರಕ್ಷತೆಯನ್ನು ಬಲಪಡಿಸಲು ಪೈಪ್‌ಲೈನ್ ಮೂಲಸೌಕರ್ಯವನ್ನು ವೇಗಗೊಳಿಸುವ, ಅನುಮೋದನೆಗಳನ್ನು ಸರಾಗಗೊಳಿಸುವ ಮತ್ತು ಎಲ್‌ಪಿಜಿಯಿಂದ ಪಿಎನ್‌ಜಿಗೆ ಪರಿವರ್ತನೆಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ.

ಇರಾನ್‌ನಿಂದ 50 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಖರೀದಿಸಿದ ರಿಲಯನ್ಸ್ ಇಂಡಸ್ಟ್ರೀಸ್

ರಷ್ಯಾದಿಂದ ಮತ್ತೆ 6 ಕೋಟಿ ಬ್ಯಾರೆಲ್ ತೈಲ ಖರೀದಿ

ನವದೆಹಲಿ/ಮಾಸ್ಕೋ: ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟು ಪೂರ್ಣಪ್ರಮಾಣದಲ್ಲಿ ಇನ್ನೂ ಬಗೆಹರಿಯದ ಹಿನ್ನೆಲೆಯಲ್ಲಿ ಭಾರತ, ರಷ್ಯಾದಿಂದ ತೈಲ ಖರೀದಿಯನ್ನು ಮುಂದುವರಿಸಿದೆ. ತೈಲ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಮುಂದಿನ ತಿಂಗಳು ವಿತರಣೆಗಾಗಿ ಭಾರತ ಸುಮಾರು 6 ಕೋಟಿ ಬ್ಯಾರಲ್ ಕಚ್ಚಾ ತೈಲವನ್ನು ರಷ್ಯಾದಿಂದ ಖರೀದಿಸಿದೆ ಎಂದು ವರದಿಯಾಗಿದೆ.

ವರದಿಗಳ ಪ್ರಕಾರ, ಬ್ರೆಂಟ್ ಕಚ್ಚಾ ತೈಲಕ್ಕಿಂತ ಪ್ರತಿ ಬ್ಯಾರೆಲ್‌ಗೆ 5ರಿಂದ 15 ಡಾಲರ್‌ವರೆಗಿನ ಪ್ರೀಮಿಯಂನಲ್ಲಿ ಬುಕ್ ಮಾಡಲಾಗಿದೆ. ಇದು ಕಳೆದ ಫೆಬ್ರವರಿಯಲ್ಲಿ ಭಾರತ ಖರೀದಿಸಿದ ತೈಲಕ್ಕಿಂತ 2 ಪಟ್ಟು ಹೆಚ್ಚಾಗಿದೆ. ಈಗ ಬುಕಿಂಗ್ ಮಾಡಲಾದ 6 ಕೋಟಿ ಬ್ಯಾರೆಲ್ ಕಚ್ಚಾತೈಲವು ಮುಂದಿನ ತಿಂಗಳು ಭಾರತವನ್ನ ತಲುಪಲಿದೆ. ಇದರಿಂದ ದೇಶದಲ್ಲಿ ಬಹುತೇಕ ತೈಲ ಕೊರತೆ ಸರಿದೂಗಲಿದೆ ಎಂದು ಅಂದಾಜಿಸಲಾಗಿದೆ.

ಇರಾನಿಂದ ಕಚ್ಚಾ ತೈಲ ಖರೀದಿಸಿದ ರಿಲಯನ್ಸ್: ಇನ್ನೂ ಇದಕ್ಕೂ ಮುನ್ನವೇ ಅಮೆರಿಕವು ತೈಲ ಖರೀದಿ ಮೇಲಿನ ನಿರ್ಬಂಧವನ್ನ ತಾತ್ಕಾಲಿಕವಾಗಿ ತೆಗೆದುಹಾಕಿದ ಹಿನ್ನೆಲೆಯಲ್ಲಿ, ವಿಶ್ವದ ಅತಿದೊಡ್ಡ ಸಂಸ್ಕರಣಾ ಘಟಕ ಹೊಂದಿರುವ ಭಾರತದ ರಿಲಯನ್ಸ್ ಇಂಡಸ್ಟ್ರೀಸ್ ಇರಾನ್‌ನಿಂದ 50 ಲಕ್ಷ ಬ್ಯಾರೆಲ್ ಕಚ್ಚಾತೈಲ ಖರೀದಿಸಿದೆ.

ಗುಜರಾತ್‌ನ ಜಾಮ್ ನಗರದಲ್ಲಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ತೈಲ ಸಂಸ್ಕರಣಾಗಾರವು ಇರಾನಿಯನ್ ತೈಲ ಕಂಪನಿಯಿಂದ ತೈಲ ಖರೀದಿಸಿದೆ. ಈ ಒಪ್ಪಂದವು ಪ್ರಸ್ತುತ ಮಾರುಕಟ್ಟೆ ಬೆಲೆಯಲ್ಲಿ ಸುಮಾರು 350 ಮಿಲಿಯನ್ ಡಾಲರ್ (ಸುಮಾರು 32 ಸಾವಿರ ಕೋಟಿ ರೂಪಾಯಿ) ಮೌಲ್ಯದ್ದಾಗಿದೆ ಎಂದು ಮೂಲಗಳು ತಿಳಿಸಿರುವುದಾಗಿ ವರದಿಗಳು ತಿಳಿಸಿವೆ.

ಹೊರ್ಮುಜ್ ಮೂಲಕ ಪಾಕ್ ಹಡಗು ಸಂಚಾರಕ್ಕೆ ಇರಾನ್ ನಿರಾಕರಣೆ | ಕದನ ವಿರಾಮ ಮಧ್ಯಸ್ಥಿಕೆ ವಹಿಸಲು ಹೊರಟಿದ್ದ ಪಾಕ್‌ಗೆ ಕಾಸಿನ ಬೆಲೆಯಿಲ್ಲ

ಪಾಕ್‌ಗೆ ಭಾರೀ ಮುಖಭಂಗ

ಇಸ್ಲಾಮಾಬಾದ್: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಪಾಕಿಸ್ತಾನಕ್ಕೆ ದೊಡ್ಡ ಮುಖಭಂಗವಾಗಿದೆ. ಹೊರ್ಮುಜ್ ಜಲಸಂಧಿಯ ಮೂಲಕ ಪಾಕಿಸ್ತಾನದ ಹಡಗು ಸಾಗಣೆಯನ್ನು ಇರಾನ್ ತಿರಸ್ಕರಿಸಿದೆ ಎಂದು ವರದಿಯಾಗಿದೆ. ಇತ್ತೀಚಿನ ಬೆಳವಣಿಗೆಯಲ್ಲಿ, ಹೊರ್ಮುಜ್ ಜಲಸಂಧಿಯ ಸುತ್ತಲಿನ ಉದ್ವಿಗ್ನತೆ ಪಾಕಿಸ್ತಾನಕ್ಕೆ ರಾಜತಾಂತ್ರಿಕ ಮುಜುಗರವನ್ನುಂಟುಮಾಡಿದೆ. ಕರಾಚಿಗೆ ತೆರಳುತ್ತಿದ್ದ ಹಡಗನ್ನು ಇರಾನ್ ಹಿಂದಕ್ಕೆ ಕಳುಹಿಸಿದೆ ಎಂದು ತಿಳಿದು ಬಂದಿದೆ.

ಪಾಕಿಸ್ತಾನವು ಇರಾನ್ ಮತ್ತು ಅಮೆರಿಕದ ನಡುವೆ ಮಧ್ಯವರ್ತಿಯಾಗಿ ತನ್ನನ್ನು ಸೇರಿಕೊಳ್ಳಲು ಪ್ರಯತ್ನಿಸುತ್ತಿರುವ ಸಮಯದಲ್ಲಿ ಈ ಘಟನೆ ಸಂಭವಿಸಿದೆ. ಯುದ್ಧ ನಿಲ್ಲಿಸಲು ಅಮೆರಿಕಕ್ಕೆ ಮನವರಿಕೆ ಮಾಡಲಾಗುವುದು ಎಂದು ಪಾಕ್ ತಿಳಿಸಿತ್ತು. ಆದರೆ, ಪಾಕಿಸ್ತಾನದ ಹಡಗನ್ನು ವಾಪಸ್ ಕಳುಹಿಸುವ ಮೂಲಕ ಭಾರಿ ಮುಖಭಂಗವನ್ನುಂಟು ಮಾಡಿದೆ.

ಇಸ್ರೇಲ್ ಮತ್ತು ಅಮೆರಿಕದ ಜೊತೆ ನಡೆಯುತ್ತಿರುವ ಯುದ್ಧದಿಂದಾಗಿ, ಭಾರತದ ಧ್ವಜ ಹೊತ್ತ ಎಲ್‌ಪಿಜಿ ಟ್ಯಾಂಕರ್‌ಗಳನ್ನು ಹೊರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಇರಾನ್ ಅನುಮತಿ ನೀಡಿದೆ. ಆದರೆ ಪಾಕ್ ಹಡಗುಗಳಗಿ ಅನುಮತಿ ನೀಡದೇ ಇರುವುದೇ ಅದಕ್ಕೆ ಆಘಾತ ತಂದಿದೆ.

ಇಸ್ಲಾಮಿಕ್ ರೆವೆಲ್ಯೂಷನರಿ ಗಾರ್ಡ್ ಕೋರ್ ಸೆಲೇನ್ ಎಂಬ ಕಂಟೇನರ್ ಹಡಗನ್ನು ತಡೆದಿದ್ದು, ಅದಕ್ಕೆ ಅಗತ್ಯವಾದ ಕಾನೂನು ಅನುಮತಿ ಇರಲಿಲ್ಲ ಎಂದು ಇರಾನ್ ಅಧಿಕಾರಿ ಅಲಿರೆಜಾ ತಂಗ್ಸಿರಿ ಹೇಳಿದ್ದಾರೆ. ಈ ಹಡಗು ಕರಾಚಿ ಬಂದರಿಗೆ ತೆರಳುತ್ತಿದ್ದಾಗ, ಇರಾನ್ ಪಡೆಗಳು ಅದನ್ನು ಹಿಂತಿರುಗುವಂತೆ ಸೂಚಿಸಿದ್ದವು ಎಂದು ವರದಿ ತಿಳಿಸಿದೆ.

ಒಂದೇ ದಿನದಲ್ಲಿ 400 ಡ್ರೋನ್, ಕ್ಷಿಪಣಿ ಹಾರಿಸಿದ ರಷ್ಯಾ | 6 ಸಾವು, 46 ಮಂದಿಗೆ ಗಾಯ

ಉಕ್ರೇನ್-ರಷ್ಯಾ ಮಧ್ಯೆ ದಾಳಿ ತೀವ್ರ

ಕೀವ್ (ಉಕ್ರೇನ್): ಉಕ್ರೇನ್ ಮೇಲೆ ರಷ್ಯಾ ಮಂಗಳವಾರ ರಾತ್ರಿ ಸುಮಾರು 400 ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಹಾರಿಸಿದ್ದು, 6 ಮಂದಿ ಸಾವಿಗೀಡಾಗಿ, 46 ಜನರು ಗಾಯಗೊಂಡಿದ್ದಾರೆ. ಮಿಸೈಲ್‌ಗಳು ಜನವಸತಿ ಪ್ರದೇಶಗಳ ಮೇಲೆ ಬಿದ್ದಿವೆ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

ರಾಜಧಾನಿ ಕೀವ್ ಸೇರಿದಂತೆ 7 ನಗರಗಳ ಮೇಲೆ ರಷ್ಯಾ ದಾಳಿ ನಡೆಸಿದೆ. ಇದು ಕಳೆದ ವಾರಗಳಲ್ಲಿಯೇ ಅತಿದೊಡ್ಡ ದಾಳಿಯಾಗಿದೆ. ಇರಾನ್ ಮಾದರಿಯ ಶಾಹೆದ್ ಡ್ರೋನ್‌ಗಳನ್ನು ಅದು ಹಾರಿಬಿಟ್ಟಿದೆ. ಇದರಿಂದ ಭಾರಿ ಹಾನಿ ಸಂಭವಿಸಿದೆ ಎಂದು ಉಕ್ರೇನ್‌ನ ವಿದೇಶಾಂಗ ಸಚಿವರ ಆಂಡ್ರಿ ಸಿಬಿಹಾ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಇತ್ತ ಉಕ್ರೇನ್ ವಾಯುಪಡೆಯೂ ಭೀಕರ ದಾಳಿಯನ್ನು ದೃಢಪಡಿಸಿದೆ. ಮಂಗಳವಾರ ರಾತ್ರಿಯಿಡೀ ಸುಮಾರು ಡ್ರೋನ್‌ಗಳು ಮತ್ತು ಕ್ಷಿಪಣಿಗಳು ಹಾರಿ ಬಂದಿವೆ. ಅದರಲ್ಲಿ 23 ಕ್ರೂಸ್ ಕ್ಷಿಪಣಿಗಳು ಮತ್ತು ಏಳು ಬ್ಯಾಲಿಸ್ಟಿಕ್ ಕ್ಷಿಪಣಿಗಳಿವೆ. ಕನಿಷ್ಠ 10 ಪ್ರದೇಶಗಳಲ್ಲಿ ಇವುಗಳ ಬಿದ್ದಿವೆ ಎಂದಿದೆ.

ಡ್ನಿಪ್ರೊ ನಗರದಲ್ಲಿ ಹಗಲು ವೇಳೆ ನಡೆದ ದಾಳಿಯಲ್ಲಿ ಮೂವರು ಮಕ್ಕಳು ಸೇರಿದಂತೆ 13 ಜನರು ಗಾಯಗೊಂಡರು. ಮತ್ತೊಂದು ದಾಳಿಯು ಎಲ್ವಿವ್ ನಗರದ ಅಪಾರ್ಟ್ಮೆಂಟ್ ಬ್ಲಾಕ್ ಮೇಲೆ ಆಗಿದೆ. ಅಲ್ಲಿ 13 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾದ ಮೇಲೆ ಉಕ್ರೇನ್ ದಾಳಿ: ರಷ್ಯಾದ ದಾಳಿಯನ್ನು ತಡೆಯಲು ಮತ್ತು ಪ್ರತಿದಾಳಿ ನಡೆಸಲು ಉಕ್ರೇನ್ ಕನಿಷ್ಠ ಮೌಲ್ಯದ ಡ್ರೋನ್‌ಗಳನ್ನು ಬಳಸುತ್ತಿದೆ. ಸುಧಾರಿತ ಡ್ರೋನ್ ತಂತ್ರಜ್ಞಾನವನ್ನು ಅಭಿವೃದ್ಧಿಸಿರುವ ಆ ದೇಶವು, ರಷ್ಯಾದ ಹಲವು ಸ್ಥಳಗಳ ಮೇಲೆ ದಾಳಿ ನಡೆಸಿ ಹಾನಿ ಉಂಟು ಮಾಡುತ್ತಿದೆ.

'ನಮ್ಮ ಪ್ರದೇಶಗಳ ಮೇಲೆ ದಾಳಿ ಮಾಡಲು ದೇಶೀಯವಾಗಿ ಉತ್ಪಾದಿಸಲಾದ ದೀರ್ಘ ಶ್ರೇಣಿಯ ಡ್ರೋನ್‌ಗಳನ್ನು ಉಕ್ರೇನ್ ಬಳಸಿದೆ. ನಮ್ಮ ವಶದಲ್ಲಿರುವ ಕ್ರೈಮಿಯಾ, ಕಪ್ಪು ಸಮುದ್ರ ಮತ್ತು ಹಲವು ಪ್ರದೇಶಗಳ ಮೇಲೆ ರಾತ್ರೋರಾತ್ರಿ ಹಾರಿ ಬಂದ 55 ಡ್ರೋನ್‌ಗಳನ್ನು ನಮ್ಮ ವಾಯುಪಡೆ ತಡೆದಿದೆ' ಎಂದು ರಷ್ಯಾದ ರಕ್ಷಣಾ ಸಚಿವಾಲಯ ಮಂಗಳವಾರ ತಿಳಿಸಿದೆ.



ಸಮಾಚಾರ ಸಣ್ಣದಲ್ಲ

ಲೋಕಾ ಬಲೆಗೆ ಲೆಕ್ಕಪತ್ರ ವಿಭಾಗದ ವ್ಯವಸ್ಥಾಪಕ

ತುಮಕೂರು: ಆರೋಗ್ಯ ಜಾಗೃತಿ ವಸ್ತು ಪ್ರದರ್ಶನದ ಬಿಲ್ ಪಾವತಿಸಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಲೆಕ್ಕಪತ್ರ ವಿಭಾಗದ ವ್ಯವಸ್ಥಾಪಕ ಎಂ.ಎಚ್. ಅರವಿಂದ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ನಗರದ ಡಿಎಚ್‌ಒ ಕಚೇರಿಯ ಆವರಣದಲ್ಲಿ ಕೆ. ರಾಜಶೇಖರ್ ಎಂಬುವರಿಂದ 12 ಸಾವಿರ ಲಂಚದ ಹಣ ತೆಗೆದುಕೊಳ್ಳುವ ಸಮಯದಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಬಂಧಿಸಿದ್ದಾರೆ. 2025-26ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲೆಯ ಎಲ್ಲ 10 ತಾಲೂಕುಗಳಲ್ಲಿ ನಡೆಯುವ ಜಾತ್ರೆ, ಸಂತೆಗಳಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ವಸ್ತು ಪ್ರದರ್ಶನವನ್ನು ರಾಜಶೇಖರ್ ಎಂಬುವರು ನಡೆಸಿಕೊಟ್ಟಿದ್ದರು. ಈ ಸಂಬಂಧ 1.98 ಲಕ್ಷ ಬಿಲ್ ಪಾವತಿಸುವಂತೆ ಕೋರಿ ಅರವಿಂದ್‌ಗೆ ಅರ್ಜಿ ಸಲ್ಲಿಸಿದ್ದರು. ಬಿಲ್ ಹಣ ಪಾವತಿ ಮಾಡಲು 12 ಸಾವಿರ ಲಂಚ ನೀಡುವಂತೆ ಅರವಿಂದ್ ಒತ್ತಾಯಿಸಿದ್ದರು. ಈ ಸಂಬಂಧ ಲೋಕಾಯುಕ್ತ ಪೊಲೀಸರಿಗೆ ರಾಜಶೇಖರ್ ದೂರು ನೀಡಿದ್ದು, ಲಂಚದ ಹಣ ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ಸಿಕ್ಕಿ ಬಿದ್ದಿದ್ದಾರೆ. ಲೋಕಾಯುಕ್ತ ಡಿವೈಎಸ್‌ಪಿ ಕೆ.ಎಂ.ಸಂತೋಷ್, ಎಂ.ಮಂಜುನಾಥ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್‌ಗಳಾದ ಟಿ.ರಾಜು, ಬಿ.ಮೊಹಮ್ಮದ್ ಸಲೀಂ ತಂಡ ಕಾರ್ಯಾಚರಣೆ ನಡೆಸಿದೆ.

ಪೆಟ್ರೋಲ್, ಡೀಸೆಲ್ ಕೊರತೆ ಆಗಿಲ್ಲ

ದೆಹಲಿ: ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಸರಕಾರಿ ಸ್ವಾಮ್ಯದ ತೈಲ ಕಂಪನಿಗಳು ಬುಧವಾರ ತಿಳಿಸಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಹರಡುವ ವದಂತಿಗಳನ್ನು ನಂಬಬೇಡಿ ಅಥವಾ ಭಯಭೀತರಾಗಿ ಹೆಚ್ಚು ಖರೀದಿಸಲು ಮುಂದಾಗಬೇಡಿ ಎಂದು ಸಾರ್ವಜನಿಕರಿಗೆ ಮನವಿ ಮಾಡಿವೆ. ದೇಶದ ಅತಿದೊಡ್ಡ ತೈಲ ಕಂಪನಿಯಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್(ಐಒಸಿ) ಪೆಟ್ರೋಲ್ ಅಥವಾ ಡೀಸೆಲ್ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ, ಔಟ್‌ಲೆಟ್‌ಗಳಲ್ಲಿ ಉತ್ತಮ ಸಂಗ್ರಹ ಇದೆ ಮತ್ತು ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದೆ. ವದಂತಿಗಳು ಅನಗತ್ಯ ಭೀತಿ ಉಂಟುಮಾಡಬಹುದು ಮತ್ತು ಸಾಮಾನ್ಯ ಪೂರೈಕೆಗೆ ಅಡ್ಡಿಪಡಿಸಬಹುದು ಎಂದು ಎಚ್ಚರಿಸಿದ ಐಒಸಿ, ನಾಗರಿಕರು ಭೀತಿಯಿಂದ ಹೆಚ್ಚು ಖರೀದಿಯನ್ನು ತಪ್ಪಿಸಬೇಕು ಮತ್ತು ಪರಿಶೀಲಿಸಿದ ಮಾಹಿತಿಯನ್ನು ಮಾತ್ರ ಅವಲಂಬಿಸಬೇಕು ಎಂದು ಒತ್ತಾಯಿಸಿದೆ. ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(ಎಚ್‌ಪಿಸಿಎಲ್) ಸಹ ಹೇಳಿದ್ದು, ಸರಬರಾಜು ಸ್ಥಿರವಾಗಿದೆ ಮತ್ತು ಸಾಕಷ್ಟು ಸಂಗ್ರಹ ಇದೆ ಸ್ಪಷ್ಟಪಡಿಸಿದೆ.

ಎಲ್‌ಜಿಪಿ ಶುಲ್ಕ ವಸೂಲಿ: ಎಚ್ಚರಿಕೆ

ದೆಹಲಿ: ಎಲ್‌ಜಿಪಿ ಶುಲ್ಕ ಅಥವಾ ತೈಲ ದರದ ಮೇಲಿನ ಶುಲ್ಕ ಎನ್ನುವ ಹೆಸರಿನಲ್ಲಿ ಶುಲ್ಕಗಳನ್ನು ಗ್ರಾಹಕರಿಂದ ಪಡೆದುಕೊಳ್ಳಬಾರದು, ಇಂತಹ ಶುಲ್ಕಗಳನ್ನು ವಸೂಲಿ ಮಾಡುವುದು ಅಕ್ರಮ ವ್ಯಾಪಾರ ತಂತ್ರಗಾರಿಕೆಯಾಗುತ್ತದೆ. ಇದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ಕೇಂದ್ರೀಯ ಗ್ರಾಹಕ ರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ಬುಧವಾರ ಎಚ್ಚರಿಕೆ ನೀಡಿದೆ. 'ಇಂತಹ ಶುಲ್ಕಗಳನ್ನು ವಸೂಲಿ ಮಾಡುತ್ತಿರುವ ಕುರಿತು ಹಲವು ದೂರುಗಳು ನಮಗೆ ಬಂದಿವೆ. ಇದು ಗ್ರಾಹಕ ರಕ್ಷಣಾ ಕಾಯ್ದೆ, 2019ರ ಉಲ್ಲಂಘನೆಯಾಗಿದೆ. ಉಪಹಾರ ತಯಾರಿಕೆಗೆ ತಗುಲುವ ವೆಚ್ಚವಲ್ಲದೆ ಬೇರೆ ವೆಚ್ಚಗಳನ್ನು ಗ್ರಾಹಕ ರಿಂದ ವಸೂಲಿ ಮಾಡಬಾರದು, ಹಣ ನೀಡುವಂತೆ ಗ್ರಾಹಕರನ್ನು ಒತ್ತಾಯಪಡಿಸಬಾರದು' ಎಂದು ಸಿಸಿಪಿಎ ಹೇಳಿದೆ. 'ವ್ಯಾಪಾರ ನಡೆಸುವಾಗ ತಗುಲುವ ಒಟ್ಟಾರೆ ಕಾರ್ಯಾಚರಣೆ ವೆಚ್ಚದಲ್ಲಿ ತೈಲ, ಎಲ್‌ಜಿಪಿ, ವಿದ್ಯುತ್ ಸೇರಿ ಇತರ ವೆಚ್ಚಗಳೂ ಸೇರಿ ಕೊಳ್ಳುತ್ತವೆ. ಉಪಾಹಾರದ ತಯಾರಿಕೆಗೆ ತಗಲುವ ವೆಚ್ಚಕ್ಕೆ ತೈಲ ಅಥವಾ ಎಲ್‌ಜಿಪಿ ವೆಚ್ಚಗಳನ್ನು ಸೇರಿಸ ಬಾರದು' ಎಂದು ಸಿಸಿಪಿಎ ಸ್ಪಷ್ಟಪಡಿಸಿದೆ.

ವಂದೇ ಮಾತರಂ: ಕಡ್ಡಾಯ ಅಲ್ಲ

ದೆಹಲಿ: ಸರಕಾರದ ಎಲ್ಲ ಅಧಿಕೃತ ಕಾರ್ಯಕ್ರಮಗಳಲ್ಲಿ, ಶಾಲೆಗಳಲ್ಲಿ ರಾಷ್ಟ್ರೀಯ ಗೀತೆಯಾದ 'ವಂದೇ ಮಾತರಂ' ಹಾಡುವ ಕುರಿತು ಕೇಂದ್ರ ಗೃಹ ಸಚಿವಾಲಯ ಇದೇ ಜನವರಿಯಲ್ಲಿ ಹೊರಡಿಸಿದ್ದ ಸುತ್ತೋಲೆಯ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾ ಮಾಡಿತು. 'ವಂದೇ ಮಾತರಂ' ಹಾಡುವುದು ಕಡ್ಡಾಯ ಎಂದು ಹೇಳಲಾಗಿಲ್ಲ ಎಂದು ನ್ಯಾಯಾಲಯ ಹೇಳಿತು. ಭಾರತೀಯ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್ ಮಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಮೊಹಮ್ಮದ್ ಸೈಯದ್ ನೂರಿ ಎಂಬುವರು ಅರ್ಜಿ ಸಲ್ಲಿಸಿದ್ದು, ಅರ್ಜಿದಾರರ ಪರ ಹಿರಿಯ ವಕೀಲ ಸಂಜಯ್ ಹೆಗಡೆ ವಾದಿಸಿದರು. 'ವಂದೇ ಮಾತರಂ' ಹಾಡಲೇಬೇಕು ಎನ್ನುವುದು ಕಡ್ಡಾಯ ಎಂಬಂತೆ ಸುತ್ತೋಲೆಯಲ್ಲಿ ಎಲ್ಲೂ ಇಲ್ಲ. ಒಂದು ವೇಳೆ ಹಾಡಲಿಲ್ಲ ಎಂದಾದರೆ ಅದಕ್ಕೆ ಶಿಕ್ಷೆಯನ್ನೂ ಹೇಳಲಾಗಿಲ್ಲ. ಆದ್ದರಿಂದ ಇಲ್ಲದೇ ಇರುವ ಆತಂಕವನ್ನು ಸೃಷ್ಟಿಸಿಕೊಂಡು ಅರ್ಜಿ ಸಲ್ಲಿಸಲಾಗಿದೆ ಎಂದು ನ್ಯಾ. ಪಂಚೋಲಿ ಅಭಿಪ್ರಾಯಪಟ್ಟರು. ಸುತ್ತೋಲೆಯಲ್ಲಿ ಹಾಡಬಹುದು ಎಂದಿದೆ, ಆದರೆ ಇದು ಸಲಹೆಯಲ್ಲ, ರಾಷ್ಟ್ರೀಯ ಗೀತೆಯನ್ನು ಹಾಡದಿದ್ದಲ್ಲಿ, ನಿಮಗೆ ಯಾರಾದರೂ ಶಿಕ್ಷೆ ನೀಡಿದರೆ ನಮ್ಮ ಬಳಿ ಬನ್ನಿ ಎಂದು ಸಿಜೆಐ ಹೇಳಿದರು.

ಮಂಜೇಶ್ವರದಲ್ಲಿ ಕನ್ನಡಿಗರೇ ಬಹುಸಂಖ್ಯಾತ ಮತದಾರರು

ಕೇರಳದ ಉತ್ತರದ ತುತ್ತ ತುದಿಯ ಕನ್ನಡಿಗರ ಪ್ರಾಬಲ್ಯದ ಮಂಜೇಶ್ವರ ವಿಧಾನಸಭಾ ಕ್ಷೇತ್ರವು ಎರಡು ಚುನಾವಣೆಯಲ್ಲಿ ರೋಚಕ ಹಣಾಹಣಿಯನ್ನು ಕಂಡಿದೆ. ಹಾಗಾಗಿ ಈ ಸಲ ಕೂಡಾ ಕೇರಳೀಯರೆಲ್ಲರ ಚಿತ್ತ ಮಂಜೇಶ್ವರದತ್ತ ನೆಟ್ಟಿದೆ. ಮಂಗಳೂರು ಭಾಗದ ಬಿಜೆಪಿ ಶಾಸಕರು ಇಲ್ಲೇ ಬೀಡುಬಿಟ್ಟು ಕಮಲ ಅರಳಿಸುವ ತಂತ್ರಗಾರಿಕೆಯಲ್ಲಿದ್ದಾರೆ. ಕೇರಳದ ಆಡಳಿತ ವಿರೋಧಿ ಅಲೆಯಿಂದಾಗಿ ಮತ್ತೆ ಗಡಿನಾಡಲ್ಲಿ ತಮ್ಮ ಪಕ್ಷದ ಪ್ರಾಬಲ್ಯ ಮುಂದುವರಿಯುವುದೆನ್ನುವ ನಿರೀಕ್ಷೆ ಯುಡಿಎಫ್ ಪಾಳಯದಲ್ಲಿದೆ.

ನರೇಂದ್ರ ಪಾರೆಕಟ್

ಮತ ಬೇಟೆ

ಮಂಜೇಶ್ವರ ಬರೀ ಕೇರಳೀಯರಿಗಷ್ಟೇ ಅಲ್ಲ, ಕನ್ನಡಿಗರಿಗೂ ಸುಪರಿಚಿತ ಹೆಸರು. ಕನ್ನಡದ ಮೊತ್ತ ಮೊದಲ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಹುಟ್ಟಿದ ಊರದು. ಮೈಸೂರು ಪ್ರಾಂತ್ಯದ ಭಾಗವಾಗಿದ್ದ ಕನ್ನಡ ಪ್ರದೇಶ ಮಂಜೇಶ್ವರವು ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ಕೇರಳ ರಾಜ್ಯಕ್ಕೆ ಸೇರಿಕೊಂಡಿತು. ಹಾಗಾಗಿ ಕೇರಳದ ಅತ್ಯಂತ ಉತ್ತರ ತುದಿಯ ವಿಧಾನಸಭಾ ಕ್ಷೇತ್ರವಾದ ಮಂಜೇಶ್ವರದ ಚುನಾವಣೆಯಲ್ಲಿ ಈಗಲೂ ಕನ್ನಡಿಗ ಮತದಾರರೇ ಬಹುಸಂಖ್ಯಾತರು, ಮಾತ್ರವಲ್ಲದೇ ನಿರ್ಣಾಯಕರೂ ಕೂಡಾ ಹೌದು.

2021ರ ಅಂಕಿ-ಅಂಶಗಳ ಪ್ರಕಾರ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಒಟ್ಟು ಮತದಾರರ ಸಂಖ್ಯೆ 2 ಲಕ್ಷದ 20 ಸಾವಿರ. ಆ ಪೈಕಿ ಪುರುಷ ಮತದಾರರ ಸಂಖ್ಯೆ 1.10 ಲಕ್ಷವಾದರೆ, ಅಷ್ಟೇ ಸಂಖ್ಯೆಯ ಮಹಿಳಾ ಮತದಾರರೂ ಈ ಕ್ಷೇತ್ರದಲ್ಲಿದ್ದಾರೆ. ಎಣ್ಮಕಜೆ, ಕುಂಬಳೆ, ಮಂಗಲ್ಪಾಡಿ (ಉಪ್ಪಳ), ಮಂಜೇಶ್ವರ, ಮೀಂಜಾ, ಪೈವಳಿಕೆ, ಪುತ್ತಿಗೆ, ವರ್ಕಾಡಿ ಗ್ರಾಮ ಪಂಚಾಯತ್‌ಗಳು ಮಂಜೇಶ್ವರ ವಿಧಾನಸಭಾ ಕ್ಷೇತ್ರಕ್ಕೊಳಪಡುತ್ತದೆ. ಕನ್ನಡ, ಹವ್ಯಕ, ತುಳು, ಕೊಂಕಣಿ ಮಲಯಾಳಂ, ಬ್ಯಾರಿ ಮತ್ತು ಮರಾಠಿ ಮಾತೃಭಾಷೆಯವರು ಇಲ್ಲಿ ವಾಸಿಸುತ್ತಿದ್ದರೂ ಆ ಪೈಕಿ ಶೇ.80 ಮಂದಿ ಕನ್ನಡ ಮಾಧ್ಯಮದಲ್ಲಿ ಕಲಿತವರು. ಹಾಗಾಗಿ ಇದು ಸಂಪೂರ್ಣ ಕನ್ನಡ ಪ್ರಾಬಲ್ಯದ ಪ್ರದೇಶವೆಂದೇ ಜನಜನಿತ. ಆ ಕಾರಣಕ್ಕಾಗಿಯೇ ಕನ್ನಡ ಮತದಾರರನ್ನು ಒಲೈಸಿದರೆ ಮಾತ್ರ ತಮ್ಮ ಗೆಲುವು ಖಚಿತ ಎಂಬ ಚುನಾವಣಾ ತಂತ್ರವೂ ಕೇರಳದ ಎಲ್ಲಾ ರಾಜಕೀಯ ಪಕ್ಷಗಳಿಗೂ ಇಲ್ಲಿ ಕರಗತ.

ಕ್ಷೇತ್ರದ ಹಿನ್ನೆಲೆ: 1957ರ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಹಿರಿಯ ಕನ್ನಡ ಹೋರಾಟಗಾರರಾಗಿದ್ದ ಎಂ.ಉಮೇಶ್ ರಾವ್ ಸ್ವತಂತ್ರ ಅಭ್ಯರ್ಥಿಯಾಗಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದವರು. ಆ ಬಳಿಕ 1960, 1965ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೋರ್ವ ಕನ್ನಡ ಧುರೀಣ ಕೆ. ಮಹಾಬಲ ಭಂಡಾರಿ ಅವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಕೇರಳ ವಿಧಾನಸಭೆ ಪ್ರವೇಶಿಸಿದರು. ಅವರು ಆ ಬಳಿಕ 1967ರ ಚುನಾವಣೆಯಲ್ಲೂ ಸ್ವತಂತ್ರ ಅಭ್ಯರ್ಥಿಯಾಗಿ ಮಂಜೇಶ್ವರದಿಂದ ಗೆದ್ದರು.

1970 ಮತ್ತು 1977ರ ಚುನಾವಣೆಯಲ್ಲಿ ಇನ್ನೋರ್ವ ಕನ್ನಡ ಹೋರಾಟಗಾರ ಎಂ. ರಾಮಪ್ಪ ಅವರು ಸಿಪಿಐ (ಎಡರಂಗ) ಅಭ್ಯರ್ಥಿಯಾಗಿ ಇಲ್ಲಿಂದ ವಿಧಾನಸಭೆ ಪ್ರವೇಶಿಸಿದರು. 1980 ಮತ್ತು 1982ರ ಚುನಾವಣೆಯಲ್ಲಿ ಮಂಜೇಶ್ವರದಿಂದ ಸ್ಪರ್ಧಿಸಿ ಗೆದ್ದ ಮತ್ತೋರ್ವ ಕನ್ನಡಿಗ ಎ. ಸುಬ್ಬರಾವ್ ಕೇರಳ ಸರಕಾರದಲ್ಲಿ ನೀರಾವರಿ ಸಚಿವರಾಗಿಯೂ ಸೇವೆ ಸಲ್ಲಿಸಿದವರು.

ಆದರೆ 1987ರಿಂದ ಮಂಜೇಶ್ವರ ಕ್ಷೇತ್ರವನ್ನು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟವು ತನ್ನ ಅಂಗಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೆ (ಐಯುಎಂಎಲ್) ಬಿಟ್ಟುಕೊಟ್ಟಿತು. ಹಾಗಾಗಿ 1987, 1991, 1996 ಮತ್ತು 2001ರಲ್ಲಿ ಐಯುಎಂಎಲ್ ಅಭ್ಯರ್ಥಿಯಾಗಿದ್ದ ಚೆರ್ಕಳಂ ಅಬ್ದುಲ್ಲ ಅವರು 4 ಸಲ ಮಂಜೇಶ್ವರ ಎಂಎಲ್ಎ ಆಗಿದ್ದರಲ್ಲದೆ, ಕೊನೆಯ ಅವಧಿಯಲ್ಲಿ ಅವರು ಸಚಿವರೂ ಆಗಿದ್ದರು. ಅಷ್ಟೊತ್ತಿಗಾಗಲೇ ಬಿಜೆಪಿ ಈ ಕ್ಷೇತ್ರದಲ್ಲಿ ತನ್ನ ಭದ್ರ ನೆಲೆ ಕಂಡು 2ನೇ ಸ್ಥಾನವನ್ನು ಭದ್ರಪಡಿಸಿಕೊಂಡಿತು.

ಆದರೆ 2006ರ ವಿಧಾನಸಭಾ ಚುನಾವಣೆಯಲ್ಲಿ ಚೆರ್ಕಳಂ ಅಬ್ದುಲ್ಲಾ ಸೋತು, ಎಡರಂಗ ಒಕ್ಕೂಟದ ಸಿಪಿಐ ಅಭ್ಯರ್ಥಿ ಸಿಎಚ್. ಕುಂಞಂಬು ಮಂಜೇಶ್ವರದಿಂದ ಆಯ್ಕೆಯಾಗುವಲ್ಲಿ ಸಫಲರಾದರು. 2011ರಲ್ಲಿ ನಡೆದ ಚುನಾವಣೆಯಲ್ಲಿ ಮುಸ್ಲಿಂ ಲೀಗ್‌ನ ಅಭ್ಯರ್ಥಿ ಅಬ್ದುಲ್ ರಜಾಕ್ ಮಂಜೇಶ್ವರದಿಂದ ಆಯ್ಕೆಯಾದರು.

2016ರಲ್ಲಿ ನಡೆದ ರೋಚಕ ಚುನಾವಣೆಯಲ್ಲಿ ಕೇರಳದ ಬಿಜೆಪಿಯ ಹಿರಿಯ ನೇತಾರ ಕೆ. ಸುರೇಂದ್ರನ್ ಅವರನ್ನು ಕೇವಲ 89 ಮತಗಳ ಅಂತರದಲ್ಲಿ ಸೋಲಿಸಿ ಅಬ್ದುಲ್ ರಜಾಕ್ ವಿಧಾನಸಭೆಗೆ ಮರು ಆಯ್ಕೆ ಯಾದರು. ಆದರೆ ಅವರ ಅವರ ಹಠಾತ್ ನಿಧನದ ನಂತರ ತೆರವಾದ ಕ್ಷೇತ್ರದಲ್ಲಿ 2019ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಮುಸ್ಲಿಂಲೀಗ್‌ನ ಎಂಸಿ. ಕಮರು ದ್ದೀನ್ ಜಯ ಗಳಿಸಿ, ವಿಧಾನಸಭೆ ಪ್ರವೇಶಿಸಿದರು.

ಕಳೆದ, 2021ರಲ್ಲಿ ನಡೆದ ಚುನಾವಣಾ ಅಖಾಡದಲ್ಲಿ ಮುಸ್ಲಿಂಲೀಗ್‌ನ ಅಭ್ಯರ್ಥಿ ಕೆಎಂ ಅಶ್ರಫ್ ಅವರು ಬಿಜೆಪಿಯ ಕೆ. ಸುರೇಂದ್ರನ್ ಅವರನ್ನು 845 ಮತಗಳ ಅಂತರದಿಂದ ಸೋಲಿಸಿ ಚೊಚ್ಚಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು.

ಅಶ್ರಫ್ ಯುಡಿಎಫ್ ಅಭ್ಯರ್ಥಿ: ಯುಡಿಎಫ್ ಮೈತ್ರಿಕೂಟವು ಮುಸ್ಲಿಂಲೀಗ್‌ನ ಕೆಎಂ ಅಶ್ರಫ್ ಅವರನ್ನೇ ಮಂಜೇಶ್ವರದಲ್ಲಿ ಈ ಸಲ ಕಣಕ್ಕಿಳಿಸಿದೆ. ಅತ್ಯಂತ ಸೌಮ್ಯ ಸ್ವಭಾವದ ಶಾಸಕರೆಂದೇ ಜನಜನಿತರಾಗಿರುವ ಅಶ್ರಫ್‌ರವರು ಈ ಸಲದ ರಾಜ್ಯದ ಎಲ್‌ಡಿಎಫ್ ಆಡಳಿತ ವಿರೋಧಿ ಅಲೆಯ ಮಧ್ಯೆ ಮತ್ತೆ ಮರು ಆಯ್ಕೆ ಆಗುತ್ತಾರೆ ಎಂಬ ನಿರೀಕ್ಷೆ ಯುಡಿಎಫ್ ಒಕ್ಕೂಟದ್ದಾಗಿದೆ. ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 5 ವರ್ಷದಲ್ಲಿ ನಿರೀಕ್ಷಿತ ಅಭಿವೃದ್ಧಿ ಕಾರ್ಯಗಳಾಗಿವೆ, ಆದ್ದರಿಂದ ಮತದಾರರು ತನ್ನನ್ನೇ ಮತ್ತೆ ಆಯ್ಕೆ ಮಾಡುವುದು ಖಚಿತ ಎಂಬ ಆತ್ಮವಿಶ್ವಾಸ ಅವರಲ್ಲಿದೆ. ಆದರೆ ಅಶ್ರಫ್ ಹೆಸರಿನ ಒಂದಿಬ್ಬರು ಸ್ವತಂತ್ರ ಅಭ್ಯರ್ಥಿಗಳು ಕಣದಲ್ಲಿರುವುದು ಅವರಿಗೆ ಭಾರೀ ತಲೆನೋವು ತಂದಿದೆ. ಮಂಜೇಶ್ವರದಲ್ಲಿ ಜಾತ್ಯಾತೀತ ಅಭ್ಯರ್ಥಿಯೇ ಗೆಲ್ಲಬೇಕು, ಯಾವುದೇ ಕಾರಣಕ್ಕೂ ಕಮಲ ಅರಳಲು ಅವಕಾಶ ಕೊಡಬಾರದು ಎಂಬ ಕಾರಣಕ್ಕೆ ಯುಡಿಎಫ್ ಪರವಾಗಿ ಸದ್ಯದಲ್ಲೇ ವಯನಾಡು ಸಂಸದೆ ಪ್ರಿಯಾಂಕ ಗಾಂಧಿ ಸಹಿತ ಘಟಾನುಘಟಿ ಕಾಂಗ್ರೆಸ್ ನಾಯಕರು ಕೂಡಾ ಪ್ರಚಾರಕ್ಕಾಗಿ ಬರುವ ಸಾಧ್ಯತೆ ಇದೆ.

ಮತ್ತೆ ಸುರೇಂದ್ರನ್ ಕಣಕ್ಕೆ: ಈ ಸಲದ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಐದೆಂಟು ಸ್ಥಾನಗಳನ್ನು ಬಗಲಿಗೆ ಹಾಕಬೇಕೆಂಬ ಹಠಕ್ಕೆ ಬಿದ್ದಿರುವ ಬಿಜೆಪಿ, ಮಂಜೇಶ್ವರದ ಚಿರಪರಿಚಿತ ಅಭ್ಯರ್ಥಿ ಕೆ. ಸುರೇಂದ್ರನ್ ಅವರನ್ನು ಕಣಕ್ಕೆ ಇಳಿಸಿ ಅಬ್ಬರದ ಪ್ರಚಾರ ಕಾರ್ಯದಲ್ಲಿ ತಲ್ಲೀನವಾಗಿದೆ. ಪಕ್ಷದ ಅಭ್ಯರ್ಥಿಗಾಗಿ ಕನ್ನಡಿಗರ ಮತವನ್ನು ಕ್ರೋಢೀಕರಿಸುವ ಜವಾಬ್ದಾರಿಯನ್ನು ಮಂಗಳೂರು ಸಂಸದ ಬ್ರಿಜೇಶ್ ಚೌಟ, ಶಾಸಕ ವೈ. ಭರತ್ ಶೆಟ್ಟಿ ಮತ್ತು ಮಾಜಿ ಸಂಸದ ನಳಿನ್‌ಕುಮಾರ್ ಕಟೀಲ್‌ಗೆ ನೀಡಲಾಗಿದ್ದು ಹಲವಾರು ದಿನಗಳಿಂದ ಅವರೆಲ್ಲರೂ ಮಂಜೇಶ್ವರದಲ್ಲಿ ಬೀಡುಬಿಟ್ಟಿದ್ದಾರೆ. ಕಳೆದ ಒಂದೆರಡು ಚುನಾವಣೆಗಳಲ್ಲಿ ಚಿಕ್ಕ ಅಂತರದಲ್ಲಿ ಸೋಲುಂಡಿರುವ ತಾನು, ಈ ಚುನಾವಣೆಯಲ್ಲಿ ಗೆದ್ದು ಚೊಚ್ಚಲ ಬಾರಿ ವಿಧಾನಸಭೆ ಪ್ರವೇಶಿಸುವ ನಿರೀಕ್ಷೆ ಕೆ. ಸುರೇಂದ್ರನ್ ಅವರಲ್ಲಿದೆ.

ಜಯಾನಂದ ಎಲ್‌ಡಿಎಫ್ ಅಭ್ಯರ್ಥಿ: ಕೇರಳದ ಆಡಳಿತರೂಢ ಎಡರಂಗವು ಪಕ್ಷದ ಯುವ ನಾಯಕ, ಕನ್ನಡಿಗ ಕೆಆರ್ ಜಯಾನಂದ ಅವರನ್ನು ಈ ಸಲ ಚುನಾವಣಾ ಕಣಕ್ಕಿಳಿಸಿದೆ. ಸ್ಥಳೀಯರೂ, ಕೇರಳ ರಾಜ್ಯ ತುಳು ಅಕಾಡಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿ, ಮಂಜೇಶ್ವರದಲ್ಲಿ ಪರಿಚಿತರಾಗಿರುವ ಜಯಾನಂದ ಅವರಿಗೆ ಕ್ಷೇತ್ರದಲ್ಲಿರುವ ತುಳು ಮಾತೃಭಾಷೆಯ ಮತದಾರರೆಲ್ಲರೂ ಸಂಪೂರ್ಣ ಬೆಂಬಲ ನೀಡಿದರೆ ಅವರಿಗೆ ಗೆಲುವು ಖಚಿತ ಎನ್ನುವುದು ಎಲ್‌ಡಿಎಫ್‌ನ ರಾಜಕೀಯ ಲೆಕ್ಕಾಚಾರವಾಗಿದೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಗಳ ಸಂಖ್ಯೆ ಹೆಚ್ಚಿದ್ದರೂ, ಮುಸ್ಲಿಮ್‌ರ ಸಂಖ್ಯೆಯೂ ತೀರಾ ಕಡಿಮೆಯೇನಲ್ಲ. ಹಿಂದೂಗಳಲ್ಲಿ ಬ್ರಾಹ್ಮಣ ಸಮುದಾಯ, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ/ಪಂಗಡದವರೂ ಇದ್ದಾರೆ. ತಾವು ಭರವಸೆ ಇರಿಸಿರುವ ಪಕ್ಷದ ಸಿದ್ಧಾಂತಕ್ಕೇ ಮತದಾನ ಮಾಡುವ ಪ್ರಕ್ರಿಯೆ ಮೊದಲಿನಿಂದಲೂ ಇಲ್ಲಿದೆ.

ಹಣಾಹಣಿ ನಿರೀಕ್ಷೆ: ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 3 ಚುನಾವಣೆಗಳಲ್ಲೂ ಯುಡಿಎಫ್-ಬಿಜೆಪಿ ಮಧ್ಯೆ ನೇರ ಹಣಾಹಣಿ ನಡೆದಿದೆ. ತನ್ನ ಅಭ್ಯರ್ಥಿ ಶತಾಯ ಗತಾಯ ವಿಧಾನಸಭೆಗೆ ಆಯ್ಕೆಯಾಗಲು ಅವಕಾಶ ಕೊಡಬಾರದೆಂಬ ಕಾರಣಕ್ಕೆ ಮಂಜೇಶ್ವರದಲ್ಲಿ ಮುಸ್ಲಿಂಲೀಗ್‌ಗೆ ಎಲ್‌ಡಿಎಫ್ ಪರೋಕ್ಷ ಬೆಂಬಲ ನೀಡುತ್ತಿದೆ ಎಂಬುವುದು ಬಿಜೆಪಿಯ ಇತ್ತೀಚೆಗಿನ ಕೆಲ ವರ್ಷಗಳ ಆರೋಪ. ಆದರೆ ಈ ಸಲ ಮಂಜೇಶ್ವರದಿಂದ ಕೇರಳ ಬಿಜೆಪಿಯ ಚೈತ್ರಯಾತ್ರೆ ಆರಂಭವಾಗಲಿದೆ ಎಂಬುದು ಪಕ್ಷದ ಅಭ್ಯರ್ಥಿ ಸುರೇಂದ್ರನ್ ಅವರ ನಿರೀಕ್ಷೆಯಾಗಿದೆ. ತಾನು ಕಳೆದ 5 ವರ್ಷದಲ್ಲಿ ಮಂಜೇಶ್ವರದಲ್ಲಿ ಬೆಳೆಸಿಕೊಂಡಿರುವ ವೈಯಕ್ತಿಕ ವರ್ಚಸ್ಸಿನ ಕಾರಣಕ್ಕೆ ಮತ್ತೆ ಮತದಾರರು ತನಗೇ ಮಣೆಹಾಕುವುದು ಶತಸಿದ್ಧ ಎಂಬುವುದು ಯುಡಿಎಫ್ ಅಭ್ಯರ್ಥಿ ಅಶ್ರಫ್ ಅವರ ಆತ್ಮವಿಶ್ವಾಸವಾಗಿದೆ. ಕೇರಳದಲ್ಲಿ ಸತತ ಹತ್ತು ವರ್ಷಗಳ ಕಾಲ ಎಡರಂಗ ಸರಕಾರ ಗರಿಷ್ಠ ಅಭಿವೃದ್ಧಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವುದರಿಂದ ಈ ಸಲ ಮತದಾರರು ತನ್ನನ್ನು ಆರಿಸಿ ವಿಧಾನಸಭೆಗೆ ಕಳುಹಿಸಲಿದ್ದಾರೆ ಎಂಬುವುದು ಎಲ್‌ಡಿಎಫ್ ಅಭ್ಯರ್ಥಿ ಕೆಆರ್. ಜಯಾನಂದ ಅವರ ನಿರೀಕ್ಷೆಯಾಗಿದೆ.

ಸುರೇಂದ್ರನ್

ಅಶ್ರಫ್

ಜಯಾನಂದ

ಗಿಳಿವಿಂಡುವಿಗೆ ಸಿಗದ ಕಾಯಕಲ್ಪ ಆರೋಪ

ಮಂಜೇಶ್ವರದಲ್ಲಿ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜು ಇದ್ದರೂ ಕೇರಳದಲ್ಲಿ ಇದುವರೆಗೂ ಅಧಿಕಾರಕ್ಕೆ ಬಂದ ಎರಡೂ ಪಕ್ಷಗಳ ಸರಕಾರಗಳು ಕಾಲೇಜನ್ನು ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಪಡಿಸಿಲ್ಲ, ಹಾಗಾಗಿ ನಾವು ಮಕ್ಕಳನ್ನು ಮಂಗಳೂರಿಗೆ ಪದವಿ ಶಿಕ್ಷಣ ಪಡೆಯಲು ಕಳುಹಿಸುತ್ತಿದ್ದೇವೆ ಎಂಬುದು ಹೆಚ್ಚಿನ ಸ್ಥಳೀಯರ ಅನಿಸಿಕೆ. ಹಾಗೆಯೇ ರಾಷ್ಟ್ರಕವಿಯ ಮನೆಯ ಪುನರ್ ನವೀಕರಣ ಯೋಜನೆ 'ಗಿಳಿವಿಂಡು'ವಿಗೂ ಸಮರ್ಪಕ ಆರ್ಥಿಕ ಅನುದಾನ ಸರಕಾರದ ಕಡೆಯಿಂದ ಇದುವರೆಗೂ ಸಿಕ್ಕಿಲ್ಲ ಎಂಬುದು ಮಂಜೇಶ್ವರದಲ್ಲಿರುವ ಹೆಚ್ಚಿನ ಕನ್ನಡಿಗರ ಅಸಮಾಧಾನವೂ ಹೌದು.

ಎಕ್ಸ್‌ಪ್ರೆಸ್ ವೇ ವರದಾನ

ಮಂಜೇಶ್ವರದಿಂದ ಜಿಲ್ಲಾ ಕೇಂದ್ರವಾದ ಕಾಸರಗೋಡು ಮತ್ತು ದಕ್ಷಿಣ ಕೇರಳ ತಲುಪಲು ಮೊದಲು ಹಳ್ಳಕೊಳ್ಳದ ರಸ್ತೆ ಮೂಲಕ ಸಂಚರಿಸುವ ಬಸ್‌ಗಳು ಪ್ರಯಾಣವನ್ನು ದುರ್ಬರ ಮಾಡುತ್ತಿದ್ದವು. ಆದರೆ ಇತ್ತೀಚೆಗೆ ಮಂಜೇಶ್ವರದಿಂದ ಉದ್ಘಾಟನೆಯಾಗಿರುವ ಎಕ್ಸ್ ಪ್ರೆಸ್ ವೇ ತಮ್ಮ ಊರಿಗೆ ನಿಜಕ್ಕೂ ವರದಾನ ಎಂಬುದು ಮಂಜೇಶ್ವರ ನಿವಾಸಿಗಳಲ್ಲಿರುವ ಸಂತಸವಾಗಿದೆ.

ಸೆಟ್‌ಟಾಪ್ ಬಾಕ್ಸ್ ಇಲ್ಲದೆ ಡಿಡಿ ಚಾನಲ್‌ಗಳ ವೀಕ್ಷಣೆಗೆ ಅವಕಾಶ

ಡಿಡಿ ಫ್ರೀ ಡಿಶ್ ಸೇವೆ ಆರಂಭ

ದೆಹಲಿ: ಟಿ.ವಿ ವೀಕ್ಷಿಸಬೇಕೆಂದರೆ ಪಕ್ಕದಲ್ಲಿ ಸೆಟ್ ಟಾಪ್ ಬಾಕ್ಸ್ ಅತ್ಯಗತ್ಯ, ಆದರೆ ಇನ್ನು ಮುಂದೆ ಅದರ ಅಗತ್ಯವಿರುವುದಿಲ್ಲ. ಸೆಟ್ ಟಾಪ್ ಬಾಕ್ಸ್ ಬಳಕೆಯಿಲ್ಲದೆ ಕೆಲವು ಟಿ.ವಿ ಚಾನೆಲ್‌ಗಳನ್ನು ವೀಕ್ಷಿಸಬಹುದು. ಭಾರತದಲ್ಲಿ ಡಿ.ಡಿ ಫ್ರೀ ಡಿಶ್ ಸೇವೆಗಳಿಗೆ ಪ್ರವೇಶವನ್ನು ವಿಸ್ತರಿಸಲು ಮತ್ತು ಸಾರ್ವಜನಿಕ ಪ್ರಸಾರವನ್ನು ಬಲಪಡಿಸಲು ಕೇಂದ್ರವು ಸುಧಾರಿತ ಎಲೆಕ್ಟ್ರಾನಿಕ್ ಪ್ರೋಗ್ರಾಂ ಗೈಡ್‌ಗಳು ಮತ್ತು ದೂರದರ್ಶನ ಸೆಟ್‌ಗಳಲ್ಲಿ ಅಂತರ್ನಿರ್ಮಿತ ಉಪಗ್ರಹ ಟ್ಯೂನರ್‌ಗಳನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ.

ಈ ಯೋಜನೆಯನ್ನು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅನಾವರಣಗೊಳಿಸಿದ್ದು, ದೂರದ ಹಾಗೂ ಸೇವೆ ಕಡಿಮೆ ಲಭ್ಯವಿರುವ ಪ್ರದೇಶಗಳಲ್ಲಿ ಇದರ ಲಭ್ಯತೆಯನ್ನು ಹೆಚ್ಚಿಸುವುದು ಮುಖ್ಯ ಉದ್ದೇಶ ವಾಗಿದೆ. ಉಪಗ್ರಹ ಟ್ಯೂನರ್‌ಗಳನ್ನು ದೂರದರ್ಶನ ಸೆಟ್‌ಗಳಲ್ಲಿ ಸಂಯೋಜಿಸುವುದರಿಂದ, ವೀಕ್ಷಕರು ಪ್ರತ್ಯೇಕ ಸೆಟ್ ಟಾಪ್ ಬಾಕ್ಸ್‌ನ ಅಗತ್ಯವಿಲ್ಲದೆ ನೇರವಾಗಿ ಡಿ.ಡಿ ಫ್ರೀ ಡಿಶ್ ಚಾನೆಲ್‌ಗಳನ್ನು ಪ್ರವೇಶಿಸಬಹುದು. ಇದು ಹೆಚ್ಚುವರಿ ವೈರಿಂಗ್ ಮತ್ತು ಬಹು ರಿಮೋಟ್ ಕಂಟ್ರೋಲ್‌ಗಳನ್ನು ತೆಗೆದುಹಾಕುವ ಮೂಲಕ ವೆಚ್ಚವನ್ನು ಕಡಿಮೆ ಮಾಡುತ್ತದೆ ಎನ್ನಲಾಗಿದೆ.

ಇದರಿಂದ ಟಿ.ವಿ ಬಳಿ ಇಡಲಾಗುವ ಸೆಟ್ ಟಾಪ್ ಬಾಕ್ಸ್‌ನ ಯಾವುದೇ ಅಗತ್ಯವಿರುವುದಿಲ್ಲ, ಅಷ್ಟೇ ಅಲ್ಲದೆ ನೂರಾರು ಚಾನೆಲ್‌ಗಳನ್ನು ಯಾವುದೇ ಮಾಸಿಕ ಶುಲ್ಕವಿಲ್ಲದೆ ವೀಕ್ಷಿಸಬಹುದು. ಕೇವಲ ಒಂದು ಸಣ್ಣ ಆ್ಯಂಟೆನಾವನ್ನು ಕಟ್ಟಡದ ಮೇಲೆ ಅಳವಡಿಸಿದರೆ ಸಾಕು, ಟಿ.ವಿ ನೇರವಾಗಿ ಸಿಗ್ನಲ್ ಪಡೆದುಕೊಳ್ಳುತ್ತದೆ.

ಇದರ ಜತೆಗೆ ಸರಕಾರವು ಸುಧಾರಿತ ಎಲೆಕ್ಟ್ರಾನಿಕ್ ಕಾರ್ಯಕ್ರಮ ಮಾರ್ಗದರ್ಶಿಯನ್ನು ಪರಿಚಯಿಸುತ್ತಿದೆ. ಇದು ಬಳಕೆದಾರ ಸ್ನೇಹಿ ಇಂಟರ್ಫೇಸ್ ಮೂಲಕ ಚಾನೆಲ್‌ಗಳು ಮತ್ತು ಕಾರ್ಯಕ್ರಮ ವೇಳಾ ಪಟ್ಟಿಗಳನ್ನು ಬ್ರೌಸ್ ಮಾಡಲು ಅನುವು ಮಾಡಿ ಕೊಡುತ್ತದೆ. ಇದರಿಂದ ಗ್ರಾಹಕರಿಗೆ ಕೆಲವು ಲಾಭಗಳಿವೆ. ಪ್ರತಿ ತಿಂಗಳು ಕೇಬಲ್ ಅಥವಾ ಡಿಟಿಎಚ್ ರೀಚಾರ್ಜ್ ಮಾಡುವ ಅವಶ್ಯಕತೆ ಇರುವುದಿಲ್ಲ. ಡಿಜಿಟಲ್ ರೂಪದಲ್ಲಿ ಚಾನೆಲ್‌ಗಳು ಲಭ್ಯವಾಗುವುದರಿಂದ ಚಿತ್ರದ ಗುಣಮಟ್ಟ ಉತ್ತಮವಾಗಿರುತ್ತದೆ. ಹೆಚ್ಚಿನ ವೈರ್‌ಗಳ ಕಿರಿಕಿರಿ ಇಲ್ಲದೆ, ಒಂದೇ ರಿಮೋಟ್ ಮೂಲಕ ಎಲ್ಲವನ್ನೂ ನಿಯಂತ್ರಿಸಬಹುದು. ಈ ಯೋಜನೆಯು ದೇಶದಾದ್ಯಂತ ಸಾರ್ವಜನಿಕ ಪ್ರಸಾರ ಮೂಲಸೌಕರ್ಯವನ್ನು ಬಲಪಡಿಸುವುದರ ಜತೆಗೆ ತಂತ್ರಜ್ಞಾನವನ್ನು ಬಳಸಿ ಕೊಂಡು ವಿಷಯಗಳ ಲಭ್ಯತೆ ಮತ್ತು ಬಳಕೆದಾರ ಅನುಭವವನ್ನು ಸುಧಾರಿಸುವ ಸರಕಾರದ ವ್ಯಾಪಕ ಪ್ರಯತ್ನದ ಒಂದು ಭಾಗವಾಗಿದೆ.

ಯುಡಿಎಫ್ ನಾಯಕನ ವಿವಾದಾತ್ಮಕ ಹೇಳಿಕೆ

ಕಾಯಂಕುಳಂ (ಕೇರಳ): ಇಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಯ ಪ್ರಚಾರದ ವೇಳೆ ಯುಡಿಎಫ್ ಅಭ್ಯರ್ಥಿ ಎಂ. ಲಿಜು ಪರ ಚುನಾವಣಾ ಸಮಾವೇಶದಲ್ಲಿ ಬುಧವಾರ ಪ್ರಚಾರ ಭಾಷಣ ಮಾಡಿದ ಮುಸ್ಲಿಂ ಲೀಗ್ ನಾಯಕ ಇರ್ಷಾದ್ ಚಕ್ಕಲಶ್ಶೇರಿ, ಕಾಯಂಕುಲಂನ ಎಲ್‌ಡಿಎಫ್ ಅಭ್ಯರ್ಥಿ ಪ್ರತಿಭಾ ಅವರನ್ನು ಗುರಿಯಾಗಿಸಿಕೊಂಡು ವಿವಾದ ಹೇಳಿಕೆ ನೀಡಿದ್ದಾರೆ.

ಮಹಿಳಾ ಅಭ್ಯರ್ಥಿ ತನ್ನ ದೈಹಿಕ ಸೌಂದರ್ಯದಿಂದ ಜನರನ್ನು ಮರಳು ಮಾಡಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ವಿವಾದಾತ್ಮಕ ಹೇಳಿಕೆ ನೀಡಿದ್ದು, ಈ ಹೇಳಿಕೆ ವಿರುದ್ಧ ತೀವ್ರ ಆಕ್ರೋಶ ಭುಗಿಲೆದ್ದಿದೆ. ಯುಡಿಎಫ್ ನಾಯಕನ ತಮ್ಮ ವಿರುದ್ಧ ಮಾಡಿರುವ ಹೇಳಿಕೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕಾಯಂಕುಳಂನ ಎಲ್‌ಡಿಎಫ್ ಅಭ್ಯರ್ಥಿ ಯು. ಪ್ರತಿಭಾ ಹೇಳಿದ್ದಾರೆ. ಅವರ ಹೇಳಿಕೆ ಇಡೀ ಮಹಿಳಾ ಸಮುದಾಯಕ್ಕೆ ಅವಮಾನಕರ, ಹಾಗಾಗಿ ಅದರ ಕುರಿತು ಪೊಲೀಸರು ಮತ್ತು ಚುನಾವಣಾ ಆಯೋಗಕ್ಕೆ ದೂರು ನೀಡುವುದಾಗಿ ಶಾಸಕಿ ಪ್ರತಿಭಾ ಹೇಳಿದ್ದಾರೆ. ಕಾಂಗ್ರೆಸ್‌ಗೆ ಇಂದಿರಾ ಗಾಂಧಿಯಂತಹ ಮಹಿಳಾ ನಾಯಕಿಯ ನೇತೃತ್ವವಿತ್ತು. ಸೋನಿಯಾ ಗಾಂಧಿಯಂತಹ ಮಹಿಳಾ ನಾಯಕಿ ಅದರ ಮುಖ್ಯಸ್ಥರೂ ಆಗಿದ್ದರು. ಪ್ರಿಯಾಂಕಾ ಗಾಂಧಿ ವಯನಾಡಿನಲ್ಲಿ ಬಂದು ಸ್ಪರ್ಧಿಸಿದರು. ಮಹಿಳೆಯರ ನೇತೃತ್ವದ ಪಕ್ಷದ ನಾಯಕ ಇಂತಹ ಕೆಟ್ಟ ಹೇಳಿಕೆ ನೀಡಿದ್ದರಿಂದ ನನಗೆ ಆಘಾತವಾಗಿದೆ. ನಾನು ಯಾವುದೇ ಚುನಾವಣೆಯಲ್ಲಿ ಎದುರಾಳಿ ಅಭ್ಯರ್ಥಿಗಳ ವಿರುದ್ಧ ಎಂದಿಗೂ ವೈಯಕ್ತಿಕ ಹೇಳಿಕೆ ನೀಡಿಲ್ಲ ಎಂದಿದ್ದಾರೆ.

ಲೋಕಸಭಾ ಕ್ಷೇತ್ರಗಳ ವಿಂಗಡಣೆ-ವಿಸ್ತರಣೆ ವಿಧೇಯಕ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿಯೇ ಮಂಡನೆ ಸಾಧ್ಯತೆ ರಾಜ್ಯ ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯೂ ಏರಿಕೆ ನಿರೀಕ್ಷೆ

ಲೋಕಸಭಾ ಕ್ಷೇತ್ರಗಳ ಸಂಖ್ಯೆ 816ಕ್ಕೆ ಏರಿಕೆ?

ದೆಹಲಿ: ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲು ಸೌಲಭ್ಯ ನೀಡುವ ವಿಧೇಯಕ ಮತ್ತು ಮತದಾರರ ಸಂಖ್ಯಾವಾರು ಲೋಕಸಭಾ ಕ್ಷೇತ್ರಗಳ ವಿಂಗಡಣೆ ಮತ್ತು ವಿಸ್ತರಣೆಗೆ ಸಂಬಂಧಿಸಿದ ವಿಧೇಯಕವನ್ನು ಪ್ರಸಕ್ತ ಬಜೆಟ್ ಅಧಿವೇಶನದಲ್ಲಿಯೇ ಮಂಡಿಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಲೋಕಸಭೆ ಕ್ಷೇತ್ರಗಳ ವಿಸ್ತರಣೆಯನ್ನು ಮತದಾರರ ಸಂಖ್ಯೆಯ ಅನುಪಾತದಲ್ಲಿ ನಡೆಸುವುದಾದಲ್ಲಿ ದೇಶದಲ್ಲಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಅಂದಾಜು 816ಕ್ಕೆ (ಪ್ರಸ್ತುತ 543 ಕ್ಷೇತ್ರಗಳ ಸಂಖ್ಯೆಯ ಶೇ.50ರಷ್ಟು) ಹೆಚ್ಚಳವಾಗುವ ನಿರೀಕ್ಷೆ ಇದೆ. ಇದೇ ಲೆಕ್ಕಾಚಾರದಲ್ಲಿಯೇ ಮುಂಜಾಗರೂಕತಾ ಕ್ರಮವಾಗಿ ನೂತನ ಸಂಸತ್ ಭವನದಲ್ಲಿನ ಲೋಕಸಭಾ ಸದನದ ಆಸನಗಳ ಸಂಖ್ಯೆಯನ್ನು 888ರ ವರೆಗೂ ಇರುವಂತೆ ವಿನ್ಯಾಸಗೊಳಿಸಲಾಗಿದೆ ಎನ್ನಲಾಗಿದೆ. ವಿಸ್ತಾರದಲ್ಲಿ ದೇಶದಲ್ಲಿಯೇ ಅತಿದೊಡ್ಡ ಪ್ರದೇಶ, ಅತ್ಯಧಿಕ ಜನಸಂಖ್ಯೆಯ(25 ಕೋಟಿ) ರಾಜ್ಯ ಎನಿಸಿದ ಉತ್ತರ ಪ್ರದೇಶ ದಲ್ಲಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಈಗಿನ 80 ಕ್ಷೇತ್ರಗಳಿಗೆ ಬದಲಾಗಿ 120 ಕ್ಷೇತ್ರಗಳಿಗೆ ಹೆಚ್ಚಲಿದೆ. ಅಂದರೆ, ಹಿಂದಿ ಭಾಷೆಯೇ ಪ್ರಧಾನವಾಗಿರುವ ಈ ದೊಡ್ಡ ರಾಜ್ಯಕ್ಕೆ 40 ಕ್ಷೇತ್ರಗಳಷ್ಟು ಹೆಚ್ಚುವರಿ ಕ್ಷೇತ್ರಗಳು ಸಿಗಲಿವೆ. ಅಲ್ಲದೇ, 120ರಲ್ಲಿ 40 ಲೋಕಸಭಾ ಕ್ಷೇತ್ರಗಳು ಮಹಿಳೆಯರಿಗೇ ಮೀಸಲಾಗಿರಲಿವೆ. ಲೋಕಸಭಾ ಕ್ಷೇತ್ರಗಳ ಸಂಖ್ಯೆಗಳ ಹೆಚ್ಚಳದಲ್ಲಿ ಮಹಾರಾಷ್ಟ್ರ ರಾಜ್ಯಕ್ಕೂ 72 ಕ್ಷೇತ್ರಗಳಷ್ಟು ದೊಡ್ಡ ಪಾಲು ಸಿಗಲಿದೆ. ಪಶ್ಚಿಮ ಬಂಗಾಳದಲ್ಲಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆಯೂ 63ಕ್ಕೆ ಏರಿಕೆಯಾಗಲಿದೆ.

ದಕ್ಷಿಣ ಭಾರತದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆಯಲ್ಲಿ ಹೆಚ್ಚು ಲಾಭವಾಗುವುದು ತಮಿಳುನಾಡಿಗೆ. ಸದ್ಯ ತಮಿಳುನಾಡಿನಲ್ಲಿ 39 ಲೋಕಸಭಾ ಕ್ಷೇತ್ರಗಳಿವೆ. ಮತದಾರರ ಹೊಸ ಅನುಪಾತ ಲೆಕ್ಕದಲ್ಲಿ ರಾಜ್ಯದಲ್ಲಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆ 59ಕ್ಕೆ ಮುಟ್ಟಲಿದೆ. ಕರ್ನಾಟಕದಲ್ಲಿನ 28 ಲೋಕಸಭಾ ಕ್ಷೇತ್ರಗಳು 42ಕ್ಕೆ ಏರಿಕೆಯಾಗಲಿವೆ. ಪುಟ್ಟ ಕೇರಳದಲ್ಲಿಯೂ 30 ಲೋಕಸಭಾ ಕ್ಷೇತ್ರಗಳು ರೂಪುಗೊಳ್ಳಲಿವೆ.

ವಿಧಾನಸಭೆ: ಇದೇ ವೇಳೆ ಮತದಾರರ ಅನುಪಾತದ ಲೆಕ್ಕಾಚಾರದಲ್ಲಿ ರಾಜ್ಯಗಳ ವಿಧಾನ ಸಭಾ ಕ್ಷೇತ್ರಗಳ ಸಂಖ್ಯೆಯೂ ಹೆಚ್ಚಲಿದೆ. ಸದ್ಯ ಉತ್ತರ ಪ್ರದೇಶದಲ್ಲಿ 403 ವಿಧಾನಸಭಾ ಕ್ಷೇತ್ರ ಗಳಿದ್ದು, ಮತದಾರರ ಅನುಪಾತ ಪ್ರಮಾಣಕ್ಕೆ ತಕ್ಕಂತೆ 605ಕ್ಕೆ ಹೆಚ್ಚಳವಾಗಲಿವೆ. ಉತ್ತರಾ ಖಂಡದಂತಹ ಪುಟ್ಟ ರಾಜ್ಯದಲ್ಲಿನ ವಿಧಾನ ಸಭಾ ಕ್ಷೇತ್ರಗಳ ಸಂಖ್ಯೆಯೂ ಈಗಿನ 70ರಿಂದ 105ಕ್ಕೆ ಹೆಚ್ಚಲಿದೆ ಎಂದು ವರದಿಯಾಗಿದೆ.



ಮಹಿಳೆಯರಿಗೆ 273 ಕ್ಷೇತ್ರ

ಲೋಕಸಭೆ, ರಾಜ್ಯ ವಿಧಾನಸಭೆಗಳು, ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿನ ಜನಪ್ರತಿನಿಧಿ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲು ಸೌಲಭ್ಯ ನೀಡುವ ವಿಧೇಯಕವೂ ಪ್ರಸಕ್ತ ಬಜೆಟ್ ಅಧಿವೇಶನ ದಲ್ಲಿಯೇ ಮಂಡನೆಯಾಗಲಿದೆ. ಉಭಯ ಸದನಗಳ ಸಮ್ಮತಿ ದೊರೆತು ರಾಷ್ಟ್ರಪತಿಗಳ ಅಂಕಿತದೊಂದಿಗೆ ಜಾರಿಗೆ ಬಂದಲ್ಲಿ ದೇಶದ ಒಟ್ಟಾರೆ 816 ಲೋಕಸಭಾ ಕ್ಷೇತ್ರಗಳಲ್ಲಿ ನಾರಿಶಕ್ತಿಗೆ 273 ಕ್ಷೇತ್ರಗಳು ಮೀಸಲಾಗಲಿವೆ.

» ಲಡಾಕ್	1	» ಮಹಾರಾಷ್ಟ್ರ	72
» ಜಮ್ಮು-ಕಾಶ್ಮೀರ	8	» ಛತ್ತೀಸ್‌ಗಢ	17
» ಹಿಮಾಚಲ ಪ್ರದೇಶ	6	» ಒಡಿಶಾ	32
» ಹರಿಯಾಣ	15	» ಪಶ್ಚಿಮ ಬಂಗಾಳ	63
» ಉತ್ತರಾಖಂಡ	8	» ಬಿಹಾರ	60
» ಪಂಜಾಬ್	20	» ತೆಲಂಗಾಣ	26
» ದೆಹಲಿ	11	» ಆಂಧ್ರಪ್ರದೇಶ	38
» ಉತ್ತರ ಪ್ರದೇಶ	120	» ಕರ್ನಾಟಕ	42
» ರಾಜಸ್ಥಾನ	38	» ತಮಿಳುನಾಡು	59
» ಗುಜರಾತ್	39	» ಕೇರಳ	30
» ಮಧ್ಯಪ್ರದೇಶ	44	» ಅಸ್ಸಾಂ	21

ಅಗ್ನಿವೀರರಿಗೆ ಉದ್ಯೋಗ ಮೀಸಲು: ಅಮಿತ್ ಶಾ ಪತ್ರ

ಹಮೀರ್‌ಪುರ: 2027ಕ್ಕೆ ನಾಲ್ಕು ವರ್ಷಗಳ ಅವಧಿ ಪೂರೈಸುವ ಅಗ್ನಿವೀರರಿಗೆ ಪುನರ್ ಅವಕಾಶ ಕಲ್ಪಿಸಲು ಶೇ. 20ರಷ್ಟು ಉದ್ಯೋಗ ಮೀಸಲಿಡುವಂತೆ ಎಲ್ಲಾ ರಾಜ್ಯ ಸರಕಾರಗಳಿಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪತ್ರ ಬರೆದಿದ್ದಾರೆ. ಆಯಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ರವಾನೆ ಮಾಡಲಾಗಿದೆ ಎಂದು ಸೈನಿಕ ಕಲ್ಯಾಣ ಇಲಾಖೆ ನಿರ್ದೇಶಕ ಬ್ರಿಗೇಡಿಯರ್ ಮದನ್ ಶೀಲ್ ಶರ್ಮಾ ತಿಳಿಸಿದ್ದಾರೆ. ಶೇ 20ರಷ್ಟು ಉದ್ಯೋಗಗಳನ್ನು ಅರಣ್ಯ ರಕ್ಷಕರು, ಗಣಿ ರಕ್ಷಣಾ ಪಡೆ, ಪೊಲೀಸ್ ಕಾನ್‌ಸ್ಟೆಬಲ್, ಅಗ್ನಿಶಾಮಕ ಸಿಬ್ಬಂದಿ. ಅಶ್ವಾರೋಹಿ ದಳ, ಜೈಲು ವಾರ್ಡನ್, ವಿಶೇಷ ಪೊಲೀಸ್ ಅಧಿಕಾರಿಗಳು ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆಗಳಲ್ಲಿ ಮೀಸಲಿಡುವಂತೆ ಪತ್ರದಲ್ಲಿ ತಿಳಿಸಲಾಗಿದೆ. ಹರಿಯಾಣ ರಾಜ್ಯವು ಅಗ್ನಿವೀರರಿಗೆ ಸಮವಸ್ತ್ರಧಾರಿ ಪಡೆಗಳಲ್ಲಿ ಮೀಸಲು ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಎನಿಸಿಕೊಂಡಿದೆ. ಉತ್ತರಾಖಂಡ್ ಕೂಡ ಅಗ್ನಿವೀರರಿಗೆ ಮೀಸಲು ಘೋಷಣೆ ಮಾಡಿದೆ.

ಭಾರತದ 2ನೇ ಅತಿದೊಡ್ಡ ತೈಲ ಸಂಸ್ಕರಣಾ ಕೇಂದ್ರ ಬಂದ್

ನಯಾರಾ ರಿಫೈನರಿ 35 ದಿನ ಕಾರ್ಯ ಸ್ಥಗಿತ

ಅಹಮದಾಬಾದ್: ಮಹತ್ವದ ಬೆಳವಣಿಗೆಯೊಂದರಲ್ಲಿ ಗುಜರಾತ್‌ನಲ್ಲಿರುವ ನಯಾರಾ ಎನರ್ಜಿ ಒಡೆತನದ ವಾಡಿನಾರ್ ರಿಫೈನರಿ ನಿರ್ವಹಣೆ ಕಾರಣಕ್ಕೆ ಬರೋಬ್ಬರಿ 35 ದಿನಗಳ ಕಾಲ ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದೆ. ಇದರಿಂದ ಭಾರತದ ತೈಲ ಸಂಸ್ಕರಣಾ ಸಾಮರ್ಥ್ಯವು ಶೇ.8ರಷ್ಟು ಕುಸಿಯಲಿದೆ ಎಂದು ನಿರೀಕ್ಷಿಸಲಾಗಿದೆ, ಅಲ್ಲದೇ ದೇಶಾದ್ಯಂತ ಪೆಟ್ರೋಲ್ ಮತ್ತು ಡಿಸೇಲ್ ಪೂರೈಕೆ ಸರಪಳಿ ಮೇಲೆ ಕೊಂಚ ಪರಿಣಾಮ ಬೀರಲಿದೆ ಎಂದು ಹೇಳಲಾಗುತ್ತಿದೆ.

ನಯಾರಾ ಎನರ್ಜಿ ನಿರ್ವಹಣಾ ಕಾರ್ಯವನ್ನು ಕಳೆದ ವರ್ಷವೇ ಮಾಡಬೇಕಿತ್ತು, ಆದರೆ ಯುರೋಪಿಯನ್ ಒಕ್ಕೂಟದ ಕಠಿಣ ನಿರ್ಬಂಧಗಳ ಹಿನ್ನೆಲೆಯಲ್ಲಿ ಅದು ಸಾಧ್ಯವಾಗಿರಲಿಲ್ಲ. ರಷ್ಯಾ ಬೆಂಬಲಿತ ಕಂಪನಿಯಾಗಿದ್ದರಿಂದ, ನಯಾರಾ ಎನರ್ಜಿಗೆ ಅಗತ್ಯವಿರುವ ರಾಸಾಯನಿಕಗಳು, ವೇಗವರ್ಧಕಗಳು ಮತ್ತು ಇತರ ಬಿಡಿಭಾಗಗಳನ್ನು ಪೂರೈಸಲು ಪ್ರಮುಖ ಯುರೋಪಿಯನ್ ಮಾರಾಟಗಾರರು ನಿರಾಕರಿಸಿದ್ದರು, ಹೀಗಾಗಿ ಅನಿವಾರ್ಯವಾಗಿ ರಿಫೈನರಿ ನಿರ್ವಹಣೆಯನ್ನು ಮುಂದೂಡಲಾಗಿತ್ತು.

ಆದರೆ ಈಗ ನಿರ್ವಹಣೆ ಕಾರ್ಯವನ್ನು ಆರಂಭಿಸುವ ಅನಿವಾರ್ಯತೆ ಇರುವುದರಿಂದ, ಕಾರ್ಯಾಚರಣೆಯನ್ನು 35 ದಿನಗಳ ಕಾಲ ನಿಲ್ಲಿಸಲು ನಿರ್ಧರಿಸಲಾಗಿದೆ. ನಯಾರಾ ಎನರ್ಜಿ ಉತ್ಪಾದಿಸುವ ಇಂಧನದಲ್ಲಿ ಬಹುಪಾಲು ಭಾರತೀಯ ಮಾರುಕಟ್ಟೆಯಲ್ಲೇ ಮಾರಾಟವಾಗುತ್ತದೆ. ಕಳೆದ ವರ್ಷ ಯುರೋಪಿಯನ್ ನಿರ್ಬಂಧಗಳ ನಂತರ ಇದರ ರಫ್ತು ಪ್ರಮಾಣ ಗಣನೀಯವಾಗಿ ಕುಸಿದಿತ್ತು. ಸದ್ಯ ಉತ್ಪಾದನೆಯಾಗುವ ಇಂಧನದ ಒಂದು ದೊಡ್ಡ ಪಾಲು ಸರಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಪೂರೈಕೆಯಾಗುತ್ತಿದ್ದರೆ, ಉಳಿದ ಭಾಗವನ್ನು ದೇಶಾದ್ಯಂತ ಇರುವ ನಯಾರಾ ಎನರ್ಜಿಯ ಸುಮಾರು 7,000 ರಿಟೇಲ್ ಪೆಟ್ರೋಲ್ ಬಂಕ್‌ಗಳ ಮೂಲಕ ಮಾರಾಟ ಮಾಡಲಾಗುತ್ತಿದೆ.

ರಿಫೈನರಿ 35 ದಿನ ಬಂದ್ ಆದರೆ ವಾಹನ ಸವಾರರಿಗೆ ಇಂಧನ ಸಿಗುವುದಿಲ್ಲವೇ ಎಂಬ ಆತಂಕ ಶುರುವಾಗಿದೆ. ಆದರೆ ಈ ಬಗ್ಗೆ ಸ್ಪಷ್ಟನೆ ನೀಡಿರುವ ಕಂಪನಿ, ಬಂಕ್‌ಗಳಿಗೆ ಇಂಧನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. 35 ದಿನಗಳಿಗೆ ಆಗುವಷ್ಟು ಮುಂಗಡ ದಾಸ್ತಾನು ನಮ್ಮಲ್ಲಿದೆ ಎಂದು ಸಂಸ್ಥೆ ಹೇಳಿದೆ.

ಚಿತ್ತವಿಹಾರ

ಭ್ರಮೆ

ಬದುಕು ಕಳೆದು ಹೋಗುವುದು ಸವೆದು
ಸಮಯದ ಜೊತೆಯೇ ಮರೆಯಾಗುವುದು
ನಿನ್ನೆ ನಗುತಿದ್ದ ಮುಖ ಇಂದು ಮೌನ
ಕಾಲದ ಆಟವೇ ಹೀಗೆ ವಿಚಿತ್ರ ಯಾನ
ಹೂವು ಅರಳಿದರೂ ಒಮ್ಮೆ ಒಣಗುವುದು
ಸೂರ್ಯನ ಬೆಳಕಿದ್ದರೂ ಮಸುಕಾಗುವುದು
ಬದುಕಿನ ಪಯಣ ಮಿಂಚಿನಂತೆ ಕ್ಷಣಿಕ
ಹಣ, ಹೆಸರು, ಹುದ್ದೆ ಎಲ್ಲವೂ ತಾತ್ಕಾಲಿಕ
ಇಂದು ಇರುವವರು ನಾಳೆ ಇಲ್ಲ
ಬದುಕು ಎಂದಿಗೂ ಶಾಶ್ವತವಲ್ಲ
ಮನುಷ್ಯನ ಉಸಿರೇ ಇಲ್ಲಿ ಅತಿಥಿ
ನೆಮ್ಮದಿಯ ಬದುಕೇ ನಿಜವಾದ ಶಾಂತಿ
ಬದುಕು ನಶ್ವರವೆಂದು ತಿಳಿದರೆ
ಪ್ರತಿ ನಿಮಿಷವು ಸಕ್ಕರೆ
ಪ್ರೇಮದ ಸುಂದರ ಕವಿತೆ
ನವಿರಾದ ಹೂವಿನ ಸುಂದರತೆ

● **ವಿಜಯಕುಮಾರ್ ಕಟ್ಟೆ**, ಬೆಂಗಳೂರು

ರಾಮನವಮಿ

ಚೈತ್ರದ ಶುಕ್ಲದ ನವಮಿಯ ಸಂಭ್ರಮ
ಮೈತ್ರಿಯ ತಂದನು ರಘುರಾಮ
ಸೈರಿಸುತಲಿ ಬಿಸಿಲ ಬೇಗೆಯ ತಾಪವ
ಭಕ್ತಿಯಲಿ ಸವಿಯೋಣ ಪಾನಕ ಸಾರವ ।
ಮನೆ ಮನೆಯಂಗಳದಿ ಪೂಜೆಯ ಹರುಷ
ನೆನೆಯಲಿ ಭಕ್ತಿಯಲಿ ಪ್ರತಿ ರಾಮನವಮಿ
ಕನಕಾಂಬರಿ ದಳದಲಿ ಅಚ್ಯುತ ಅರ್ಚನೆ
ಹನುಮನ ನಂಬಿ ಅಂತರಂಗದಲಿ।
ದುಷ್ಟರ ಮರ್ದಿಸಿ ಶಿಷ್ಟರ ಕಾಯ್ದವ
ಶಿಷ್ಟಾಚಾರದ ಮೌಲ್ಯವ ತೋರಿದವ
ಕಷ್ಟವ ನೀಗುವ ಜ್ಞಾನದ ದೀಪ
ನಷ್ಟವ ಮಾಡದು ರಾಮನ ರೂಪ ।
ಪ್ರೀತಿಯ ಸಿಂಚನ ಜಗದಿ ಹರಡಲಿ
ನೀತಿಯ ಹಾದಿಯಲಿ ಬಾಳು ಬೆಳಗಲಿ
ರೀತಿಯ ಮರೆತ ಅಧರ್ಮವ ಅಳಿಸೋಣ
ಜ್ಯೋತಿಯ ಬೆಳಗುತ ರಾಮನ ಕಾಣೋಣ ॥
ಧರ್ಮದ ಮೂರ್ತಿ ಮರ್ಯಾದಾ
ಪುರುಷೋತ್ತಮ
ಕರ್ಮದ ಫಲವಿದು ನೀಡುವ ಹರುಷ
ಮರ್ಮವ ತಿಳಿಸುವ ತಾರಕ ಮಂತ್ರವ
ರಾಮನ ಕೃಪೆಯಲಿ ಹಾಡೋಣ ಅನುದಿನ ॥

● **ಎನ್.ಶಂಕರ ರಾವ್**, ಬೆಂಗಳೂರು

ಹನಿಕತೆಗಳು

ಜನುಮದ ನಂಟು

ಅವನೊಬ್ಬ ಹುಟ್ಟಾ ಕುರುಡ. ಊರುಗೋಲ ಆಸರೆಯಿಂದ ಅಲ್ಲಲ್ಲಿ ತಿರುಗಿ ಕೈಲಾದ ಕೆಲಸ ಮಾಡಿ ಹಣ ಪಡೆದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. ಅದೊಂದು ದಿನ ಮೆಟ್ಟಿಲ ಬಳಿ ಎಡವಿ ಬೀಳುತ್ತಿದ್ದವನ ಹಸ್ತವನ್ನು ಬಳೆಯ ಶಬ್ದದೊಂದಿಗೆ ಕೋಮಲ ಹಸ್ತವೊಂದು ಆಸರೆ ನೀಡಿ ಎತ್ತಿ ಕೂರಿಸಿತ್ತು . ಮಾತಿಲ್ಲ, ಕತೆಯಿಲ್ಲ. ಕೈ ಕೈ ಸೇರಿ ಪಿಸುಗುಟ್ಟಿದವು. ಎರಡು ದಿನಗಳ ನಂತರ ಗುಡಿಯಲ್ಲಿ ತಾಳಿ ಕಟ್ಟಿ ನಾನು ಅಂಧಳಾದೆ, ನೀನು ಮೂಗನಾದೆ ಎಂದು ಡ್ಯುಯೆಟ್ ಹಾಡಿದರು.

ಭಾಷಣಕಾರ

ವಿರೋಧ ಪಕ್ಷದ ನೇತಾರ ರಾಚೂಟಪ್ಪ ನಸುಕಿನಲ್ಲಿಯೇ ತನ್ನ ಬಾಲಂಗೋಚಿಗಳೊಂದಿಗೆ ಬಂದು ಕಲಾಕ್ಷೇತ್ರದ ಸುತ್ತಲಿನ ಜಾಗದಲ್ಲಿ ಬಿದ್ದಿದ್ದ ಕಲ್ಲುಗಳನ್ನು ಆರಿಸಿ ದೂರ ಎಸೆದಿದ್ದ. ಸಂಜೆ ಆವರಣದ ಹೊರಗಿನ ಭರಮಜ್ಜನ ಏಕಮಾತ್ರ ಟೊಮೆಟೋ, ಮೊಟ್ಟೆ, ತರಕಾರಿ ಅಂಗಡಿಯನ್ನು ಕೊಂಚ ಹಣ ಕೊಟ್ಟು ಬಂದ್ ಮಾಡಿ ಮನೆಗೆ ಹೋಗಲು ಕಳಿಸಿದ. ಮತ್ತೇನಿಲ್ಲ. ಮುಂದೆ ಕೆಲ ಗಂಟೆಗಳ ನಂತರ ಕಲಾಕ್ಷೇತ್ರದಲ್ಲಿ ಅವನ ಭಾಷಣದ ಕಾರ್ಯಕ್ರಮವಿತ್ತು!

ಮಮತೆ

ಹೆಣ್ಣುಹುಲಿಗೆ ಹೊಟ್ಟೆ ಚುರುಗುಟ್ಟುತ್ತಿತ್ತು. ಪಾಳು ಗುಡಿಯ ಮೂಲೆಯಲ್ಲಿ ಮೂರು ಮಕ್ಕಳೊಂದಿಗೆ ಹಾಯಾಗಿ ಮಲಗಿದ್ದ ನಾಯಿಯನ್ನು ಹಿಡಿದೆಳೆದು ತಿಂದು ತೇಗಿತ್ತು. ಮರುದಿನ ಮುಂಜಾನೆ ಕಂಡ ದೃಶ್ಯ ಅದ್ಭುತ! ಆ ಹೆಣ್ಣು ಹುಲಿ ತನ್ನ ಮೂರು ಮರಿಗಳೊಂದಿಗೆ ನಾಯಿಯ ಮೂರು ಮರಿಗಳಿಗೂ ಮೊಲೆಯೂಡಿಸುತ್ತಿತ್ತು.

ನಂಗಿಷ್ಟು-ನಿಂಗಿಷ್ಟು!

ಆ ಹೋಟೆಲಿನ ಸರ್ವರ್ ನಾಗೇಂದ್ರ ಬಡತನದಿಂದ ಮೇಲೆ ಬಂದಿದ್ದರೂ ಅತಿ ಆಸೆ. ಸಂಬಳ ಸಾಲದು. ಅದಕ್ಕೇ ಅಡ್ಡದಾರಿ ತುಳಿದಿದ್ದ. ಕಾಯಂ ಬರುವ ಗಿರಾಕಿಗಳ ವಿಶ್ವಾಸ ಗಳಿಸಿ ಅವರು ಜಾಸ್ತಿ ಬಿಲ್ ಮಾಡಿದ್ದಾಗ ಕಡಿಮೆ ಬರೆದುಕೊಟ್ಟು ಸಂಜೆ ಅವರು ಹೊರಗೆ ಸಿಕ್ಕಾಗ ಉಳಿಸಿದ ಹಣದಲ್ಲಿ ನಿಂಗಿಷ್ಟು ನಂಗಿಷ್ಟು ಎಂದು ಪಡೆದು ಜೇಬಿಗೆ ಇಳಿಬಿಡುತ್ತಿದ್ದ!

● **ಕೆ.ಶ್ರೀನಿವಾಸರಾವ್**, ಹರಪನಹಳ್ಳಿ



ಗ್ಯಾಲರಿಯಲ್ಲಿ ಕುಳಿತು ನೋಡುವ ಆಟವಲ್ಲ ಈ ಬದುಕು!



● **ಡಾ.ಎಸ್.ಎಂ.ಶಶಿಧರ**

ಬೆಳಗ್ಗೆ ಎದ್ದ ತಕ್ಷಣ ನಾವು ಮಾಡುವ ಮೊದಲ ಕೆಲಸವೇನು? ಬಹುಶಃ ದಿಂಬಿನ ಪಕ್ಕದಲ್ಲಿರುವ ಮೊಬೈಲ್ ಎತ್ತಿಕೊಂಡು ವಾಟ್ಸಾಪ್‌ನಲ್ಲಿ ಯಾರು ಏನು ಕಳಿಸಿದ್ದಾರೆ, ಜಗತ್ತಿನಲ್ಲಿ ಎಲ್ಲಿ ಏನು ಅನಾಹುತವಾಗಿದೆ ಎಂದು ನೋಡುತ್ತಾ ಅಕ್ಷರಶಃ ಮಾಹಿತಿಯನ್ನು 'ಕನ್ಸ್ಯೂಮ್' ಮಾಡುವುದು. ನಾವು ಬಹುತೇಕರು, ಎಚ್ಚರವಾದ ಕ್ಷಣದಿಂದ ಮಲಗುವವರೆಗೆ ಕೇವಲ ಮಾಹಿತಿಯ ಅಥವಾ ಮನರಂಜನೆಯ ಗ್ರಾಹಕರಾಗಿಯೇ ಉಳಿದುಬಿಟ್ಟಿದ್ದೇವೆ. ಬೇರೆಯವರು ತಯಾರಿಸಿದ ಅಡುಗೆಯನ್ನು ಉಣ್ಣುವುದು, ಬೇರೆಯವರು ಬರೆದಿದ್ದನ್ನು ಓದುವುದು, ಬೇರೆಯವರು ಆಡಿದ ಆಟವನ್ನು ನೋಡುವುದು-ಹೀಗೆ ನಮ್ಮ ಇಡೀ ದಿನ ಬೇರೆಯವರ ಸೃಜನಶೀಲತೆಯ ನೆರಳಲ್ಲೇ ಕಳೆದು ಹೋಗುತ್ತಿದೆ.

ಎಲೀನರ್ ರೂಸ್‌ವೆಲ್ಟ್ ಒಂದು ಕಡೆ ಹೇಳುತ್ತಾರೆ, ಯಾವಾಗ ನೀವು ಈ ಜಗತ್ತಿಗೆ ಏನನ್ನಾದರೂ ಕೊಡುವುದನ್ನು ನಿಲ್ಲಿಸುತ್ತೀರೋ, ಅಂದೇ ನೀವು ಸಾಯಲು ಶುರು ಮಾಡುತ್ತೀರಿ ಎಂದು. ಇದು ಕೇವಲ ದೈಹಿಕ ಸಾವಿನ ಬಗ್ಗೆಯಲ್ಲ, ನಮ್ಮೊಳಗಿನ ಜೀವಂತಿಕೆಯ ಸಾವಿನ ಬಗ್ಗೆ. ಈ ಸುಂದರ ಜಗತ್ತಿಗೆ ನಾವು ಕೇವಲ 'ವಿಸಿಟರ್ಸ್' ಆಗಿ ಬಂದು, ಯಾವುದೋ ಮ್ಯೂಸಿಯಂ ನೋಡಿದಂತೆ ನೋಡಿ ಹೋಗಬಾರದು. ನಾವು ಈ ಪ್ರಪಂಚದ ಅತಿಥಿಗಳಲ್ಲ, ನಾವು ಇಲ್ಲಿನ ಶಿಲ್ಪಿಗಳು. ನಾವು ಈ ಜಗತ್ತನ್ನು ಕೇವಲ ನೋಡುವುದಲ್ಲ, ಅದನ್ನು ನಮ್ಮ ಕೈಯಾರೆ ರೂಪಿಸಬೇಕು. ಪ್ರಕೃತಿಯನ್ನು ನೋಡುವುದರಲ್ಲಿ ಒಂದು ಹಿತವಿದೆ ನಿಜ, ಆದರೆ ಆ ಪ್ರಕೃತಿಯ ಭಾಗವಾಗಿ ಒಂದು ಸಣ್ಣ ಸಸಿ ನೆಡುವುದರಲ್ಲಿ ಇರುವ ಸಾರ್ಥಕತೆಯೇ ಬೇರೆ. ಹೋಟೆಲ್‌ನಲ್ಲಿ ಆರ್ಡರ್ ಮಾಡಿ ಬರುವ ಬಿಸಿಬಿಸಿ ಮಸಾಲ ದೋಸೆಗೂ, ನಾವೇ ಹಿಟ್ಟು ರುಬ್ಬಿ, ಹೆಂಚಿನ ಮೇಲೆ ಸುಯ್ ಎಂದು ಸದ್ದು ಮಾಡುತ್ತಾ ಹೊಯ್ಯುವ ದೋಸೆಗೂ ಇರುವ ವ್ಯತ್ಯಾಸವೇನು ಗೊತ್ತೇ? ಅಲ್ಲಿ ನಮ್ಮ 'ಸ್ಪರ್ಶ' ಇರುತ್ತದೆ. ಸೃಜನಶೀಲತೆ ಎಂದರೆ ಕೇವಲ ದೊಡ್ಡ ಕಾದಂಬರಿ ಬರೆಯುವುದು ಅಥವಾ ಸಿನಿಮಾ ಮಾಡುವುದಲ್ಲ, ಇಂದು ಸಂಜೆ ಹತ್ತಾರು ಜನರಿಗೆ ನೀವೇ ಅಡುಗೆ ಮಾಡುವುದು ಕೂಡ ಒಂದು ಕ್ರಿಯೇಟಿವ್ ಕೆಲಸವೇ.

ನಾವೀಗ 'ಯೂಸರ್ಸ್' ಆಗಿದ್ದೇವೆ. ನಾವು ಆ್ಯಪ್‌ಗಳನ್ನು ಬಳಸುತ್ತೇವೆ, ಇಂಟರ್ನೆಟ್ ಬಳಸುತ್ತೇವೆ, ಬದುಕನ್ನು ಬಳಸುತ್ತಿದ್ದೇವೆ. ಆದರೆ ಬದುಕನ್ನು 'ರಚಿಸುವುದು' ಮರೆತಿದ್ದೇವೆ. ಬೇಂದ್ರೆಯವರು ಬಾರೋ ಸಾಧನಕೇರಿಗೆ, ಮರಳಿ ನಿನ್ನೀ ಊರಿಗೆ ಎಂದು ಕರೆದದ್ದು ಸುಮ್ಮನೆ ಅಲ್ಲ. ಸಾಧನಕೇರಿ ಅಂದರೆ ಧಾರವಾಡದ ಒಂದು ಪ್ರದೇಶ ಅಂತಷ್ಟೇ ಇರಲಾರದು. 'ಸಾಧನಕೇರಿ' ಎಂದರೆ ಸಾಧನೆ ಮಾಡುವವರ, ಹೊಸತನ್ನು ಸೃಷ್ಟಿಸುವವರ ಕೇರಿ ಎಂದೂ ಇರಬಹುದು, ಅಲ್ವೇ?.

ಕ್ರಿಕೆಟ್ ಮ್ಯಾಚ್ ನೋಡಿ ಟೀಕೆ ಮಾಡುವುದು ಸುಲಭ, ಆದರೆ ಅಂಗಳಕ್ಕಿಳಿದು ಬ್ಯಾಟ್ ಹಿಡಿದು ನಿಂತಾಗ ಸಿಗುವ ಅನುಭವವೇ ಬೇರೆ. ಅದು ನಮ್ಮ ಶಕ್ತಿಯನ್ನು ನಮಗೆ ಪರಿಚಯಿಸುತ್ತದೆ. ಒಂದು ಪ್ಯಾರಾ ಓದುವುದಕ್ಕಿಂತ, ನಿಮ್ಮ ಮನಸ್ಸಿನ ಒಳಗಿನ ತುಮುಲಗಳನ್ನು ಒಂದು ಸಣ್ಣ ಪ್ಯಾರಾದಲ್ಲಿ ಬರೆದು ನೋಡಿ-ನಿಮ್ಮ ಬಗ್ಗೆ ನಿಮಗೇ ಹೊಸ ವಿಷಯಗಳು ತಿಳಿಯುತ್ತವೆ.

ಸೃಜನಶೀಲತೆ ಎಂಬುದು ಕಲೆಯಷ್ಟೇ ಅಲ್ಲ, ಅದೊಂದು ಜೀವನ ವಿಧಾನ. ನೀವು ಬಟ್ಟೆ ಒಗೆದು ಅದನ್ನು ಹಗ್ಗದ ಮೇಲೆ ಹರಡುವ ರೀತಿಯಲ್ಲೂ ಒಂದು ಕಲೆ ಇರಬಹುದು. ನಾವು ಯಾವಾಗ ವಸ್ತುಗಳನ್ನು, ಭಾವನೆಗಳನ್ನು ಕೇವಲ ಸೇವಿಸುವುದನ್ನು ನಿಲ್ಲಿಸಿ, ನಾವೇ ಏನನ್ನಾದರೂ ಸೃಷ್ಟಿಸಲು ಶುರು ಮಾಡುತ್ತೇವೆಯೋ, ಆಗ ನಮಗೆ ನಮ್ಮ ಅಸ್ತಿತ್ವದ ಬೆಲೆ ತಿಳಿಯುತ್ತದೆ. ಡಿವಿಜಿಯವರು ಅಂದು ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಎಂದು ಸುಮ್ಮನೆ ಹೇಳಲಿಲ್ಲ. ನಾವು ಸೃಷ್ಟಿಸುವ ಪ್ರತಿಯೊಂದು ಹೊಸ ಅನುಭವವೂ ಈ ಬದುಕಿನ ಮರಕ್ಕೆ ಹೊಸ ಚಿಗುರು ತರುತ್ತದೆ.

ಬದುಕು ಎಂಬುದು ಕೇವಲ 'ಸ್ಪೆಕ್ಟೇಟರ್ ಸ್ಪೋರ್ಟ್' ಅಲ್ಲ. ಗ್ಯಾಲರಿಯಲ್ಲಿ ಕುಳಿತು ಶಿಳ್ಳೆ ಹೊಡೆಯುವುದಕ್ಕಿಂತ, ಮಣ್ಣಿನಲ್ಲಿ ಬಿದ್ದು ಆಟ ಆಡುವುದರಲ್ಲಿ ಅಸಲಿ ಮಜಾ ಇದೆ. ಮುಂದಿನ ಬಾರಿ ಹಸಿವಾದಾಗ ಸ್ವಿಗ್ಗಿಯಲ್ಲಿ ಆರ್ಡರ್ ಮಾಡುವ ಮುನ್ನ ಒಮ್ಮೆ ಯೋಚಿಸಿ, ಸಿಂಪಲ್ಲಾಗಿ ಒಂದು ಉಪ್ಪಿಟ್ಟು ನೀವೇ ಯಾಕೆ ಮಾಡಬಾರದು?

ಯಾವುದೋ ಪುಸ್ತಕದ ವಿಮರ್ಶೆ ಓದುವ ಬದಲು, ನಿಮ್ಮ ಬಾಲ್ಯದ ಒಂದು ನೆನಪನ್ನು ನೀವೇ ಯಾಕೆ ಕಾಗದದ ಮೇಲೆ ಇಳಿಸಬಾರದು?

ಯಾರೋ ಪೋಸ್ಟ್ ಮಾಡಿದ ಪ್ರವಾಸದ ಫೋಟೋಗಳಿಗೆ ಲೈಕ್ ಒತ್ತುತ್ತಾ ಕುಳಿತುಕೊಳ್ಳುವ ಬದಲು, ನೀವೇ ಒಮ್ಮೆ ಬ್ಯಾಗ್ ಏರಿಸಿಕೊಂಡು ಊರ ಹೊರಗಿನ ಗುಡ್ಡವನ್ನೋ ಅಥವಾ ಹಳೆಯ ದೇವಸ್ಥಾನವನ್ನೋ ಅನ್ವೇಷಿಸಲು ಹೊರಡಿ. ಸ್ಪಾಟಿಫೈನಲ್ಲಿ ಸಾಲು ಸಾಲು ಹಾಡುಗಳನ್ನು 'ಪ್ಲೇ' ಮಾಡುವ ಬದಲು, ಕಿಟಕಿಯ ಪಕ್ಕ ಕುಳಿತು ನಿಮ್ಮದೇ ಧಾಟಿಯಲ್ಲಿ ಒಂದು ಹಳೆಯ ಹಾಡನ್ನು ಗುನುಗಿ ನೋಡಿ; ಆ ಸೃಷ್ಟಿಯ ಹಿತವೇ ಬೇರೆ. ನೆಟ್‌ಫ್ಲಿಕ್ಸ್‌ನಲ್ಲಿ ಸಿನಿಮಾ ನೋಡಿ ಕಾಲ ಕಳೆಯುವ ಬದಲು, ಮನೆಯ ಹಿರಿಯರ ಬಳಿ ಹೋಗಿ ಅವರ ಕಾಲದ ಕತೆ ಕೇಳಿ-ಅದು ಜಗತ್ತಿನ ಯಾವುದೇ ಸ್ಕ್ರಿಪ್ಟ್‌ಗಿಂತ ಚೆಂದವಿರುತ್ತದೆ. ಯೂಟ್ಯೂಬ್‌ನಲ್ಲಿ ಗಿಡ ಬೆಳೆಸುವ ವಿಡಿಯೋ ನೋಡುವುದನ್ನು ಬಿಟ್ಟು, ಒಂದು ಪುಟ್ಟ ಕುಂಡದಲ್ಲಿ ಬೀಜ ಹಾಕಿ; ಆ ಮೊಳಕೆ



ಮಣ್ಣು ಸೀಳಿ ಬರುವಾಗ ಸಿಗುವ ಆನಂದ ಮಿಲಿಯನ್ ವ್ಯೂಸ್‌ಗಳಿಗಿಂತ ದೊಡ್ಡದು. ವಾಟ್ಸಾಪ್ ಫಾರ್ವರ್ಡ್‌ಗಳ ಬದಲು, ಗೆಳೆಯನಿಗೊಂದು ಹಳೆಯ ಕಾಲದ ಪತ್ರ ಬರೆಯಿರಿ; ನಿಮ್ಮ ಕೈಬರಹದ ಆ ಅಕ್ಷರಗಳಲ್ಲಿ ನಿಮ್ಮ ಅಸ್ತಿತ್ವವೇ ದಾಖಲಾಗುತ್ತದೆ.

ಸೃಷ್ಟಿಯ ಆನಂದವಿದೆಯಲ್ಲ, ಅದು ಅಪ್ರತಿಮವಾದುದು. ಈ ಜಗತ್ತನ್ನು ನಾವು ಕಂಡಿದ್ದಕ್ಕಿಂತ ಸ್ವಲ್ಪ ಹೆಚ್ಚು ಸುಂದರವಾಗಿಸಿ ಹೋಗುವುದೇ ಸಾರ್ಥಕ ಬದುಕು. ಹಾಗಾಗಿ, ಇವತ್ತಿನಿಂದಲೇ ಕೇವಲ 'ಗ್ರಾಹಕ'ನಾಗುವುದನ್ನು ಬಿಟ್ಟು 'ಸೃಷ್ಟಿಕರ್ತ'ನಾಗುವ ಹಾದಿಯಲ್ಲಿ ಒಂದು ಪುಟ್ಟ ಹೆಜ್ಜೆ ಇಡಿ. ಈ ಜಗತ್ತು ಮತ್ತು ಬದುಕು ನಿಮ್ಮ ಕೈಯಲ್ಲಿ ರೂಪುಗೊಳ್ಳಲು ಕಾಯುತ್ತಿವೆ.

ಶಾಲಾ ಗ್ರಂಥಾಲಯ ಮಕ್ಕಳ ಪಾಲಿನ ದೇಗುಲ

● **ಶಿವಣ್ಣ. ಬಿ ಗಾಣಗಟ್ಟೆ, ಶಿಕ್ಷಕರು**

ಅವು ನನ್ನ ಬಾಲ್ಯದ ದಿನಗಳು. ನನಗೆ ಸರಿಯಾಗಿ ನೆನಪಿದೆ ನಾನಾಗ ಐದನೇ ತರಗತಿ ಓದುತ್ತಿದ್ದೆ. ಸ್ವಲ್ಪ ಓದಿನಲ್ಲಿ ಮುಂದೆ ಇದ್ದ ಕಾರಣಕ್ಕೆ ನಮ್ಮ ಟೀಚರ್ ನನ್ನನ್ನು ಕ್ಲಾಸ್‌ಗೆ ಲೀಡರ್ ಮಾಡಿದ್ರು. ಕ್ಲಾಸ್ ಲೀಡರ್ ಅಂದ್ರೆ ಇತರ ವಿದ್ಯಾರ್ಥಿಗಳಿಗಿಂತ ಸ್ವಲ್ಪ ಶಾಲಾ ಜವಾಬ್ದಾರಿ ಹೆಚ್ಚಿರುತ್ತದೆ. ಅದರಲ್ಲೂ ಸಂಜೆ ಶಾಲೆ ಬಿಟ್ಟಾಗ ಎಲ್ಲ ಕೊಠಡಿಗಳ ಕಿಟಕಿ ಮತ್ತು ಬಾಗಿಲುಗಳನ್ನು ಸರಿಯಾಗಿ ಮುಚ್ಚಿ ಬೀಗ ಹಾಕುವ ಜವಾಬ್ದಾರಿ ತುಂಬಾ ಖುಷಿಯಿಂದ ಮಾಡುತ್ತಿದ್ದೆ. ಹೀಗೆ ದಿನಂಪ್ರತಿ ಮಾಡುತ್ತಿರುವಾಗ ಒಮ್ಮೆ ಆಫೀಸ್ ರೂಮ್‌ನಲ್ಲಿ ಒಂದು ಗಾಡ್ರೆಜ್‌ನ ಬಾಗಿಲು ತೆರೆದಿತ್ತು, ಕುತೂಹಲಕ್ಕೆ ಅದರೊಳಗೆ ಏನಿದೆ ಅಂತ? ಒಮ್ಮೆ ಇಣುಕಿದೆ. ನನಗೆ ಅಲ್ಲಿ ಕಂಡಿದ್ದು ರಾಶಿ ರಾಶಿ ಪುಸ್ತಕಗಳ ಸಂಗ್ರಹ. ನೋಡೋಣ ಅಂತ ಹೇಳಿ ಒಂದು ಪುಸ್ತಕವನ್ನು ಅಲ್ಲಿಂದ ಎತ್ತಿಕೊಂಡೆ. ನೋಡಿದ್ರೆ ಅದು ಒಂದು ಕಥೆ ಪುಸ್ತಕವಾಗಿತ್ತು, ಅದರ ಕವರ್ ಪೇಜ್ ನನಗೆ ತುಂಬಾ ಇಷ್ಟವಾಗಿ ಕಥೆಯನ್ನು ಓದಲೇಬೇಕು ಅಂತ ಹೇಳಿ ನನ್ನ ಶರ್ಟ್ ಒಳಗೆ ಸೇರಿಸಿಕೊಂಡು ಯಾರಿಗೂ ಕಾಣದಂತೆ ಮನೆಗೆ ತೆಗೆದುಕೊಂಡು ಬಂದು ಓದಿದೆ. ನಾನು ಓದಿದ ಮೊದಲ ಕಥೆ ಪುಸ್ತಕ ಅದಾಗಿತ್ತು. ಹೆಸರು ಆಲಿಬಾಬ ಮತ್ತು ನಲವತ್ತು ಜನ ಕಳ್ಳರು. ಆ ಕತೆಯ ಪುಸ್ತಕ ಒಳಗೊಂಡಿದ್ದಂತಹ ಬಣ್ಣಬಣ್ಣದ ಚಿತ್ರಗಳು, ಸನ್ನಿವೇಶಗಳನ್ನು ಮತ್ತಷ್ಟು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದವು. ಜೊತೆಗೆ ಸರಳವಾಗಿ ಓದಿಸಿಕೊಂಡು ಹೋಗುತ್ತಿದ್ದವು. ಐದನೇ ತರಗತಿಯಲ್ಲಿ ಓದುತ್ತಿದ್ದ ನನಗೆ ಕಥೆ ಓದುವ ಹುಚ್ಚು/ಹವ್ಯಾಸ ಇಲ್ಲಿಂದಲೇ ಬೆಳೆಯಿತು ಅನಿಸುತ್ತದೆ.

ಇನ್ನು ಹೆಚ್ಚು ಕಥೆಗಳನ್ನ ಓದಬೇಕು ಎನ್ನುವಂತಹ ಕುತೂಹಲಕ್ಕೆ ಗಾಡ್ರೇಜ್‌ನಲ್ಲಿ ಸಂಗ್ರಹಿಸಿದ್ದ ಹಲವಾರು ಕಥೆ ಪುಸ್ತಕಗಳು ದಿನಂಪ್ರತಿ ನನ್ನ ಮನೆ ಸೇರಿದವು, ಅದು ಯಾವ ಶಿಕ್ಷಕರ ಒಪ್ಪಿಗೆ ಇಲ್ಲದೆ! ಶಿಕ್ಷಕರು ಎಲ್ಲ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಟ್ಟಿದ್ದರೆ ನಾನು ಈ ರೀತಿ ತಪ್ಪು ಮಾಡ್ತಾ ಇರಲಿಲ್ಲ ಅನ್ಸುತ್ತೆ. ಆದರೆ ಶಿಕ್ಷಕರನ್ನು ಕೇಳಿದ್ರೆ ಕೊಡ್ತಾರೋ ಇಲ್ವೋ ಎಂದು ನನಗೆ ಭಯವಾಗಿ ಹೀಗೆ ಮಾಡ್ತಾ ಇದ್ದೆ. ಜೊತೆಗೆ ಪುಸ್ತಕಗಳನ್ನು ವಾಪಸ್ ಕೊಡಲು ಸಹ ನನಗೆ ಇಷ್ಟವಿರಲಿಲ್ಲ ಆಗ. ಏಕೆಂದರೆ ಓದಿದ ಕಥೆಗಳನ್ನ ಮತ್ತೆ ಮತ್ತೆ ಓದ್ತಾ ಇದ್ದೆ, ಅದರಿಂದ ರೋಮಾಂಚನಕಾರಿಯಾದ ಅನುಭವ ನನಗಾಗುತ್ತಿತ್ತು, ಬರಿ ಕಥೆ ಪುಸ್ತಕಗಳೆಲ್ಲ ರಾಮಾಯಣ, ಮಹಾಭಾರತ, ಅಲ್ಲಿ ಬರುವ ಭೀಷ್ಮ, ವಿದುರ, ವಾಲಿ, ಸುಗ್ರೀವ ಹೀಗೆ ಎಲ್ಲಾ ಪಾತ್ರಗಳನ್ನು, ಶಾಲಾ ಗ್ರಂಥಾಲಯದಲ್ಲಿ ಇದ್ದಂತಹ ದೇಶದ ಮಹಾನ್ ನಾಯಕರ ಜೀವನ ಚರಿತ್ರೆಗಳನ್ನು ನಾನು 7ನೇ ತರಗತಿ ಮುಗಿಸುವಷ್ಟರಲ್ಲಿ ಓದಿಕೊಂಡು ಬಿಟ್ಟಿದ್ದೆ!

ಹೀಗೆ ನನಗೆ ಅರಿವಿಲ್ಲದೆ ನನ್ನ ಗಮನಕ್ಕೆ ಬಂದ ಗ್ರಂಥಾಲಯದ ಒಂದು ಕಥೆ ಪುಸ್ತಕ ನನ್ನ ಓದುವ ಹವ್ಯಾಸವನ್ನು ಹೆಮ್ಮರವಾಗಿ ಬೆಳೆಯುವಂತೆ ಮಾಡಿಬಿಟ್ಟಿದ್ದು ನನಗೂ

ಈಗಲೂ ಕೂಡ ನೆನೆಸಿಕೊಂಡರೆ ಖುಷಿಯಾಗುತ್ತದೆ. ಈಗ ನಾನು ಹೇಳಲು ಹೊರಟಿರುವ ವಿಷಯ ವಿದ್ಯಾರ್ಥಿಗಳ ಜೀವನದಲ್ಲಿ ಶಾಲಾ ಗ್ರಂಥಾಲಯದ ಪಾತ್ರವೇನು? ಶಾಲೆಯು ಮಕ್ಕಳಿಗೆ ಕೇವಲ ಪಾಠಪುಸ್ತಕದ ಜ್ಞಾನವಷ್ಟೇ ನೀಡುವ ಸ್ಥಳವಲ್ಲ, ಮಕ್ಕಳ ಬೌದ್ಧಿಕ, ಮಾನಸಿಕ, ನೈತಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸಹಾಯಕವಾಗುವ ಅನೇಕ ವ್ಯವಸ್ಥೆಗಳು ಶಾಲೆ ಯಲ್ಲಿ ಇರುತ್ತವೆ. ಅವುಗಳಲ್ಲಿ ಅತ್ಯಂತ ಮಹತ್ವದ ಘಟಕವೆಂದರೆ ಶಾಲಾ ಗ್ರಂಥಾ ಲಯ. ಗ್ರಂಥಾಲಯವು ಜ್ಞಾನ ಸಂಗ್ರಹಾಲ ಯವಾಗಿದ್ದು, ಮಕ್ಕಳಲ್ಲಿ ಓದುವ ಅಭ್ಯಾಸ ವನ್ನು ಬೆಳೆಸಿ, ಅವರ ಸರ್ವತೋಮುಖ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ.

ಶಾಲಾ ಗ್ರಂಥಾಲಯದ ಮಹತ್ವ

- **ಜ್ಞಾನ ವಿಸ್ತರಣೆಯ ಕೇಂದ್ರ:** ಪಠ್ಯಪುಸ್ತಕಗಳ ಹೊರತಾಗಿ ವಿವಿಧ ವಿಷಯಗಳ ಪುಸ್ತಕಗಳು, ಕಥೆಗಳು, ಜೀವನ ಚರಿತ್ರೆಗಳು, ವಿಜ್ಞಾನ, ಇತಿಹಾಸ, ನೈತಿಕ ಕಥೆಗಳು ಇತ್ಯಾದಿಗಳ ಮೂಲಕ ಮಕ್ಕಳ ಜ್ಞಾನ ವಿಸ್ತಾರಗೊಳ್ಳುತ್ತದೆ.
- **ಓದುವ ಅಭ್ಯಾಸ ಬೆಳೆಸುವುದು:** ಬಾಲ್ಯದಲ್ಲಿಯೇ ಗ್ರಂಥಾಲಯದ ಸಂಪರ್ಕ ದೊರೆತರೆ ಮಕ್ಕಳಲ್ಲಿ ನಿಯಮಿತ ಓದುವ ಹವ್ಯಾಸ ಬೆಳೆಯುತ್ತದೆ. ಇದು ವಿದ್ಯಾರ್ಥಿಯ ಮುಂದಿನ ಭವಿಷ್ಯ ಜೀವನವನ್ನು ಉಜ್ವಲಗೊಳಿಸುತ್ತದೆ.
- **ಸ್ವಯಂ ಅಧ್ಯಯನಕ್ಕೆ ಪ್ರೋತ್ಸಾಹ:** ಶಿಕ್ಷಕರ ಮೇಲೆ ವಿದ್ಯಾರ್ಥಿಗಳು ಪೂರ್ಣ ಅವಲಂಬಿತವಾಗದೇ, ಸ್ವತಃ ವಿಷಯಗಳನ್ನು ಹುಡುಕಿ, ಅನ್ವೇಷಿಸಿ ಕಲಿಯುವ ಸಾಮರ್ಥ್ಯವನ್ನು ಗ್ರಂಥಾಲಯ ಬೆಳೆಸುತ್ತದೆ.
- **ನೈತಿಕ ಮತ್ತು ಮೌಲ್ಯ ಶಿಕ್ಷಣ:** ನೀತಿ ಕಥೆಗಳು, ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳು ಮಕ್ಕಳಲ್ಲಿ ಪ್ರಾಮಾಣಿಕತೆ, ಶಿಸ್ತು, ಸಹನೆ, ಮಾನವೀಯತೆ ಮುಂತಾದ ಮೌಲ್ಯಗಳನ್ನು ಬೆಳೆಸುತ್ತವೆ. ಉದಾಹರಣೆ ಮಹಾತ್ಮಾ ಗಾಂಧೀಜಿಯವರನ್ನು ಪ್ರಭಾವಿಸಿದ ಜಾನ್ ರಸ್ಕಿನ್ ಅವರ ಅನ್ ಟು ದಿ ಲಾಸ್ಟ್ ಗ್ರಂಥ. ಅವರ ಚಿಂತನೆಗಳ ಮೇಲೆ ಆಳವಾದ ಪ್ರಭಾವ ಬೀರಿತು.
- **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಗೆ ಬುನಾದಿ:** ಇಲ್ಲಿ ಲಭ್ಯವಿರುವ ಸಾಮಾನ್ಯ ಜ್ಞಾನ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ವಿಷಯಗಳು, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಸುಧಾ, ಕರ್ಮವೀರ, ತರಂಗ, ಮಾಸ, ಪಾಕ್ಷಿಕ ಮತ್ತು ಸಪ್ತಾಹಿಕ ಪತ್ರಿಕೆಗಳು, ಮಕ್ಕಳಿಗೆ ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ದಾರಿದೀಪವಾಗುತ್ತದೆ.
- **ಭಾಷಾ ಮತ್ತು ಅಭಿವ್ಯಕ್ತಿ ಕೌಶಲ್ಯ ಸುಧಾರಣೆ:** ಓದುವಿಕೆ ಮಕ್ಕಳ ಪದ ಸಂಪತ್ತನ್ನು ಹೆಚ್ಚಿಸಿ, ಬರವಣಿಗೆ ಮತ್ತು ಮಾತುಗಾರಿಕೆಯನ್ನು ಉತ್ತಮಗೊಳಿಸುತ್ತದೆ. ಮಾತಿಗಿಂತ ಓದು ಮಿಗಿಲು
- **ಮೊಬೈಲ್ ವ್ಯಸನದಿಂದ ಬಿಡುಗಡೆ:** ಮಕ್ಕಳು ಅತಿಯಾಗಿ ಮೊಬೈಲ್ ಬಳಸುವುದನ್ನು ಪುಸ್ತಕ ಓದುವ ಹವ್ಯಾಸ ಸಾಧ್ಯವಾದಷ್ಟು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.
- **ಡಿಜಿಟಲ್ ಸಂಪನ್ಮೂಲಗಳ ಬಳಕೆ:** ಇ-ಪುಸ್ತಕಗಳು, ಆಡಿಯೋ ಪುಸ್ತಕಗಳು, ಪಠ್ಯ ಹಾಗೂ ಪಠ್ಯೇತರ ವಿಷಯಕ್ಕೆ ಸಂಬಂಧಿತ ವಿಡಿಯೋಗಳ ಬಳಕೆಯಿಂದ ಗ್ರಂಥಾಲಯ ಇನ್ನಷ್ಟು ಆಕರ್ಷಕವಾಗುತ್ತದೆ.

ಶಾಲಾ ಗ್ರಂಥಾಲಯವು ಮಕ್ಕಳ ಜೀವನ ದಲ್ಲಿ ಪರೋಕ್ಷ ಶಿಕ್ಷಕನಂತೆ ಕಾರ್ಯನಿರ್ವಹಿ ಸುತ್ತದೆ. ಇದು ಮಕ್ಕಳನ್ನು ಜ್ಞಾನಿಗಳಾಗಿಸು ವುದರ ಜೊತೆಗೆ ಉತ್ತಮ ನಾಗರಿಕರನ್ನಾಗಿಸುತ್ತದೆ. ಜೊತೆಗೆ ಭಾಷಾ ಪ್ರೌಢಿಮೆ ಬೆಳೆಸಿ ಸಾಹಿತ್ಯ ಕೃಷಿಗೂ ವಿದ್ಯಾರ್ಥಿಗಳನ್ನು ರೂಪುಗೊಳಿಸುವ ಜ್ಞಾನದ ಕಾರ್ಖಾನೆಯಾಗಿ ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ಪ್ರತಿಯೊಂದು ಶಾಲೆಯಲ್ಲೂ ಸುಸಜ್ಜಿತ ಮತ್ತು ಚೈತನ್ಯಮಯ ಗ್ರಂಥಾಲಯ ಇರಬೇಕು. ಹಾಗೂ ವರ್ತಮಾನ ಕಾಲಕ್ಕೆ ತಕ್ಕಂತೆ ಶಾಲಾ ಗ್ರಂಥಾಲಯವನ್ನು ಸುಧಾರಿಸುತ್ತಾ ಮತ್ತಷ್ಟು ಅತ್ಯುತ್ತಮ ಗ್ರಂಥಾಲಯವನ್ನು ನಿರ್ಮಿಸಬೇಕು.

ಜನಪ್ರಿಯ ಮಾತೊಂದಿದೆ: Today reader tomorrow leader ಎಂಬ ಮಾತಿನಂತೆ ಭವಿಷ್ಯದ ನಾಯಕನನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಸಹ ಗ್ರಂಥಾಲಯದ ಜ್ಞಾನವನ್ನು ಉಣಬಡಿಸುವುದರ ಮೂಲಕ ಶಿಕ್ಷಕರು ಶಾಲಾ ಗ್ರಂಥಾಲಯವನ್ನು ಭವಿಷ್ಯದ ವಿದ್ಯಾರ್ಥಿಗಳ ಜೀವನವನ್ನು ಪ್ರಕರವಾಗಿ ಬೆಳಗಿಸುವ ಜ್ಞಾನ ದೀವಿಗೆಯಂತೆ ಬಳಸಿಕೊಳ್ಳುವ ಅವಶ್ಯಕತೆ ಇದೆ.

ಇಂದು ಶ್ರೀಸತ್ಯಧ್ಯಾನತೀರ್ಥರ ಆರಾಧನೆ

● **ಮನೋಹರ ಜೋಶಿ**, ಬೆಂಗಳೂರು



ಶ್ರೀಉತ್ತರಾದಿಮಠದ ಪರಂಪರೆಯಲ್ಲಿ ಬಂದ ವಿಭೂತಿ ಪುರುಷರು ಶ್ರೀಸತ್ಯಧ್ಯಾನತೀರ್ಥ ಶ್ರೀಪಾದರು. ಇಪ್ಪತ್ತನೇ ಶತಮಾನದ ಪೂರ್ವಾರ್ಧಕ್ಕೆ ಶ್ರೀಸತ್ಯಧ್ಯಾನ ಯುಗವೆಂದೇ ಪ್ರಚಲಿತ ವಾಗಿತ್ತು. ಸಾವಿರಾರು ಜನರಿಗೆ ನಿತ್ಯ ಅನ್ನದಾನ ಮಾಡುತಿದ್ದರು. ಸಮಾಜದಲ್ಲಿನ ಸಕಲರಿಗೂ ಅನ್ನದಾನ ಹಾಗೂ ಜ್ಞಾನದಾನ ಮಾಡಿ ತಣಿಸಿದ ಅಪರೂಪದ ಸನ್ಯಾಸಿಗಳು. ವೈಷ್ಣವ ಸಮಾಜದ ಶಕ ಪುರುಷರು.

ಶಕ ಪುರುಷರು: ಶತಮಾನದ ಶಕ ಪುರುಷರು ಶ್ರೀಸತ್ಯಧ್ಯಾನತೀರ್ಥರು. ಉತ್ತರಾದಿಮಠದ ಸಂಸ್ಥಾನಾಧಿಪತಿಗಳಾಗಿ ವೈಷ್ಣವ ಸಿದ್ಧಾಂತ ಪ್ರಸರಣಕ್ಕೆ ಕಾರಣೀಭೂತರಾದ ಯತಿ ಚಕ್ರವರ್ತಿಗಳು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ಕೊರ್ಲಹಳ್ಳಿ ಮನೆತನ ಜ್ಞಾನಕ್ಕೆ, ಪಾಂಡಿತ್ಯಕ್ಕೆ, ವಿದ್ಯೆಗೆ, ದಾನಕ್ಕೆ ಹೆಸರುವಾಸಿ. ಇಂಥ ಕೊರ್ಲಹಳ್ಳಿ ಮನೆತದಲ್ಲಿ ಕ್ರಿಸ್ತಶಕ 1872ರ ಅಂಗೀರಸ ನಾಮಸಂವತ್ಸರದ ಮಾರ್ಗಶೀರ್ಷ ಮಾಸದ ನವಮಿ ಶುಭದಿನದಂದು ಜಗವ ಬೆಳಗುವ ದೇವಾಂಶ ಸಂಭೂತರ ಜನವಾಯಿತು. ಪೂರ್ವಾಶ್ರಮದ ನಾಮ ಸೇತುರಾಮ, ತಂದೆ ಪೂಜ್ಯ ಜಯಾಚಾರ್ಯರು, ಶ್ರೀಸತ್ಯಜ್ಞಾನತೀರ್ಥರಿಂದ ಸನ್ಯಾಸ ಪಡೆದು, ಶ್ರೀಸತ್ಯಧ್ಯಾನತೀರ್ಥರಾಗಿ ಉತ್ತರಾದಿ ಮಠದ ವೇದಾಂತ ಸಾಮ್ರಾಜ್ಯಾಧಿಪತಿಗಳಾಗಿ ಮೆರೆದರು.

ಪದಬಂಧ

● **ಸಿ.ರವಿಶಂಕರ ಶಾಸ್ತ್ರಿ, ದಂಬೆ**



ಎಡದಿಂದ ಬಲಕ್ಕೆ

1. ರಾಕ್ಷಸ ಶಿಲ್ಪಿಯ ಹೆಸರು (2)
2. ಅಸ್ತವ್ಯಸ್ತವಾಗಿ ಬಂದಿರುವ ಸಹಾಯ (3)
4. ಇದೊಂದು ಪುಟ್ಟ ಹಕ್ಕಿ (2)
8. ಕಾಣದಿರುವುದಕ್ಕೆ ನೆಪ (3)
9. ಪಿರಿಪಿರಿ ಮಾಡಿದ್ದಕ್ಕೆ ಹೂಡಿದ ಒಳಸಂಚು (3)
10. ಹೆಚ್ಚಿನ ಬಿಸಿಲಿನಿಂದಾಗಿ ಚರ್ಮದಲ್ಲಿ ಉಂಟಾಗುವ ಗುಳ್ಳೆ (5)
14. ಒಂದೇ ರೀತಿಯ ಕೆಲಸ ಮಾಡುವುದರಿಂದ ಉಂಟಾಗುವ ಬೇಸರ (5)
18. ಸುತ್ತಿಕೊಂಡಿರುವುದು (3)
19. ಹುತ್ತಕ್ಕೆ ಮತ್ತೊಂದು ಹೆಸರು (3)
20. ನಮಗಾಗುವ ಆಯಾಸ, ಬಳಲಿಕೆ (2)
21. ಅಣ್ಣ ಮಾಡಿದ ಆಜ್ಞೆ (3)
22. ವಿಕ್ರಯಿಸು ಅಥವಾ ನಾಲ್ಕು ಮೊಳದ ಉದ್ದ (2)

ಮೇಲಿಂದ ಕೆಳಕ್ಕೆ

1. ಮಾಮ ತೋರಿದ ಪ್ರೀತಿ (4)
3. ಪೂರ್ಣವಾಗು ಅಥವಾ ಈಡೇರು (4)
5. ಒಂದು ದೇಶದ ಪ್ರಜೆ (4)
6. ಮಳೆಗಾಲದಲ್ಲಿ ಸಾಮಾನ್ಯವಾಗಿ ಕಾಣಸಿಗುವ ನಾಯಿಕೊಡೆ (3)
7. ಕಂದು ಬಣ್ಣದ ಹಸುವಿಗೆ ಹೀಗೆನ್ನಬಹುದಲ್ಲ (3)
11. ವ್ಯಾಪಾರ ಮಾಡುವವನು ಈತ (3)
12. ಸಾಮಗ್ರಿಯೂ ಆಗಬಲ್ಲ ಪರಿಶ್ರಮ (3)
13. ಎಳೆಯ ಮಗು ಆಕಳಿನೊಂದಿಗೆ ಬಂದಿದೆ (4)
14. ಉನ್ನತಿ, ಅಭಿವೃದ್ಧಿ (3)
15. ನಟ ನಟಿಯರ ಸಮೂಹಕ್ಕೆ ಹೀಗೆನ್ನಬಹುದು (4)
16. ಹೊಟ್ಟೆಯ ಸಹಾಯದಿಂದ ಸರಿ (3)
17. ಅಡ್ಡಿ, ಆಕ್ಷೇಪಣೆ (4)

ಸರಿಯುತ್ತರಗಳು

ಕನ್ನಡಿ ಮತ್ತು ಕಲೆಯ ಭ್ರಮೆ: ಅಷ್ಟಾವಕ್ರ ಗೀತೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಮ್ಮೆ ಒಬ್ಬ ರಾಜ ತೀವ್ರವಾದ ಮಾನಸಿಕ ಆತಂಕದಲ್ಲಿದ್ದ. ಅವನ ಬಳಿ ಎಲ್ಲವೂ ಇತ್ತು-ರಾಜ್ಯ, ಸಂಪತ್ತು, ಸೌಂದರ್ಯ. ಆದರೂ ಅವನು ಇನ್ನೂ ಏನೋ ಬೇಕು ಎಂಬ ಹಂಬಲದಲ್ಲಿದ್ದ. ಅಷ್ಟಾವಕ್ರ ಮುನಿಗಳ ಬಳಿ ಹೋಗಿ, ಮುನಿಗಳೇ, ನನ್ನ ಆಸೆಗಳನ್ನು ನಾನು ಹೇಗೆ ನಿಯಂತ್ರಿಸಲಿ? ಅವು ನನ್ನನ್ನು ಬಂಧಿಸಿವೆ ಎಂದು ಕೇಳಿಕೊಂಡ.ಅಷ್ಟಾವಕ್ರರು ನಸುನಕ್ಕು ಅವನನ್ನು ಒಂದು ದೊಡ್ಡ ಕನ್ನಡಿಯ ಮುಂದೆ ನಿಲ್ಲಿಸಿದರು. ಆ ಕನ್ನಡಿಯಲ್ಲಿ ರಾಜನ ಮುಖದ ಮೇಲೆ ಸ್ವಲ್ಪ ಮಸಿ ಇತ್ತು. ಅಷ್ಟಾವಕ್ರರು ಹೇಳಿದರು, ರಾಜನೇ, ಆ ಕನ್ನಡಿಯ ಮೇಲೆ ನಿನ್ನ ಬಿಂಬಕ್ಕೆ ಹತ್ತಿರುವ ಮಸಿಯನ್ನು ಅಳಿಸಲು ಪ್ರಯತ್ನಿಸು.

ರಾಜ ಗಾಬರಿಯಿಂದ ಕನ್ನಡಿಯ ಮೇಲೆ ಕೈ ಆಡಿಸಿದ. ಎಷ್ಟು ಅಳಿಸಿದರೂ ಕನ್ನಡಿಯ ಮೇಲಿನ ಆ ಕಲೆ ಹೋಗಲಿಲ್ಲ. ರಾಜನಿಗೆ ಸಿಟ್ಟು ಬಂತು, ಮುನಿಗಳೇ, ಕನ್ನಡಿಯ ಮೇಲಿರುವ ಕಲೆಯನ್ನಲ್ಲ, ನನ್ನ ಮುಖದ ಮೇಲಿರುವ ಮಸಿಯನ್ನು ನಾನು ತೊಳೆದುಕೊಳ್ಳಬೇಕು. ಆಗಷ್ಟೇ ಬಿಂಬ ಸರಿಯಾಗುತ್ತದೆ ಎಂದ!

ಅಷ್ಟಾವಕ್ರರು ಗಂಭೀರವಾಗಿ ಹೇಳಿದರು: ನಿನ್ನ ಆಸೆಗಳೂ ಹಾಗೆಯೇ. ನೀನು ಆಸೆಗಳನ್ನು ಹೊರಗಿನ ವಸ್ತುಗಳಲ್ಲಿ ಅಥವಾ ನಿನ್ನ ವ್ಯಕ್ತಿತ್ವದಲ್ಲಿ ಹುಡುಕುತ್ತಿದ್ದೀಯ. ಆದರೆ ನಿಜವಾದ ಮಸಿ ಇರುವುದು 'ನಾನು ಸುಖಿಯಾಗಲು ಇದು ಬೇಕು' ಎಂದು ನೀನು ನಿನ್ನನ್ನು ಗುರುತಿಸಿಕೊಂಡಿದ್ದೀಯಲ್ಲ, ಆ ತಪ್ಪಾದ ಅರಿವಿನಲ್ಲಿ. ನೀನು ಆಸೆಯನ್ನು ಹೊರಗೆ ಎದುರಿಸುತ್ತಿಲ್ಲ, ನೀನೇ ಆಸೆಯಾಗಿ ಬದಲಾಗಿದ್ದೀಯ. ಅಲ್ಲಿಯವರೆಗೆ ರಾಜ ತನ್ನನ್ನು ತಾನು ಬಾಧಿತ ವ್ಯಕ್ತಿ ಎಂದು ಅಂದುಕೊಂಡಿದ್ದ. ಆದರೆ ಅಷ್ಟಾವಕ್ರರ ಮಾತು ಅವನನ್ನು ಎಚ್ಚರಿಸಿತು. ಆ ಕ್ಷಣದಲ್ಲಿ ಅವನಿಗೆ ಅರಿವಾಯಿತು -ಸಮಸ್ಯೆ ಆಸೆಗಳಲ್ಲ, ನಾನು ಈ ದೇಹ, ನಾನು ಈ ಮನಸ್ಸು, ನಾನು ಈ ಆಸೆ ಎಂಬ ತಪ್ಪಾದ ಗುರುತಿಸುವಿಕೆ. ಅಷ್ಟಾವಕ್ರ ಗೀತೆಯು ನಮಗೆ ಕಲಿಸುವುದು ಜೀವನವನ್ನು ಸುಧಾರಿಸುವುದನ್ನಲ್ಲ, ಬದಲಾಗಿ ಸುಧಾರಿಸಲು ಯತ್ನಿಸುತ್ತಿರುವ ಆ ಸುಳ್ಳು 'ನಾನು' ಎಂಬ ಅಸ್ಮಿತೆಯನ್ನು ಕಳೆದುಕೊಳ್ಳುವುದನ್ನು.

ಅಷ್ಟಾವಕ್ರ ಗೀತೆಯ ಮೊದಲ ಅಧ್ಯಾಯದಲ್ಲಿದೆ:

ಮುಕ್ತಾಭಿಮಾನೀ ಮುಕ್ತೋ ಹಿ ಬದ್ಧೋ ಬದ್ಧಾಭಿಮಾನಿನಃ ।
ಕಿಂವದಂತೀಹ ಸತ್ಯೇಯಂ ಯಾ ಮತಿಃ ಸಾ ಗತಿರ್ಭವೇತ್ ॥
(ಅಷ್ಟಾವಕ್ರ ಗೀತಾ – 1.1.1)

ಅಷ್ಟಾವಕ್ರರು ಇಲ್ಲಿ ದೊಡ್ಡ ಸತ್ಯವೊಂದನ್ನು ಬಿಚ್ಚಿಡುತ್ತಾರೆ. ನೀವು ನಾನು ಪಾಪಿ, ನಾನು ಆಸೆಬುರುಕ, ನಾನು ಸಂಸಾರಿ ಎಂದು ನಿಮ್ಮನ್ನು ನೀವು ಒಂದು ಚೌಕಟ್ಟಿಗೆ ಹಾಕಿಕೊಂಡ ತಕ್ಷಣ, ಆ ಚೌಕಟ್ಟೇ ನಿಮ್ಮ ಪಂಜರವಾಗುತ್ತದೆ. ನೀವು ಆಸೆಯನ್ನು ಬಿಡಲು ಹೋರಾಡುತ್ತಿದ್ದೀರಿ ಎಂದರೆ, ನೀವು ಈಗಾಗಲೇ ನಾನು ಆಸೆ ಉಳ್ಳವನು ಎಂದು ಒಪ್ಪಿಕೊಂಡಿದ್ದೀರಿ ಎಂದರ್ಥ. ನಿಮ್ಮ ಮತಿ (ಬುದ್ಧಿ/ನಂಬಿಕೆ) ಹೇಗಿದೆಯೋ ನಿಮ್ಮ ಸ್ಥಿತಿಯೂ ಹಾಗೆಯೇ ಇರುತ್ತದೆ. ನೀವು ನಿಮ್ಮನ್ನು ದೇಹ ಮತ್ತು ಮನಸ್ಸಿನಿಂದ ಬೇರ್ಪಡಿಸಿ ನಾನು ಕೇವಲ ಸಾಕ್ಷಿ ಚೈತನ್ಯ ಎಂದು ಅರಿತ ಕ್ಷಣದಲ್ಲಿ, ಯಾವ ಆಸೆಯೂ ನಿಮ್ಮನ್ನು ಮುಟ್ಟಲಾರದು. ಏಕೆಂದರೆ ಆಸೆ ಇರುವುದು ಮನಸ್ಸಿಗೆ, ಆತ್ಮಕ್ಕಲ್ಲ. ಈ ಶ್ಲೋಕವು 'ಸುಧಾರಣೆ'ಯ ಬಗ್ಗೆ ಮಾತನಾಡುವುದಿಲ್ಲ. ನೀವು ಕೆಟ್ಟವರಿಂದ ಒಳ್ಳೆಯವರಾಗಿ ಎಂದು ಅಷ್ಟಾವಕ್ರರು ಹೇಳುತ್ತಿಲ್ಲ. ಬದಲಾಗಿ, ನೀವು ಮೊದಲೇ ಮುಕ್ತರು, ಆದರೆ ನೀವು ಬಂಧಿತರೆಂದು ಭ್ರಮೆಯಲ್ಲಿದ್ದೀರಿ ಎಂದು ನೆನಪಿಸುತ್ತಿದ್ದಾರೆ. ನಾವು ನಮ್ಮನ್ನು ಯಾವುದರ ಜೊತೆ ಗುರುತಿಸಿಕೊಳ್ಳುತ್ತೇವೆಯೋ ಅದೇ ನಮ್ಮ ಸಂಕೋಲೆಯಾಗುತ್ತದೆ. ಒಂದು ಹಳೆಯ ಗಾದೆ ಮಾತಿದೆ – 'ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ' ಅಂದರೆ, ಮನುಷ್ಯನ ಬುದ್ಧಿ ಅಥವಾ ಆಲೋಚನೆ ಹೇಗಿರುತ್ತದೆಯೋ, ಅವನ ಗತಿಯೂ ಹಾಗೆಯೇ ಆಗುತ್ತದೆ. ಇಂದಿನ ದಿನಗಳಲ್ಲಿ ಪ್ರಾಪಂಚಿಕ ವಸ್ತುಗಳಲ್ಲಿ ಸುಖವನ್ನು ಅರಸುತ್ತಿರುವ ನಾವು, ಬೇರೆಯವರನ್ನು ಮೆಚ್ಚಿಸಲು ನಮ್ಮದಲ್ಲದ ಬದುಕನ್ನು ಆವಾಹಿಸಿಕೊಂಡಿರುವ ನಮ್ಮಂಥವರಿಗೆ ಈ ಮಾತುಗಳು ದೊಡ್ಡ ಪಾಠ. ಆದ್ದರಿಂದಲೇ ನಮ್ಮ ಆಲೋಚನೆಗಳನ್ನ ಹಿಡಿತದಲ್ಲಿರಿಸಿಕೊಂಡು ಆಸೆಗಳ ಮೂಲವನ್ನು ಅರ್ಥ ಮಾಡಿಕೊಂಡು ಅವುಗಳಿಂದ ಬೇರ್ಪಟ್ಟಾಗ ಜೀವನ ಸರಳವಾಗುತ್ತದೆ.



ಸಮಾಚಾರ ಸಣ್ಣದಲ್ಲ

ಕಾನರ್ ಅರ್ಧಶತಕ: ದ.ಆಫ್ರಿಕಾಕ್ಕೆ ಟಿ20 ಸರಣಿ

ಕ್ರೈಸ್ಟ್‌ಚರ್ಚ್: ಕಾನರ್ ಎಸ್ಟರ್‌ಹುಯಿಝುನ್ ಅವರ ಮಿಂಚಿನ ಅರ್ಧಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ಬುಧವಾರ ನಡೆದ ಐದನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 33 ರನ್‌ಗಳಿಂದ ಸೋಲಿಸಿತು, ಇದರ ಜತೆಯಲ್ಲೇ ಐದು ಪಂದ್ಯಗಳ ಸರಣಿಯನ್ನು 3-2ರಿಂದ ಗೆದ್ದುಕೊಂಡಿತು.

ಭಾನುವಾರ ನಡೆದ ನಾಲ್ಕನೇ ಪಂದ್ಯದಲ್ಲಿ 57 ರನ್ ಬಾರಿಸಿದ್ದ ಕಾನರ್ ಅಂತಿಮ ಪಂದ್ಯದಲ್ಲಿ ಮತ್ತೊಂದು ಅರ್ಧ ಶತಕ ಗಳಿಸಿದರು. ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ದಕ್ಷಿಣ ಆಫ್ರಿಕಾ 4 ವಿಕೆಟ್‌ಗೆ 187 ರನ್ ಗಳಿಸಿತು. ಉತ್ತರವಾಗಿ ನ್ಯೂಜಿಲೆಂಡ್ 8 ವಿಕೆಟ್‌ಗೆ 154 ರನ್ ಗಳಿಸಲಷ್ಟೇ ಶಕ್ತವಾಯಿತು. ದ.ಆಫ್ರಿಕಾ ಎಚ್ಚರಿಕೆಯ ಆಟವನ್ನು ಪ್ರಾರಂಭಿಸಿತು. ಪವರ್‌ಪ್ಲೇ ಕೊನೆಗೆ 1 ವಿಕೆಟ್‌ಗೆ 43 ರನ್ ಗಳಿಸಿದ್ದ ತಂಡ 10 ಓವರುಗಳ ಬಳಿಕ 2 ವಿಕೆಟ್‌ಗೆ 76 ರನ್‌ಗಳ ಸಾಧಾರಣ ಮೊತ್ತ ಗಳಿಸಿತ್ತು, ಆದರೆ ಕೊನೆಯ 10 ಓವರುಗಳಲ್ಲಿ ಕಾನರ್ ಎಸ್ಟರ್‌ಹುಯಿಝುನ್ ರನ್ ವೇಗ ಹೆಚ್ಚಿಸಿದರು. ನ್ಯೂಜಿಲೆಂಡ್ ಪರ ಬೆವನ್ ಜೇಕಬ್ (36 ರನ್, 19ಎಸೆತ) ಮಾತ್ರ ಸ್ವಲ್ಪ ಹೋರಾಟ ತೋರಿದರು.

ಸಾಮಾಜಿಕ ಮಾಧ್ಯಮದಲ್ಲಿ ಅನನ್ಯಾ ಬಿರ್ಲಾ ಸಂಚಲನ

ಮುಂಬೈ: ಐಪಿಎಲ್‌ನ ಆರ್‌ಸಿಬಿ ಫ್ರಾಂಚೈಸಿಯನ್ನು ಖರೀದಿಸಿದ್ದ ಬಿರ್ಲಾ ಗ್ರೂಪ್ ಸಿಇಒ ಆರ್ಯಮಾನ್ ಬಿರ್ಲಾ ಅವರ ಸಹೋದರಿ ಅನನ್ಯಾ ಬಿರ್ಲಾ ಸಾಮಾಜಿಕ ಮಾಧ್ಯಮದಲ್ಲಿ ಸಂಚಲನ ಸೃಷ್ಟಿಸಿ ಮಿಂಚಲಾರಂಭಿಸಿದ್ದಾರೆ. ಭಾರತದ ಪ್ರಭಾವಶಾಲಿ ಉದ್ಯಮ ಕುಟುಂಬವಾಗಿರುವ ಬಿರ್ಲಾ ಕುಟುಂಬದ ಕುಡಿಯಾಗಿರುವ ಅನನ್ಯಾ ಬಿರ್ಲಾ ಅವರು ಉದ್ಯಮಿ, ಗಾಯಕಿ ಮತ್ತು ಹೂಡಿಕೆದಾರದಾಗಿ ವಾಣಿಜ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರು ಆದಿತ್ಯ ಬಿರ್ಲಾ ಗ್ರೂಪ್‌ನ ಅಧ್ಯಕ್ಷರಾದ ಕುಮಾರ್ ಮಗಳಂ ಬಿರ್ಲಾ ಅವರ ಹಿರಿಯ ಪುತ್ರಿ, ಮಾತ್ರವಲ್ಲ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲು ಸಿದ್ಧರಾಗಿರುವ ಆರ್ಯಮಾನ್ ಬಿರ್ಲಾ ಅವರ ಸಹೋದರಿಯಾಗಿದ್ದಾರೆ. ಈ ಐಪಿಎಲ್ ಬಳಿಕ ಆರ್‌ಸಿಬಿ ಮಾಲೀಕತ್ವ ಬದಲಾಗುವುದರಿಂದ ಈ ಐಪಿಎಲ್ ಟೂರ್ನಿಯಿಂದಲೇ ಅನ್ಯನ್ಯಾ ಮಿಂಚುವುದು ಖಚಿತ ಎಂದು ಸಾಮಾಜಿಕ ಜಾಲತಾಣದಲ್ಲಿ ಹಲವರು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಶನಿವಾರದ ಐಪಿಎಲ್ ಪಂದ್ಯದ ಟಿಕೆಟ್ ಪಡೆಯಲು ಸಾಧ್ಯವಾಗದ್ದಕ್ಕೆ ಫ್ರಾಂಚೈಸಿ ವಿರುದ್ಧ ಅಭಿಮಾನಿಗಳ ಕಿಡಿ

ಟಿಕೆಟ್ ಅಲಭ್ಯ: ಆರ್‌ಸಿಬಿ ಅಭಿಮಾನಿಗಳಿಂದ ಆಕ್ರೋಶ

ಬೆಂಗಳೂರು: ಇದೇ ಶನಿವಾರದಂದು ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಆರ್‌ಸಿಬಿ-ಹೈದರಾಬಾದ್ ನಡುವಿನ ಐಪಿಎಲ್ ಉದ್ಘಾಟನಾ ಪಂದ್ಯದ ಟಿಕೆಟ್‌ಗಳ ಮಾರಾಟವನ್ನು ಮಂಗಳವಾರವೇ ಆರ್‌ಸಿಬಿ ತನ್ನ ಆ್ಯಪ್ ಮತ್ತು ವೆಬ್‌ಸೈಟ್‌ನಲ್ಲಿ ಬಿಡುಗಡೆಗೊಳಿಸಿತ್ತು.

ಆದರೆ ಪಂದ್ಯದ ಟಿಕೆಟ್‌ಗಳು ಕೇವಲ ಒಂದು ತಾಸಿನೊಳಗೆ ಆನ್‌ಲೈನ್ ಟಿಕೆಟ್‌ಗಳು ನಿಂತುಹೋದವು. ಹೀಗಾಗಿ ಆನ್‌ಲೈನ್‌ನಲ್ಲಿ ಟಿಕೆಟ್ ಖರೀದಿಸುವಲ್ಲಿ ವಿಫಲರಾದ ಆರ್‌ಸಿಬಿ ಅಭಿಮಾನಿಗಳು ಮ್ಯಾನೇಜ್‌ಮೆಂಟ್ ವಿರುದ್ಧ ಕಿಡಿಕಾರಿದ್ದಾರೆ. ದಿನವಿಡಿ ಕಾದು ಕುಳಿತರೂ ಆನ್‌ಲೈನ್‌ನಲ್ಲಿ ಟಿಕೆಟ್ ಪಡೆಯಲು ಸಾಧ್ಯವಾಗಲಿಲ್ಲ ಎಂಬಂತೆ ಕೆಲ ಅಭಿಮಾನಿಗಳು ತಮ್ಮ ಅಳಲನ್ನೂ ತೋಡಿಕೊಂಡಿದ್ದಾರೆ.

ಟಿಕೆಟ್ ಪಡೆಯುವಲ್ಲಿ ವಿಫಲರಾದ ಸಾವಿರಾರು ಅಭಿಮಾನಿಗಳು ದಿನವಿಡೀ ಆರ್‌ಸಿಬಿ ವೆಬ್‌ಸೈಟ್ ರಿಫ್ರೆಷ್ ಮಾಡಿದರೂ ಟಿಕೆಟ್ ಪಡೆಯಲು ಸಾಧ್ಯವಾಗದ ಕಾರಣ ತುಂಬಾ ನಿರಾಶೆ ತೋಡಿಕೊಂಡಿದ್ದಾರೆ. ಸಿಟ್ಟಿಗೆದ್ದ ಹಲವರು ಸೋಶಿಯಲ್ ಮೀಡಿಯಾ ಮೂಲಕ ಬೆಂಗಳೂರು ತಂಡದ ವಿರುದ್ಧ ಹರಿಹಾಯ್ದಿದ್ದು, 'ಆರ್‌ಸಿಬಿ ತಂಡವನ್ನು ಬಾಯ್ಕಟ್ ಮಾಡಿ, ಪ್ರಾಮಾಣಿಕ ಅಭಿಮಾನಿಗಳಿಗೆ ಟಿಕೆಟ್ ಪಡೆಯುವ ವಿಷಯದಲ್ಲಿ ಮೋಸ ಮಾಡಲಾಗುತ್ತಿದೆ' ಎಂದು ಮ್ಯಾನೇಜ್‌ಮೆಂಟ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಅಭಿಮಾನಿಗಳನ್ನು ಮೂರ್ಖರನ್ನಾಗಿ ಮಾಡಲು ಇದು ಒಳ್ಳೆಯ ಮಾರ್ಗ. ಸಮಯದ ಮಾಹಿತಿ ಸೇರಿದಂತೆ ಎಲ್ಲದರ ಮಾಹಿತಿಯನ್ನು ರಹಸ್ಯವಾಗಿ ಒಳಗೆ ಇರುವವರಿಗೆ ಹಾಗೂ

ಬ್ಲ್ಯಾಕ್‌ನಲ್ಲಿರುವವರಿಗೆ ನೀಡಲಾಗುತ್ತಿದೆ. ಟಿಕೆಟ್‌ಗಳನ್ನು ಬಿಟ್ಟ ಕೆಲವೇ ನಿಮಿಷಗಳಲ್ಲಿ ಎಲ್ಲವೂ ಸೋಲ್ಡ್ ಆಗಿವೆ, ಹಾಗಾಗಿ ನಿಜವಾದ ಅಭಿಮಾನಿಗಳಿಗೆ ಟಿಕೆಟ್ ಸಿಕ್ಕಿಲ್ಲ' ಎಂದು ಅಭಿಮಾನಿಯೊಬ್ಬರು ಕಿಡಿಕಾರಿದ್ದಾರೆ.

'ನಿಮ್ಮ ಬ್ಲ್ಯಾಕ್ ಮಾರ್ಕೆಟಿಂಗ್‌ಗಾಗಿ, ಟಿಕೆಟ್‌ಗಳಿಗಾಗಿ ನಿಜವಾದ ಅಭಿಮಾನಿಗಳನ್ನು ಕಿರುಕುಳ ಮತ್ತು ಮಾನಸಿಕವಾಗಿ ಹಿಂಸಿಸುತ್ತಿರುವುದಕ್ಕೆ ಆರ್‌ಸಿಬಿಗೆ ನಾಚಿಕೆಯಾಗಬೇಕು' ಎಂದು ಮತ್ತೊಬ್ಬರು ಅಭಿಮಾನಿ ಟೀಕಿಸಿದ್ದಾರೆ.

ಆರ್‌ಸಿಬಿ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಪಂದ್ಯದ ಟಿಕೆಟ್‌ಮಾರಾಟದ ಲಭ್ಯತೆಯ ಬಗ್ಗೆ ಎಂದು ಬೆಂಗಳೂರು ಫ್ರಾಂಚೈಸಿ ಮಂಗಳವಾರ ಬೆಳಿಗ್ಗೆ ತನ್ನ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಾಕುವ ಮೂಲಕ ತಿಳಿಸಿತ್ತು, ಆದರೆ ಸಮಯದ ಮಾಹಿತಿ ನೀಡಿರಲಿಲ್ಲ. ಹಾಗಾಗಿ ಸಮಯವನ್ನೂ ಕೂಡಾ ಉಲ್ಲೇಖ ಮಾಡಿ ಎಂದು ಅಭಿಮಾನಿಗಳು ಆಗ್ರಹಿಸಿದ್ದರು. ಹೆಚ್ಚಿನವರು ಟಿಕೆಟ್ ಬುಕ್ ಮಾಡಲು ಎಷ್ಟೇ ಹರ ಸಾಹಸ ಪಟ್ಟರೂ ಸಾಧ್ಯವಾಗದ ಕಾರಣ ಟಿಕೆಟ್ ಖರೀದಿ ಪ್ರಯತ್ನದ ಸ್ಕ್ರೀನ್‌ಶಾಟ್ ಅನ್ನು ಕೂಡ ಕಾಮೆಂಟ್ ಬಾಕ್ಸ್‌ನಲ್ಲಿ ಹಾಕಿದ್ದರು.

ಭದ್ರತೆಗೆ 7 ಕೋಟಿ ರು. ಖರ್ಚು

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಹೈಟೆಕ್ ಭದ್ರತೆ ಮತ್ತು ಪ್ರೇಕ್ಷಕರ ನಿರ್ವಹಣೆಗಾಗಿ ಆರ್‌ಸಿಬಿ ಫ್ರಾಂಚೈಸಿ ಸುಮಾರು 7 ಕೋಟಿ ರು. ವ್ಯವಹಿಸಲಾಗಿದೆ ಎಂದು ತಂಡದ ಸಿಇಒ ರಾಜೇಶ್ ಮೆನನ್ ತಿಳಿಸಿದ್ದಾರೆ. ಕ್ರೀಡಾಂಗಣದ ಒಳಗೆ ಮತ್ತು ಹೊರಗೆ ಜನಸಂದಣಿಯನ್ನು ನಿರ್ವಹಿಸಲು 'ಜಾರ್ವಿಸ್' ಎಂಬ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಿಸಿಟಿವಿ ವ್ಯವಸ್ಥೆ ಜಾರಿಗೆ ತರಲಾಗಿದೆ. ಇದು ನೈಜ ಸಮಯದಲ್ಲಿ ಪೊಲೀಸ್ ಆಯುಕ್ತರ ಕಚೇರಿಗೆ ಮಾಹಿತಿ ನೀಡಲಿದೆ ಎಂದು ಮೆನನ್ ಮಾಹಿತಿ ನೀಡಿದ್ದಾರೆ. ಕಳೆದ ಐಪಿಎಲ್‌ನ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ಪ್ರಕರಣದ ಬಳಿಕ ರಾಜ್ಯ ಸರಕಾರ ನೇಮಿಸಿದ ತಜ್ಞರ ತಂಡವು ಸ್ಟೇಡಿಯಂ ನಿರ್ವಹಣೆ ಬಗ್ಗೆ ಮಾಡಿರುವ ಹಲವಾರು ಶಿಫಾರಸುಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ರಾಜಸ್ಥಾನ್ ರಾಯಲ್ಸ್ ಮಾರಾಟ: ಶೇನ್ ವಾರ್ನ್ ಕುಟುಂಬಕ್ಕೆ ಪಾಲು

ವಾರ್ನ್ ಕುಟುಂಬಕ್ಕೆ 450 ಕೋಟಿ

ದೆಹಲಿ: ರಾಜಸ್ಥಾನ್ ರಾಯಲ್ಸ್ ತಂಡವನ್ನು ಕಾಲ್ ಸೊಮಾನಿ ಸಮೂಹದ ಒಕ್ಕೂಟವು ರು.15,290 ಕೋಟಿಗೆ ಖರೀದಿಸಿದ ಬೆನ್ನಲ್ಲೇ, ತಂಡದ ಮಾಜಿ ಹಾಗೂ ದಿವಂಗತ ಆಟಗಾರ ಶೇನ್ ವಾರ್ನ್ ಕುಟುಂಬಕ್ಕೆ ಸುಮಾರು ರು.450 ಕೋಟಿ ರೂಪಾಯಿ ಸಿಗಲಿದೆ ಎಂದು ವರದಿಯಾಗಿದೆ.

2008ರಲ್ಲಿ ಐಪಿಎಲ್‌ನ ಮೊದಲ ಆವೃತ್ತಿಯಲ್ಲಿ ವಾರ್ನ್ ರಾಜಸ್ಥಾನ ರಾಯಲ್ಸ್ ತಂಡವನ್ನು ಮುನ್ನಡೆಸಿದ್ದರು. ಆಗ ಅವರು ಫ್ರಾಂಚೈಸಿ ಜತೆ ಕೇವಲ ಆಟಗಾರನಾಗಿ ಮಾತ್ರವಲ್ಲದೆ, ವ್ಯವಹಾರಿಕವಾಗಿಯೂ ಒಪ್ಪಂದವೊಂದನ್ನು ಮಾಡಿದ್ದರು. ಈ ಒಪ್ಪಂದದ ಪ್ರಕಾರ, ಅವರು ತಂಡಕ್ಕಾಗಿ ಆಡುವ ಪ್ರತಿ ವರ್ಷಕ್ಕೆ ರು.6 ಕೋಟಿ ಸಂಭಾವನೆಯ ಜತೆಗೆ ತಂಡದ ಮಾಲೀಕತ್ವದಲ್ಲೂ ಶೇ 0.75ರಷ್ಟು ಪಾಲು ಪಡೆದುಕೊಂಡಿದ್ದರು.

ಮೊದಲ ಆವೃತ್ತಿಯಲ್ಲೇ ತಂಡವನ್ನು ಚಾಂಪಿಯನ್ ಮಾಡಿದ ವಾರ್ನ್, ರಾಜಸ್ಥಾನ್ ಪರ ಒಟ್ಟು ನಾಲ್ಕು ಆವೃತ್ತಿಗಳನ್ನು ಆಡಿದ್ದರು. ಇದರಿಂದ ತಂಡದಲ್ಲಿ ಅವರ ಒಟ್ಟು ಪಾಲು 3%ಗೆ ಏರಿತು. ಈಗ ರಾಜಸ್ಥಾನ್ ರಾಯಲ್ಸ್ ತಂಡ ಮಾರಾಟವಾಗುತ್ತಿರುವುದರಿಂದ, ವಾರ್ನ್ ಹೊಂದಿದ್ದ ಈ 3% ಶೇರಿನ ಮೌಲ್ಯ ಸುಮಾರು

ರು.450ರಿಂದ ರು.460 ಕೋಟಿ ಆಗಲಿದೆ. ಇದೀಗ ಅವರ ಮಕ್ಕಳು ಇಕ್ವಿಟಿ ವರ್ಗಾವಣೆಯ ಮೂಲಕ ರು.450 ಕೋಟಿ ಹಣವನ್ನು ಫ್ರಾಂಚೈಸಿಯಿಂದ ಕೇಳುವ ಸಾಧ್ಯತೆ ಇದೆ.

2008ರಲ್ಲಿ ಮನೋಜ್ ಬದಾಲೆ ನೇತೃತ್ವದ ಎಮರ್ಜಿಂಗ್ ಮೀಡಿಯಾ ಸಂಸ್ಥೆ, ರಾಜಸ್ಥಾನ್ ತಂಡವನ್ನು ಕೇವಲ 67 ಮಿಲಿಯನ್ ಡಾಲರ್‌ಗೆ ಖರೀದಿಸಿತ್ತು. ಆಗ ತಂಡದ ಕ್ಯಾಪ್ಟನ್, ಕೋಚ್ ಮತ್ತು ಕ್ರಿಕೆಟ್ ಕಾರ್ಯಾಚರಣೆಗಳ ಮುಖ್ಯಸ್ಥ ಎಲ್ಲವೂ ವಾರ್ನ್ ಅವರೇ ಆಗಿದ್ದರು. 2019ರಲ್ಲಿ ಸಂದರ್ಶನವೊಂದರಲ್ಲಿ, ವಾರ್ನ್ ಅವರು ತಾವು ಆಡಿದ ಪ್ರತಿ ಋತುವಿನಲ್ಲಿ ರಾಜಸ್ಥಾನ ರಾಯಲ್ಸ್‌ನ 0.75% ಮಾಲೀಕತ್ವದ ಪಾಲು ನೀಡುವ ಒಪ್ಪಂದ ಆಗಿದೆ ಎಂದಿದ್ದರು.

ರಾಜಸ್ಥಾನ ರಾಯಲ್ಸ್ ಖರೀದಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಇನ್ನಷ್ಟೇ ಅನುಮೋದನೆ ನೀಡಬೇಕಿದೆ. ಪ್ರಸ್ತುತ ಐಪಿಎಲ್ ಟೂರ್ನಿ ನಂತರ ಬಿಸಿಸಿಐ ಅನುಮೋದನೆ ನೀಡುವ ಸಾಧ್ಯತೆ ಇದೆ.

ಐಪಿಎಲ್‌ನಿಂದ ಹಿಂದೆ ಸರಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭಿಕ ಆಟಗಾರನಿಗೆ ನಿರ್ಬಂಧ ಸಾಧ್ಯತೆ

ಬೆನ್ ಡಕೆಟ್‌ಗೆ ಎರಡು ವರ್ಷ ನಿಷೇಧ ಭೀತಿ

ದೆಹಲಿ: ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭಿಕ ಆಟಗಾರ ಬೆನ್ ಡಕೆಟ್ ಐಪಿಎಲ್‌ನಿಂದ ಹಿಂದೆ ಸರಿದ ಕಾರಣ ಎರಡು ವರ್ಷ ಲೀಗ್ ನಿಷೇಧ ಮತ್ತು ಹರಾಜಿನಲ್ಲಿ ಪಾಲ್ಗೊಳ್ಳುವುದಕ್ಕೆ ನಿರ್ಬಂಧದ ಭೀತಿ ಎದುರಾಗಿದೆ. ಕಳೆದ ಮಿನಿ ಹರಾಜಿನಲ್ಲಿ ಇಂಗ್ಲೆಂಡ್‌ನ ಡಕೆಟ್ ಅವರನ್ನು 2 ಕೋಟಿ ರು.ಗೆ ಡೆಲ್ಲಿ ಕ್ಯಾಪಿಟಲ್ಸ್ ಖರೀದಿಸಿತ್ತು.

ಕೆಎಲ್ ರಾಹುಲ್ ಜತೆಗೆ ಆರಂಭಿಕ ಸ್ಥಾನಕ್ಕೆ ಸ್ಪರ್ಧಿಸುವ ನಿರೀಕ್ಷೆಯಿತ್ತು. ಆದರೆ ಟೂರ್ನಮೆಂಟ್‌ಗೆ ಕೇವಲ ನಾಲ್ಕು ದಿನ ಮಾತ್ರ ಬಾಕಿ ಇರುವಾಗ, ಡಕೆಟ್ ಮುಂಬರುವ ಋತುವಿನಲ್ಲಿ ಆಡುವುದಿಲ್ಲ ಎಂದು ಅಧಿಕೃತವಾಗಿ ಘೋಷಿಸಿದ್ದಾರೆ.

ಐಪಿಎಲ್ ನಿಯಮದನ್ವಯ ಹರಾಜಿನ ಮೂಲಕ ಆಯ್ಕೆಯಾದ ಆಟಗಾರರು ಟೂರ್ನಿಯಿಂದ ಹಿಂದೆ ಸರಿದರೆ ಅಂತಹ ಆಟಗಾರರನ್ನು ಟೂರ್ನಿಯಿಂದ ಎರಡು ವರ್ಷ ಬ್ಯಾನ್ ಮಾಡಲಾಗುತ್ತದೆ. ಕಳೆದ ಆವೃತ್ತಿ ಆರಂಭಕ್ಕೂ ಮುನ್ನ ಡೆಲ್ಲಿ ತಂಡದ ಆಟಗಾರ ನಾಗಿದ್ದ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ ಟೂರ್ನಿ ಆರಂಭಕ್ಕೂ ಮುನ್ನ ವೈಯಕ್ತಿಕ ಕಾರಣ ನೀಡಿ ಹಿಂದೆ ಸರಿದಿದ್ದರು, ಹೀಗಾಗಿ ಅವರಿಗೆ ಐಪಿಎಲ್ 2 ವರ್ಷ ನಿಷೇಧ ಹೇರಿತ್ತು. ಇದರಿಂದಾಗಿ ಅವರು 2026 ಮತ್ತು 2027ರ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವಂತಿಲ್ಲ.

'ಡೆಲ್ಲಿ ತಂಡದ ಎಲ್ಲರಿಗೂ ನಾನು ಹೃತ್ಪೂರ್ವಕವಾಗಿ ಕ್ಷಮೆಯಾಚಿಸುತ್ತೇನೆ. ಈ ಫ್ರಾಂಚೈಸಿಯನ್ನು ಪ್ರತಿನಿಧಿಸುವ ಅವಕಾಶಕ್ಕಾಗಿ ನಾನು ತುಂಬಾ ಉತ್ಸಾಹದಿಂದ ಇದ್ದೆ. ನನ್ನ ಈ ನಿರ್ಧಾರದಿಂದ ಉಂಟಾಗಬಹುದಾದ ಅಡಚಣೆಗಳಿಗೆ ಕ್ಷಮೆಯಾಚಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಐಪಿಎಲ್‌ನಲ್ಲಿ ಚೆನ್ನೈ ತಂಡಕ್ಕೆ ಮತ್ತೆ ಹಿನ್ನಡೆ | ಪ್ರಮುಖ ಬೌಲರ್ ಅನುಪಸ್ಥಿತಿ

ಆರಂಭಿಕ ಪಂದ್ಯಗಳಿಗೆ ಜಾನ್ಸನ್ ಅಲಭ್ಯ

ಚೆನ್ನೈ: ಗಾಯಗೊಂಡು ಈ ಆವೃತ್ತಿಯ ಐಪಿಎಲ್‌ನಿಂದ ಹೊರಬಿದ್ದ ಆಸ್ಟ್ರೇಲಿಯಾದ ವೇಗಿ ನಾಥನ್ ಎಲಿಸ್ ಅವರ ಬದಲಿಗೆ ಚೆನ್ನೈ ಸೂಪರ್ ಕಿಂಗ್ಸ್ ಸೇರಿಕೊಂಡಿರುವ ಎಡಗೈ ವೇಗಿ ಸ್ಪೆನ್ಸರ್ ಜಾನ್ಸನ್, ಐಪಿಎಲ್‌ನ ಮೊದಲಾರ್ಧದ ಪಂದ್ಯಗಳನ್ನು ಕಳೆದುಕೊಳ್ಳಲಿದ್ದಾರೆ. ಈ ವಿಚಾರವನ್ನು ಫ್ರಾಂಚೈಸಿ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಪ್ರಕಟಿಸಿದೆ. ವೇಗಿ ಏಪ್ರಿಲ್ ಮೂರನೇ ವಾರದಲ್ಲಿ ತಂಡವನ್ನು ಸೇರಲಿದ್ದಾರೆ ಎಂದು ದೃಢಪಡಿಸಿದೆ.

ಬುಧವಾರ ಟ್ವೀಟ್ ಮಾಡಿರುವ ಚೆನ್ನೈ ಫ್ರಾಂಚೈಸಿ 'ನಾಥನ್ ಎಲಿಸ್ ಬದಲಿಗೆ ಸ್ಪೆನ್ಸರ್ ಜಾನ್ಸನ್ ಅವರು ಏಪ್ರಿಲ್ 21 ಮತ್ತು 23ರ ನಡುವೆ ತಂಡವನ್ನು ಸೇರಲಿದ್ದಾರೆ ಎಂದು ಟ್ವೀಟ್ ಮಾಡಿದೆ. ಅವರು ಡೆತ್-ಬೌಲಿಂಗ್ ಸಮಸ್ಯೆಗಳನ್ನು ಪರಿಹರಿಸುತ್ತಾರೆಂದು ನಿರೀಕ್ಷಿಸಲಾಗಿತ್ತು, ಆದರೆ ಅದಕ್ಕೆ ಕಾಯಬೇಕಾಗಿದೆ. ಈ ಮಧ್ಯೆ, ಆಸ್ಟ್ರೇಲಿಯಾದ ಮುಖ್ಯ ಕೋಚ್ ರಯಾನ್ ಹ್ಯಾರಿಸ್ ಅವರು ಜಾನ್ಸನ್ ಫಿಟ್ನೆಸ್ ಬಗ್ಗೆ ಮಹತ್ವದ ಅಪ್ಡೇಟ್ ನೀಡಿದ್ದು, 'ಜಾನ್ಸನ್ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಲು ಪ್ರಾರಂಭಿಸಿದ್ದಾರೆ, ಆದರೆ ಸ್ಪರ್ಧಾತ್ಮಕ ಕ್ರಿಕೆಟ್‌ನಲ್ಲಿ ಕಾಣಿಸಿಕೊಳ್ಳಲು ಇನ್ನೂ ಕೆಲ ದಿನ ಬೇಕಾಗಿದೆ' ಎಂದು ಹೇಳಿದ್ದಾರೆ.

ಜಾನ್ಸನ್ ಅವರ ಅನುಪಸ್ಥಿತಿಯಲ್ಲಿ, ನ್ಯೂಜಿಲೆಂಡ್‌ನ ಮ್ಯಾಟ್ ಹೆನ್ರಿ ಮತ್ತು ಝೂಕ್

ಫೌಲ್ಕ್ಸ್ ಈ ಐಪಿಎಲ್‌ನ ಆರಂಭದ ಪಂದ್ಯಗಳಲ್ಲಿ ಚೆನ್ನೈ ತಂಡದ ವೇಗದ ಬೌಲಿಂಗ್ ದಾಳಿಯನ್ನು ಮುನ್ನಡೆಸಲಿದ್ದಾರೆ. ಇಂಗ್ಲೆಂಡ್ ಆಲ್‌ರೌಂಡರ್ ಜೇಮೀ ಓವರ್ಟನ್ ಜತೆಗೆ ಖಲೀಲ್ ಅಹ್ಮದ್, ಮುಖೇಶ್ ಚೌಧರಿ, ಅನ್ಶುಲ್ ಕಾಂಬೋಜ್ ಮತ್ತು ಗುರ್ಜಪ್ನೀತ್ ಸಿಂಗ್ ಸೇರಿದಂತೆ ಇತರ ಬೌಲರ್‌ಗಳೂ ತಂಡದಲಿದ್ದಾರೆ. ಸಿಎಸ್‌ಕೆ ತಂಡವು ಗುವಾಹಟಿಯಲ್ಲಿ ಮಾರ್ಚ್ 30ರಂದು ರಾಜಸ್ಥಾನ ರಾಯಲ್ಸ್ ವಿರುದ್ಧ ಆಡಲಿದೆ.

ಲಖನೌ ಸೂಪರ್ ಜೈಂಟ್ಸ್ ತಂಡದ ಆಟಗಾರ ಅರ್ಜುನ್ ತೆಂಡೂಲ್ಕರ್ ವಿರುದ್ಧ ಮಾಜಿ ಸ್ಪಿನ್ನರ್ ಅನಗತ್ಯ ಹೇಳಿಕೆ

ಅಶ್ವಿನ್‌ಗೆ ಯುವರಾಜ್ ಸಿಂಗ್ ತಂದೆ ತರಾಟೆ

ದೆಹಲಿ: ಐಪಿಎಲ್ ಟೂರ್ನಿಯ 19ನೇ ಆವೃತ್ತಿಯಲ್ಲಿಯೂ ಲಖನೌ ಸೂಪರ್ ಜೈಂಟ್ಸ್ ತಂಡದ ಪ್ಲೇಯಿಂಗ್ ಆಡುವ ಅಂತಿಮ ಹನ್ನೊಂದರ ಬಳಗದಲ್ಲಿ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್‌ಗೆ ಅವಕಾಶ ಸಿಗುವುದಿಲ್ಲ ಎಂದು ಹೇಳಿದ ಸ್ಪಿನ್ ದಿಗ್ಗಜ ರವಿಚಂದ್ರನ್ ಅಶ್ವಿನ್ ಅವರಿಗೆ ಯುವರಾಜ್ ಸಿಂಗ್ ತಂದೆ ಯೋಗರಾಜ್ ಸಿಂಗ್ ತರಾಟೆಗೆ ತೆಗೆದುಕೊಂಡಿದ್ದಾರೆ. ಅರ್ಜುನ್ ಬಗ್ಗೆ ಅಶ್ವಿನ್ ಅಸಂಬದ್ಧ ಹೇಳಿಕೆ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಅವರು ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ. ಈ ಅಶ್ವಿನ್ ಯಾರೇ ಆಗಿರಲಿ, ಯಾರ ಬಗ್ಗೆ ಏನು ಮಾತನಾಡಬೇಕು ಎಂಬುದು ಗೊತ್ತಿರಬೇಕು. ಟಿ.ವಿಯಲ್ಲಿ ಕುಳಿತು ಇವರು ಇದನ್ನು ಮಾಡಲಾರ, ಅದನ್ನು ಮಾಡಲಾರ ಎಂದು ಹೇಳುವುದು ಸರಿಯಲ್ಲ. ಅರೆ, ನೀನು ಯಾರು?' ಎಂದು ಯೋಗರಾಜ್ ಸಿಂಗ್ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಅವರು ಸಚಿನ್ ತೆಂಡೂಲ್ಕರ್ ಮಗ ಎಂಬುದು ಬೇರೆ ವಿಷಯ, ಆದರೆ ನೀವು ಎಲ್ಲರೂ ತಪ್ಪು ದಿಕ್ಕಿನಲ್ಲಿ ಯೋಚಿಸುತ್ತಿದ್ದೀರಿ. ಅವರು ಬೌಲರ್ ಅಲ್ಲ. ಅವರಿಗೆ ಬೆನ್ನುಹುರಿ ಸಮಸ್ಯೆ ಇತ್ತು, ಅದರಿಂದ ಅವರ ಕೈ 45 ಡಿಗ್ರಿಯಿಂದ ಕೆಳಗೆ ಬರುತ್ತದೆ. ಅವರು ನನ್ನ ಬಳಿ ಇದ್ದಾಗ, ನಾನು

ಅವರಿಗೆ ಹಾಗೂ ಗೋವಾ ತಂಡದ ಕೋಚ್‌ಗೆ ಇದನ್ನೇ ಹೇಳಿದ್ದೆ. ಅವರು ಬ್ಯಾಟ್ ಮಾಡುವಾಗ ಸಿಕ್ಸರ್‌ಗಳು ಮತ್ತು ಬೌಂಡರಿಗಳನ್ನು ಹೊಡೆಯುತ್ತಿದ್ದ. ನಾನು ಕೋಚ್‌ಗೆ ನೀವು ಏನು ಮಾಡುತ್ತಿದ್ದೀರಿ? ಆಗದಿದ್ದರೆ ಅವರನ್ನು ನನ್ನ ಬಳಿ ಕಳುಹಿಸಿ ಎಂದು ಹೇಳಿದ್ದೆ' ಎಂದು ಯೋಗರಾಜ್ ಸಿಂಗ್ ತಿಳಿಸಿದ್ದಾರೆ. ಅರ್ಜುನ್ ತೆಂಡೂಲ್ಕರ್ ಅವರು ಮೂರು ಆವೃತ್ತಿಗಳಲ್ಲಿ ಮುಂಬೈ ಇಂಡಿಯನ್ಸ್ ಪರ ಆಡಿದ್ದರು. ಇದೀಗ ಈ ಐಪಿಎಲ್ ಟೂರ್ನಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ಪರ ಆಡಲಿದ್ದಾರೆ. ಅರ್ಜುನ್ ದೇಶಿ ಕ್ರಿಕೆಟ್‌ನಲ್ಲಿ ಗೋವಾ ಪರ ಆಡಿದಾಗ ಆಲ್‌ರೌಂಡರ್ ಆಗಿ ಗುರುತಿಸಿಕೊಂಡಿದ್ದಾರೆ. 2023ರ ಐಪಿಎಲ್ ಟೂರ್ನಿಯಲ್ಲಿ ನಾಲ್ಕು ಪಂದ್ಯಗಳಿಂದ ಮೂರು ವಿಕೆಟ್ ಪಡೆದಿದ್ದ ಅವರು, 2024ರ ಐಪಿಎಲ್ ಟೂರ್ನಿಯಲ್ಲಿ ಆಡಿದ ಏಕೈಕ ಪಂದ್ಯದಲ್ಲಿ ಯಾವುದೇ ವಿಕೆಟ್ ಪಡೆದಿರಲಿಲ್ಲ. 2026ರ ಐಪಿಎಲ್ ಹರಾಜಿನಲ್ಲಿ ಅವರನ್ನು 30 ಲಕ್ಷ ರು.ಗಳಿಗೆ ಲಖನೌ ಸೂಪರ್ ಜಯಂಟ್ಸ್ ಖರೀದಿಸಿದೆ.

ಮಾನವ ಶ್ವಾನದ ನಡುವಿನ ಮಮಕಾರದ ಬಂಧ

ಚಾರ್ಲಿ 777 ಚಿತ್ರದ ಬಳಿಕ ಮತ್ತೊಂದು ಶ್ವಾನ ಮಾನವನ ನಡುವಿನ ಎಮೋಷನಲ್ ಕಥೆಯ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ಯಾವ ಮೋಹನ ಮುರಳಿ ಕರೆಯಿತು ಶೀರ್ಷಿಕೆಯಲ್ಲಿ ಸಿದ್ಧವಾಗಿರುವ ಈ ಚಿತ್ರದಲ್ಲಿ ಬಾಲಕಿ ಮತ್ತು ಶ್ವಾನದ ನಡುವಿನ ಎಮೋಷನಲ್ ಜರ್ನಿ ಸಾಗಲಿದೆ. ತಮ್ಮ ಸಿನಿಮಾದ ಕುರಿತಂತೆ ನಿರ್ದೇಶಕ ವಿಶ್ವಾಸ್‌ಕೃಷ್ಣ ಮಾತನಾಡಿದ್ದಾರೆ.

ನಮ್ಮ ಚಿತ್ರದಲ್ಲಿ ಶ್ವಾನಕ್ಕೆ ತನ್ನ ಪಾಲಕಿ ಎದ್ದು ನಡೆದಾಡುವಂತಾಗಬೇಕು ಎಂಬ ಆಸೆಯಿರುತ್ತದೆ. ಅದನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಹಾಗಾಗಿ ಆ ಸನ್ನಿವೇಶವನ್ನು ದೃಶ್ಯ ರೂಪದಲ್ಲಿ ಎಲ್ಲರ ಮನಸಿಗೆ ಹಿಡಿಸುವಂತೆ ಕಟ್ಟಿಕೊಟ್ಟಿದ್ದೇವೆ. ಅದನ್ನು ಬೆಳ್ಳಿತೆರೆಯಲ್ಲಿಯೇ ನೋಡಬೇಕು.

ಈ ಸಿನಿಮಾದಲ್ಲಿ ರಾಕಿ ಎಂಬ ಶ್ವಾನ ನಟಿಸುತ್ತಿತ್ತು, ಬಹುತೇಕ ಚಿತ್ರೀಕರಣವೂ ಮುಗಿದಿತ್ತು. ಕ್ಲೈಮ್ಯಾಕ್ಸ್ ದೃಶ್ಯದ ಶೂಟಿಂಗ್ ಬಾಕಿ ಇರುವಾಗ ನಮ್ಮ ದುರಾದೃಷ್ಟ ಎಂಬಂತೆ ರಾಕಿ ಅಪಘಾತದಲ್ಲಿ ಅಸುನೀಗಿತು. ಇದು ಚಿತ್ರತಂಡಕ್ಕೆ ತುಂಬಲಾರದ ನಷ್ಟವಾಯಿತು. ಬಳಿಕ ಅದರ ಮರಿ ರಾಣಾನನ್ನು ಕರೆತಂದು ಅದು ದೊಡ್ಡದಾಗುವವರೆಗೆ ಕಾಯ್ದು ಶೂಟಿಂಗ್ ಮುಗಿಸಿದೆವು.

ಇಲ್ಲಿ ಎಮೋಷನ್ ಕಥೆಯೇ ಪ್ರಮುಖವಾಗಿದೆಯೇ?

ವಿಶ್ವಾಸ್ ಕೃಷ್ಣ : ಯಾವ ಮೋಹನ ಮುರಳಿ ಕರೆಯಿತು ಚಿತ್ರದುದ್ದಕ್ಕೂ ಎಮೋಷನ್ ಬೆರೆತಿದೆ. ಬಾಲಕಿ ಮತ್ತು ಶ್ವಾನದ ನಡುವಿನ ಮಧುರ ಬಾಂಧವ್ಯ ಪ್ರೇಕ್ಷಕರ ಮನಸೂರೆಗೊಳ್ಳುತ್ತಾ ಸಾಗಲಿದೆ. ವಿಕಲಾಂಗ ಬಾಲಕಿಯನ್ನು ಒಂದು ಶ್ವಾನ ಹೇಗೆ ಕಾಯುತ್ತದೆ, ದುರುಳರಿಂದ ಆಕೆಯನ್ನು ಹೇಗೆ ಕಾಪಾಡುತ್ತದೆ ಎಂಬುದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ. ಪ್ರಾಣಿ ಪ್ರಿಯರಿಗಂತೂ ಈ ಚಿತ್ರ ಹೇಳಿ ಮಾಡಿಸಿದಂತಿದೆ.

ಇದು ರಿಯಲ್ ಸ್ಟೋರಿಯೇ?

ವಿಶ್ವಾಸ್ ಕೃಷ್ಣ : ನೈಜ ಘಟನೆಯನ್ನು ಆಧರಿಸಿ ಈ ಸಿನಿಮಾದ ಕಥೆ ಹೆಣೆದು ನಿರ್ದೇಶನ ಮಾಡಿದ್ದೇನೆ. ನನ್ನ ಸ್ನೇಹಿತನೊಬ್ಬ ಶ್ವಾನ ತರಬೇತುದಾರನಾಗಿದ್ದ ಅವನು ಲಾಕ್‌ಡಾನ್ ಸಮಯದಲ್ಲಿ ಈ ಕಥೆ ಹೇಳಿದ್ದ. ಒಂದು ಮನೆಯಲ್ಲಿ ವಿಕಲಾಂಗ ಬಾಲಕಿ ಇದ್ದಳು. ಅವರ ಮನೆಯಲ್ಲಿ ಇದ್ದ ಶ್ವಾನ ಒಂದು ಆಕೆಯನ್ನು ತುಂಬಾ ಕಾಳಜಿಯಿಂದ ನೋಡಿಕೊಳ್ಳುತ್ತಿತ್ತು. ಎಂತಹ ಸಂದರ್ಭ ಬಂದರೂ ಆಕೆಯನ್ನು ಕಾಪಾಡುತ್ತಿತ್ತು. ಆ ಘಟನೆ ನನ್ನ ಮನಸನ್ನು ತುಂಬಾ ಕಾಡಿತು. ಹಾಗಾಗಿ ಇದೇ ಘಟನೆಯನ್ನು ಸಿನಿಮಾ ರೂಪದಲ್ಲಿ ತೆರೆಗೆ ತರಬೇಕು ಎಂದು ನಿರ್ಧರಿಸಿದೆ. ಅಂತೆಯೇ ಕಥೆ ಬರೆದು ನಿರ್ಮಾಪಕರಿಗೆ ಹೇಳಿದೆ. ಸ್ಟೋರಿ ಕೇಳಿ ನಿರ್ಮಾಪಕರು ಸಂತಸದಿಂದಲೇ ನಿರ್ಮಾಣಕ್ಕೆ ಸಮ್ಮತಿಸಿದರು. ಅವರ ಪುತ್ರಿ ಪ್ರಕೃತಿ ಚಿತ್ರದಲ್ಲಿ ನಟಿಸಿದ್ದಾರೆ. ಅವರೊಂದಿಗೆ ರಾಕಿ ಮತ್ತು ರಾಣಾ ಎಂಬ ಶ್ವಾನಗಳು ಅಭಿನಯಿಸಿವೆ.

ಈ ಸಿನಿಮಾ ಚಾಲೆಂಜಿಂಗ್ ಅನ್ನಿಸಿತೆ?

ವಿಶ್ವಕೃಷ್ಣ : ನಿಜವಾಗಿಯೂ ಸಿನಿಮಾ ಬಲು ಚಾಲೆಂಜಿಂಗ್ ಆಗಿತ್ತು. ಶ್ವಾನಗಳನ್ನು ನಟನೆಗೆ ಹೊಂದಿಸುವುದು ತುಂಬಾ ಕಷ್ಟ. ಅದಕ್ಕಾಗಿ ದಿನಗಟ್ಟಲೇ ಕಾಯ್ದು ಚಿತ್ರೀಕರಣ ನಡೆಸಿದ್ದೇವೆ. ಅಂತು ಎಲ್ಲವನ್ನೂ ನಿಭಾಯಿಸಿ ಸಿನಿಮಾ ಅಂದುಕೊಂಡಂತೆ ಮೂಡಿಬಂದಿದೆ. ಯಾವ ಮೋಹನ ಮುರಳಿ ಕರೆಯಿತು ಮನೆಮಂದಿಯೆಲ್ಲಾ ಒಟ್ಟಾಗಿ ಕುಳಿತು ನೋಡುವ ಸಿನಿಮಾವಾಗಿದೆ.

ಲವ್ ಮಾಕ್ಟೇಲ್ 3 ನಾನೇ ಬರೆದ ಕಥೆ

ಡಾರ್ಲಿಂಗ್ ಕೃಷ್ಣ ನಿರ್ದೇಶಿಸಿ, ನಟಿಸಿರುವ ಲವ್ ಮಾಕ್ಟೇಲ್ 3 ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಹೀಗಿರುವಾಗಲೇ ಕೃಷ್ಣ ಮೇಲೆ ಕೃತಿ ಚೌರ್ಯದ ಆರೋಪ ಕೇಳಿ ಬರುತ್ತಿದೆ. ಈ ಬಗ್ಗೆ ಡಾರ್ಲಿಂಗ್ ಕೃಷ್ಣ ಸ್ಪಷ್ಟನೆ ನೀಡಿದ್ದಾರೆ. ಲವ್ ಮಾಕ್ಟೇಲ್ 3 ನಾನೇ ಬರೆದ ಕಥೆ. ಯಾರ ಕಥೆಯನ್ನು ನಾನು ಕದ್ದಿಲ್ಲ. ಈ ಸ್ಟೋರಿಗಾಗಿ ನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಸ್ವಂತ ಪರಿಶ್ರಮದಿಂದ ನಾನು ಇಲ್ಲಿ ನಟನಾಗಿ, ನಿರ್ದೇಶಕನಾಗಿ ಗುರುತಿಸಿಕೊಂಡಿದ್ದೇನೆ. ನಾನು ವರ್ಷಕ್ಕೆ ನೂರ ಐವತ್ತು ಕಥೆ ಕೇಳುತ್ತೇನೆ. ನಟನೆಯ ಜತೆಗೆ ಕಥೆ ಬರೆಯುವುದು ನನ್ನ ಹವ್ಯಾಸ. ಕಥೆ ಕದ್ದು ಸಿನಿಮಾ ಮಾಡುವ ಅಗತ್ಯ ನನಗಿಲ್ಲ. ಕೆಲವರು ವಿನಾ ಕಾರಣ ಹೀಗೆ ಕೃತಿ ಚೌರ್ಯದ ಆರೋಪ ಮಾಡುತ್ತಾರೆ. ಅಂತಹವರ ವಿರುದ್ಧ ಕಾನೂನಾತ್ಮಕ ಹೋರಾಟ ಮಾಡುತ್ತೇನೆ ಎಂದು

ಡಾರ್ಲಿಂಗ್ ಕೃಷ್ಣ ಹೇಳಿದ್ದಾರೆ. ಕಥೆ ಕದ್ದು ಸಿನಿಮಾ ಮಾಡಬೇಕು ಅನ್ನುವದಾದರೆ ನಾವು ಸಿನಿಮಾನೆ ಮಾಡಲ್ಲ. ಕೆಲವರು ಬೇಕು ಅಂತಲೇ ಕಥೆ ಕದ್ದ ಆರೋಪ ಮಾಡುತ್ತಾರೆ. ಲವ್ ಮಾಕ್ಟೇಲ್ ಕಥೆ ಏಳು ವರ್ಷದ ಹಿಂದೆಯೇ ಶುರುವಾಗಿತ್ತು. ಈಗ ಅದರ ಯಶಸ್ಸು ಸಿಕ್ಕಿದೆ. ಬೇರೆಯವರ ಕಥೆ ಕದ್ದಿದ್ದಾರೆ ಎನ್ನುವುದು ಹಾಸ್ಯಾಸ್ಪದ ಎಂದು ನಟಿ ಮಿಲನಾ ನಾಗರಾಜ್ ತಿಳಿಸಿದರು.

ಮನಸೆಳೆದ ಮಹರ್ಷಿ ವಾಲ್ಮೀಕಿ

ಬೇಡನಾಗಿದ್ದ ರತ್ನಕಾರ, ಋಷಿಗಳ ಉಪದೇಶದಿಂದ ಮಹರ್ಷಿ ವಾಲ್ಮೀಕಿಯಾಗಿದ್ದು ಎಲ್ಲರಿಗೂ ತಿಳಿದ ಸಂಗತಿ. ಕ್ರೌಂಚ ಪಕ್ಷಿಯ ಸಾವನ್ನು ಕಣ್ಣಾರೆ ಕಂಡ ವಾಲ್ಮೀಕಿ ಮಹರ್ಷಿಗಳಿಗೆ ಆ ಘಟನೆ ರಾಮಾಯಣ ಬರೆಯಲು ಸ್ಫೂರ್ತಿಯಾಯಿತು. ಅದು ವಾಲ್ಮೀಕಿ ರಾಮಾಯಣ ಎಂದೇ ಪ್ರಸಿದ್ಧವಾಯಿತು. ಈಗ ವಾಲ್ಮೀಕಿ ಋಷಿಗಳ ಜೀವನ ಚರಿತ್ರೆಯನ್ನು ಕಿರುಚಿತ್ರದ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ನಿರ್ದೇಶಕ ಪ್ರವೀಣ್ ಶಿವಣ್ಣ ಈ ಕಿರುಚಿತ್ರವನ್ನು ನಿರ್ದೇಶಿಸಿದ್ದಾರೆ. ಮಹರ್ಷಿ ವಾಲ್ಮೀಕಿ ಶೀರ್ಷಿಕೆಯಲ್ಲಿಯೇ ಕಿರುಚಿತ್ರ ಮೂಡಿಬಂದಿದೆ. ರಾಮನವಮಿ ಸಂದರ್ಭದಲ್ಲಿಯೇ ಈ ಕಿರುಚಿತ್ರ ಬಿಡುಗಡೆಯಾಗಿರುವುದು ವಿಶೇಷ. ಸುಜಿತ್ ಶೆಟ್ಟಿ ವಾಲ್ಮೀಕಿ ಪಾತ್ರದಲ್ಲಿ ಅಭಿನಯಿಸಿದ್ದು, ರೂಪಾ ಮುತ್ತುರಾಯಪ್ಪ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ನಾನು ಚಿತ್ರರಂಗದಲ್ಲಿ ಹಲವು ವರ್ಷಗಳ ಕಾಲ ಸಂಕಲನಕಾರನಾಗಿ ಕಾರ್ಯ ನಿರ್ವಹಿಸಿದ್ದೇನೆ. ನಿರ್ದೇಶಕನಾಗಿ ಇದು ಮೊದಲ



ಕಿರುಚಿತ್ರ. ನಿರ್ಮಾಪಕರ, ಕಲಾವಿದರ ಹಾಗೂ ತಂತ್ರಜ್ಞರ ಸಹಕಾರದಿಂದ ಮಹರ್ಷಿ ವಾಲ್ಮೀಕಿ ಕಿರುಚಿತ್ರ ಉತ್ತಮವಾಗಿ ಮೂಡಿಬಂದಿದೆ. ಪ್ರೇಕ್ಷಕರಿಗೆ ಪೌರಾಣಿಕ ಹಿನ್ನೆಲೆಯನ್ನು ತಿಳಿಸುವ ನಿಟ್ಟಿನಲ್ಲಿ ಈ ಪ್ರಯತ್ನ ಮಾಡಲಾಗಿದೆ ಎಂದು ನಿರ್ದೇಶಕ ಪ್ರವೀಣ್ ಶಿವಣ್ಣ ಹೇಳಿದರು.

ರಾಮ ಹದಿನಾಲ್ಕು ವರ್ಷಗಳ ವನವಾಸ ಮುಗಿಸಿ ಬಂದ ಹಾಗೆ, ನಾನು ಕೂಡ ನಟನೆ ಮಾಡಲು ಹದಿನಾಲ್ಕು ವರ್ಷಗಳು ಕಾಯಬೇಕಾಯಿತು. ಅದು ರಾಮಭಕ್ತ ಮಹರ್ಷಿ ವಾಲ್ಮೀಕಿಯ ಕಥೆಯ ಮೂಲಕವೇ ನಟನೆಗೆ ಮರಳಿರುವುದು ವಿಶೇಷ ಮತ್ತು ಕಾಕತಾಳೀಯ. ನಾನು ವಾಲ್ಮೀಕಿ ಮಹರ್ಷಿಗಳ ಪಾತ್ರದಲ್ಲಿ

ಕಾಣಿಸಿಕೊಂಡಿದ್ದೇನೆ. ಈ ಕಿರುತ್ರದಲ್ಲಿ ಅಭಿನಯಿಸಿದ್ದು ಖುಷಿಯಾಗಿದೆ ಎಂದು ಸುಜಿತ್ ಶೆಟ್ಟಿ ತಿಳಿಸಿದರು. ನಿರ್ಮಾಪಕಿ ರತ್ನದಾಸ್ ಈ ಕಿರುಚಿತ್ರವನ್ನು ನಿರ್ಮಿಸಿದ್ದಾರೆ. ತನ್ವಿಕ್ ಛಾಯಾಗ್ರಹಣ, ರಾಮಾನುಜನ್ ಸಂಗೀತ ನಿರ್ದೇಶನ ಈ ಕಿರುಚಿತ್ರಕ್ಕಿದೆ ಎಂದು ನಿರ್ದೇಶಕರು ಹೇಳಿದರು.

ಹೊಸ ಅವತಾರದಲ್ಲಿ ಪ್ರಜ್ವಲ್



ಜಿ.ಸಿನಿಮಾಸ್ ಪ್ರೊಡಕ್ಷನ್ಸ್ ಮತ್ತು ಸೆವೆನ್ ಸ್ಟಾರ್ ಮೂವೀಸ್ ಜಂಟಿಯಾಗಿ ನಿರ್ಮಿಸುತ್ತಿರುವ ಮೈತಿಕಲ್ ಫ್ಯಾಂಟಸಿ ಡ್ರಾಮಾ ಹಿನ್ನೆಲೆಯ ರಾಮರಸ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಈಗ ಚಿತ್ರತಂಡ ಪ್ರೇಕ್ಷಕರಿಗೆ ಸರ್‌ಪ್ರೈಸ್ ನೀಡಿದೆ. ಈ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ವಿಶೇಷ ಪಾತ್ರದಲ್ಲಿ ಅಭಿನಯಿಸುತ್ತಿದ್ದು, ಪ್ರಜ್ವಲ್ ಪಾತ್ರದ ಪೋಸ್ಟರ್ ಬಿಡುಗಡೆಯಾಗಿದೆ. ಗುರು ಸಿದ್ಧ ಎಂಬ ಪಾತ್ರದಲ್ಲಿ ಪ್ರಜ್ವಲ್ ದೇವರಾಜ್ ಕಾಣಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದ ಅಲೆಮಾರಿ ಪರಂಪರೆಯಾದ ಸುಡುಗಾಡು ಸಿದ್ಧ ಸಮುದಾಯದ ಹಿನ್ನೆಲೆಯನ್ನು ಈ ಪಾತ್ರ ಒಳಗೊಂಡಿದೆ. ಈ ಪಾತ್ರವು ಕರ್ನಾಟಕದ ಸ್ಮಶಾನ ನಿವಾಸಿಗಳು ಅಥವಾ ಪವಾಡ ಪುರುಷರು ಎಂದೇ ಕರೆಯಲ್ಪಡುವ ಸುಡುಗಾಡು ಸಿದ್ದರು ಭಗವಾನ್ ಶಿವನ ಪರಮ ಭಕ್ತರು. ಸಿದ್ದರು ಹಳ್ಳಿ ಹಳ್ಳಿಗೆ ಸಂಚಾರ ಮಾಡುತ್ತಾ, ಭವಿಷ್ಯ ನುಡಿಯುವುದು, ಮಾಯಾಜಾಲ, ಜನರಿಗೆ ನಗು ಹಂಚುವುದು ಮತ್ತು ಅಪರೂಪದ ಗಿಡಮೂಲಿಕೆಗಳ ಮೂಲಕ ಚಿಕಿತ್ಸೆ ನೀಡುವ ಕಾಯಕ ಮಾಡುತ್ತಾ ಹಳ್ಳಿಗಳನ್ನು ದುಷ್ಟ ಶಕ್ತಿಗಳಿಂದ ರಕ್ಷಿಸುತ್ತಿದ್ದರು. ಈ ಸಮುದಾಯದ ಸಂಸ್ಕೃತಿಯನ್ನು ಪ್ರಜ್ವಲ್ ದೇವರಾಜ್ ಅವರ ಪಾತ್ರದ ಮೂಲಕ ಬೆಳ್ಳಿತೆರೆಯ ಮೇಲೆ ಅದ್ದೂರಿಯಾಗಿ ತರಲಾಗುತ್ತಿದೆ. ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ಪ್ರಜ್ವಲ್ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಂಡಿದ್ದು ತಮ್ಮ ಪಾತ್ರದ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಗುರು ದೇಶಪಾಂಡೆ ಹಾಗೂ ವಿಕ್ರಂ ಆರ್ಯ ಜಂಟಿಯಾಗಿ ನಿರ್ಮಿಸುತ್ತಿರುವ ಈ ಚಿತ್ರವನ್ನು ಗಿರಿರಾಜ ನಿರ್ದೇಶನ ಮಾಡುತ್ತಿದ್ದಾರೆ. ಬಿಗ್‌ಬಾಸ್ ಖ್ಯಾತಿಯ ಕಾರ್ತಿಕ್ ಮಹೇಶ್, ಶರಣ್, ಹೆಬ್ಬಾ ಪಟೇಲ್, ಬಾಲಾಜಿ ಮನೋಹರ, ವೈಶಾಲಿ ಹಾಗೂ ಮುಂತಾದವರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಎ.ವಿ.ಕೃಷ್ಣಕುಮಾರ್ ಛಾಯಾಗ್ರಹಣ, ಭರತ್ ಸಂಗೀತ ನಿರ್ದೇಶನ, ಹೊಸ್ಮನೆ ಮೂರ್ತಿ ಕಲಾ ನಿರ್ದೇಶನ, ಅರ್ಜುನ್ ರಾಜ್ ಸಾಹಸ ನಿರ್ದೇಶನ, ಮುರುಳಿ ನೃತ್ಯ



ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರೀಕರಣ ಮುಗಿಸಿರುವ ರಾಮರಸ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ರಾಮರಸ ಆದಷ್ಟು ಬೇಗ ತೆರೆಗೆ ಬರಲಿದೆ ಎಂದು ನಿರ್ಮಾಪಕ ಗುರು ದೇಶಪಾಂಡೆ ತಿಳಿಸಿದ್ದಾರೆ.